ಮುದ್ದೆ ಗಂಟು

ಅಂಕಣ ಬರಹ



ಸಿ.ಪಿ.ನಾಗರಾಜ

ಮುದ್ದೆ ಗಂಟು

ಅಂಕಣ ಬರಹ

ಸಿ.ಪಿ. ನಾಗರಾಜ

ನಾಗು ಸ್ಮಾರಕ ಪ್ರಕಾಶನ
೭೫, 'ಎ' ಬ್ಲಾಕ್, ೫ ನೆಯ ಕ್ರಾಸ್, ಕೃಷ್ಣ ಗಾರ್ಡನ್
ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು-೫೬೦೦೫೯

MUDDE GANTU: by C.P.Nagaraja.
Published by Nagu Smaraka Prakashana, 75, `A' Block, 5th Cross, Krishna Garden, R.V.College Post, Bengaluru-560059, Mobile: 9986347521.

First Edition : 2019

Page : 248

Price : Rs. 200/-

Paper : 80gsm Ns Maplitho

Size : Demy 1/8

Copies : 500

ಪುಟಗಳು : 248

ಪ್ರತಿಗಳು : 500

ಬೆಲೆ : ರೂ. 200/-

ಮುಖಪುಟ ವಿನ್ಯಾಸ : ಎಂ.ಎಲ್.ಸೋಮವರದ, ಮಂಡ್ಯ
ಮೊ.9743512174, 8618580924

ಪ್ರತಿಗಳು ದೊರೆಯುತ್ತವೆ:

ಮುನ್ನೋಟ ಪುಸ್ತಕ ಮಳಿಗೆ
67, ಸೌತ್ ಅವೆನ್ಯೂ ಕಾಂಪ್ಲೆಕ್ಸ್
ಡಿವಿಜಿ ರಸ್ತೆ, ನಾಗಸಂದ್ರ ಸರ್ಕಲ್ ಬಳಿ
ಬಸವನಗುಡಿ, ಬೆಂಗಳೂರು-560004
ದೂರವಾಣಿ: 080-2660 3000

ಆರ್. ಸುಧೀಂದ್ರ ಕುಮಾರ್
9, 20 ನೆಯ ಮೈನ್, 3 ನೆಯ ಕ್ರಾಸ್
ವಿಜಯನಗರ 2 ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು-570017
ಮೊಬೈಲ್: 8892626269

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಕಂಡದ್ದು ಕಾಡುತ್ತದೆ

ನಮ್ಮ ಸುತ್ತ ಹಲವು ಘಟನೆಗಳು ನಡೆಯುತ್ತಿರುತ್ತವೆ. ಅವನ್ನು ನಾವು ನೋಡುತ್ತೇವೆ, ಮರೆಯುತ್ತೇವೆ. ಯಾವುದೂ ನಮ್ಮನ್ನು ಕಾಡುವುದಿಲ್ಲ. ನೋಡಿದ್ದನ್ನು ಮನನ ಮಾಡತೊಡಗಿದಾಗ ಮನಸ್ಸಿನ ಅಂತರಾಳಕ್ಕೆ ಇಳಿದು ಕಾಡುತ್ತವೆ. ದೊಡ್ಡವರ ಸಣ್ಣತನ ಬೆಚ್ಚಿ ಬೀಳಿಸುತ್ತದೆ. ಸಣ್ಣವರ ದೊಡ್ಡತನ ಚಕಿತಗೊಳಿಸುತ್ತದೆ. ಹೀಗೆ ಕಾಡುವ, ದಿಗ್ಭ್ರಮೆ ಮೂಡಿಸುವ, ಚಕಿತಗೊಳಿಸುವ ಹಲವು ಬರಹಗಳು ಈ ಸಂಕಲನದಲ್ಲಿವೆ.

ಇಲ್ಲಿನ ಬಹುತೇಕ ಬರಹಗಳು ವಾಸ್ತವಿಕ ನೆಲೆಗಟ್ಟನ್ನು ಹೊಂದಿರುವಂತಹವು. ತಾವು ಕಂಡ, ಕೇಳಿದ ಸಂಗತಿಗಳಿಗೆ ಸ್ಪಂದಿಸಿದ ರೀತಿಯನ್ನು ಲೇಖಕರು ಬಿಡಿಸಿದ್ದಾರೆ. ಅವರನ್ನು ಬಹುವಾಗಿ ಕಾಡಿದ ಸಮಸ್ಯೆ ಯಾವುದು? ಜಾತಿ, ಮತ, ಧರ್ಮ, ದೇವರು ಮತ್ತು ಅವುಗಳ ಉಪ ಉತ್ಪನ್ನವಾದ ಸಾಮಾಜಿಕ ಸಮಸ್ಯೆಗಳು ಅನ್ನಿಸುತ್ತದೆ.

ಹೇಳಿ ಕೇಳಿ ನಾವು ಸಂಪ್ರದಾಯ ಪ್ರಿಯರು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸ್ಥಾನ ಏನು? ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಇಂತಹದ್ದೆ ಸಮಸ್ಯೆಯನ್ನು ರಾಮಮನೋಹರ ಲೋಹಿಯ ಅವರು ಎದುರಿಸಿದ್ದರು. ಜರ್ಮನ್ ಯುವತಿಯೊಬ್ಬಳು ಅವರನ್ನು "ನಾನು ಪುರುಷನಷ್ಟೇ ಸಮರ್ಥಳಾಗಿ ಬದುಕಬಲ್ಲೆನೆ" ಎಂದು ಕೇಳಿದ್ದಳು. ಇದು ವಿಶ್ವದ ಎಲ್ಲಾ ಮಹಿಳೆಯರ ಅಂತರಾಳದ ನೋವು ಅನ್ನುತ್ತಾರೆ ಲೋಹಿಯಾ. ಇವತ್ತಿಗೂ ಈ ನೋವಿಗೆ ಪರಿಹಾರ ದೊರಕಿಲ್ಲ. ಪುರುಷರಿಗೆ ಒದಗಿಸುವ ಸೌಲಭ್ಯ, ಸವಲತ್ತುಗಳಿಂದ ಈಗಲೂ ಮಹಿಳೆಯರು ವಂಚಿತರಾಗಿದ್ದಾರೆ.

ಕಾಲೇಜಿನಲ್ಲಿ ಹೊಸ ಕ್ಯಾಂಟೀನ್ ಪ್ರಾರಂಭವಾಗುತ್ತದೆ. ಆದರೆ ಹೆಣ್ಣು ಮಕ್ಕಳು ಕುಳಿತುಕೊಳ್ಳುವುದು ಅಂತಿರಲಿ, ನಿಂತುಕೊಳ್ಳಲೂ ಸ್ಥಳ ಇರುವುದಿಲ್ಲ. ಬಿ.ಎ., ವಿದ್ಯಾರ್ಥಿನಿಯೊಬ್ಬಳು ತುಂಬಿದ ಸಭೆಯಲ್ಲಿ ಇದಕ್ಕಾಗಿ ಆಗ್ರಹಿಸುತ್ತಾಳೆ. "ನಮಗೂ ನಿಮ್ಮಂಗೆ ಆಸೆ ಇಲ್ವೆ" ಎಂಬ ಆಕೆಯ ಪ್ರಶ್ನೆ ಹೃದಯ ಕಲಕುತ್ತದೆ. ಓದುವಾಗಿನ ಸಮಸ್ಯೆ ಇದು. ಮದುವೆ ಎನ್ನುವುದು ಅವಳ ಪಾಲಿನ ಮುಲಾಮು ಅಲ್ಲ, ಮುಳ್ಳಿನ ಹೊದಿಕೆ. House wife ಪಟ್ಟ ಹಿಡಿದರಂತೂ ಮುಗಿದೇಹೋಯಿತು. ತಾನು ಕಲಿತ

ವಿದ್ಯೆಯನ್ನೆಲ್ಲ ಮರೆಯಬೇಕು. ಗಂಡ ಮಕ್ಕಳ ಸೇವೆಯಲ್ಲಿ ಸಾರ್ಥಕತೆ, ತೃಪ್ತಿ ಪಡೆಯಬೇಕು. ಅವರ ಯಶಸ್ಸನ್ನೇ ತನ್ನದೂ ಎಂದು ಬೀಗಬೇಕು. ಸೂಕ್ಷ್ಮ ಮನಸ್ಸಿನವರಾದರೆ ಅವರನ್ನು ಕಾಡುವುದು ಅದೇ ಪ್ರಶ್ನೆ- "ಇದೆಲ್ಲ ಅವರ ಸಾಧನೆ-ನನ್ನ ಸಾಧನೆ ಏನು?"

ಅನಕ್ಷರಸ್ಥ ಹೆಣ್ಣಿನ ಬದುಕು ಇದಕ್ಕಿಂತಲೂ ಕ್ರೂರವಾದುದು. ಕುಡಿತದಲ್ಲೇ ಪುರುಷತ್ವ ಮೆರೆಯುವ ಗಂಡನಾಗಿದ್ದರಂತೂ ಅದು ನರಕವೇ ಸರಿ. ಸತೀ ಸಾಧ್ವೀಮಣಿ ಅಲ್ಲವೆ ಅವಳು. ಮನೆ ನೀಗಿಸಬೇಕು. ಕುಡುಕ ಗಂಡನಿಗೆ ಹಣ ಒದಗಿಸಬೇಕು. ಅದು ಧರ್ಮ! ಪುರುಷಸಿಂಹ ಅಲ್ಲವೇ ಅವನು! ಅದಕ್ಕಾಗಿ ಅವಳ ದುಡಿತ ಅನಿವಾರ್ಯ. 'ಮುದ್ದೆ ಗಂಟು' ಮಹಿಳೆಯರ ಜೀವಂತ ನರಕಕ್ಕೆ ಒಂದು ಉದಾಹರಣೆ.

ಬಡತನದ ಜೊತೆಗೆ ಜಾತಿಯೂ ಸೇರಿದರೆ ಮೈಸೂರು ಕಳ್ಳ, ಬೆಂಗಳೂರು ಕಳ್ಳ ಜೊತೆಗೂಡಿದಂತೆ. 'ಕನಕನ ಅವ್ವ' ಇದಕ್ಕೆ ನಿದರ್ಶನ. ಕೀಳು ಜಾತಿಯ ಕನಕ ಪೆದ್ದ. ಮದುವೆ ಆದ. ಒಂದು ಹೆಣ್ಣು ಮಗು ಆಯಿತು. ಒಳ್ಳೆ ಕಡಸಿನಂತಿದ್ದ ಅವನ ಹೆಂಡತಿ ಇಂತಹ ಪೆದ್ದನ ಜೊತೆ ಬಾಳಲಾರದೆ ಗಂಡ ಮತ್ತು ಮಗುವನ್ನು ಬಿಟ್ಟು ಯಾರೊಂದಿಗೋ ಓಡಿಹೋದಳು. ಎಳೆಯ ಕಂದನನ್ನು ಸಾಕುವ ಹೊರೆ ಕನಕನ ಅವ್ವನಿಗೆ ಬಿತ್ತು. ಹೆಣ್ಣಾಯಿತು ಕಂದ. ಅಜ್ಜಿಯ ಸಂಗಡ ಒಂದು ದಿನ ಗೌಡರ ಮನೆಗೆ ಬಂದಳು. ಅಜ್ಜಿಯು ದೊಡ್ಡಗೌಡರ ಹೆಂಡತಿ ಗೌರಮ್ಮನ ಜೊತೆ ಕಷ್ಟ ಸುಖ ಮಾತನಾಡುತ್ತಿದ್ದಳು. ಮೊಮ್ಮಗಳ ವಿವಾಹದ ವಿಷಯ ಬಂತು. "ಮದುವೆ ಮಾಡ್ಬುಡು" ಅಂದರು ಅವರು. ಮದುವೆ ಮಾಡಲು ಹಣ ಅಂತ ಬೇಕಲ್ಲ, ಕೈಲಿ ಕಾಸಿರಲಿಲ್ಲ. ಅದಕ್ಕೆ ಗೌರಮ್ಮನ ಸಲಹೆ- "ಕರಿಘಟ್ಟದ ಶ್ರೀನಿವಾಸ ದೇವರಿಗೆ ನಿನ್ನ ಮೊಮ್ಮಗಳ ಬಸವಿ ಬುಟ್ಬುಡಮ್ಮಿ".

ಇಲ್ಲಿನ ದ್ವಂದ್ವ ನೋಡಿ. ಗೌರಮ್ಮ ಕೆಟ್ಟ ಹೆಂಗಸಲ್ಲ. ಕನಕನ ಅವ್ವನನ್ನು ಕಂಡರೆ ಕಕ್ಕುಲಾತಿ ಇದೆ. ಮನೆಗೆ ಬಂದಾಗ ಯಾವತ್ತು ಬರಿ ಕೈಯಲ್ಲಿ ಕಳಿಸಿದವರಲ್ಲ. ಸಂಪ್ರದಾಯದ ಬೇಲಿಯಲ್ಲಿ ಬೆಳೆದ ಅವರಿಗೆ ಬಸವಿ ಬಿಡುವುದರಲ್ಲಿ ಯಾವ ತಪ್ಪು ಕಾಣಿಸಲಿಲ್ಲ. ಅದೇ ಸರಿಯಾದದ್ದು ಎನ್ನಿಸಿತ್ತು. ಹಾಗೆ ಮಾಡುವುದರಲ್ಲೇ ಅಜ್ಜಿ ಮೊಮ್ಮಗಳ ಶ್ರೇಯಸ್ಸು ಎಂದು ನಂಬಿದ್ದರು. ಕನಕನ ಅವ್ವ ಹೆಸರೇ ಇಲ್ಲದವಳು. ಅವಳು ಕನಕನ ಅವ್ವ ಅಷ್ಟೆ. ಆದರೆ ಮಾನವೀಯತೆಯ ಗಣಿ.

ತನ್ನ ಮುದ್ದಿನ ಕಂದ ದೇವರ ಹೆಸರಿನಲ್ಲಿ ಉಳ್ಳವರ ತೆವಲು ತೀರಿಸಿಕೊಳ್ಳುವುದನ್ನು ನೆನೆದೇ ಅವಳ ಮೈಮನಗಳು ಅಪಾರ ಸಂಕಟದಿಂದ ಬೆಂದವು. ಮೊಮ್ಮಗಳ ಬಾಳು ಮೂರಾಬಟ್ಟೆಯಾಗುವುದು ಅವಳ ಮನಸ್ಸಿಗೆ ಒಪ್ಪದ ಮಾತಾಗಿತ್ತು. ಕೆಳಜಾತಿಯ

ಬಡವಿ ಮಾಡುವುದಾದರೂ ಏನು? ಕಣ್ಣೀರ ಕೋಡಿ ಹರಿಸಿದಳು. ಈ ದ್ವಂದ್ವ ನನ್ನನ್ನು ಈಗಲೂ ಕಾಡುತ್ತಿದೆ.

ಜಾತಿ ಎನ್ನುವುದು ವಾಸ್ತವ. ಕಡು ಬಡವನಾದರೂ ಸರಿ. ಬಾಯಾರಿ ಬೆಂಡಾದರೂ ಚಿಂತೆಯಿಲ್ಲ. ತನಗಿಂತ ಕಡಿಮೆ ಜಾತಿಯವರ ಮನೆಯಲ್ಲಿ ನೀರು ಕುಡಿಯಬಾರದು! "ನೀರು ಕುಡೀದೆ ಹೋದ್ರೆ ಜೀವ ಹೊಂಟೋದದೆ? ನೀರೇನು ಇಲ್ಲಿ ಇಲ್ದೇದ್ರೆ? ಇನ್ನೊಂದು ಮನೇಲಿ ಸಿಗ್ತದೆ. ಹಂಗಂತ? ಎಲ್ಲೆಲ್ಲೋ ಕುಡ್ದುಬುಟ್ಟು ಜಾತಿ ಕೆಡಿಸ್ಕೊಂಡೀರಾ" ಎನ್ನುವುದು ಹಲವರ ಸಿದ್ಧಾಂತ. ನೀರು ಕೊಡುವವರದು ಇನ್ನೊಂದು ರೀತಿಯ ಸಂಕಟ. ನೀರು ಕೇಳುದ್ರೆ ಕೊಡ್ತಾರೆ. ಕುಡಿದಾದ ಮೇಲೆ ನೀರು ಕುಡಿದವರು ಕೇಳ್ತಾರೆ– "ನೀವು ಯಾವ ಜನ?". ಜಾತಿ ಹೆಸರನ್ನ ಕೇಳಿ ಇಂತಹವರ ಮನೇಲಿ ನೀರು ಕುಡ್ದುವಲ್ಲ ಅಂತ ಬಹಳ ಸಂಕಟಪಟ್ಟುಕೊಂಡು ಹೋಯ್ತರೆ. ಅದಕ್ಕೆ ನೀರನ್ನು ಕೊಡುವ ಮೊದಲು ತಮ್ಮ ಜಾತಿಯ ಹೆಸರನ್ನು ತಿಳಿಸಿಯೇ ನೀರು ಕೊಡುವ ಪದ್ಧತಿ ಇಟ್ಟುಕೊಂಡಿದ್ದಾರಂತೆ!

ಅನ್ನ ಕೊಡುವ ರೈತನದ್ದು ಬರಿ ಕಾಲು. ಮಳೆ ಬರಲಿ, ಬಿಸಿಲು ಹೊಡೆಯಲಿ ಅದೇ ಅವನ ಅವತಾರ. ಚಪ್ಪಲಿಯೇ ಅವನಿಗೆ ಲಕ್ಷುರಿ. "ಜೋಡು ಯಾಕೆ ಹಾಕಿಲ್ಲ" ಎಂದರೆ "ಭೂಮ್ತಾಯಿ ಜೊತೇಲಿ ದುಡಿಯುವ ರೈತಾಪಿ ಜನ ನಾವು ನಿಮ್ಮಂಗೆ ಎಲ್ಲಾ ಕಡೆಗೂ ಜೋಡು ಮೆಟ್ಕೊಂಡು ತಿರುಗಾಡುಕೆ ಎಲ್ಲಾದದಪ್ಪ" ಅನ್ನುವ ಉತ್ತರ.

ರೈತನ ಜೊತೆ ಕಾಲೇಜು ಮೇಷ್ಟ್ರನ್ನು ನಿಲ್ಲಿಸಿ ನೋಡಿ. ಶಿಸ್ತುಗಾರ ಪುಟ್ಟಸ್ವಾಮಿ ತರಹ ಕಾಣ್ತಾರೆ. ಸಾವಿರ ಸಾವಿರ ಸಂಬಳ ತಗೊಳ್ತಾರೆ. ಅದೂ ಸಾಲದು ಅಂತ ಮುಷ್ಕರ ಮಾಡ್ತಾರೆ! "ಇದೇನ್ರಿ ಇದು? ಹುಡುಗರ ಪಾಠ ಹಾಳಾಗಲ್ವೇ ಅಂತ ಕೇಳಿದರೆ ಸ್ಪೆಷಲ್ ಕ್ಲಾಸ್ ತಗಂಡು ಮುಗಿಸ್ತೀವಿ" ಅಂತಾರೆ.

ಇವರ ಜೊತೆಯಲ್ಲೇ "ಕಿವುಡಿಯ ಜೀವನ ಮೌಲ್ಯ"ವನ್ನು ನೋಡಬೇಕು. ಕೂಲಿ ಕೆಲಸಕ್ಕೆ ಹೋಗಿದ್ದಳು ಕಿವುಡಿ. ಮುಸ್ಸಂಜೆ ಹೊತ್ತು. ಕೂಲಿಯಾಗಿ ಆ ಮನೆಯವರು ನುಚ್ಚಕ್ಕಿ ಕೊಟ್ಟರು. ಅವಳು ನುಚ್ಚಕ್ಕಿಯನ್ನು ಗಂಟು ಕಟ್ಟಿಟ್ಟು, ಅಲ್ಲೇ ಇರಲಿ ಎಂದಳು. ಎಷ್ಟು ಬಲವಂತ ಮಾಡಿದರೂ ನುಚ್ಚಕ್ಕಿಯನ್ನು ಅಂದು ತನ್ನ ಗುಡಿಸಲಿಗೆ ತೆಗೆದುಕೊಂಡು ಹೋಗಲಿಲ್ಲ. ಯಾಕೆ ಅಂತ ಕೇಳಿದರೆ– "ಮುಸ್ಸಂಜೆ ಹೊತ್ನಲ್ಲಿ ಲಚ್ಮಿ ಮನೇಲಿ ಸಂಚಾರ ಮಾಡ್ತಾಳೆ. ಅದಕ್ಕೆ ಬ್ಯಾಡ."

ಅದನ್ನು ತಾನು ತೆಗೆದುಕೊಂಡು ಹೋದರೆ, ಅವರ ಮನೆಯಿಂದ ಸಂಪತ್ತಿನ ರೂಪದ ಲಕ್ಷ್ಮಿ ತನ್ನ ಗುಡಿಸಲಿಗೆ ಬಂದು ಬಿಡುತ್ತಾಳೆ. ಆಗ ಅವರು ಬಡವರಾಗುತ್ತಾರೆ.

ಹಾಗಾಗಬಾರದು. ತಾನು ದುಡಿಯುತ್ತಿರುವ ನೆಲೆ ಹಾಳಾಗಬಾರದು ಎಂಬುದು ಅನಕ್ಷರಸ್ಥ ಬಡವಿಯ ಬದುಕಿನ ಮೌಲ್ಯ.

ನಮಗೆ ಅಕ್ಷರ ಕಲಿಸದ್ದೇನು?

ಇಂತಹ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ– "ಮುದ್ದೆ ಗಂಟು" ಸಂಕಲನ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ, ಸರಳ ಭಾಷೆಯ, ಅಲ್ಲಲ್ಲಿ ಹಾಸ್ಯ ಸಿಂಚನ ಇರುವ ಮುದ್ದೆ ಗಂಟಿನ ಬರಹಗಳು ಓದುಗನ ಮನಸ್ಸಿಗೆ ಮುದ ನೀಡುತ್ತವೆ. ಇದರ ಲೇಖಕರು ಮೇಷ್ಟ್ರು. ಬುದ್ಧಿ ಹೇಳುವುದು ಸಹಜವಾಗಿ ಬಂದಿರುತ್ತೆ. ಕೆಲವು ಸಲ ವಸ್ತುವಿಗಿಂತ ವ್ಯಾಖ್ಯಾನವೇ ಭಾರ ಅನ್ನಿಸುತ್ತೆ. ಆದರೆ ಅದೇನೂ ಸಂಕಲನದ ಮೂಲ ಆಶಯಕ್ಕೆ ಧಕ್ಕೆ ತರುವಂತಿಲ್ಲ.

ಇದಕ್ಕೆ ಮುನ್ನುಡಿ ಬರೆಯುವುದರ ಮೂಲಕ ಮತ್ತೊಮ್ಮೆ ಓದಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ಗೆಳೆಯರಾದ ಸಿ.ಪಿ.ನಾಗರಾಜ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಇನ್ನು ಒಂದು ಮಾತು. ಇವರಿಗೆ ಅಪಾರ ಅನುಭವ ಇದೆ. ಬರವಣಿಗೆ ಸಿದ್ಧಿಸಿದೆ. ಇದಕ್ಕಿಂತಲೂ ಮೌಲ್ಯಯುತವಾದ ಬರಹಗಳು ಬರಲೆಂದು ಆಶಿಸುತ್ತೇನೆ.

ಎಚ್.ಎಲ್. ಕೇಶವಮೂರ್ತಿ

ಮಂಡ್ಯ.

ಆತ್ಮಾವಲೋಕನದ ಬರಹ

ಈಗ ಅಂಕಣ ಬರಹಗಳು ಕೂಡ ಸಾಹಿತ್ಯ ಪ್ರಕಾರವೆಂದು ಜನಪ್ರಿಯವಾಗಿವೆ. ಅಂಕಣ ಬರಹಗಳಿಲ್ಲದ ಪತ್ರಿಕೆಗಳನ್ನು ಊಹಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಅಷ್ಟರಮಟ್ಟಿಗೆ ಅವು ಪತ್ರಿಕೆಗಳೊಂದಿಗೆ ಬಿಡಿಸಲಾಗದ ನಂಟನ್ನು ಹೊಂದಿವೆ. ಸದ್ಯಕ್ಕೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅಂಕಣ ಬರಹಗಳಲ್ಲಿ ಪ್ರಧಾನವಾಗಿ ಮೂರು ಲಕ್ಷಣಗಳನ್ನು ಗುರುತಿಸಬಹುದು.

ಮೊದಲನೆಯದಾಗಿ, ಪ್ರಚಲಿತ ರಾಜ್ಯ-ರಾಷ್ಟ್ರ ವಿದ್ಯಮಾನಗಳನ್ನು ವಿಶ್ಲೇಷಿಸುವ ಅಂಕಣಗಳು. ಇವುಗಳಲ್ಲಿ ರಾಜಕೀಯ ಪ್ರೇರಿತ ಬರಹಗಳ ಬಾಹುಳ್ಯವು ದೊಡ್ಡದಿರುತ್ತದೆ.

ಎರಡನೆಯದಾಗಿ, ಜನಪ್ರಿಯ ಮನೋರಂಜನೆ ಮತ್ತು ಭೋಗ ಸಂಸ್ಕೃತಿ ಕುರಿತ ಲೇಖನಗಳು. ಇವು ಜನರ ಆ ಕ್ಷಣದ ಅಪೇಕ್ಷೆಗಳನ್ನು ಪೂರೈಸುವ ಕೆಲಸವನ್ನು ಮಾಡುತ್ತವೆ.

ಮೂರನೆಯದಾಗಿ, ಸ್ಥಳೀಯ ಜನ ಸಮುದಾಯಗಳ ಲೋಕವನ್ನು ಸಮೀಪದಿಂದ ಕಂಡು ಬರೆಯುವುದು. ಇಂತಹ ಬರಹಗಳ ಪ್ರಮಾಣವು ವಿರಳವಾಗಿರುತ್ತದೆ.

ಸಿ.ಪಿ.ನಾಗರಾಜ ಅವರ 'ಮುದ್ದೆ ಗಂಟು' ಎಂಬ ಅಂಕಣ ಬರಹಗಳ ಕೃತಿಯು ಮೂರನೆಯ ಮಾದರಿಯನ್ನು ಪ್ರತಿನಿಧಿಸುತ್ತದೆ.

ಇಂದು ಯಾವ ನಿಟ್ಟಿನಿಂದ ಗಮನಿಸಿದರೂ ಪ್ರಾದೇಶಿಕತೆ, ದೇಶೀಯತೆ ಮತ್ತು ಸ್ಥಳೀಯತೆಗಳು ಸಂಪೂರ್ಣವಾಗಿ ನಿರ್ನಾಮವಾಗುತ್ತಿರುವ ಹೊತ್ತಿನಲ್ಲಿ ಈ ಬರಹಗಳು ಲೇಖಕರ ದಟ್ಟವಾದ ಜೀವನಾನುಭವ, ಸರ್ವರೊಂದಿಗೆ ಒಡನಾಡುವ ಸ್ವಭಾವ ಹಾಗೂ ಅನನ್ಯವಾದ ಗ್ರಹಿಕೆಗಳಿಂದ ಗಮನಾರ್ಹವಾಗಿವೆ. ಜನರ ದಿನನಿತ್ಯದ ವ್ಯವಹಾರಗಳಲ್ಲಿ ಕಣ್ಮರೆಯಾಗಿ ಹೋಗುತ್ತಿರುವ ಒಲುಮೆ, ಪ್ರಾಮಾಣಿಕತೆ, ಮಾನವೀಯ ಮೌಲ್ಯಗಳ ನೆಲೆಯಿಂದ ನೋಡಿದರೆ ಈ ಬರಹಗಳ ಪ್ರಾಮುಖ್ಯತೆ ಮನದಟ್ಟಾಗುತ್ತದೆ.

ಈ ಕೃತಿಯ ಲೇಖನಗಳು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸ್ಥಳೀಯ ಪತ್ರಿಕೆಯೊಂದಕ್ಕೆ ಬರೆದ ಅಂಕಣ ಬರಹಗಳೆಂದು ಲೇಖಕರು ಹೇಳಿಕೊಂಡಿದ್ದಾರೆ. ಬಹುತೇಕ ಲೇಖನಗಳು ಮಾಸ್ತಿಯವರ ಕತೆಗಳಂತೆ ಕೆಲವು ವರ್ಷಗಳ ಹಿಂದೆ ನಡೆದ ಘಟನೆಯೆಂದು ಹೇಳಿಕೊಳ್ಳುವುದರೊಂದಿಗೆ ಶುರುವಾಗುತ್ತವೆ. ಪ್ರತಿಯೊಂದು ಲೇಖನವೂ ಒಳ್ಳೆಯ ಕತೆಯೊಂದು ಒಳಗೊಂಡಿರುವ ವಸ್ತು, ಘಟನೆ, ಆಲೋಚನೆ, ದೃಶ್ಯ, ಸಂಭಾಷಣೆ–ಮೊದಲಾದ ಅಂಶಗಳನ್ನು ನೆನಪಿಗೆ ತರುತ್ತವೆ. ಈ ಕಾರಣಕ್ಕಾಗಿಯೋ ಏನೋ ಲೇಖನಗಳು ಕತೆಗಳಂತೆಯೇ ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ. ಇಲ್ಲಿ ನಿರೂಪಿತವಾಗಿರುವ ಘಟನೆ, ನೆನಪು, ಪ್ರಸಂಗ, ಸನ್ನಿವೇಶಗಳು– ಆ ಕ್ಷಣಕ್ಕೆ ಕಾಲದ ದೃಷ್ಟಿಯಿಂದ ಹಳೆಯದಾದುದು ಎನ್ನಿಸುತ್ತದೆ; ಆದರೆ ಅವುಗಳ ಒಡಲಿನಲ್ಲಿ ಹುದುಗಿರುವ ಸೂಕ್ಷ್ಮವಾಗಿರುವ ನೋಟ ಮತ್ತು ಚಿಂತನೆಗಳು, ಇಂದಿನ ವರ್ತಮಾನಕ್ಕೂ ಸಲ್ಲುತ್ತವೆ; ಆದ್ದರಿಂದ ಅವು ನವನವೀನತೆಯಿಂದ ಹೊಳೆಯುತ್ತವೆ. ಯಾಕೆಂದರೆ ಈ ನೆನಪುಗಳಿಗೆ ಯಾವುದೋ ಕಾಲದಲ್ಲಿ ಗತಿಸಿಹೋದದ್ದು ಎಂಬ ಹಳಹಳಿಕೆ, ವಿಷಾದ ಅಥವಾ ಸಿನಿಕತೆಯ ನೆರಳು ಆವರಿಸಿಕೊಂಡಿಲ್ಲ. ಇಲ್ಲಿಯ ಬರಹಗಳ ನರನಾಡಿಗಳಲ್ಲಿ ಪ್ರಗತಿಶೀಲ ಮನಸ್ಸೊಂದರ ಸಮಾನತೆಯ ತುಡಿತಗಳು ಹಾಸುಹೊಕ್ಕಾಗಿವೆ.

ಸದರಿ ಕೃತಿಯಲ್ಲಿ ಲೇಖಕರ ವಿದ್ಯಾರ್ಥಿ ಜೀವನದಲ್ಲಿ ಘಟಿಸಿದ ಮೋಜಿನ ಪ್ರಸಂಗಗಳಿವೆ. ಮುಂದೆ ಅವರು ಮೇಷ್ಟ್ರಾಗಿ ವೃತ್ತಿಯನ್ನು ಪ್ರಾರಂಭಿಸಿದಾಗ ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೆ ಜರುಗಿದ ಘಟನೆಗಳಿವೆ. ತಮ್ಮ ಸಹೋದ್ಯೋಗಿಗಳ, ಒಡನಾಡಿಗಳ ಬದುಕಿನ ಅನುಭವದ ಕಥನಗಳಿವೆ. ಅಪರೂಪ ಎನ್ನುವಂತೆ ಲೇಖಕರ ವೈಯಕ್ತಿಕ ಬದುಕಿನ ಸಂಗತಿಗಳು ಸಹ ಇದರಲ್ಲಿ ಸೇರಿಕೊಂಡಿವೆ. ಲೇಖಕ ತಾನು ಕಾಣುತ್ತಿರುವ ಮನುಷ್ಯ ವ್ಯಾಪಾರಗಳನ್ನು ಅಕ್ಷರಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಆದರೆ ಈ ಕಾಣುವಿಕೆಯು ಎಲ್ಲಿಯೂ ಏಕಮುಖಿ ಆಲೋಚನೆಯಾಗದಂತೆ ನಿರಂತರ ಎಚ್ಚರಿಕೆಯ ಪ್ರಜ್ಞೆಯೊಂದು ಇಲ್ಲಿಯ ಬರಹಗಳಲ್ಲಿದೆ.

ಈ ಎಲ್ಲ ಬರಹಗಳಲ್ಲಿ ಸಮಾನವಾಗಿರುವ ಅಂಶವೆಂದರೆ ಕಂಡ ಸತ್ಯವನ್ನು ಪ್ರಾಮಾಣಿಕವಾಗಿ ಬಿಚ್ಚಿಡುವುದು. ಕೆಲವು ಲೇಖನಗಳು ಘಟನೆಯನ್ನಷ್ಟೆ ಯಥಾವತ್ತಾಗಿ ನಿರೂಪಿಸುತ್ತಿವೆ ಎನ್ನುವಷ್ಟರಲ್ಲಿ ಇದ್ದಕ್ಕಿದ್ದಂತೆಯೇ ಅವುಗಳ ಕೊನೆಯಲ್ಲಿ ಒಂದು ಪಂಚಿಂಗ್ ಹೊಳವು ಇರುತ್ತದೆ. ಅದು ಇಡೀ ಘಟನೆಯನ್ನು ಕುರಿತು ಒಂದು ಹೊಸ ಒಳನೋಟವನ್ನು ನೀಡಿರುತ್ತದೆ. ಕೆಲವೊಮ್ಮೆ ಕೊನೆಯ ಭಾಗಗಳು ಅನಿರೀಕ್ಷಿತವಾಗಿ ನಗೆಯ ಕಡಲಿನಲ್ಲಿ ತೇಲುವಂತೆ ಮಾಡುತ್ತವೆ. ಆಗ ಆ ಇಡೀ ಘಟನೆಯು ಬೇರೊಂದು

ಆಯಾಮವನ್ನು ಪಡೆದುಕೊಂಡು ಬಿಡುತ್ತದೆ. ಅನೇಕ ಬರಹಗಳು ಲೇಖಕರಿಗೆ ಅರಿವಿಲ್ಲದೆಯೇ ಅತ್ಯುತ್ತಮ ವೈನೋದಿಕ ಪ್ರಬಂಧಗಳಾಗಿವೆ.

ಇವುಗಳಲ್ಲಿ ಲೇಖಕರ ವಿದ್ಯಾರ್ಥಿ ಜೀವನಕ್ಕೆ ಸಂಬಂಧಿಸಿದ ಲೇಖನಗಳು ಸಾಕಷ್ಟಿವೆ. ಆ ಹದಿಹರೆಯದ ವಯಸ್ಸಿನಲ್ಲಿ ವಯೋಸಹಜವಾದ ಹುಡುಗಾಟಿಕೆ, ಕೀಟಲೆ ಮತ್ತು ತಮಾಷೆಯ ನೆಪದಲ್ಲಿ ವ್ಯಕ್ತವಾಗಿರುವ ತಿಳಿಹಾಸ್ಯವು ನೈಜತೆಯಿಂದ ಕೂಡಿದೆ. ಲೇಖಕರು ಹೇಗಾದರೂ ಮಾಡಿ ಓದುಗರನ್ನು ನಗಿಸಲೇಬೇಕೆಂಬ ಗೀಳಿಗೆ ಬಿದ್ದವರಲ್ಲ. ಘಟನೆಗಳ ನಿರೂಪಣೆಯಲ್ಲಿ ಮತ್ತು ಭಾಷಿಕ ವಿನ್ಯಾಸದಲ್ಲಿ ವೈನೋದಿಕ ಪ್ರಜ್ಞೆಯೊಂದು ಸಹಜವಾಗಿಯೇ ಬೆರೆತುಹೋಗಿದೆ. ಲೇಖಕರ ಈ ಹಾಸ್ಯ ಪ್ರಜ್ಞೆಯು ಬದುಕನ್ನು ನೋಡುವ ಹಲವು ಪಾಠಗಳನ್ನು ಕಲಿಸಿದೆ. ತನ್ನ ಜೀವನದಂತೆಯೇ ಅನ್ಯರ ಬದುಕಿನಲ್ಲಿಯೂ ಸಂತೋಷ, ನೆಮ್ಮದಿ, ಉಲ್ಲಾಸವನ್ನು ಕಂಡುಕೊಳ್ಳುವಂತೆ ನೋಡಿಕೊಳ್ಳಲು ಸಾಧ್ಯವಾಗಿಸಿದೆ. ಇದರಿಂದಾಗಿ ಸಾಮಾಜಿಕ ಪರಿವರ್ತನೆಯ ದಾರಿಗೂ ಕಾರಣವಾಗುತ್ತದೆ.

ಇಂಥವುಗಳಲ್ಲಿ 'ನೀನೆಂಥ ಹೆಣ್ಣೆ', 'ಗುರುವಿಗೆ ತಿರುಮಂತ್ರ', 'ಯಾಕಪ್ಪ ಅಂದ್ರೆ? ಏನಪ್ಪ ಅಂದ್ರೆ', 'ನಾಲ್ಕು ಕಾಲಿನ ಬ್ಯಾಟೆ', 'ಅಕ್ಕ ತಂಗೇರು... ಕತ್ತೆಮುಂಡೇರು', 'ಪುಟಾಣಿ ಮಗುವೇ ಕೇಳು', 'ಬಾಡ್ಬೇಕು... ಸಾ', 'ಮುದುಕರೇ ಮುಂದೆ ಬನ್ನಿ' ಮೊದಲಾದ ಲೇಖನಗಳು ಮುಖ್ಯವಾಗಿವೆ. ಪ್ರಸ್ತುತ ಕೃತಿಯ ಲೇಖನಗಳು ವಾಸ್ತವವಾಗಿ ನಮ್ಮ ಸಮಾಜ ಮತ್ತು ಸಮುದಾಯಗಳನ್ನು ಕಾಡುತ್ತಿರುವ ಗಂಭೀರ ಸಮಸ್ಯೆಗಳನ್ನು ಅತ್ಯಂತ ಸರಳವಾದ ನೆಲೆಯಲ್ಲಿ ವಿಶ್ಲೇಷಿಸುತ್ತವೆ.

'ಆಟ ಒಂದೇ.... ಆದರೆ ನೋಟ' ಎಂಬ ಲೇಖನದಲ್ಲಿ ಭಾರತ ಮತ್ತು ಶ್ರೀಲಂಕಾ ನಡುವಿನ ಕ್ರಿಕೆಟ್ ಪಂದ್ಯಾವಳಿಯನ್ನು ಜಿಡ್ಡು ಕೃಷ್ಣಮೂರ್ತಿಯವರ "ರಾಷ್ಟ್ರೀಯತೆ ಎಂಬ ಪರಿಕಲ್ಪನೆಯು ಮನುಕುಲದ ಸಹಬಾಳ್ವೆಗೆ ಒಂದು ಶಾಪವಾಗಿದೆ" ಎಂಬ ಹೇಳಿಕೆಯ ನೆಲೆಯಿಂದ ವಿಶ್ಲೇಷಿಸಿರುವುದು ವಿಶಿಷ್ಟವಾಗಿದೆ.

ಧಾರ್ಮಿಕ ಕಟ್ಟುಪಾಡುಗಳ ನಡುವೆಯೂ ಮುಸ್ಲಿಂ ಹುಡುಗರು ರಸ್ತೆ ಬದಿಯ ಇಕ್ಕಟ್ಟಾದ ಪೊದೆಯಲ್ಲಿ ಗೌರಿ ಗಣೇಶರನ್ನು ಪೂಜಿಸಿ ಸಂತೋಷಪಡುವ 'ಪೊದೆಯೊಳಗಿನ ಗೌರಿ ಗಣೇಶ' ಎಂಬ ಲೇಖನವು ಪರಧರ್ಮ ಸಹಿಷ್ಣುತೆಯನ್ನು ಬಿಚ್ಚಿಡುತ್ತದೆ.

'ಬಸವಣ್ಣನ ದಾರಿ' ಎಂಬ ಲೇಖನವು ಹಳ್ಳಿಯೊಂದರಲ್ಲಿ ನಡೆಯುವ ಧಾರ್ಮಿಕ ಜಾತ್ರೆಯಲ್ಲಿ ತೇರು ಎಳೆಯುವ ಸಂಪ್ರದಾಯವಿದ್ದು, ಅದು ದಲಿತ ಕೇರಿಯಲ್ಲೂ

ಹಾದು ಹೋಗಬೇಕೆಂಬ ವಾದಕ್ಕೆ ಮೇಲ್ಜಾತಿಯವರು ಒಪ್ಪುವುದಿಲ್ಲ. ಆದರೆ ಒಂದು ಬಸವನನ್ನು ಮುಂದೆ ಬಿಟ್ಟು, ಅದರ ಹಿಂದೆ ನಡೆಯುವ ತೀರ್ಮಾನವಾದಾಗ ಅದು ದಲಿತ ಕೇರಿಯನ್ನು ಹಾದು ಹೋಗುವುದನ್ನು ಚರ್ಚಿಸುತ್ತದೆ. ಜಡ್ಡುಗಟ್ಟಿದ ಜಾತಿ ವ್ಯವಸ್ಥೆಯನ್ನು ಸಡಿಲಗೊಳ್ಳುವ ಪ್ರಕ್ರಿಯೆಯೊಂದಕ್ಕೆ ಪ್ರಾಣಿಯೊಂದು ಮನುಷ್ಯರಿಗೆ ಹೊಸ ಪಥವನ್ನು ನಿರ್ಮಿಸಿಕೊಡುತ್ತದೆ.

ಇಂತಹ ಅನೇಕ ಲೇಖನಗಳು ಮೇಲ್ನೋಟಕ್ಕೆ ಸರಳವೆಂದು ತೋರುತ್ತವೆ; ಆದರೆ ಇಂತಹ ಚಿಂತನೆಗಳೇ ಸಾಮಾಜಿಕ ಅಸಮಾನತೆಯ ವ್ಯವಸ್ಥೆಯನ್ನು ಭಂಜಿಸಲು ನಿದರ್ಶನಗಳಾಗುತ್ತವೆ. ಇನ್ನೂ ಎಷ್ಟೋ ಲೇಖನಗಳಲ್ಲಿರುವ ಇಂತಹ ಸಣ್ಣಪುಟ್ಟ ಎಳೆಗಳೇ ಗಹನವಾದ ಚರ್ಚೆಗೆ ದಾರಿ ಮಾಡಿಕೊಡುತ್ತವೆ. ಕುವೆಂಪು ಆಶಿಸಿದ "ಸರ್ವರಿಗೆ ಸಮ ಬಾಳು, ಸರ್ವರಿಗೆ ಸಮ ಪಾಲು" ಎಂಬ ಆದರ್ಶಕ್ಕಾಗಿ ಪ್ರಯತ್ನಿಸಲು ಉತ್ತೇಜಿಸುತ್ತವೆ.

ಲೇಖಕರು ಮೂಲತಃ ಮೇಷ್ಟ್ರಾಗಿದ್ದರಿಂದಲೋ ಏನೋ ಹೆಚ್ಚಿನ ಲೇಖನಗಳು ಮಕ್ಕಳು, ವಿದ್ಯಾರ್ಥಿಗಳು, ಶಿಕ್ಷಣ, ಕಲಿಕೆ – ಮೊದಲಾದ ವಿಷಯಗಳಿಗೆ ಸಂಬಂಧಪಟ್ಟಿವೆ. ಲೇಖಕರು ಈ ಲೇಖನಗಳಲ್ಲಿ ಅನೇಕ ಕಡೆಗಳಲ್ಲಿ ತಮ್ಮ ಮೇಷ್ಟ್ರಗಿರಿಯನ್ನು ತೋರಿಸುವ ಪ್ರಸಂಗಗಳಿವೆ. ಅಂತಹ ಸನ್ನಿವೇಶದಲ್ಲಿ ಲೇಖಕರ ಮಾತು ಮತ್ತು ಅಭಿಪ್ರಾಯಗಳು ತಮಗೆ ತಿರುಗುಬಾಣವಾಗುತ್ತವೆ; ಆ ಗಳಿಗೆಯಲ್ಲಿ ತಮಗೆ ವಿದ್ಯಾರ್ಥಿಗಳ ಎದುರಿನಲ್ಲಿ ಅವಮಾನವಾಯಿತೆಂದು ಭಾವಿಸಿಕೊಂಡು ಸ್ವ–ಸಮರ್ಥನೆಗೆ ಇಳಿಯುವುದಿಲ್ಲ. ಆಗ ಲೇಖಕರಲ್ಲಿ ಭುಗಿಲೇಳಬಹುದಾಗಿದ್ದ ಸಿಟ್ಟು, ಆಕ್ರೋಶ, ಅಸಮಾಧಾನದ ಬದಲಿಗೆ ಆತ್ಮಾವಲೋಕನದ ಗುಣವನ್ನು ಕಾಣುತ್ತೇವೆ. ತಾನು ಈ ದೃಷ್ಟಿಯಿಂದ ಆಲೋಚನೆಯನ್ನೇ ಮಾಡಲಿಲ್ಲವೆಂದು ಅನ್ನಿಸಿದ ತಕ್ಷಣವೇ ಆತ್ಮವಿಮರ್ಶೆಯಲ್ಲಿ ತೊಡಗಿಬಿಡುತ್ತಾರೆ.

ಆದ್ದರಿಂದ ಲೋಕದ ಡೊಂಕನ್ನು ಎತ್ತಿ ಆಡುವುದು ಲೇಖಕರ ಉದ್ದೇಶವಾಗಿಲ್ಲ; ಯಥಾಸ್ಥಿತಿಯನ್ನು ಸಮರ್ಥಿಸಲು ಹೋಗುವುದಿಲ್ಲ; ಹಾಗೆ ನೋಡಿದರೆ, ಈ ಸಮಾಜದಲ್ಲಿ ತಾನು ಕಾಣುತ್ತಿರುವ ಲೋಪಗಳನ್ನು ಮರೆಮಾಚುವುದೂ ಇಲ್ಲ; ತಮ್ಮ ಎದುರಿನಲ್ಲಿ ಇರುವವರನ್ನು ಬದಲಿಸುವ ಮೊದಲು ತಾನು ಎಷ್ಟರಮಟ್ಟಿಗೆ ಪ್ರಾಮಾಣಿಕನೆಂದು ತಮ್ಮೊಳಗೆ ನೋಡಿಕೊಳ್ಳುತ್ತಾರೆ. ನಂತರದಲ್ಲಿ ತಮ್ಮ ನಿಲುವುಗಳನ್ನು ಅವರ ಮುಂದೆ ಪ್ರಸ್ತಾಪಿಸುತ್ತಾರೆ. ತಮ್ಮ ವಿಚಾರಗಳನ್ನು ಮತ್ತೊಬ್ಬರ ಮೇಲೆ ಅನಗತ್ಯವಾಗಿ ಹೇರುವುದಿಲ್ಲ. ಆದ್ದರಿಂದಲೇ ಈ ಕೃತಿಯ ಯಾವುದೇ ಲೇಖನಗಳು ವಿತಂಡವಾದದಿಂದಾಗಲಿ ಮತ್ತು ಯಾವುದೇ ಅತಿರೇಕದಿಂದಾಗಲಿ ಬಳಲುವುದಿಲ್ಲ.

ಈ ಲೇಖನಗಳನ್ನು ಇನ್ನಷ್ಟು ಮೊನಚಾಗಿಸಲು ಮತ್ತು ತೀಕ್ಷ್ಣಗೊಳಿಸಲು ವಿಶ್ಲೇಷಣೆಯ ಭಾಗವು ಇನ್ನಷ್ಟು ಇರಬೇಕಾಗಿತ್ತು ಎಂದು ಅನ್ನಿಸುತ್ತದೆ. ಆದರೆ ಲೇಖಕರು ಕಂಡುಂಡ ಅಪಾರ ಜೀವನಾನುಭವ ಮತ್ತು ಗ್ರಾಮೀಣ ಸೊಗಡಿನಿಂದ ಕೂಡಿದ ಭಾಷಿಕ ನಿರೂಪಣೆಯಿಂದಾಗಿ ಕೃತಿಯು ಮುಖ್ಯವಾಗುತ್ತದೆ. ಎಲ್ಲವೂ ಭ್ರಷ್ಟಗೊಳ್ಳುತ್ತಿರುವ ಇಂದಿನ ದಿನಮಾನದಲ್ಲಿ ಈ ಕೃತಿಯು ಸಾಮಾಜಿಕ ಕಳಕಳಿ, ಮಾನವೀಯತೆ, ಸೌಹಾರ್ದತೆ ಮತ್ತು ಜಾತ್ಯತೀತ ಮೌಲ್ಯಗಳನ್ನು ಮುಂಚೂಣಿಗೆ ತರುವುದರಿಂದ ಗಮನಾರ್ಹವಾಗಿದೆ. ಕನ್ನಡ ಸಾಹಿತ್ಯ ಲೋಕಕ್ಕೆ ಇನ್ನು ಮುಂದೆಯೂ ಇವರಿಂದ ಇಂತಹ ಒಳ್ಳೆಯ ಕೃತಿಗಳು ಬರುವಂತಾಗಲಿ ಎಂದು ಆಶಿಸುತ್ತೇನೆ.

ಡಾ. ಸುಭಾಷ್ ರಾಜಮಾನೆ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಯಲಹಂಕ, ಬೆಂಗಳೂರು 560 064

ನನ್ನ ನುಡಿ

ಮಂಡ್ಯ ನಗರದ ಪಿ.ಇ.ಎಸ್., ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಮತ್ತು ಕನ್ನಡ ನಾಡಿನ ಒಳ್ಳೆಯ ಬರಹಗಾರರಲ್ಲಿ ಒಬ್ಬರಾಗಿದ್ದ ಪ್ರೊ.ಎಚ್.ಎಲ್. ಕೇಶವಮೂರ್ತಿ ಅವರು ನಿವೃತ್ತಿಯ ನಂತರ 1997 ರ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ "ಉದಯ ಕಾಲ" ಎಂಬ ದಿನಪತ್ರಿಕೆಯನ್ನು ತಮ್ಮ ಒಡೆತನದಲ್ಲಿ ಹೊರತಂದು, ಅದರ ಸಂಪಾದಕರಾಗಿದ್ದರು. ಅವರನ್ನು ಒಂದು ದಿನ ನಾನು ಭೇಟಿ ಮಾಡಿದಾಗ, ಉದಯ ಕಾಲ ಪತ್ರಿಕೆಗೆ ಲೇಖನವನ್ನು ಬರೆದು ಕೊಡಲು ಕೇಳಿದರು. ಕೆಲವು ಸಣ್ಣ ಪುಟ್ಟ ನಾಟಕಗಳನ್ನು ಬರೆದಿದ್ದ ನನಗೆ, ಗದ್ಯರೂಪದ ಲೇಖನಗಳನ್ನು ಬರೆಯುವ ರೂಢಿಯಿರಲಿಲ್ಲ. ಬರೆಯಲು ನನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದಾಗ–

"ನಿಮ್ಮ ಸುತ್ತ ಮುತ್ತ ನೀವು ನೋಡುತ್ತಿರುವ ಘಟನೆಗಳನ್ನು ಮತ್ತು ನಿಮ್ಮ ಅನುಭವಗಳನ್ನೇ ಕುರಿತು ಚಿಕ್ಕ ಲೇಖನಗಳನ್ನು ಬರೆದು ಕೊಡಿ" ಎಂದರು. ತಕ್ಷಣವೇ ಮನೆಗೆ ಬಂದು 'ಕಿವುಡಿಯ ಜೀವನ ಮೌಲ್ಯ' ಎಂಬ ಲೇಖನವನ್ನು ಬರೆದು ಕೊಟ್ಟೆನು. ಉದಯ ಕಾಲದ ಭಾನುವಾರದ ಸಂಚಿಕೆಯಲ್ಲಿ ಅದನ್ನು ಪ್ರಕಟಿಸಿದರು. ಇದರಿಂದ ಉತ್ತೇಜಿತನಾದ ನಾನು ಪ್ರತಿ ವಾರ ಬರೆಯುತ್ತಾ ಬಂದೆ. ಸುಮಾರು ಹದಿನೈದು ತಿಂಗಳ ಕಾಲ ನನ್ನ ಬರವಣಿಗೆ ಮುಂದುವರಿಯಿತು. ಈ ರೀತಿಯ ಲೇಖನಗಳ ರಚನೆಗೆ ಮತ್ತು ಪ್ರಕಟಣೆಗೆ ಎಚ್.ಎಲ್.ಕೇಶವಮೂರ್ತಿ ಅವರು ಕಾರಣರಾಗಿದ್ದಾರೆ.

ಉದಯ ಕಾಲ ಪತ್ರಿಕೆಯಲ್ಲಿ ಪ್ರಕಟಗೊಂಡ ಮೊದಲ ಮೂವತ್ತು ಲೇಖನಗಳನ್ನು 'ಕರಿಯನ ಪುರಾಣ(1998)' ಮತ್ತು ಅನಂತರದ ಇಪ್ಪತ್ತೈದು ಲೇಖನಗಳನ್ನು'ಕನಕನ ಅವ್ವ(2000)' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಈ ಮೊದಲು ಪ್ರಕಟಿಸಿದ್ದೆನು.

ಕಳೆದ ಐದು ವರ್ಷಗಳ ಹಿಂದೆ ಈ ಎಲ್ಲಾ ಲೇಖನಗಳನ್ನು ಒಂದೇ ಪುಸ್ತಕದಲ್ಲಿ ತರಬೇಕೆಂಬ ಆಸೆಯಿಂದ ಗೆಳೆಯ ಎಂ.ಎಲ್. ಸೋಮವರದ ಅವರಿಂದ ಪ್ರತಿಯೊಂದು

ಲೇಖನಕ್ಕೂ ಒಂದೊಂದು ರೇಖಾ ಚಿತ್ರವನ್ನು ಮತ್ತು ಎಚ್.ಎಲ್.ಕೇಶವಮೂರ್ತಿ ಅವರಿಂದ ಮುನ್ನುಡಿಯನ್ನು ಬರೆಯಿಸಿ ಇಟ್ಟುಕೊಂಡಿದ್ದೆನು. ಅದನ್ನು ಈಗ ಹೊರತರುತ್ತಿದ್ದೇನೆ. ಇಂದು ಎಚ್.ಎಲ್.ಕೇಶವಮೂರ್ತಿ(1939–2017) ಅವರು ನಮ್ಮೊಡನಿಲ್ಲ. ಮಂಡ್ಯದಲ್ಲಿ ಅವರ ಒಡನಾಟದಿಂದ ಅಪಾರವಾದ ಅರಿವನ್ನು ನಾನು ಪಡೆದಿದ್ದೇನೆ. ಎಚ್.ಎಲ್.ಕೇಶವಮೂರ್ತಿ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಲೇಖನಗಳಲ್ಲಿ ಚಿತ್ರಣಗೊಂಡಿರುವ ಸಂಗತಿಗಳೆಲ್ಲವೂ ನನ್ನೊಬ್ಬನ ಅನುಭವಗಳೇ ಅಲ್ಲ. ನನ್ನ ಗೆಳೆಯರಾದ ಬಿ. ರಾಜಶೇಖರಪ್ಪ, ಎಲ್. ರಾಜಶೇಖರಯ್ಯ, ಬಿ.ವಿ.ನಾರಾಯಣ, ಕೆ.ವಿ. ಕೃಷ್ಣೇಗೌಡ, ಎಂ.ಎಲ್. ಸೋಮವರದ, ಎಸ್.ಎಂ. ಧನರಾಜು, ಚೌಡಯ್ಯ, ಡಿ. ಕೃಷ್ಣಪ್ಪಗೌಡ, ಆರ್.ಸಿ. ದೇವರಾಜು, ವಿ.ಎನ್. ನಂಜುಂಡಯ್ಯ, ಸತೀಶ್ ಬಾಬು ಮತ್ತು ಸಮಾಜ ಸೇವಾಕರ್ತ ಎಸ್. ಹೊನ್ನಯ್ಯನವರು ನನ್ನೊಡನೆ ಹೇಳಿದ ಘಟನೆಗಳನ್ನು, ಮತ್ತೊಮ್ಮೆ ಪರಿಭಾವಿಸಿಕೊಂಡು ಕೆಲವು ಲೇಖನಗಳನ್ನು ರಚಿಸಿದ್ದೇನೆ.

ಆನ್ ಲೈನ್ ಮ್ಯಾಗಜೀನ್ ಹೊನಲು ಮಿಂದಾಣದಲ್ಲಿ(honalu.net) ಇಲ್ಲಿನ ಕೆಲವು ಲೇಖನಗಳು ಮರು ಪ್ರಕಟಗೊಂಡಿವೆ. ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ನನ್ನ ಗುರು ಹಿರಿಯರು ಮತ್ತು ಗೆಳೆಯರು ಈ ಲೇಖನಗಳನ್ನು ಓದಿ ಉತ್ತೇಜನದ ನುಡಿಗಳನ್ನಾಡಿದ್ದಾರೆ. ಈ ಎಲ್ಲಾ ಲೇಖನಗಳ ಮೊದಲ ಓದುಗಳಾಗಿ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಗಳ ಮೂಲಕ ಬರಹವನ್ನು ತಿದ್ದಿ ತೀಡಿ ಬರೆಯಲು ನೆರವಾಗಿದ್ದಾಳೆ.

ಗೆಳೆಯರಾದ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಮೂಲಕ ಪರಿಚಿತರಾದ ಸುಭಾಷ್ ರಾಜಮಾನೆ ಅವರು ಈ ಲೇಖನಗಳನ್ನು ಓದಿ, ವಿಮರ್ಶಾತ್ಮಕವಾದ ನುಡಿಗಳ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.


ಈ ಮೇಲ್ಕಂಡ ಎಲ್ಲಾ ಗುರು ಹಿರಿಯರಿಗೆ ಮತ್ತು ಗೆಳೆಯರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ. ನಾಗರಾಜ

ಬೆಂಗಳೂರು.

ಪರಿವಿಡಿ

ಕಿವುಡಿಯ ಜೀವನ ಮೌಲ್ಯ



ಮೂರು ಮಂದಿ ಮಕ್ಕಳು ಮತ್ತು ಗಂಡನೊಡನೆ ಸಂಸಾರ ಮಾಡುತ್ತಿರುವ ಕಿವುಡಿ... ಸುಮಾರು ನಲವತ್ತು ವರ್ಷದ ಹೆಂಗಸು... ಜಾತಿಯಿಂದ ಒಡ್ಡರವಳು... ತಾಯ್ನುಡಿ ತಮಿಳು. ಇವಳಿಗೆ ಕಿವಿ ಸ್ವಲ್ಪ ಮಂದವಾಗಿದ್ದುದರಿಂದ... 'ಕಿವುಡಿ' ಎಂಬ ಅಡ್ಡ ಹೆಸರು ಶಾಶ್ವತವಾಗಿ ಅಂಟಿಕೊಂಡಿತ್ತು. ತಮಿಳ್ನಾಡಿನಿಂದ ಮದ್ದೂರಿಗೆ ಬಂದು ನೆಲೆಸಿ, ಹತ್ತಾರು ವರ್ಷಗಳಾಗಿರುವುದರಿಂದ ಕನ್ನಡವನ್ನು ಚೆನ್ನಾಗಿ ಮಾತನಾಡುತ್ತಾಳೆ. ಇವಳ ಸಂಸಾರದ ತೇರು ಕೂಲಿಯ ಕಾಯಕದಿಂದ ಉರುಳುತ್ತಿದೆ. ಕಿವುಡಿ... ಅಕ್ಷರ ಜ್ಞಾನ ತಿಳಿಯದ ಮಡ್ಡಿ.

ಒಂದು ದಿನ ನಮ್ಮ ಮನೆಗೆ ಅಕ್ಕಿ ಮಾಡುವುದಕ್ಕೆಂದು ಕಿವುಡಿ ಬಂದಿದ್ದಳು. ಸಾಯಂಕಾಲದವರೆಗೂ ಅಕ್ಕಿಯನ್ನು ಹಸನು ಮಾಡಿ, ಸಂಜೆ ಆರು ಗಂಟೆಯ ವೇಳೆಯಲ್ಲಿ ನಮ್ಮ ಮನೆಯಿಂದ ಹೊರಟಳು. ಅಕ್ಕಿಯನ್ನು ಹಸ ಮಾಡಿದ ಕೂಲಿಯಾಗಿ ಅವಳಿಗೆ ನುಚ್ಚಕ್ಕಿಯನ್ನು ಕೊಟ್ಟಿತ್ತು. ಆ ನುಚ್ಚಕ್ಕಿಯ ಗಂಟನ್ನು ನಮ್ಮ ಮನೆಯಲ್ಲೆ ಬಿಟ್ಟು ಹೋಗುತ್ತಿರುವುದನ್ನು ಗಮನಿಸಿದ ನಾನು–

"ಇದೇನಮ್ಮ?... ಅಕ್ಕಿ ಗಂಟು ಇಲ್ಲೇ ಬಿಟ್ಟು ಹೊಯ್ತಾ ಇದ್ದೀಯಾ!"

"ಇವತ್ತು ಬ್ಯಾಡ ಸ್ವಾಮಿ... ನಾಳೆ ತಕೊಂಡು ಹೊಯ್ತಿನಿ."

"ಯಾಕಮ್ಮ."

"ಇವತ್ತು ಶುಕ್ರವಾರ ಸ್ವಾಮಿ... ಮುಸ್ಸಂಜೆ ಹೊತ್ನಲ್ಲಿ ಲಚ್ಮಿ... ಮನೇಲಿ ಸಂಚಾರ ಇರ್ತಾಳೆ... ಅದಕ್ಕೆ ಬ್ಯಾಡ... ನಾಳೆ ತಕೊಂಡು ಹೊಯ್ತಿನಿ."

"ಏನಮ್ಮ ಹಂಗಂದ್ರೆ!... ನಮ್ಮ ಮನೇಲಿ ಲಕ್ಷ್ಮಿ ಸಂಚಾರ ಇದ್ರೆ... ನೀನ್ಯಾಕೆ ಅಕ್ಕಿ ತಕೊಂಡು ಹೋಗ್ಬಾರದು?"

"ಅಕ್ಕಿ ಸಂಪತ್ತಿದ್ದಂಗೆ ಸ್ವಾಮಿ... ಈಗ ನಾನು ಅಕ್ಕಿ ತಕೊಂಡು ಹೊರಟ್ರೆ... ಲಚ್ಮಿ ನನ್ ಹಿಂದೇನೆ... ನನ್ಮನೇಗೆ ಬಂದ್ಬುಡ್ತಳೆ. ಆಗ ನಿಮ್ಮನೆ ಬಡವಾಗ್ಹೋಯ್ತದೆ. ಅದಕ್ಕೆ ಬ್ಯಾಡ."

"ಏನಮ್ಮ, ನೀನು ಮಾತಾಡ್ತಾ ಇರೋದು?... ಯಾವ ಲಕ್ಷ್ಮಿನೂ ಎಲ್ಲಿಗೂ ಹೋಗಲ್ಲ... ಬರಲ್ಲ. ಅಲ್ಲಿ ಗುಡಿಸಲಲ್ಲಿ ನಿನ್ನ ಮಕ್ಕಳು ಹಸಗೊಂಡು ಇರ್ತವೆ. ಅವಕ್ಕೆ ಗಂಜಿ ಗಿಂಜಿ ಮಾಡ್ಕೊಡೋದು ಬುಟ್ಬುಟ್ಟು... ಬರೀ ಕೈಯಲ್ಲಿ ಹೋಗ್ತಾಯಿದ್ದೀಯಲ್ಲಮ್ಮ?"

"ಮಕ್ಕಳದು ಹೆಂಗೊ ಆಯ್ತದೆ ಸ್ವಾಮಿ."

"ಹೆಂಗೊ ಹೇಗಾಗುತ್ತಮ್ಮ?... ಇಂಥ ದಡ್ಡ ಕೆಲಸ ಮಾಡ್ಬೇಡ... ಸುಮ್ಮನೆ ಅಕ್ಕಿ ತಕೊಂಡು ಹೋಗು."

"ಸ್ವಾಮಿ, ನೀನ್ ಏನ್ ಹೇಳುದ್ರು... ನಂಗೆ ಇವತ್ತು ಅಕ್ಕಿ ಬ್ಯಾಡ. ನಾಳೆ ಬೆಳಿಗ್ಗೆ ಬಂದು ತಕೊಂಡು ಹೊಯ್ತಿನಿ" ಎಂದು ಹೇಳಿ, ಬರಿ ಕೈಯಲ್ಲಿ ಹೊರಟೇ ಹೋದಳು.

ಕಿವುಡಿಯ ವರ್ತನೆಯನ್ನು ಕಂಡು ನನಗೆ ಅಚ್ಚರಿ ಮತ್ತು ಆಕ್ರೋಶಗಳೆರಡೂ ಏಕ ಕಾಲದಲ್ಲಿ ಉಂಟಾದವು. ಕಿವುಡಿಯ ಮನದಲ್ಲಿನ ಲಕ್ಷ್ಮಿಯ ಬಗೆಗಿನ ಭಾವನೆಯು

ಅತ್ಯಂತ ಮೌಢ್ಯದಿಂದ ಕೂಡಿದೆ. ಇದಕ್ಕೆ ಅವಳ ಅನಕ್ಷರತೆ ಮತ್ತು ಸೀಮಿತ ಜ್ಞಾನ ಕಾರಣವಾಗಿದೆ. ಆದರೆ ಕಡು ಬಡವಳಾದ ಆಕೆಯ ಮೌಢ್ಯದ ಹಿನ್ನೆಲೆಯಲ್ಲಿರುವ... "ತಾನು ದುಡಿಯುತ್ತಿರುವ ನೆಲೆ ಹಾಳಾಗಬಾರದೆಂಬ" ಆಶಯವನ್ನು ಗುರುತಿಸಿ ಮೂಕನಾದೆ.

ಕಿವುಡಿಯು ತನ್ನ ಜೀವನದಲ್ಲಿ ಹೊಂದಿರುವ ಈ ಮಟ್ಟದ ಅತ್ಯುತ್ತಮವಾದ ಜೀವನ ಮೌಲ್ಯ ನನ್ನಲ್ಲಿದೆಯೇ ಎಂಬ ಪ್ರಶ್ನೆಗೆ –

'ಇಲ್ಲ'ವೆಂಬುದೇ ಉತ್ತರ.

⌘

ಮುದ್ದೆ ಗಂಟು



ಸುಮಾರು ಮೂವತ್ತೈದು ವರ್ಷದ ಹಿಂದೆ ನಡೆದ ಘಟನೆ. ಮಳೆ ಬೆಳೆ ಹೋಗಿ ಬರಗಾಲ ಬಂದಿತ್ತು. ಮಳೆರಾಯನನ್ನೇ ನಂಬಿಕೊಂಡಿದ್ದ ಚನ್ನಪಟ್ಟಣದ ಆಸುಪಾಸಿನ ಹಳ್ಳಿಗಳ ಬವಣೆಯಂತೂ ಹೇಳತೀರದಾಗಿತ್ತು. ಬೆಳೆಯಿಲ್ಲದ ರೈತರ ಮತ್ತು ಮೇವಿಲ್ಲದ ದನಕರುಗಳ ಗೋಳು ಮುಗಿಲನ್ನು ಮುಟ್ಟುವಂತಿತ್ತು. ಕೂಲಿ ನಾಲಿ ಮಾಡಿ ಹೊಟ್ಟೆ ಹೊರೆದುಕೊಳ್ಳುವ ಭೂರಹಿತ ಕೃಷಿ ಕಾರ್ಮಿಕರ ಹಸಿವಿನ ಸಂಕಟ, ಅನುಭವಿಸಿದವರಿಗೆ ಮಾತ್ರ ತಿಳಿಯುತ್ತಿತ್ತು.

ಇಂತಹ ದಿನಗಳಲ್ಲಿ ಸರ್ಕಾರವು ಅಲ್ಪ ಸ್ವಲ್ಪ ಕಾಮಗಾರಿ ಕೆಲಸವನ್ನು ಮಂಜೂರು ಮಾಡಿ, ದುಡಿಯುವ ಬಡವರ ಪಾಲಿಗೆ ಅಂಬಲಿ ದೊರಕುವಂತೆ ಮಾಡಿತ್ತು. ಕಾಮಗಾರಿ ನಡೆಯುತ್ತಿದ್ದ ಒಂದು ಸ್ಥಳದಲ್ಲಿ ಒಬ್ಬ ಮೇಸ್ತ್ರಿ ಇದ್ದನು. ಕೆರೆಯ ಹೂಳನ್ನೆತ್ತುವ ಕೆಲಸಕ್ಕೆ ಬರುವ ಪ್ರತಿಯೊಬ್ಬ ಕೂಲಿಯು.... ಮಧ್ಯಾಹ್ನ ಉಣ್ಣುವುದಕ್ಕೆ ಊಟವನ್ನು ಕಡ್ಡಾಯವಾಗಿ ತರಬೇಕಿತ್ತು. ಕೂಲಿಯಾಳುಗಳ ಊಟವೆಂದರೆ ಇನ್ನೇನು.... 'ರಾಗಿ ಮುದ್ದೆ'.

ಮುದ್ದೆ ಗಂಟನ್ನು ಜೊತೆಯಲ್ಲಿ ತಂದರೆ ಮಾತ್ರ... ಆತನಲ್ಲಿ ಕೆಲಸ ದೊರೆಯುತ್ತಿತ್ತು. ತರಲಿಲ್ಲವೆಂದರೆ ಯಾವ ಮುಲಾಜನ್ನೂ ತೋರಿಸದೇ, ಹಿಂದಕ್ಕೆ ಕಳುಹಿಸುತ್ತಿದ್ದ. ಬೆಳಗಿನ ಎಂಟು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ದುಡಿಯುವ ಆಳುಗಳು ಹಸಿದುಕೊಂಡು ಇರಬಾರದೆಂಬ ಕರುಣೆಯೋ ಅಥವಾ ಹೊಟ್ಟೆಗೇನೂ ಇಲ್ಲದಿದ್ದರೆ... ಮಧ್ಯಾಹ್ನದ ಕೆಲಸವನ್ನು ಸರಿಯಾಗಿ ಮಾಡಲಾರರೆಂಬ ಸ್ವಾರ್ಥದಿಂದಲೋ.... ಅಂತು ಈ ಬಗೆಯ 'ಅಲಿಖಿತ ಕಾನೂನನ್ನು' ಬಹಳ ಕಟ್ಟುನಿಟ್ಟಾಗಿ ಮೇಸ್ತ್ರಿಯು ಜಾರಿಗೆ ತಂದಿದ್ದ.

ಇವನ ಬಳಿ ಕೆಲಸಕ್ಕೆ ಬರುತ್ತಿದ್ದ ನೂರಾರು ಹೆಣ್ಣಾಳುಗಳಲ್ಲಿ ಹೊಂಬಾಳೆಯು ಒಬ್ಬಳು. ಸುಮಾರು ಮುವತ್ತರ ಪ್ರಾಯದ ಈಕೆಯು ಯಾರೊಬ್ಬರ ಜೊತೆಗೂ ಬೆರೆಯುತ್ತಿರಲಿಲ್ಲ ಮತ್ತು ಹೆಚ್ಚು ಮಾತನಾಡುತ್ತಿರಲಿಲ್ಲ. ಎಲ್ಲಾ ಕೂಲಿಯಾಳುಗಳಂತೆ ತನ್ನ ಕೈಯಲ್ಲಿರುವ ಮುದ್ದೆ ಗಂಟನ್ನು ಮೇಸ್ತ್ರಿಗೆ ತೋರಿಸಿ, ಬೇಲಿಯ ಬುಡದಲ್ಲಿ ಗಂಟನ್ನಿಟ್ಟು, ಕೆಲಸದಲ್ಲಿ ತೊಡಗುತ್ತಿದ್ದಳು. ಮಧ್ಯಾಹ್ನ ಬಿಡುವು ಕೊಟ್ಟಾಗ, ತನ್ನ ಮುದ್ದೆ ಗಂಟನ್ನು ಎತ್ತಿಕೊಂಡು, ಎಲ್ಲರಿಂದ ದೂರ ಹೋಗಿ, ಬೇಲಿಯೊಂದರ ಮರೆಯಲ್ಲಿ ಕುಳಿತು ಉಂಡು ಬಂದು, ಮಡಕೆಗಳಲ್ಲಿ ತುಂಬಿಟ್ಟಿದ್ದ ನೀರನ್ನು ಕುಡಿದು, ಮತ್ತೆ ಸಂಜೆಯವರೆಗೂ ದುಡಿಯುತ್ತಿದ್ದಳು. ಸುತ್ತಮುತ್ತಣ ಅನೇಕ ಹಳ್ಳಿಗಳ ಕೂಲಿಗಳು.. ಅಲ್ಲಿಗೆ ಬರುತ್ತಿದ್ದುದರಿಂದ, ಹೊಂಬಾಳೆಯನ್ನು ಮೊದ ಮೊದಲು ಯಾರೂ ಗಮನಿಸುತ್ತಿರಲಿಲ್ಲ. ಹತ್ತು ಹದಿನೈದು ದಿನಗಳ ನಂತರ ಕೆಲವು ಹೆಂಗಸರು "ಇದ್ಯಾಕೆ, ಇವಳೊಬ್ಬಳೇ ಹಿಂಗೆ ಬೇಲಿ ಮರೆಗೆ ಹೊಯ್ತಳಲ್ಲ? ...ಅದೇನ್ ತಿಂದಳೊ ಕಾಣೆ!... ನಮ್ಮ ಜೊತೇಲಿ ಕುಂತ್ಕೊಂಡು ಉಂಡ್ರೆ...ಅವಳ್ಗೆ ಹೊಟ್ಟೆ ನೋವು ಬಂದದೆ?" ಎಂದು ಆಡಿಕೊಳ್ಳತೊಡಗಿದರು. ಇವರಲ್ಲಿ ಒಬ್ಬಳು ಕುತೂಹಲವನ್ನು ತಡೆಯಲಾರದೆ ಒಂದು ದಿನ ಮಧ್ಯಾಹ್ನ ಹೊಂಬಾಳೆಗೆ ಕಾಣದಂತೆ, ಬೇಲಿಯ ಮರೆಯಲ್ಲಿ ಅಡಗಿಕೊಂಡು ಕುಳಿತಳು.

ಹೊಂಬಾಳೆ ಬಂದವಳೇ, ಬೇಲಿಯ ಬುಡದಲ್ಲಿ ಕುಳಿತುಕೊಂಡು... ಅತ್ತಗೆ ಇತ್ತಗೆ ನಾಲ್ಕಾರು ಸಾರಿ ನೋಡಿದಳು. ಅನಂತರ ಗಂಟನ್ನು ಬಿಚ್ಚಿ, ಸ್ವಲ್ಪ ಸ್ವಲ್ಪವೇ ಮುರಿದು ಮುರಿದು... ಆ ಕಡೆ ಈ ಕಡೆ ಎಸೆದಳು. ಕೊಂಚ ಹೊತ್ತು ಸುಮ್ಮನೆ ಕುಳಿತಿದ್ದಳು. ಅನಂತರ ಗಂಟು ಬಿಚ್ಚಿದ ಬಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡು, ಕುಡಿಯುವ ನೀರಿನ ಮಡಕೆಯ ಬಳಿಗೆ ಬಂದು, ಹೊಟ್ಟೆ ತುಂಬ ನೀರನ್ನು ಕುಡಿದಳು. ಇದುವರೆಗೆ ಇದೆಲ್ಲವನ್ನು ಕದ್ದು ನೋಡುತ್ತಿದ್ದವಳು ಎದ್ದು ಹೋಗಿ, ಹೊಂಬಾಳೆಯು ಎಸೆದಿದ್ದ ಉಂಡೆಗಳನ್ನು ನೋಡಿದರೆ... ಅವು ಹಿಟ್ಟಿನ ಉಂಡೆಗಳಲ್ಲ; ಮಣ್ಣಿನ ಉಂಡೆಗಳು!


ಸೀದಾ ಬಂದವಳೆ, ಮೇಸ್ತ್ರಿಯನ್ನು ಕರೆದುಕೊಂಡು ಹೋಗಿ, ಅವನ್ನು ತೋರಿಸಿದಳು. ಅಲ್ಲಿ ಬಿದ್ದಿದ್ದ ನಾಲ್ಕಾರು ಮಣ್ಣಿನ ಉಂಡೆಗಳನ್ನು ಎತ್ತಿಕೊಂಡ ಮೇಸ್ತ್ರಿಯು, ನೇರವಾಗಿ ಹೊಂಬಾಳೆಯ ಹತ್ತಿರಕ್ಕೆ ಬಂದು ಅವುಗಳನ್ನು ಅವಳ ಮುಖಕ್ಕೆ ಹಿಡಿದು–

"ಏನಮ್ಮ ಹೊಂಬಾಳೆ.... ದಿವಸ ನೀನ್ ತಿಂತಾಯಿದ್ದುದ್ದು... ಈ ಮುದ್ದೇನಾ?... ವಾರಕ್ಕೆ ಒಂದ್ಸತಿ ಕೊಡುವ ಕೂಲಿ ದುಡ್ಡ ಏನ್ ಮಾಡಿಯಮ್ಮಿ?" ಎಂದು ಅಬ್ಬರಿಸಿದ. ತನ್ನ ಗುಟ್ಟು ರಟ್ಟಾಗಿ ಉಂಟಾದ ಅಪಮಾನಕ್ಕಿಂತಲೂ, ಕೂಲಿಯು ಎಲ್ಲಿ ಕೈಬಿಟ್ಟು ಹೋಗುವುದೋ ಎಂಬ ಭೀತಿಯಿಂದ ಕಂಗಾಲಾದ ಹೊಂಬಾಳೆಯು–

"ಅಪ್ಪೋ.... ನೀನ್ ತೆಪ್ಪು ತಿಳಿಬ್ಯಾಡ ಕನಪ್ಪ... ನನ್ನ ಗಂಡ ಕಾಯ್ಲೆ ಮನ್ಸ. ಅವನ ಕೈಯಲ್ಲಿ ದುಡ್ಕೊಂಡು ತಿನ್ನೋಕೆ ಆಗೂದಿಲ್ಲ. ಇನ್ನೇನು ಸಾಯುವಂಗೆ ಆಗ್ಬುಟ್ಟವ್ನೆ. ನಂಗೆ ಎರಡು ಚಿಕ್ಕ ಹೈಕ್ಳು ಅವೆ ಕನಪ್ಪ... ನೀನ್ ವಾರಕ್ಕೆ ಒಂದ್ಸತಿ ಕೊಟ್ಟ ದುಡ್ಡಲಿ... ರಾಗಿ ತಂದ್ಕೊಂಡು, ರಾತ್ರಿ ಹೊತ್ತು ಒಂದು ದಪ ಒಲೆ ಹತ್ತಿಸಿ, ಮುದ್ದೆ ಮಾಡ್ಕೊಂಡು ನಾವೆಲ್ಲಾ ಉಣ್ತೀವಿ ಕನಪ್ಪ... ಉಳಿದ ತಂಗಳ ಹೊತಾರೆ ಉಣ್ಕೊಂಡು... ಮಿಕ್ಕೊಕ್ಕುದ್ದ ನನ್ನ ಗಂಡ ಮಕ್ಕಳಿಗೆ ಬುಟ್ಟು ಬತ್ತೀನಿ ಕನಪ್ಪ... ಅದನ್ನ ನಾನು ತಂದ್ಬುಟ್ರೆ... ಅವರ್ಗೆ ಇಲ್ದೆ ಹೊಯ್ತದೆ... ನೀನು ಇನ್ನೆಲ್ಲಿ ಕೂಲಿಗೆ ಕರಕೊಳ್ಳದೆ ಹೋದಿಯೋ ಅಂತ... ನಿಂಗೆ ತೋರ್ಸುಕೆ ಮಣ್ಣಿನ ಮುದ್ದೆ ಕಟ್ಕೊಂಡು ತತ್ತಿದ್ದೆ ಕನಪ್ಪ... ಈಗ ಹೆಂಗೊ ಒಂದ್ಪೊತ್ತು ಒಲೆ ಉರೀತಾದೆ.... ನಿನ್ನ ದಮ್ಮಯ್ಯ ಅಂತೀನಿ ಕನಪ್ಪ... ಅದ ತಪ್ಪಿಸ್ಬೇಡ" ಎಂದು ಬಿಕ್ಕಳಿಸುತ್ತಾ, ಮೇಸ್ತ್ರಿಯ ಮುಂಭಾಗದಲ್ಲಿ ಕುಸಿದಳು.

⌘

ದಾರಿಯಲ್ಲಿ ಸಿಕ್ಕಿದ ದುಡ್ಡು



ಒಂದು ದಿನ ಮಟ ಮಟ ಮಧ್ಯಾಹ್ನದ ವೇಳೆಯಲ್ಲಿ ಕಾಳಮುದ್ದನ ದೊಡ್ಡಿಯಲ್ಲಿನ ಮನೆಯಿಂದ ಬಸ್ ನಿಲ್ದಾಣದ ಕಡೆಗೆ ನಡೆದುಕೊಂಡು ಹೋಗುತ್ತಿದ್ದೆ. ಇದ್ದಕ್ಕಿದ್ದಂತೆ ನನ್ನ ದೃಷ್ಟಿಗೆ ಐವತ್ತು ರೂಪಾಯಿಯ ನೋಟೊಂದು ದಾರಿಯಲ್ಲಿ ಬಿದ್ದಿರುವುದು ಗೋಚರಿಸಿತು. ತಕ್ಷಣ ಕೆಳಕ್ಕೆ ಬಾಗಿ, ಆ ನೋಟನ್ನು ಎತ್ತಿಕೊಳ್ಳುತ್ತಿದ್ದಂತೆಯೇ.... ಅದರ ಹತ್ತಿರದಲ್ಲಿ ಇಪ್ಪತ್ತು ರೂ. ಗಳ ಎರಡು ನೋಟುಗಳು ಬಿದ್ದಿದ್ದವು. ಅವನ್ನು ಬೇಗ ಎತ್ತಿಕೊಳ್ಳುತ್ತಿದ್ದಂತೆಯೇ.... ಅಲ್ಲೇ ಪಕ್ಕದಲ್ಲಿ ಹತ್ತು ರೂಗಳ ಮೂರು ನೋಟುಗಳು ಕಾಣಿಸಿದವು. .... ಒಂದೇ ಉಸಿರಿನಲ್ಲಿ ಅವೆಲ್ಲವನ್ನು ಎತ್ತಿಕೊಂಡು

....ಅಕ್ಕ ಪಕ್ಕ ಮತ್ತು ಹಿಂದೆ ಮುಂದೆ ನೋಡಿದೆ....ಯಾರೊಬ್ಬರೂ ಹತ್ತಿರದಲ್ಲಿ ಕಾಣಲಿಲ್ಲ. ನನಗೆ ದುಡ್ಡು ಸಿಕ್ಕಿದ್ದನ್ನು ಯಾರೂ ನೋಡಲಿಲ್ಲವೆಂಬ ಸಮಾಧಾನವಾಯಿತು.

ನೋಟುಗಳೆಲ್ಲಾ ಸುರುಳಿ ಸುತ್ತಿದಂತಾಗಿದ್ದವು. ಎಲ್ಲವನ್ನೂ ಬಿಡಿಸಿ ಜೋಡಿಸಿಕೊಂಡೆ. ಈ ನೋಟುಗಳು ಇಷ್ಟೊಂದು ಮುದುರಿಕೊಳ್ಳಲು ಕಾರಣ ವೇನೆಂಬುದನ್ನು ಯೋಚಿಸತೊಡಗಿದೆನು. ನೋಟುಗಳು ಬಿದ್ದಿದ್ದ ಸ್ವಲ್ಪ ದೂರದಲ್ಲಿ ಗರೀಬಿ ಹಟಾವೊ ಬಡಾವಣೆಯಿದೆ. ಅಲ್ಲಿನ ನೂರಾರು ಗುಡಿಸಲುಗಳಲ್ಲಿ ಕೃಷಿಕಾರ್ಮಿಕರು, ಜಾಡಮಾಲಿಗಳು, ಕಲ್ಲೊಡ್ಡರು ಮತ್ತು ಇನ್ನಿತರ ಬಡವರ್ಗದವರು ನೆಲೆಸಿದ್ದಾರೆ. ಬಹುಶಃ ಗರೀಬಿ ಹಟಾವೊ ಸೈಟಿನಲ್ಲಿರುವ ಯಾವುದೋ ಹೆಂಗಸಿನ ಬಾಳೆಕಾಯಿಯಲ್ಲಿ (ನಡುವಿನ ಭಾಗದಲ್ಲಿ ಕಟ್ಟುವ ಸೀರೆಯ ನೆರಿಗೆಯ ಗಂಟು) ಸೇರಿಸಿದ ನೋಟುಗಳು ಇವಾಗಿರಬೇಕೆಂದು ಊಹಿಸಿದೆ.... ಯಾವ ಶ್ರಮಜೀವಿಯ ಬೆವರಿನ ಹಣವೋ ಇದು.... ಇಷ್ಟು ಹಣವನ್ನು ಸಂಪಾದಿಸಲು ಅವರು ಎಷ್ಟೊಂದು ಕಷ್ಟ ಪಟ್ಟಿರುತ್ತಾರೋ.... ಇಂತಹ ಆಲೋಚನೆಗಳು ಬರುತ್ತಿದ್ದಂತೆಯೇ.... ಆ ದುಡ್ಡನ್ನು ಜೇಬಿನೊಳಕ್ಕೆ ಇಡಲು ನನಗೆ ಭಯವಾಯಿತು.

ಈಗ ಮತ್ತೆ ಕ್ಷಣಕಾಲ ಸುತ್ತಲೂ ನೋಡಿದೆ. ಹತ್ತಿರದಲ್ಲಿ ಯಾರೊಬ್ಬರು ಕಾಣಲಿಲ್ಲ. ದುಡ್ಡು ಸಿಕ್ಕಿದ್ದ ಸ್ಥಳಕ್ಕೆ ಸ್ವಲ್ಪ ಸನಿಹದಲ್ಲಿ ದಾರಿಯ ಬದಿಯಲ್ಲಿನ ಒಂದು ಷೆಡ್ ಹೋಟೆಲ್ ಕಣ್ಣಿಗೆ ಬಿತ್ತು. ಸೀದಾ ಅದರೊಳಕ್ಕೆ ಹೋದೆ. ಗಿರಾಕಿಗಳು ಯಾರೂ ಇರಲಿಲ್ಲ. ಒಳಗಿನಿಂದ "ಏನ್ ಬೇಕಾಗಿತ್ತಪ್ಪ" ಎಂದು ಪ್ರಶ್ನಿಸಿದ ಹೆಂಗಸಿನ ಧ್ವನಿ ಕೇಳಿ ಬಂತು. "ಏನೂ ಬೇಕಾಗಿಲ್ಲ ಕಣ್ರಮ್ಮ .... ಸ್ವಲ್ಪ ಇಲ್ಲಿ ಬನ್ನಿ" ಎಂದೆ. ಒಳಗಡೆ ಒಲೆಯ ಮುಂದೆ ಕುಳಿತಿದ್ದವರು, ಎದ್ದು ಬಂದರು. ಅವರಿಗೆ ಸುಮಾರು ಐವತ್ತು ವರ್ಷವಾಗಿತ್ತು. .... ತುಂಬ ಕೃಶವಾಗಿದ್ದರು. ಟೀ ಮತ್ತು ಬೋಂಡ ಮಾರಿಕೊಂಡು ಬರುವ ಅಲ್ಪ ಆದಾಯದಲ್ಲೇ ಜೀವನ ನಡೆಸುತ್ತಾ.... ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ವ್ಯಕ್ತಿಯೆಂಬುದು.... ಅವರನ್ನು ನೋಡಿದ ಮೊದಲ ನೋಟಕ್ಕೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಎದ್ದು ಬಂದವರನ್ನು ಹೋಟೆಲ್ಲಿನ ಬಾಗಿಲ ಬಳಿಗೆ ಕರೆದು ಅಲ್ಲಿಂದಲೇ ನನಗೆ ದುಡ್ಡು ಸಿಕ್ಕಿದ ಸ್ಥಳವನ್ನು ತೋರಿಸುತ್ತಾ–

"ನೋಡ್ರಮ್ಮಾ.... ಆ ಜಾಗದಲ್ಲಿ ನನಗೆ ಈ ದುಡ್ಡು ಈಗ್ತಾನೆ ಸಿಕ್ತು....ಯಾರೋ ಈ ನೋಟುಗಳನ್ನು ಅಲ್ಲಿ ಬೀಳಿಸ್ಕೊಂಡು ಹೋಗವ್ರೆ.... ಇಲ್ಲಿ ಒಟ್ಟು ನೂರಿಪ್ಪತ್ತು ರೂಪಾಯಿಗಳಿವೆ. ಈ ದಾರೀಲಿ ಯಾರಾದ್ರೂ ಅತ್ಕೊಂಡು ದುಡ್ಡನ್ನ ಹುಡುಕ್ತಾ ಬಂದರೆ.... 'ಹಿಂಗೆ ದುಡ್ಡನ್ನು ಬೀಳಿಸ್ಕೊಂಡಿದ್ದೊ' ಅಂತ.... ಇಲ್ಲೇನಾದ್ರೂ ಕೇಳ್ಕೊಂಡು

ಬಂದ್ರೆ... ಅಂಥಾಪ್ರಿಗೆ ಈ ದುಡ್ಡು ಕೊಟ್ಟು ಬುಡ್ರಮ್ಮ" ಎಂದು ಹೇಳುತ್ತಾ ನೋಟುಗಳನ್ನು ಅವರಿಗೆ ಕೊಡಲು ಹೋದೆ.

"ಯಾರ್ಗೆ ಅಂತ ಕೊಟ್ಟೀಯಪ್ಪ ....ದುಡ್ಡು ಸಿಕ್ಕೈತೆ ಅಂದ್ರೆ... ಊರೋರೆಲ್ಲಾ ನನ್ನದು ಅಂತ್ಲೆ ಬತ್ತರೆ."

"ಹಾಗಲ್ಲ ಕಣ್ರಮ್ಮಾ.... ನೀವಾಗಿದ್ದು ನೀವು .... ದುಡ್ಡು ಸಿಕ್ಕಿದೆ ಅಂತ ಯಾರ್ಗೂ ಹೇಳ್ಬೇಡಿ.... ಅವರಾಗಿದ್ದು ಅವರು ಅತ್ಕೊಂಡೋ .... ಕೇಳ್ಕೊಂಡೋ ಬಂದ್ರೆ .... ಎಷ್ಟು ರೂಪಾಯಿ ಅಂತ ಮೊದಲು ಕೇಳಿ.... ಸರಿಯಾಗಿ ಹೇಳುದ್ರೆ... ಆಮೇಲೆ ನೋಟುಗಳು ಯಾವುವು ....ಎಷ್ಟೆಷ್ಟು ಇದ್ವೊ ....ಅಂತ ಕೇಳಿ. ಎರಡನ್ನೂ ಸರಿಯಾಗಿ ಹೇಳುದ್ರೆ... ಅಂಥಾವರಿಗೆ ಈ ದುಡ್ಡನ್ನು ಕೊಡಿ" ಎಂದು ಹೇಳಿ, ಅವರ ಕೈಗೆ ದುಡ್ಡನ್ನು ಕೊಟ್ಟು, ಬಸ್ ನಿಲ್ದಾಣದ ಕಡೆಗೆ ಹೊರಟೆ.

ಈಗ ಮತ್ತೆ ನನ್ನ ಮನದಲ್ಲಿ ಹೊಸ ಬಗೆಯ ತಾಕಲಾಟ ಶುರುವಾಯಿತು. "ಸಿಕ್ಕಿದ್ದ ದುಡ್ಡನ್ನು ಸುಮ್ಮನೆ ಇಟ್ಟುಕೊಳ್ಳದೇನೆ.... ಇದ್ಯಾಕೆ ಹೀಗೆ ಮಾಡ್ಬುಟ್ಟೆ? .... ಮೊದಲೆಲ್ಲಾ ಎಷ್ಟೋ ಸತಿ ನಾಲ್ಕಾಣೆ, ಎಂಟಾಣೆ, ಒಂದು ರೂಪಾಯಿನ ನಾಣ್ಯಗಳು ದಾರೀಲಿ ಹಿಂಗೆ ಸಿಕ್ಕಿದಾಗ....ಯಾವ ಹಿಂಜರಿಕೇನೂ ಇಲ್ದೆ.... ಎತ್ತಿಕೊಂಡು ಜೇಬಿಗೆ ಹಾಕೊಂಡಿಲ್ಲವೇ? .... ಈಗ ಆ ಹೋಟೆಲ್ಲಿನ ಹೆಂಗಸಿನ ಕೈಗೆ ಕೊಟ್ಟಿದ್ದೀನಲ್ಲ.... ಅವಳು ಸರಿಯಾದೋರ್ಗೆ ಕೊಡ್ತಾಳೆ ಅನ್ನೋದು ಯಾವ ಗ್ಯಾರಂಟಿ? .... ಒಂದು ವೇಳೆ ಅವಳೇ ಇಟ್ಕೊಂಡು.... "ಇಂಥವರು ಯಾರೋ ಬಂದಿದ್ರು.... ಸರಿಯಾಗೇ ಹೇಳುದ್ರು, ಕೊಟ್ಟು ಕಳುಹಿಸಿದೆ" ಅಂದ್ರು ಅನ್ನಬಹುದು. ಆಮೇಲೆ ನಾನೇನು.... ಅವರ್‍ನ ವಿಚಾರಿಸೋಕೆ ಹೋಗ್ತೀನಾ? ....ಈವೊಮ್ಮನಿಗೆ ಒಂದು ದಿನಕ್ಕೆ ಹೋಟೆಲ್ ವ್ಯಾಪಾರದಲ್ಲಿ ಖರ್ಚು ಕಳೆದು, ಐವತ್ತು ರೂಪಾಯಿ ಸಂಪಾದ್ನೆ ಆದದೊ.... ಇಲ್ವೊ! .... ಅಂಥವಳಿಗೆ ಈಗ ನೂರಿಪ್ಪತ್ತು ರೂಪಾಯಿ ತಾನಾಗಿಯೇ ಸಿಕ್ಕಿರುವಾಗ, ಇಟ್ಕೊಳ್ದೆ ಬಿಡ್ತಳ!..... ಥೂ.... ದಡ್ ನನ್ಮಗ ನಾನು! .... ಕೈಗೆ ಬಂದ ತುತ್ತು, ಬಾಯ್ಗೆ ಬರ್ದಂಗೆ ಮಾಡ್ಕೊಂಡ್ನಲ್ಲ!" ಎಂದು ಚಿಂತಿಸತೊಡಗಿದಾಗ, ಮನಸ್ಸಿಗೆ ಬಹಳ ಕಸಿವಿಸಿಯಾಯಿತು. ಆದರೆ ಈಗೇನು ಮಾಡುವ ಹಾಗಿರಲಿಲ್ಲ. ಒಟ್ಟಿನಲ್ಲಿ ಆ ದುಡ್ಡಿನ ಋಣ ನನಗಿಲ್ಲವೆಂದು ಅಂದುಕೊಳ್ಳುತ್ತಾ, ಬಸ್ ನಿಲ್ದಾಣಕ್ಕೆ ಬಂದೆ.

ಸುಮಾರು ನಾಲ್ಕೈದು ದಿನಗಳ ನಂತರ, ದೊಡ್ಡಿಯಲ್ಲಿ ಅದೇ ಮಾರ್ಗದಲ್ಲಿ ಷೆಡ್ ಹೋಟೆಲ್ಲಿನ ಮುಂಭಾಗದಲ್ಲಿ ಬರುತ್ತಿದ್ದಾಗ, ನಾನು ಕೊಟ್ಟಿದ್ದ ದುಡ್ಡಿನ ಜ್ಞಾಪಕ

ಬಂತು.... "ಆ ದುಡ್ಡಿನ ಗತಿ ಏನಾಗಿದೆಯೋ ತಿಳಿಯೋಣ"ವೆಂದು, ಹೋಟೆಲ್ಲಿನ ಒಳಕ್ಕೆ ಹೋದೆ. ಒಂದಿಬ್ಬರು ಗಿರಾಕಿಗಳು ಟೀ ಕುಡಿಯುತ್ತ ನೆಲದ ಮೇಲೆ ಕುಳಿತಿದ್ದರು. ಒಳಗಿನಿಂದಲೇ ನನ್ನನ್ನು ನೋಡಿದ ಆ ಹೆಂಗಸು.... "ಒಂದು ಗಳ್ಗೆ ನಿಂತ್ಕೊಳ್ಳಪ್ಪ.... ಬಂದೆ" ಎಂದರು.

ಒಂದೆರಡು ಕುಡಿಕೆ ಮಡಕೆಗಳನ್ನು ಅತ್ತಿತ್ತ ಎತ್ತಿಟ್ಟ ಶಬ್ದ ಒಳಗಡೆಯಿಂದ ಕೇಳಿಬಂತು. ಕೆಲವು ಕ್ಷಣಗಳ ನಂತರ ಹೊರಬಂದ ಅವರು... "ನಾಲ್ಕೈದು ದಿನದಿಂದ ನಾನು ಕಾದು ನೋಡ್ದೆ ಕನಪ್ಪ.... ದುಡ್ಡನ್ನ ತೀರಿಸ್ಕೊಂಡಿದ್ದೀವಿ ಅಂತ.... ಒಬ್ಬರಾದ್ರೂ ಕೇಳ್ಕೊಂಡು.... ಇಲ್ಲ.... ಹುಡಿಕೊಂಡು.... ಇತ್ತಗೆ ಬರಲಿಲ್ಲ.... ತಕೊಪ್ಪ ನಿನ್ನ ದುಡ್ಡ ಎಂದು ನನ್ನ ಕೈಗಿಟ್ಟು.... ಸರಿಯಾಗಿದ್ದದೆ ಅಂತ ಒಂದ್ಸಲ ಎಣಿಸಿ ನೋಡ್ಕೊಳಪ್ಪ" ಎಂದು ಹೇಳುತ್ತಾ ಒಳ ಕೋಣೆಯತ್ತ ನಡೆದರು.

ನೋಟುಗಳನ್ನು ಹಾಗೆಯೇ ಹಿಡಿದುಕೊಂಡು ಹೋಟೆಲ್ಲಿನಿಂದ ಹೊರಬಂದು ಅವನ್ನು ನೋಡಿದಾಗ...

"ದುಡ್ಡನ್ನೇ ದೊಡ್ಡದೆಂದು ಭಾವಿಸಿದ ನನ್ನನ್ನು.... ಅವು ಅಣಕಿಸುತ್ತಿರುವಂತೆ" ಭಾಸವಾಯಿತು.

⌘

ನನ್ನ ಸಾಧನೆ ಏನು



ಸರ್ಕಾರಿ ನೌಕರಿಯಲ್ಲಿರುವ ಯಾವುದೇ ವ್ಯಕ್ತಿಗೆ ಬಡ್ತಿ ದೊರೆತಾಗ ಅಪಾರವಾದ ಸಂತೋಷವಾಗುತ್ತದೆ. ಏಕೆಂದರೆ ಮೇಲಿನ ಹಂತಕ್ಕೇರಿದ ಹುದ್ದೆಯಲ್ಲಿನ ಸ್ಥಾನಕ್ಕೆ ತಕ್ಕಂತೆ ಸಂಬಳದಲ್ಲೂ ಏರಿಕೆಯಾಗಿ, ಬಡ್ತಿಯಿಂದ ಎರಡು ರೀತಿಯಲ್ಲಿ ಲಾಭವಾಗುತ್ತದೆ.

ನಾನು ಲೆಕ್ಚರರ್ ಆಗಿ ಕಾರ್ಯ ನಿರ್ವಹಿಸಿದ ಹದಿನೈದು ವರ್ಷಗಳ ನಂತರ ರೀಡರ್ ಹುದ್ದೆಗೆ ಬಡ್ತಿ ದೊರಕಿದಾಗ, ಇಂತಹ ಸಂತೋಷದ ಗಳಿಗೆಯು ನನ್ನ ಪಾಲಿಗೆ ಲಭಿಸಿತು. ಇದೇ ಅವಧಿಯಲ್ಲಿ ನಮ್ಮ ಕಾಲೇಜಿನಲ್ಲಿ ಇಬ್ಬರು ಪ್ರೊಫೆಸರ್‌ಗಳಾಗಿ, ಮತ್ತೊಬ್ಬರು ರೀಡರ್ ಆಗಿ ಬಡ್ತಿ ಪಡೆದರು. ನಾವು ನಾಲ್ವರೂ ಜೊತೆಗೂಡಿ, ನಮ್ಮ ಸಹೋದ್ಯೋಗಿಗಳಿಗೆ ಬಾಡಿನೂಟವನ್ನು ಹಾಕಿಸಿದೆವು. ಔತಣಕೂಟದಲ್ಲಿ ಪಾಲ್ಗೊಂಡ ವರೆಲ್ಲರೂ ನಮ್ಮನ್ನು ಅಭಿನಂದಿಸಿದರು..

ಇಷ್ಟೆಲ್ಲಾ ಆನಂದದ ಕ್ಷಣಗಳನ್ನು ನಮ್ಮ ಕಾಲೇಜಿನ ಪರಿಸರದಲ್ಲಿ ಅನುಭವಿಸುತ್ತಿದ್ದ ನನಗೆ... ಮನೆಯಲ್ಲಿ ಮಾತ್ರ ಯಾವುದೇ ಬಗೆಯ ಸಂಭ್ರಮ ಸಂತೋಷ ಕಾಣುತ್ತಿರಲಿಲ್ಲ. ಆಗ ಒಂದು ದಿನ ನನ್ನ ಹೆಂಡತಿಯನ್ನು ಈ ಬಗ್ಗೆ ಪ್ರಶ್ನಿಸಿದೆ.

"ಏನೇ, ನಾನು ರೀಡರ್ ಆಗಿ ಬಡ್ತಿ ಹೊಂದಿ, ಇಷ್ಟೊಂದು ಉತ್ಸಾಹದಲ್ಲಿರುವಾಗ ... ನೀನು ಮಾತ್ರ ಒಂದ್ಸಲವಾದ್ರೂ ಇದರ ಬಗ್ಗೆ ಸಂತೋಷಪಡ್ತಾ ಇಲ್ವಲ್ಲ, ಯಾಕೆ?"

"ನಾನು ಸಂತೋಷಪಡ್ತಾಯಿಲ್ಲ ಅಂತ ಹೇಗೆ ಹೇಳ್ತೀರಿ ನೀವು?"

"ನಿನ್ನ ನೋಡುದ್ರೆ ಗೊತ್ತಾಗಲ್ವೇನೆ? ನಂಗೆ ಬಡ್ತಿ ಬಂದ್ಮೇಲೆ, ಮನೇಲಿ ಖುಷಿಯಾಗಿ ಒಂದು ಸ್ವೀಟ್ ಮಾಡಲಿಲ್ಲ... ಹೋಗ್ಲಿ ಒಂದು ಖಾರಾನೂ ಇಲ್ಲ. ಸುಮ್ಮನೆ ನಿನ್ನ ಪಾಡಿಗೆ ನೀನ್ ಇದ್ದೀಯೆ!"

"ಅಲ್ರೀ... ನಿಮಗೆ ಬಡ್ತಿ ಬಂದ್ರೆ ನನಗೆ ಬಂದ ಲಾಭವೇನ್ರಿ?"

"ಹಂಗಂದ್ರೆ ಏನೇ?"

"ನೀವು ಈಗ ರೀಡರ್ ಆಗಿದ್ದೀರಿ. ಕಾಲೇಜಿನಲ್ಲಿ ನಿಮ್ಮ ಸ್ಥಾನದಲ್ಲಿ ಒಂದು ಮೆಟ್ಟಿಲು ಮೇಲಕ್ಕೇರಿದ್ದೀರಿ... ನೀವು ತೆಗೆದುಕೊಳ್ಳುತ್ತಿದ್ದ ಪೀರಿಯಡ್‌ನ ಸಂಖ್ಯೆ ವಾರಕ್ಕೆ ಹದಿನಾರರಿಂದ ಹನ್ನೆರಡಕ್ಕೆ ಇಳಿದಿದೆ. ನಿಮಗೆ ಕಾಲೇಜಿನಲ್ಲಿ ಬಡ್ತಿಯಿಂದ ಅನುಕೂಲವಾದಂಗೆ... ಮನೆಯಲ್ಲಿ ನನ್ನ ಕೆಲಸ ಕಾರ್ಯಗಳಲ್ಲಿ ಏನಾದ್ರೂ ಹೆಚ್ಚು ಕಡಿಮೆ ಆಗಿದೆಯೇನ್ರಿ?"

"ಏನೇ... ನೀನು ಹೇಳ್ತಾ ಇರೋದು! ನಿನ್ನ ಕೆಲಸದಲ್ಲಿ ಏನು ಬದಲಾವಣೆ ಯಾಗುವುದಕ್ಕೆ ಸಾಧ್ಯ?"

"ಅದನ್ನೇ ನಾನು ಹೇಳ್ತಾ ಇರೋದು. ದಿನ ಬೆಳಗಾದರೆ ಮನೆ ಕಸ ತೆಗೆಯೋದು... ಅಡಿಗೆ ಬೇಯಿಸೋದು... ಮಾಡಿದ್ದನ್ನ ಬಡಿಸೋದು... ಮುಸುರೆ ತೊಳೆಯೋದು ... ಬಟ್ಟೆ ಒಗೆಯೋದು....."

ಅವಳ ಮಾತಿನ ಪ್ರವಾಹಕ್ಕೆ ಅಡ್ಡಗಟ್ಟೆ ಹಾಕುತ್ತಾ–

"ಒಳ್ಳೆ ಕಥೆ ಕಣೆ ನಿಂದು! ... ಮನೆಯ ಒಳಗಡೆ ಇರೋಳು ನೀನು ... ಬದಲಾವಣೆ ಬೇಕು ಅಂದ್ರೆ... ನೀನು ಮಾಡುವ ಕೆಲಸಕ್ಕೆಲ್ಲಾ ಒಂದು ಆಳು ಇಟ್ಕೊ".

"ಆಗ ನಾನು ಮಾಡುವ ಕೆಲಸಗಳನ್ನು, ಇನ್ನೊಂದು ಹೆಣ್ಣಾಳು ಮಾಡ್ತಳೆ... ಅಷ್ಟೇ ಅಲ್ವೆ ವ್ಯತ್ಯಾಸ?"


"ಇದೇನೆ ಹಿಂಗೆ ಮಾತಾಡ್ತೀಯಾ?... ಗೃಹಿಣಿಯಾದವಳು ಮನೆಯ ಯಜಮಾನನ ಸಾಧನೆಗಳನ್ನೇ... ತನ್ನ ಸಾಧನೆಗಳು ಅಂತ ತಿಳ್ಕೊಂಡು ಸಂತೋಷ ಪಡಬಾರ್ದೇನೆ?"

"ಅದು ಹೇಗಾಗುತ್ತೆ? ನಮ್ಮ ಸ್ಥಿತಿಯ ಬಗ್ಗೆ ನೀವೇ ಸ್ವಲ್ಪ ಆಲೋಚನೆ ಮಾಡಿ... ಹಿಂದೆ ಚಿಕ್ಕಂದಿನಲ್ಲಿ ನನ್ನ ತಂದೆ ಅದೇನೋ ಆಗಿದ್ರು ಅಂತ... ಈಗ ನನ್ನ ಯಜಮಾನರಿಗೆ ಬಡ್ತಿ ಸಿಗ್ತು ಅಂತ... ಮುಂದೆ ನನ್ನ ಮಕ್ಕಳು ಇನ್ನೇನೋ ಆಯ್ತರೆ ಅಂತ... ಸಂತೋಷಪಡ್ಬೇಕೆ ಹೊರತು... ನನ್ನ ವೈಯಕ್ತಿಕ ಜೀವನದಲ್ಲಿ, ನನ್ನ ಸಾಧನೆ ಏನು?" ಎಂದು ಮರು ಪ್ರಶ್ನಿಸಿದಳು.

ಸಾಕಷ್ಟು ವಿದ್ಯೆಯನ್ನು ಕಲಿತು... ಮದುವೆಯ ನಂತರ ನಾಲ್ಕು ಗೋಡೆಗಳ ನಡುವೆ... ತನ್ನ ಜೀವನವೆಲ್ಲವನ್ನೂ ಒಂದೇ ಬಗೆಯ ಕ್ರಿಯೆಗಳಲ್ಲಿ ಕಳೆಯುತ್ತಾ... ವೈಯಕ್ತಿಕ ಪ್ರತಿಭೆ ಮತ್ತು ಪರಿಶ್ರಮದಿಂದ ಸಮಾಜದಲ್ಲಿ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳಲಾಗದೆ... ಗಂಡಸರ ಸ್ಥಾನಮಾನಗಳ ನೆರಳಿನಲ್ಲೇ ಮರೆಯಾಗಿ ಹೋಗುವ ಮಧ್ಯಮವರ್ಗದ ಹೆಣ್ಣಿನ ಈ ಪ್ರಶ್ನೆಗೆ ಸಮಂಜಸವಾಗಿ ಉತ್ತರಿಸಲಾಗದೆ... ಅಂದು ಮೌನಿಯಾದೆ.

⌘

ಹೆತ್ತ ಕರುಳಿನ ಮರೆಯಲ್ಲಿ



ಕಳೆದ ಒಂದೆರಡು ವರ್ಷಗಳ ಹಿಂದೆ, ನಮ್ಮ ಪಕ್ಕದ ಊರಿನಲ್ಲಿ 'ಗ್ರಾಮೀಣ ಮಹಿಳೆಯರ ಸಂಘ' ತುಂಬಾ ಚಟುವಟಿಕೆಯಿಂದ ಕೂಡಿತ್ತು. ವಿದ್ಯಾವಂತೆಯರಾದ ಹೆಣ್ಣುಮಕ್ಕಳಿಂದ ಸಂಘಟನೆಗೊಂಡಿದ್ದ ಈ ಸಂಘದ ವತಿಯಿಂದ ಧರ್ಮಸ್ಥಳ, ಉಡುಪಿ, ಮಂಗಳೂರು ಮುಂತಾದ ಸ್ಥಳಗಳ ಕಡೆಗೆ ಮಹಿಳೆಯರು ಒಮ್ಮೆ... ನಾಲ್ಕಾರು ದಿನಗಳ ಕಾಲ ಪ್ರವಾಸ ಹೊರಟರು. ಪ್ರವಾಸಿಗರಲ್ಲಿ ಹದಿನಾರರ ಹರೆಯದವರಿಂದ ಹಿಡಿದು ಐವತ್ತು ಐವತ್ತೈದು ವಯೋಮಾನದ ಐವತ್ತು ಮಂದಿ ಮಹಿಳೆಯರು ಮತ್ತು ಐದು ಮಂದಿ ಗಂಡಸರಿದ್ದರು. ಈ ಗಂಡಸರಲ್ಲಿ ಇಬ್ಬರು ಅಡಿಗೆಯವರು, ಇಬ್ಬರು ಮಾರ್ಗದರ್ಶಿಗಳು ಮತ್ತು ಡ್ರೈವರ್.

ಸುಮಾರು ಇಪ್ಪತ್ತೈದು ವರ್ಷದ ಡ್ರೈವರನು ಹೊಚ್ಚ ಹೊಸದಾಗಿದ್ದ ಸರ್ಕಾರಿ ಬಸ್ಸನ್ನು ಬಹಳ ಚೆನ್ನಾಗಿ ಓಡಿಸುತ್ತಿದ್ದನು. ಭೇಟಿ ನೀಡುತ್ತಿದ್ದ ಎಲ್ಲಾ ಸ್ಥಳಗಳಲ್ಲಿಯೂ ತಾಳ್ಮೆಯಿಂದ ಪ್ರವಾಸಿಗರೊಡನೆ ಸಹಕರಿಸುತ್ತಿದ್ದನು. ನಗುಮುಖದ ಈ ತರುಣ ಡ್ರೈವರನು ಒಂದೆರಡು ದಿನಗಳಲ್ಲೇ ಎಲ್ಲರಿಗೂ ಅಚ್ಚುಮೆಚ್ಚಿನ ವ್ಯಕ್ತಿಯಾದನು.

ನೋಡಬೇಕೆಂದಿದ್ದ ಎಲ್ಲಾ ಸ್ಥಳಗಳ ಸಂದರ್ಶನ ಮುಗಿಸಿಕೊಂಡು ಬಸ್ಸು ಸಾಕಷ್ಟು ವೇಗವಾಗಿ ಪ್ರವಾಸದಿಂದ ಹಿಂದಿರುಗುತ್ತಿತ್ತು. ಸಾಯಂಕಾಲ ಸುಮಾರು ಐದು ಗಂಟೆಯ ಸಮಯ.... ಪ್ರಯಾಣದ ಆಯಾಸದಿಂದ ಪ್ರವಾಸಿಗರಲ್ಲಿ ಬಹುತೇಕ ಮಂದಿ ಅರೆ ನಿದ್ರಾವಸ್ಥೆಯಲ್ಲಿದ್ದರು. ವೇಗವಾಗಿ ಸಾಗುತ್ತಿದ್ದ ಬಸ್ಸಿಗೆ ಅನಿರೀಕ್ಷಿತವಾಗಿ ಅಡ್ಡಲಾಗಿ ನುಗ್ಗಿದ್ದ ಯಾರನ್ನೋ ರಕ್ಷಿಸುವುದಕ್ಕಾಗಿ ಡ್ರೈವರ್ ಬಲವಾಗಿ ಬ್ರೇಕ್ ಹಾಕಿದಾಗ, ಬಸ್ಸಿನಲ್ಲಿದ್ದವರೆಲ್ಲಾ ಕುಳಿತಲ್ಲಿಂದ ಮುಂದಕ್ಕೆ ಜಗ್ಗಿ ಬಿದ್ದರು. ಜೊತೆಯಲ್ಲೇ "ಅಯ್ಯೋೀೀ...." ಎಂಬ ಆರ್ತನಾದ ಕೇಳಿ ಬಂತು. ಬಸ್ಸಿನ ಒಳಗಿದ್ದ ಹೆಂಗಸರೆಲ್ಲಾ ಗಾಬರಿ ಮತ್ತು ಭೀತಿಯಿಂದ ಕೂಗಲಾರಂಭಿಸಿದರು. ಬಸ್ಸು ನಿಲ್ಲಿಸಿದ ಡ್ರೈವರ್, ಕ್ಷಣ ಮಾತ್ರದಲ್ಲಿ ಕೆಳಕ್ಕಿಳಿದು ನೋಡಿದ.

ಐದು ಕುರಿಗಳ ಮೇಲೆ ಬಸ್ಸಿನ ಚಕ್ರಗಳು ಹರಿದು, ಮಾಂಸದ ತುಂಡು ಚಲ್ಲಾಪಿಲ್ಲಿಯಾಗಿ.... ರಕ್ತ ಕೋಡಿ ಹರಿಯುತ್ತಿತ್ತು. ಕುರಿಗಳನ್ನು ಮೇಯಿಸಲು ಬಂದಿದ್ದ ಇಬ್ಬರು ಹುಡುಗರು ಬಾಯಿ ಬಡಿದುಕೊಳ್ಳುತ್ತಾ ರಸ್ತೆಯಂಚಿನಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿದ್ದ ತಮ್ಮ ಹಳ್ಳಿಯತ್ತ ಬಿದ್ದಂಬೀಳ ಓಡುತ್ತಿದ್ದರು. ಬಸ್ಸಿನೊಳಗಿಂದ ದಡದಡನೆ ಇಳಿದು ಬಂದವರೆಲ್ಲಾ, ಅಲ್ಲಿ ಆಗಿದ್ದ ಅನಾಹುತವನ್ನು ಕಂಡು ಮತ್ತಷ್ಟು ಗಾಬರಿಯಿಂದ ಏನಾಯಿತೆಂದು ಕೇಳಿದರು. ಓಡುತ್ತಿದ್ದ ಹುಡುಗರತ್ತ ಕೈ ತೋರಿಸುತ್ತ.... "ಆ ಹುಡುಗರು ಎಂಥ ಕೆಲ್ಸ ಮಾಡ್ಬುಟ್ರು ಅಂತ.... ಈ ಒಬ್ಬೆ ಮರೆಯಿಂದ ರಸ್ತೆಗೆ ಏಕ್‌ದಮ್ ನುಗ್ಗಿ ಬಂದ ಕುರಿಗಳ ಜೊತೆಗೆ ಅವರಿಬ್ಬರು ಬಸ್ಸಿಗೆ ಅಡ್ಡಲಾಗಿ ಬಂದ್ಬುಟ್ರು.... ನಾನು ಸ್ವಲ್ಪ ಏಮಾರಿದ್ರು.... ಹುಡುಗರ ಮೇಲೆ ಬಸ್ಸು ಹರಿದ್ಬುಡ್ತಿತ್ತು. ಅವರನ್ನು ಬಚಾವ್ ಮಾಡುವುದಕ್ಕೆ ಹೋಗಿ.... ಈ ಕುರಿಗಳ ಮೇಲೆ ಬುಡಬೇಕಾಯ್ತು" ಎಂದು ಅಪಘಾತ ನಡೆದ ರೀತಿಯನ್ನು ವಿವರಿಸಿದ. ಅಲ್ಲಿದ್ದ ಹೆಂಗಸರ ಗುಂಪಿನಲ್ಲಿ ತರಾವರಿ ಮಾತುಗಳು ಶುರುವಾದವು.

"ಹೆಂಗೊ ಬುಡಪ್ಪ... ಆ ಹುಡುಗರ ಪ್ರಾಣ ಉಳಿಸಿ ಪುಣ್ಯ ಕಟ್ಕೊಂಡೆ".

"ಓಹೋ.... ನೋಡವ್ವ ಅಲ್ಲಿ... ಮಾರಿಗುಡಿ ಮುಂದೆ ಮರಿ ಕೂದಂಗೆ ರಕ್ತ ಹರೀತಾದಲ್ಲ!"

"ಹರಿದರೆ ಹರೀತದೆ ಸುಮ್ಕಿರಮ್ಮಿ.... ಅವು ಯಾವತ್ತಿದ್ರು ಕುಯ್ಕೊಂಡು ತಿನ್ತಿದ್ದವು ತಾನೆ?.... ಧರ್ಮಸ್ಥಳದ ಮಂಜುನಾಥ ಸ್ವಾಮಿ ದಯದಿಂದ, ಹೆಂಗೊ ಎರಡು ಹೈಕ್ಳು ಜೀವ ಉಳ್ಕೋತಲ್ಲ !.... ಅಷ್ಟೆ ಸಾಕು."

ಮಾರ್ಗದರ್ಶಿಗಳಾಗಿ ಬಂದಿದ್ದ ಇಬ್ಬರು ಗಂಡಸರು, ಈಗ ಉಂಟಾಗಿದ್ದ ಪರಿಸ್ಥಿತಿಯ ಲೆಕ್ಕಾಚಾರದಲ್ಲಿ ತೊಡಗಿದರು." ಆ ಹೈಕ್ಳು ಹೊಂಗ್ಲೋ ಅಂತ ಬಡ್ಕೊಂಡು ಊರೊಳಕ್ಕೆ ಹೋಗವ್ರಲ್ಲ.... ಇನ್ನೇನು ಕುರಿಯೋರು ಇಲ್ಲಿಗೆ ಬತ್ತರೆ.... ಬಂದ್ಮೇಲೆ ನಮ್ಮ ಸುಮ್ನೆ ಬುಟ್ಟರೆ? .... ಏನಿದ್ರು ಐದು ಮರಿಗಳ ದುಡ್ಡ ವಸೂಲ್ ಮಾಡ್ಕೊಂಡೆ ಮುಂದಕ್ಕೆ ಬುಡೋದು."

"ಅಷ್ಟೊಂದ್ದು ದುಡ್ಡು ಯಾರ್ತಾವು ಇದ್ದದಪ್ಪ ಈಗ? ಒಳ್ಳೆ ಗ್ರಾಚಾರ ಒಕ್ಕರಿಸ್ತಲ್ಲ! ಏನ್ ಮಾಡ್ಮ?" ಎನ್ನುತ್ತಿದ್ದಂತೆಯೇ, ಆ ಹಳ್ಳಿಯ ಕಡೆಯಿಂದ ಹದಿನೈದು ಇಪ್ಪತ್ತು ಮಂದಿ ಗಂಡಸರು ಕೈಯಲ್ಲಿ ನಾನಾ ಪ್ರಮಾಣದ ಕೋಲು ಮತ್ತು ದೊಣ್ಣೆಗಳನ್ನು ಹಿಡಿದುಕೊಂಡು ಬಸ್ಸಿನತ್ತ ಓಡೋಡಿ ಬರುತ್ತಿರುವುದು ಕಂಡು ಬಂತು. ಬಸ್ಸಿನಿಂದ ಇಳಿದು ನಿಂತಿದ್ದವರೆಲ್ಲರೂ ಈಗ ಭೀತಿಯಿಂದ ಪರಿತಪಿಸತೊಡಗಿದರು.

"ಇದೇನಪ್ಪ .... ಇವರ ಮನೆ ಕಾಯ್ನಾಗ.... ಹಿಂಗೆ ದೊಣ್ಣೆಗಳನ್ನು ತಕೊಂಡು ಬತ್ತಾವರೆ.... ಅಯ್ಯಯ್ಯೋ.... ಈಗ ಹೆಂಗಪ್ಪ ಇವರ ಎದುರಿಸೋದು?"

"ಗುರುತು ಪರಿಚಯ ಇಲ್ದೇ ಇರುವ ಜಾಗದಲ್ಲಿ ಸಿಗಾಕೊಂಡಂಗಾಯ್ತಲ್ಲ.... ಈಗೇನು ಮಾಡೋದು?" ಎಂದು ಒಂದಿಬ್ಬರು ಹೆಂಗಸರು ಕಳವಳ ಪಡುತ್ತಿದ್ದಂತೆಯೇ ಸುಮಾರು ಐವತ್ತು ವರ್ಷದ ಪುಟ್ಟಚೆನ್ನಮ್ಮ ಎಂಬ ಎತ್ತರದ ನಿಲುವಿನ ಹೆಂಗಸು, ಮಾರ್ಗದರ್ಶಿ ಗಂಡಸರಿಬ್ಬರ ಮುಂದೆ ಬಂದು ನಿಂತು–

"ನೋಡ್ರಪ್ಪ.... ಹೋದ್ನೆ ವರ್ಷ ನಮ್ಮ ಬೀಗರ ಊರ್ನಲ್ಲಿ ಇಬ್ಬರು ಇಸ್ಕೂಲ್ ಹೈಕ್ಳು ಮೇಲೆ ಹಿಂಗೆ ಒಂದು ಬಸ್ಸು ಹರ್ದುಬುಡ್ತು. ಆಗ ಅಲ್ಲಿಗೆ ಬಂದ ಜನವೆಲ್ಲಾ.... ಬೋ ಕ್ವಾಪದಲ್ಲಿ ಬಸ್ಸಿಗೆ ಬೆಂಕಿ ಎಟ್ಬುಟ್ಟು ಡ್ರೈವರನ ಬೆಂಕಿ ಒಳಾಕೆ ಎತ್ತಿ ಎಸೆಯೋಕೆ ಅಂತ ಹೊಂಟುಬುಟ್ರು.... ಅಷ್ಟರಲ್ಲಿ ಯಾರೋ ಪುಣ್ಯಾತ್ಮರು ಆ ವಯ್ಯನ ಪಾರು ಮಾಡುದ್ರು" ಎಂದು ಹೇಳಿ, ಬಸ್ಸಿನ ಮುಂದೆ ನಿಂತಿದ್ದ ಡ್ರೈವರನ ಕಡೆ ಕೈ ತೋರಿಸುತ್ತಾ–

"ಹಂಗೆ ಇಲ್ಲೇನಾರ ಈ ಮೋಗೀಗೆ ಹೊಡ್ದು .... ಜೀವಕ್ಕೇನಾದ್ರು ಅಪಾಯ ಮಾಡ್ಬುಟ್ಟರು.... ಜೋಪಾನ ಕಣ್ರಪ್ಪ" ಎಂದು ಎಚ್ಚರಿಕೆ ನೀಡಿದಳು.

ಮತ್ತೊಮ್ಮೆ ಈಗ ಎಲ್ಲರೂ ತಮ್ಮತ್ತ ನುಗ್ಗಿ ಬರುತ್ತಿದ್ದ ಗುಂಪಿನ ಕಡೆ ನೋಡಿದರು. ಬರುತ್ತಿದ್ದವರ ಆರ್ಭಟ ಬಹಳ ಜೋರಾಗಿತ್ತು. ಹೆಂಗಸರಲ್ಲಿ ಒಬ್ಬಳು ಡ್ರೈವರನ್ನು ಕುರಿತು–

“ಮೊಗ.... ಎತ್ತಗಾರ ಎದ್ದುಡಪ್ಪ.... ಈ ಹಾಳಾದ್ ಜನವ ಹಿಂಗೆ ಅಂತ ಹೇಳೂಕಾಗೂದಿಲ್ಲ. ಗುಂಪಿನಲ್ಲಿ ಏನ್ ಮಾಡೂಕು ಹೇಸೂದಿಲ್ಲ” ಎಂದು ಸಲಹೆ ನೀಡಿದಳು. ಮತ್ತೊಬ್ಬಳು ಡ್ರೈವರನ ಹತ್ತಿರಕ್ಕೆ ಬಂದು “ಅವರೆಲ್ಲಾ ಬಂದು ಹೋಗುವ ತನಕ.... ಯಾವುದಾದ್ರು ಬೇಲಿ ಮರೇಲಿ.... ಇಲ್ದಿದ್ರೆ ಒಂದು ಒಬ್ಬೆ ಮರೇಲಿ ಅವಸ್ಕೋಗಪ್ಪ.... ಈಗ ನೀನು ಅವರ ಕೈಗೇನಾರ ಸಿಕ್ಕುದ್ರೆ.... ತಲಾಗಿ ಒಂದೊಂದು ಏಟು ಹಾಕ್ಬುಡ್ತರೆ ಕಣಪ್ಪ” ಎಂದು ಚಡಪಡಿಸತೊಡಗಿದಳು.

“ಎಲ್ಲಿ ಅಡಿಕೊಂಡರೆ ತಾನೆ ಬುಟ್ಟರೇನವ್ವ! ...ಎಲ್ಲಾ ಕಡೆ ತಡಕಾಡ್ಬುಟ್ಟು... ಈಚೆಗೆ ಎಳ್ಕೊಂಡು... ಹುಚ್ಚುನಾಯಿಗೆ ಹೊಡ್ದಂಗೆ ಹೊಡಿತಾರೆ” ಎಂದು ಪುಟ್ಟಚೆನ್ನಮ್ಮ ಮತ್ತೊಮ್ಮೆ ಆತಂಕ ವ್ಯಕ್ತಪಡಿಸಿದಳು.

ಮುಂದೇನಾಗುವುದೋ ಎಂಬ ಭೀತಿಯಿಂದ ಡ್ರೈವರ್ ಕಂಗಾಲಾಗಿದ್ದ. ಅವನ ಮುಖದಲ್ಲಿ ಈಗ ಬೆವರ ಹನಿಗಳು ಮೂಡಲಾರಂಭಿಸಿದವು. ಕ್ಷಣ ಕ್ಷಣಕ್ಕೂ ಹಳ್ಳಿಗರ ಗುಂಪು ಆಕ್ರೋಶದಿಂದ ಹತ್ತಿರವಾಗುತ್ತಿತ್ತು. ಅವರ ಕೈಗಳಲ್ಲಿದ್ದ ಹತಾರಗಳನ್ನು ನೋಡಿಯೇ.... ಪ್ರವಾಸಿಗರ ಎದೆ ಹೊಡೆದುಕೊಳ್ಳಲಾರಂಭಿಸಿದವು. ಸತ್ತ ಕುರಿಗಳಿಗೆ ದಂಡ ಕಟ್ಟಬೇಕಾಗುವ ಹಣಕ್ಕಿಂತ, ಡ್ರೈವರನ ಪ್ರಾಣಕ್ಕೆ ಅಪಾಯವಾಗುವಂತಹ ಏಟುಗಳು ಎಲ್ಲಿ ಬೀಳುತ್ತವೆಯೋ ಎಂಬ ಭಯ ಎಲ್ಲರನ್ನೂ ಕಾಡತೊಡಗಿತು.

ಹೆಂಗಸರು ಅಪಾರವಾದ ಅನುಕಂಪದಿಂದ ಡ್ರೈವರನನ್ನು ಈಗ ಸುತ್ತುವರಿದು ನಿಲ್ಲತೊಡಗಿದರು. ಉದ್ರೇಕದಿಂದ ಮುನ್ನುಗ್ಗಿ ಬರುತ್ತಿರುವ ಗುಂಪನ್ನು ನೋಡಿದ ಪುಟ್ಟಚೆನ್ನಮ್ಮ ತೀವ್ರವಾಗಿ ತಲ್ಲಣಗೊಳ್ಳುತ್ತಾ–

“ಅಯ್ಯಯ್ಯೋ.... ಇವತ್ತು ಈ ಮಗೀನ ಇವರು ಸುಮ್ಮನೆ ಬುಟ್ಟರೇನವ್ವ! .... ಏನ್ರವ್ವ ಮಾಡೋದು ಈಗ?” ಎಂದು ಉದ್ಗಾರ ತೆಗೆಯುತ್ತಿದ್ದಂತೆಯೇ ಮರುಗಳಿಗೆಯೇ ಏನನ್ನೋ ನಿರ್ಧರಿಸಿಕೊಂಡಳು. ಹೆಂಗಸರ ಗುಂಪಿನ ಮಧ್ಯದಲ್ಲಿ ನಿಂತಿದ್ದ ಡ್ರೈವರನ ಬಳಿಗೆ ನುಗ್ಗಿ ಬಂದು, ಅವನ ಕೈಗಳನ್ನು ಹಿಡಿದುಕೊಂಡು “ಮೊಗ .... ನಿಂಗೆ ನಾನು ಹೆತ್ತ ತಾಯಿ ಇದ್ದಂಗೆ....ನೀನೇನೂ ಅನ್ಕೋಬ್ಯಾಡ.... ಅವರೆಲ್ಲಾ ಬಂದ್ ಹೋಗು ತನಕ ....ಕಯಕ್ ಪಿಯಕ್ ಅನ್ನದೇ ಸುಮ್ನಿರಪ್ಪ” ಎಂದು ಹೇಳಿ, ಸುತ್ತಲಿದ್ದ ಹೆಂಗಸರನ್ನು ಕುರಿತು “ನೋಡ್ರವ್ವ.... ನೀವೆಲ್ಲಾ ನನ್ನ ಸುತ್ತ ಇನ್ನೊಸಿ ಒತ್ರಿಸ್ಕೊಂಡು ನಿಂತ್ಕೊಳಿ,

ಏನೇ ಆದ್ರೂ ಅತ್ತಗೆ ಇತ್ತಗೆ ಒಂದು ಚಿಂಕ್ರನೂ ಜರುಗ್ಬೇಡಿ. ಬಂದೋರ್ ಜೊತೇಲಿ ಏನಿದ್ರೂ ನಮ್ಮ ಕಡೆ ಗಂಡಸರು ಮಾತಾಡ್ಲಿ" ಎಂದವಳೇ .... ಡ್ರೈವರನ ತಲೆಯ ಮೇಲೆ ಕೈಯಿಟ್ಟು ಕೆಳಕ್ಕೆ ಅದುಮಿ ಅವನನ್ನು ತನ್ನೆರಡು ಉದ್ದನೆಯ ಕಾಲುಗಳ ನಡುವೆ ಕುಳ್ಳಿರಿಸಿ ಮೊಣಕಾಲಿನವರೆಗೆ ಮೇಲಕ್ಕೆ ಬಂದಿದ್ದ ಸೀರೆಯನ್ನು .... ಈಗ ಆತನ ಸುತ್ತಲೂ ಇಳಿಬಿಟ್ಟುಕೊಂಡು ನಿಂತಳು.


ಇಷ್ಟರಲ್ಲಿ ಅಲ್ಲಿಗೆ ಆಕ್ರೋಶದಿಂದ ಹತ್ತಿರ ಬಂದ ಗುಂಪು ಆರ್ಭಟಿಸುತ್ತಾ.... ಡ್ರೈವರನಿಗಾಗಿ ಬಸ್ಸಿನ ಒಳಗೆ ಹೊರಗೆ ಸುತ್ತಲೂ ತಡಕಾಡಿತು. ಅವರಲ್ಲಿ ಹಲವರ ಕಣ್ಣಿನ ದೃಷ್ಟಿ.... ಹೆಂಗಸರ ಗುಂಪಿನ ನಡುವೆಯೂ ಸೀಳಿಕೊಂಡು ನುಗ್ಗಿ ನೋಡಿತು. ಆದರೆ ಪುಟ್ಟಚೆನ್ನಮ್ಮನ ಸೀರೆಯ ಮರೆಯಲ್ಲಿದ್ದ ಡ್ರೈವರನು ಯಾರೊಬ್ಬರ ಕಣ್ಣಿಗೆ ಬೀಳುವಂತಿರಲಿಲ್ಲ.

ಮುಂದಿದ್ದ ಒಬ್ಬ ಹೆಂಗಸು .... ಗುಂಪಿನ ಮುಖಂಡರನ್ನು ಕುರಿತು–

"ಡ್ರೈವರ್ ಹೆದರ್ಕೊಂಡು ಇಲ್ಲೆ ಹೊಯ್ತಿದ್ದ ಒಂದು ಕುಟಿಕುಟೀಲಿ ಕುಂತ್ಕೊಂಡು ಆಗಲೆ ಹೊಂಟೋದ ಕಣ್ರಪ್ಪ.... ನಾವು ದೂರದ ಊರಿನಿಂದ ದೇವರು ಮಾಡೋಕೆ ಹೋಗಿದ್ದವರು ಕಣ್ರಪ್ಪ.... ಯಾರ್ಗೂ ಏನೂ ಮಾಡ್ಬೇಡಿ.... ನಿಮಗೆ ಕೈ ಮುಗಿತೀವಿ" ಎಂದು ಹೇಳುತ್ತಾ ಅಳಲಾರಂಭಿಸಿದಳು. ಅಲ್ಲಿದ್ದ ಹೆಂಗಸರಲ್ಲಿ .... ಬಹುತೇಕ ಮಂದಿಯ ಕಣ್ಣುಗಳಲ್ಲಿ ಬಟ್ಟಾಡುತ್ತಿದ್ದ ಕಂಬನಿಯನ್ನು ಕಂಡು.... ಹಳ್ಳಿಗರ ಗುಂಪು ತಣ್ಣಗಾಯಿತು. ಮಾರ್ಗದರ್ಶಿ ಗಂಡಸರಿಬ್ಬರ ಜೊತೆ ಮಾತಾಡಿ .... ಸ್ವಲ್ಪ ಹಣ ಕಟ್ಟಿಸಿಕೊಂಡು ಶಾಂತ ಚಿತ್ತರಾಗಿ ಹಿಂತಿರುಗಿದರು. ಬಸ್ಸು.... ಈಗ ಮತ್ತೆ ಪ್ರವಾಸಿಗರ ಊರಿನ ಕಡೆಗೆ ಮರಳಿತು.

⌘

ಕನಕನ ಅವ್ವ



ಇಂದಿಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ಹಳ್ಳಿಯೊಂದರಲ್ಲಿ ನಡೆದ ಘಟನೆಯಿದು. ಊರ ಗೌಡರ ಮನೆಯಲ್ಲಿ ದುಡಿಯುತ್ತಿದ್ದ ನಾಲ್ಕಾರು ಜೀತದಾಳುಗಳಲ್ಲಿ ಕನಕ ಒಬ್ಬನಾಗಿದ್ದ. ಸುಮಾರು ಮೂವತ್ತೈದರ ಪ್ರಾಯದ ದಲಿತನಾದ ಕನಕ ಹುಟ್ಟಿನಿಂದಲೇ ಸ್ವಲ್ಪ ಮಂದ ಬುದ್ಧಿಯವನಾಗಿದ್ದ. ಮಾತಿನಲ್ಲಿ ತೊದಲುತ್ತಿದ್ದ ಕನಕ ದುಡಿಮೆಯಲ್ಲಿ ಮಾತ್ರ ಮೂಗೆತ್ತಿನಂತೆ ಹಗಲು ರಾತ್ರಿಯೆನ್ನದೆ ದುಡಿಯುತ್ತಿದ್ದ. ಅವನು ಎಂತಹ ವಿಚಿತ್ರ ವ್ಯಕ್ತಿಯೆಂದರೆ ಒಬ್ಬನೇ ಏನಾದರೂ ಹೊಲಗದ್ದೆಗಳಲ್ಲಿ ಉಳುವುದಕ್ಕೆ ಹೋದರೆ... ಹೊತ್ತು ಮುಳುಗಿದ ನಂತರವೂ ಉಳುತ್ತಲೇ ಇರುತ್ತಿದ್ದ. ಹತ್ತಿರದಲ್ಲೇ ಹೋಗುತ್ತಿದ್ದ ದಾರಿಹೋಕರಲ್ಲಿ ಯಾರಾದರೂ" ಇದೇನೊ ಕನಕ... ಈ

ಕತ್ತಲೆಯಲ್ಲಿ ಯಾಕೊ ಉಳ್ತಾಯಿದ್ದೀಯ?" ಎಂದು ಪ್ರಶ್ನಿಸಿದಾಗಲೇ... "ಹಂಗ...ಈಗ್ಲೆ ಬುಟ್ಟೆ ಕಣ್ಣೇಳಿ" ಎಂದು ಉಳುವುದನ್ನು ನಿಲ್ಲಿಸಿ... ದನಗಳ ಜೊತೆ ಮನೆಯ ಕಡೆ ಬರುತ್ತಿದ್ದ.

ಕನಕನ ಬದುಕಿನಲ್ಲಿ ಸುಖಕ್ಕಿಂತ ದುಃಖವೇ ಅಧಿಕವಾಗಿತ್ತು. ದೊಡ್ಡಗೌಡರ ಕಾಲದಲ್ಲಿ ಕನಕನ ಅಪ್ಪ... ಅರೆ ಮೇಲಕ್ಕೆ ದಿಂಡು ತುಂಬಿಕೊಂಡು ಬರುವುದಕ್ಕೆ ಹೋಗಿದ್ದವನು... ಗಾಡಿ ಉರುಳಿಬಿದ್ದು ಸತ್ತಿದ್ದ. ಅಂದಿನಿಂದ ಅಪ್ಪನ ಋಣ ತೀರಿಸುವ ಜೀತದ ಜವಾಬ್ದಾರಿಯು ಹತ್ತು ವರ್ಷದ ಬಾಲಕ ಕನಕನ ಪಾಲಿಗೆ ಬಂದಿತ್ತು. ಕನಕನ ಅವ್ವ ಸಿದ್ದಮ್ಮನು, ಇದ್ದ ಒಬ್ಬ ಮಗನ ಮೇಲೆ ಜೀವ ಇಟ್ಟುಕೊಂಡು, ಮಗನನ್ನು ಗೌಡರ ಹಟ್ಟಿಯಲ್ಲಿ ಜೀತಕ್ಕಿರಿಸಿ ತಾನು ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡುತ್ತ ಬಾಳನ್ನು ನೂಕುತ್ತಿದ್ದಳು. ಮಗ ವಯಸ್ಸಿಗೆ ಬಂದಾಗ, ಮದುವೆ ಮಾಡಿದಳು. ಹೆಣ್ಣು ಮಗುವೊಂದು ಹುಟ್ಟಿದ ಒಂದೆರಡು ವರ್ಷಗಳಲ್ಲಿಯೇ, ಗಂಡ ಹೆಂಡತಿಯ ನಡುವೆ ಏನು ನಡೆಯಿತೋ... ಏನು ಕಥೆಯೋ... ಕನಕನ ಹೆಂಡತಿ ನೆರೆಯೂರಿನ ಕೂಲಿಯೊಬ್ಬನನ್ನು ಕಟ್ಟಿಕೊಂಡು, ಒಂದು ದಿನ ಕಣ್ಮರೆಯಾದಳು. "ಇಂತಹ ಮೊದ್ದನ ಜೊತೆಯಲ್ಲಿ ಒಳ್ಳೇ ಕಡಸನಂಗಿದ್ದ ಅಂತಹವಳು ಹೆಂಗ್ ತಾನೆ ಇದ್ದಳು" ಎಂದು ಅಣಕವಾಡಿಕೊಂಡು ಊರಿನವರು ನಕ್ಕರು. ಮೊದಲೇ ಮಂಕಾಗಿದ್ದ ಕನಕ... ಈಗ ಮತ್ತಷ್ಟು ಕುಗ್ಗಿ ಹೋದ. ಪ್ರತಿ ನಿತ್ಯ ಹೊಟ್ಟೆ ತುಂಬ ಮೂರು ಹೊತ್ತು ಮುದ್ದೆ... ಕೈ ತುಂಬಾ ಗೇಮೆ... ಸೇದುವುದಕ್ಕೆ ನಾಲ್ಕಾರು ಬೀಡಿಗಳು... ಇಷ್ಟನ್ನು ಬಿಟ್ಟರೆ... ಇನ್ನಾವುದರ ಕಡೆಗೂ ಕನಕನಿಗೆ ಗಮನವಿರಲಿಲ್ಲ.

ಈಗ ಕನಕನ ಅವ್ವನ ಮೇಲೆ ಮೊಮ್ಮಗಳನ್ನು ಸಾಕಿ ಬೆಳೆಸುವ ಜವಾಬ್ದಾರಿ ಬಿತ್ತು. ಮೊದಲು ಮಗನ ಒಳಿತಿಗಾಗಿ ತುಡಿಯುತ್ತಿದ್ದ ಜೀವ... ಈಗ ಮೊಮ್ಮಗಳ ಹಿತಚಿಂತನೆಯಲ್ಲಿ ತೊಡಗಿತು. ಹತ್ತು ಹದಿನೈದು ವರ್ಷಗಳು ಉರುಳುತ್ತಿದ್ದಂತೆ ಕನಕನ ಅವ್ವನಿಗೆ ಚಿಂತೆ ಮತ್ತಷ್ಟು ಹೆಚ್ಚಾಯಿತು. ಈಗ ಒಂದೆರಡು ತಿಂಗಳುಗಳ ಹಿಂದೆ ದೊಡ್ಡವಳಾಗಿ ಮೈತುಂಬಿ ಬೆಳೆಯುತ್ತಿದ್ದ ಮೊಮ್ಮಗಳ ಮದುವೆಯ ಚಿಂತೆ ದೊಡ್ಡದಾಗಿ ಕಾಡತೊಡಗಿತು.

ಕನಕನ ಅವ್ವನಿಗೆ ಎಲ್ಲೂ ಕೂಲಿ ನಾಲಿ ಸಿಗದೆ, ಕೈಬಿಡುವಾಗಿದ್ದಾಗಲೆಲ್ಲಾ... ಗೌಡರ ದೊಡ್ಡಮನೆಯ ಬಳಿಗೆ ಮೊಮ್ಮಗಳ ಜೊತೆಯಲ್ಲಿ ಬಂದು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ...

ಅವರ ಮನೆಯಲ್ಲಿ ಉಳಿದುಬಳಿದಿದ್ದನ್ನು ಈಸ್ಕೊಂಡು ಹೊಟ್ಟೆ ಹೊರೆದು ಕೊಳ್ಳುವುದರ ಜೊತೆಗೆ... ಗೌಡರ ಮನೆಯ ಹೆಣ್ಣು ಮಕ್ಕಳು ಉಟ್ಟು ಮಾಸಿದ

ಹಳೆಯ ಲಂಗ ಜಂಪರ್‌ಗಳನ್ನು... ಸೀರೆಯ ತುಂಡುಗಳನ್ನೇ ತನ್ನ ಮೊಮ್ಮಗಳಿಗೆ ಉಡಿಸುತ್ತಾ... ಇದುವರೆಗೂ ಕಣ್ಣಲ್ಲಿ ಕಣ್ಣಿಟ್ಟು ಮೊಮ್ಮಗಳನ್ನು ಪ್ರೀತಿಯಿಂದ ಬೆಳೆಸಿದಳು. ದೊಡ್ಡಗೌಡರ ಹೆಂಡತಿ ಗೌರಮ್ಮನವರು ಕನಕನ ಅವ್ವನನ್ನು ಎಂದೂ ಬರಿಗೈಯಲ್ಲಿ ಕಳುಹಿಸಿದವರಲ್ಲ. ಕನಕನ ಅವ್ವ ತನ್ನ ಕಷ್ಟ ಸುಖ ತೋಡಿಕೊಳ್ಳುವುದಕ್ಕೆ... ಗೌರಮ್ಮನವರೇ ದಿಕ್ಕುದೆಸೆಯಾಗಿದ್ದರು.

ಒಂದು ದಿನ ಸಂಜೆ ಕನಕನ ಅವ್ವ... ವಯಸ್ಸಿಗೆ ಬಂದ ಮೊಮ್ಮಗಳೊಡನೆ ಗೌರಮ್ಮನವರ ಬಳಿಗೆ ಬಂದಳು. ಸುಮಾರು ಅರವತ್ತೈದು ಎಪ್ಪತ್ತು ವರ್ಷ ವಯಸ್ಸಿನ ಗೌರಮ್ಮನವರ ಬೆನ್ನು ಬಾಗಿ, ಹಲ್ಲುಗಳೆಲ್ಲಾ ಉದುರಿ, ಬಾಯಿ ಬೋಡಾಗಿದ್ದರೂ, ಕಣ್ಣುಗಳ ದೃಷ್ಟಿ ಮಾತ್ರ ಬಹಳ ಚೆನ್ನಾಗಿತ್ತು. ದೊಡ್ಡಮನೆಯ ಹಿತ್ತಲ ಬಾಗಿಲಿನ ಮೆಟ್ಟಿಲುಗಳ ಮೇಲೆ ಕುಳಿತು ಕುಟಾಣಿಯಲ್ಲಿ ಎಲೆ ಅಡಕೆಯನ್ನು ಹಾಕಿಕೊಂಡು ಕುಟ್ಟುತ್ತಿದ್ದ ಗೌರಮ್ಮನವರು... ಕನಕನ ಮಗಳನ್ನು ದಿಟ್ಟಿಸಿ ನೋಡುತ್ತಾ–

"ಇನ್ನೇನಮ್ಮಿ ಸಿದ್ದಿ ನಿಂಗೆ ಯೋಚನೆ?... ಕೈವೊತ್ತಿಗೆ ಮೊಮ್ಮಗಳು ಬಂದ್ಬುಟ್ಟಳಲ್ಲ! ... ಇನ್ಮೇಲೆ ದುಡಿದು ನಿನ್ನ ಚೆನ್ನಾಗಿ ನೋಡ್ಕೋತಾಳೆ ಬುಡು" ಎಂದರು.

"ಅವ್ವೋ... ಇವತ್ತೋ ನಾಳೆಯೋ ಸಾಯೊ ಮುದುಕಿ ನನ್ನ... ಅವಳೇನು ನೋಡ್ಕೋಬೇಕವ್ವ... ನಾ ಕಣ್ಮುಚ್ಚೊಕೆ ಮೊದಲು... ಅವಳ ತಲೆ ಮ್ಯಾಲೆ ನಾಲ್ಕು ಅಕ್ಕಿಸ್ದಕ್ಕಿ ಹಾಕಿ, ಅವಳಿಗೊಂದು ನೆಲೆ ಕಾಣಿಸ್ಬೇಕು ಕಣ್ರವ್ವ."

"ಹಂಗಾದ್ರೆ ಮದುವೆ ಮಾಡ್ಬುಡು".

"ಬರಿಗೈಯಲ್ಲಿ ಏನ್ ಮಾಡೋಕಾದದವ್ವ... ಇಂಥ ಅಪ್ಪ... ಅಂಥೆ ಅವ್ವನ್ನ ಪಡೆದ ಈ ಮಗೀನ ಹಣೇನಲ್ಲಿ ಏನ್ ಬರದಿದ್ದದೋ ನಾ ಬೇರೆ ಕಾಣೆ" ಎನ್ನುತ್ತಿದ್ದಂತೆಯೇ ... ದುಃಖ ಒತ್ತರಿಸಿ ಬಂದು... ಕನಕನ ಅವ್ವನ ಗಂಟಲು ಬಿಗಿಯಿತು.

"ಇವರವ್ವ ಈಗ ಎಲ್ಲಿದ್ದಳು?... ಮಗಳ ನೋಡೋಕೆ ಅಂತ ಏನಾರ ಬರೂಳೆ?"

ಸೊಸೆಯ ಸುದ್ದಿಯನ್ನು ಕೇಳಿದ ಕೂಡಲೇ... ಕೆರಳಿ ಕೆಂಡಮಂಡಲವಾದ ಕನಕನ ಅವ್ವ–

"ಥೂ... ಆ ನನ್ ಸವ್ತಿ ಸುದ್ದಿ ಎತ್ಬೇಡಿ... ಹಾದರಗಿತ್ತಿ ಮುಂಡೆ... ಬೀದಿ ಸೂಳೆ... ಕುಲಗೆಟ್ಟು ಲೌಡಿ... ಹರೇದಲ್ಲಿ ತಾನು ಹಾಳಾದದ್ದು ಅಲ್ಲದೇ... ಈಗ ಮಗಳ ಬಾಳನ್ನು ಹಾಳು ಮಾಡಲಿಕ್ಕೆ ಬಂದಿದ್ದಳು ಕಣ್ರವ್ವ".

"ಮಗಳ... ಕರ್ಕೊಂಡು ಹೋಗೋಕೆ ಬಂದಿದ್ಳೆ?"

"ಹೂ ಕಣ್ರವ್ವ... 'ಹೆತ್ತೋಳ್ ನಾ ಕಾಣ್ನೆ ... ಮಗಳಿಗೆ ಮದುವೆ ಮಾಡೂದ... ನನ್ ಜೊತೇಲಿ ಇಟ್ಕೋತಿನಿ' ಅನ್ಕೊಂಡು ಇದಕ್ಕೊಂದು ತಿಂಗಳಲ್ಲಿ ಬಂದಿದ್ಳು... ಇಲ್ಲಿಗಂಟ ಎಲ್ಲಿಗೋಗಿತ್ತಮ್ಮಿ ನಿನ್ನ ಹೆತ್ತ ಕಳ್ಳು... ಈಗ ಬಂದಿದ್ದೀಯಲ್ಲ!... ಬೆಳೆದ ಮಗಳ ಕರ್ಕೊಂಡೋಗಿ... ಯಾರ್ಗ್ಗಾರ ತಲೆ ಹಿಡ್ದು... ದುಡ್ಡು ಸಂಪಾದ್ನೆ ಮಾಡೋಕೆ... ಈ ಆಟ ತಕೊಂಡು ಬಂದಿದ್ದೀಯ... ಇನ್ನೊಂದು ಗಳಿಗೆ ಇಲ್ಲಿ ನಿಂತಿದ್ರೆ... ನೀನ್ ಉಟ್ಟೀರು ಸ್ಯಾಲೆಯ ಸುಲ್ದು... ಕೆರ ತಕೊಂಡು ಬಡೀತಿನಿ ಅಂತ... ಅಂದೂ, ಆಡಿ ಉಗ್ದು... ಕಳಿಸ್ದೆ ಕಣ್ರವ್ವ".

"ಹೋಗಮ್ಮಿ... ಅಲ್ಲಿರೊ ಮೊಟ್ಟೆ ಕಡ್ಡಿ ಬರ್ಲು ತಕೊಂಡು, ಕೊಟ್ಗೆ ಕಸವ ಒಸಿ ಹಿಂದಕ್ಕೆ ತಳ್ಳೋಗು" ಎಂದು ಮೊಮ್ಮಗಳಿಗೆ ಸೂಚಿಸಿದಾಗ, ಆಕೆಯು ತನ್ನ ಅಜ್ಜಿ ಮತ್ತು ಗೌರಮ್ಮನವರ ಮಾತುಗಳನ್ನು ಕೇಳಿಯೂ, ಕೇಳಿಸಿಕೊಳ್ಳದವಳಂತೆ ಕಸವನ್ನು ಗುಡಿಸತೊಡಗಿದಳು.

ಗೌರಮ್ಮನವರು ಕುಟಾಣಿಯಲ್ಲಿನ ಎಲೆ ಅಡಿಕೆಯನ್ನು ಮತ್ತಷ್ಟು ಕುಟ್ಟುತ್ತ ಮಾತನ್ನು ಮುಂದುವರಿಸಿದರು.

"ಮತ್ತೆ ಹೆಂಗಾರ ಮಾಡಿ... ಮೊಮ್ಮಗಳ ಮದುವೆ ಮಾಡ್ಬುಡು."

"ಅವ್ವೋ... ನೀವು ಕಂಡಂಗೆ ಕಾಲದಿಂದಲೂ ನನ್ನ ಗಂಡ... ನನ್ನ ಮಗ... ಎಲ್ಲಾ ಜೀತದಲ್ಲಿ ಬಂದೋರೆ... ನಮ್ಮ ತಾವು ಏನಿದ್ದದವ್ವ ಮದುವೆ ಮಾಡೋಕೆ... ಯಾವ ಗಂಟು ನನ್ತಾವು ಅದೆ ಅಂತ... ಯಾರ್ತಾನೆ ಬಂದರವ್ವ?"

"ಹಂಗಾದ್ರೆ ಈಗೇನ್ ಮಾಡೀಯೆ?"

"ದಿಕ್ಕೇ ತೋಚದಂಗೆ ಆಗದೆ ಕಣ್ರವ್ವ... ಆ ಕರೀಘಟ್ಟದ ದೇವರೇ ನನ್ನ ಮೊಮ್ಮಗಳ ಕಾಪಾಡ್ಬೇಕು" ಎಂದು ಕಂಬನಿ ತುಂಬಿಕೊಂಡಳು.

"ಅಮ್ಮೇ... ಸಿದ್ದಿ... ನೀನು ಕರೀಘಟ್ಟದ ದೇವರು ಅಂತ್ಲೆ ನೆಪ್ಪಾಯ್ತು... ಒಂಥರ ಮಾಡಮ್ಮಿ... ನಿನ್ನ ಮೊಮ್ಮಗಳಿಗೂ ಒಳ್ಳೆದಾಯ್ತದೆ... ನಿನ್ನ ಮೇಲಿರೂ ಭಾರನೂ ಕಳೀತದೆ" ಎಂದು ಗೌರಮ್ಮನವರು ನುಡಿದಾಗ... ಕನಕನ ಅವ್ವ ಮೈಯೆಲ್ಲಾ ಕಿವಿಯಾಗಿ–

"ಅದೇನ್ ನೆಪ್ಪಿಗೆ ಬಂತು ಹೇಳ್ರವ್ವ... ನೀವು ಹೇಳ್ದಂಗೆ ಮಾಡ್ತೀನಿ" ಎಂದಳು.

"ಕರೀಘಟ್ಟದ ಶ್ರೀನಿವಾಸ ದೇವರ್ಗೆ... ನಿನ್ನ ಮೊಮ್ಮಗ್ಳ ಬಸವಿ ಬುಟ್ಬುಡಮ್ಮಿ."

ಗೌರಮ್ಮನವರ ನುಡಿಗಳನ್ನು ಕೇಳುತ್ತಿದ್ದಂತೆಯೇ... ಬರಸಿಡಿಲು ಬಡಿದಾಗ ಮರ ಹತ್ತಿ ಉರಿಯುವಂತೆ... ಕನಕನ ಅವ್ವನ ಮೈಮನಗಳು ಅಪಾರವಾದ ಸಂಕಟದಿಂದ

ಬೇಯತೊಡಗಿದವು. ಏನನ್ನೂ ಮಾತನಾಡಲಾಗದೆ... ಕನಕನ ಅವ್ವ ಕೆಲವೇ ಕ್ಷಣಗಳಲ್ಲಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಕೊಟ್ಟಿಗೆಯ ಕಸ ತೆಗೆಯುತ್ತಿದ್ದ ಮೊಮ್ಮಗಳು ಬರಲನ್ನು ಅಲ್ಲೇ ಬಿಟ್ಟು... ಅಜ್ಜಿಯ ಬಳಿಗೆ ಬಂದು ... ಅಜ್ಜಿಯ ಶೋಕಕ್ಕೆ ಕಾರಣವೇನೆಂದು ಸ್ಪಷ್ಟವಾಗಿ ತಿಳಿಯದಿದ್ದರೂ, ತಾನೂ ಅಳತೊಡಗಿದಳು.

"ಇದ್ಯಾಕಮ್ಮಿ ಸಿದ್ದಿ... ಹಿಂಗೆ ಅತ್ತೀಯೆ?... ನಾವು ಕಂಡಂಗೆ ಹಿಂದ್ಕೆಲ್ಲಾ ನಿಮ್ಮೋರು ಬೇಕಾದಷ್ಟು ಜನ ಬಸವೀರು ಇರಲಿಲ್ವೇನಮ್ಮಿ?... ವರ್ಷಕ್ಕೊಂದು ದಪ ನಡೀತಿದ್ದ ಹಬ್ಬದಲ್ಲಿ, ಬಸವೀರು ಬಂದು ಹಗ್ಗ ಮುಟ್ಟಿದ ಮ್ಯಾಲೆ ಅಲ್ಲವೇ... ಶ್ರೀನಿವಾಸ ದೇವರ ತೇರನ್ನ ಮುಂದಕ್ಕೆ ಎಳೀತಿದ್ದುದ್ದು... ಅದ್ನೆಲ್ಲಾ ನೀ ಕಾಣ?" ಎಂದು ಹೇಳಿ... ತಾವಿತ್ತಿದ್ದ ಸಲಹೆಯನ್ನು ಸಮರ್ಥಿಸಿಕೊಳ್ಳತೊಡಗಿದರು.

ಅಷ್ಟರಲ್ಲಿ ಅಲ್ಲಿಗೆ ಬಂದ ಚಿಕ್ಕ ಗೌಡರು... ಕಣ್ಣೀರು ಕರೆಯುತ್ತಿದ್ದ ಅಜ್ಜಿ ಮೊಮ್ಮಗಳನ್ನು ಕಂಡು–

"ಇದ್ಯಾಕ್ ಸಿದ್ದಮ್ಮ ಅಳ್ತಾ ಇದ್ದೀಯೆ?... ಕನಕನಿಗೆ ಏನಾರ ಆಯ್ತ" ಎಂದು ಆತಂಕದಿಂದ ಪ್ರಶ್ನಿಸಿದರು. ಕನಕನ ಅವ್ವ ಮಾತನಾಡಲಾಗದೆ... ಮತ್ತಷ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಈಗ ಚಿಕ್ಕಗೌಡರು ತಮ್ಮ ತಾಯಿಯನ್ನು ಕುರಿತು–

"ಇದ್ಯಾಕವ್ವ ಹಿಂಗೆ ಇಬ್ಬರೂ ಅಳ್ತಾವರಲ್ಲ?... ನೀನೇನಾದ್ರೂ ಅಂದ?" ಎಂದು ಕೇಳಿದಾಗ–

"ಏ... ನಾನೇನು ಅಂಥ ಯಾರೂ ಅನ್ನಬಾರ್ದ ಇದ್ದುದನ್ನ ಅಂದ್ಬುಟ್ಟೆ... 'ಮೊಮ್ಮಗಳ ಮದುವೆ ಮಾಡೂಕೆ ನನ್ನ ಕೈಯಲ್ಲಿ ಹೆಂಗಾದದವ್ವ' ಅಂತ ಒದ್ದಾಡ್ತಿದ್ದಳು... 'ಕರೀಘಟ್ಟದ ದೇವರಿಗೆ ಬಸವಿ ಬುಟ್ಬುಡಮ್ಮಿ' ಅಂದೆ... ಹಂಗಂದೇ ಹೊತ್ತಿನಿಂದಲೂ ಹಿಂಗೆ ಅಳ್ತಾವ್ಳೆ" ಎಂದು ವಿವರಿಸಿ... ಕುಟಾಣಿಯೊಳಗಿನ ಎಲೆ ಅಡಕೆಯನ್ನು ಮತ್ತಷ್ಟು ಬಲವಾಗಿ ಕುಟ್ಟತೊಡಗಿದರು.

ಸುಮಾರು ನಲವತ್ತೈದು ವರ್ಷದ ವಯಸ್ಸಿನ ಚಿಕ್ಕಗೌಡರು... ಬಿ.ಎ.ವರೆಗೆ ಓದಿದವರು. ದೊಡ್ಡಗೌಡರು ಸತ್ತಾಗ... ತಂದೆಗೆ ಒಬ್ಬನೇ ಮಗನಾದ್ದರಿಂದ, ದೊಡ್ಡ ಆಸ್ತಿಯನ್ನು ನೋಡಿಕೊಳ್ಳುವುದಕ್ಕಾಗಿ, ವಿದ್ಯಾಭ್ಯಾಸವನ್ನು ಅರ್ಧದಲ್ಲೇ ನಿಲ್ಲಿಸಿ ಹಳ್ಳಿಗೆ ಹಿಂತಿರುಗಿದ್ದರು.

ಹಳೆಯ ತಲೆಮಾರಿನ ಜಮೀನ್ದಾರಿ ವ್ಯವಸ್ಥೆಯಲ್ಲಿ ನೆಲೆಯೂರಿದ್ದರೂ... ಹೊಸ ತಲೆಮಾರಿನ ಚಿಂತನೆಗಳನ್ನು, ವಿದ್ಯೆಯ ಮೂಲಕ ಗ್ರಹಿಸಿಕೊಂಡಿದ್ದರು. ನಿತ್ಯವೂ ಪತ್ರಿಕೆಗಳನ್ನು ಓದುತ್ತಾ ಆಧುನಿಕ ಜಗತ್ತಿನ ವಿದ್ಯಮಾನಗಳನ್ನು ಅರಿತವರಾಗಿದ್ದರು.

ತಮ್ಮ ಬಳಿ ದುಡಿಯುವ ಆಳುಕಾಳುಗಳ ಕಷ್ಟ ಸುಖಕ್ಕೆ ಬಹಳವಾಗಿ ಆಗುತ್ತಿದ್ದವರು, ತಮ್ಮ ತಾಯಿಯು ನುಡಿದ ಮಾತುಗಳನ್ನು ಕೇಳಿ ತುಂಬಾ ಆಘಾತಗೊಂಡಿದ್ದ ಚಿಕ್ಕಗೌಡರು–

"ಇದೇನವ್ವ... ಇಂಥ ಕಾಲದಲ್ಲಿ ... ಅಂಥ ಮಾತ ಯಾರಾದರೂ ಆಡರೇನವ್ವ! ...ಬಡವರ ಹೆಣ್ ಮಕ್ಳ ಬಸವೀರಾಗಿ ಬುಡೂದು... ಅದೆಲ್ಲಾ ನಮ್ಮ ಹಿರೀಕರ ಕಾಲಕ್ಕೆ ಮುಗ್ದೋಯ್ತು... ಈಗ ಎಲ್ಲಾ ಜಾತಿ ಹೆಣ್ ಮಕ್ಳು ಮದುವೆ ಮಾಡ್ಕೊಂಡು... ನಾಲ್ಕು ಜನದಂಗೆ ಬಾಳ್ಬೇಕು" ಎಂದು ತಾಯಿಗೆ ಹೇಳಿ... ಇನ್ನೂ ಅಳುತ್ತಿದ್ದ ಕನಕನ ಅವ್ವನನ್ನು ಉದ್ದೇಶಿಸಿ–


"ನೋಡಮ್ಮಾ... ನಿನ್ನ ಗಂಡನ ಕಾಲದಿಂದಲೂ... ನಮ್ ಹಟ್ಟೀಲೆ ನೀವು ಗೆಯ್ಕೊಂಡು ಬಂದಿದ್ದೀರಿ... ನಿಮ್ಮ ಇಂಥ ಕಾಲದಲ್ಲಿ ನಾನು ಕೈ ಬುಡೂದಿಲ್ಲ... ನೀನು ಎಲ್ಲಾರ ನಿಮ್ಮ ಜನದಲ್ಲಿ ಒಂದು ಒಳ್ಳೇ ಗಂಡು ನೋಡಿ, ಮದುವೆ ಗೊತ್ತು ಮಾಡ್ಕೊಂಡು ಬಾ... ಅದೇನ್ ಖರ್ಚು ಬಂದ್ರೂ... ನಾನ್ ನಿಂತ್ಕೊಂಡು ಮದುವೆ ಮಾಡ್ತೀನಿ... ನೀನ್ ಇನ್ನು ಅಳ್ಬೇಡ ಸುಮ್ಮನಿರು" ಎಂದು ಸಮಾಧಾನ ಹೇಳಿ... ಕನಕನ ಮಗಳನ್ನು ನೋಡುತ್ತಾ–

"ಇನ್ನು ಮದುವೆ ಮಾಡಲಿಲ್ಲ ಅಂತ... ಅಜ್ಜಿ ಜೊತೇಲಿ ಬಂದು ಅಳ್ತಾ ಇದ್ದೀಯೆನಮ್ಮಿ" ಎಂದು ಹಾಸ್ಯ ಮಾಡಿದಾಗ... ಆ ಹುಡುಗಿ ನಾಚಿಕೆಯಿಂದ ತಲೆ ತಗ್ಗಿಸಿದಳು,

ಕೆಲವೇ ತಿಂಗಳುಗಳಲ್ಲಿ ಕನಕನ ಅವ್ವ... ದಲಿತರ ಕೇರಿಯ ನಾಲ್ಕಾರು ಮಂದಿ ಹಿರಿಯರ ನೆರವಿನಿಂದ... ತಮ್ಮ ಕೇರಿಯಲ್ಲೇ ಇದ್ದ ಯುವಕನೊಬ್ಬನೊಡನೆ ಮೊಮ್ಮಗಳ ಮದುವೆಯನ್ನು ನಿಶ್ಚಯಿಸಿದಾಗ... ಚಿಕ್ಕಗೌಡರ ನೇತೃತ್ವದಲ್ಲಿ... ಕರೀಘಟ್ಟದ ಶ್ರೀನಿವಾಸ ದೇವರ ಸನ್ನಿಧಿಯಲ್ಲಿ ಮದುವೆ ನಡೆಯಿತು.

⌘

ನಮಗೂ ನಿಮ್ಮಂಗೆ ಆಸೆ ಇಲ್ವೆ



ಐದಾರು ವರ್ಷಗಳ ಹಿಂದೆ ನಮ್ಮ ಕಾಲೇಜಿನಲ್ಲಿ ನಡೆದ ಘಟನೆಯೊಂದನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಏಕೋ... ಏನೋ... ಆ... ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳು ಸ್ವಲ್ಪ ಬಿಗಡಾಯಿಸಿಕೊಂಡಿದ್ದವು. ದಿನ ಬೆಳಗಾದರೆ ಏನಾದರೊಂದು ಬಗೆಯ ಕಪಿ ಘಟನೆಗಳು ನಡೆಯತೊಡಗಿದವು. ಕಾನೂನಿನ ಮೂಲಕ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ತರುವ ಮುನ್ನ... ಪ್ರೀತಿ ಮತ್ತು ವಿಶ್ವಾಸದ ನಡೆನುಡಿಗಳಿಂದಲೇ ವಿದ್ಯಾರ್ಥಿಗಳ ಮನಸ್ಸನ್ನು ಒಲಿಸಿಕೊಂಡು... ಕಾಲೇಜಿನ ಪರಿಸರದಲ್ಲಿ ಉತ್ತಮವಾದ ವಾತಾವರಣವನ್ನು ಮೂಡಿಸಬೇಕೆಂಬ ಉದ್ದೇಶದಿಂದ, ಒಂದು ಮಧ್ಯಾಹ್ನ ವಿದ್ಯಾರ್ಥಿಗಳೆಲ್ಲರ ಸಭೆಯನ್ನು

ಕರೆದು... ಪ್ರಿನ್ಸಿಪಾಲರು ಮತ್ತು ಅಧ್ಯಾಪಕರ ಸಮ್ಮುಖದಲ್ಲಿ 'ಮುಖಾಮುಖಿ' ಕಾರ್ಯಕ್ರಮವೊಂದನ್ನು ಏರ್ಪಡಿಸಲಾಯಿತು. ವಿದ್ಯಾರ್ಥಿಗಳಲ್ಲಿ ಯಾರು ಬೇಕಾದರೂ... ತಮ್ಮ ಯಾವುದೇ ಬಗೆಯ ಸಮಸ್ಯೆಯನ್ನಾದರೂ ನೇರವಾಗಿ ಹೇಳಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿತ್ತು. ಅವರ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಸಭೆಯಲ್ಲೇ ಚರ್ಚಿಸಿ... ಅವನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಲಾಗಿತ್ತು.

ಸಭೆಯು ಪ್ರಾರಂಭವಾಗುತ್ತಿದ್ದಂತೆಯೇ... ಹತ್ತಾರು ಮಂದಿ ಹುಡುಗರು ವೇದಿಕೆಯ ಮೇಲೆ ಒಬ್ಬೊಬ್ಬರಾಗಿ ಬಂದು ಮಾತನಾಡತೊಡಗಿದರು. ಕೆಲವರು ದೊಡ್ಡ ಧ್ವನಿಯಲ್ಲಿ ಅಬ್ಬರಿಸಿದರು... ಮತ್ತೆ ಕೆಲವರು ಮೇಜು ಕುಟ್ಟಿ ಮಾತನಾಡಿದರು... ಒಂದಿಬ್ಬರು ತುಂಬಾ ತಾಳ್ಮೆಯಿಂದ ಸಭಿಕರೆಲ್ಲರ ಮನ ಮುಟ್ಟುವಂತೆ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಕಾರಣವಾದ ಸಂಗತಿಗಳನ್ನು ವಿಶ್ಲೇಷಣೆ ಮಾಡಿದರು. ಸುಮಾರು ಎರಡೂವರೆ ಘಂಟೆಗಳ ಕಾಲ ನಡೆದ ಸುದೀರ್ಘವಾದ ಈ ಸಭೆಯಲ್ಲಿ ... ವಿದ್ಯಾರ್ಥಿಗಳ ಸಮಸ್ಯೆಗಳೆಲ್ಲವನ್ನೂ ಅತ್ಯಂತ ಸಹಾನುಭೂತಿಯಿಂದ ಆಲಿಸಿದ ಪ್ರಿನ್ಸಿಪಾಲರು ಮತ್ತು ಅಧ್ಯಾಪಕರು... ಸೂಕ್ತವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದಂತೆಯೇ... ಸುಮಧುರವಾದ ವಾತಾವರಣ ಉಂಟಾಗತೊಡಗಿತು. ಇನ್ನೇನು ಸಭೆಯು ಮುಕ್ತಾಯದ ಹಂತಕ್ಕೆ ಬರುತ್ತಿರುವಷ್ಟರಲ್ಲಿ... ವಿದ್ಯಾರ್ಥಿನಿಯರ ಗುಂಪಿನಿಂದ ಮೇಲೆದ್ದ ಸಣ್ಣಮ್ಮ... ವೇದಿಕೆಯತ್ತ ಬರತೊಡಗಿದಳು.

ಫೈನಲ್ ಬಿ.ಎ. ತರಗತಿಯಲ್ಲಿ ಓದುತ್ತಿದ್ದ ಸಣ್ಣಮ್ಮ... ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯರಲ್ಲಿ ಒಬ್ಬಳಾಗಿದ್ದಳು. ಯಾವುದೇ ವಾಹನ ಸೌಕರ್ಯವಿಲ್ಲದ ಕುಗ್ರಾಮವೊಂದರಿಂದ ಪ್ರತಿ ನಿತ್ಯ ನಾಲ್ಕಾರು ಮೈಲಿ ನಡೆದುಕೊಂಡು ಕಾಲೇಜಿಗೆ ಬಂದು ಹೋಗುತ್ತಿದ್ದ ಸಣ್ಣಮ್ಮ... ಬಡ ಕುಟುಂಬದ ಹೆಣ್ಣು ಮಗಳು... ಕಳೆದ ನಾಲ್ಕು ವರ್ಷಗಳಿಂದ ನಮ್ಮ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ಈಕೆ... ಉತ್ತಮ ಚರ್ಚಾಪಟುವಾಗಿದ್ದು, ಅನೇಕ ಚರ್ಚಾ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದಿದ್ದಳು. ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೆಳೆದು ಬಾಳುತ್ತಿದ್ದ ಸಣ್ಣಮ್ಮನ ಮಾತುಗಳಲ್ಲಿ ಗ್ರಾಮೀಣ ಭಾಷೆಯ ಸೊಗಡು ಎದ್ದು ಕಾಣುತ್ತಿತ್ತು. ಈಕೆಯ ವ್ಯಕ್ತಿತ್ವದ ಹಿನ್ನೆಲೆಯನ್ನು ಅರಿತಿದ್ದ ಸಭೆಯು... ಅವಳ ಮಾತುಗಳನ್ನು ಮೌನದಿಂದ ಆಲಿಸಲು ಸಿದ್ಧವಾಗಿತ್ತು.

"ಗುರುಗಳೇ ಮತ್ತು ಗೆಳೆಯ ಗೆಳತಿಯರೇ... ನಾನು ಅಷ್ಟೊತ್ತಿಂದ ನೋಡುತ್ತೆ ಇವ್ನಿ... ಇಷ್ಟೊಂದು ಜನ ಹುಡುಗರು ಮಾತಾಡುದ್ರು... ಅವರೆಲ್ಲಾ ತಂತಮ್ಮ ಸಮಸ್ಯೆಗಳನ್ನು ಹೇಳ್ಕೊಂಡ್ರೆ ಹೊರತು... ಈ ಕಾಲೇಜ್ನಲ್ಲಿ ಓದುತ್ತಿರುವ ನೂರಾರು ಮಂದಿ ಹುಡುಗಿಯರ

ಬಗ್ಗೆ ಒಂದ್ ಚಿಂಕ್ರನೂ ಮಾತನಾಡಲಿಲ್ಲ... ಪ್ರಿನ್ಸಿಪಾಲರಾದಿಯಾಗಿ ನಮ್ಮ ಲೆಕ್ಚರ್‌ಗಳೂ ಅಷ್ಟೆಯ... ಹುಡುಗರ ಸಮಸ್ಯೆಗಳ ಪರಿಹಾರಕ್ಕೆ ಸಲಹೆಗಳನ್ನು ನೀಡಿ, ಸುಮ್ನೆ ಕುಂತ್ಕೊಂಡವ್ರೆ. ನಮ್ಮ ಕಾಲೇಜ್ನಲ್ಲಿ ಇಷ್ಟೊಂದು ಜನ ಹೆಣ್ಮಕ್ಳು ಅವ್ರೆ.. ಅವರ ಕಷ್ಟ ಸುಖ ಏನು ಅಂತ ಒಂದು ಮಾತು ಕೇಳಲಿಲ್ಲ... ಇರ್‍ಲಿ... ಈಗ ನಾನು ನೇರವಾಗಿ ವಿಷಯಕ್ಕೆ ಬರ್ತೀನಿ. ನೀವೆಲ್ಲಾ ಕಂಡಿರುವಂಗೆ ನಮ್ಮ ಕಾಲೇಜ್ನಲ್ಲಿ ಹೊಸದಾಗಿ ಕ್ಯಾಂಟೀನ್ ಶುರುವಾಗಿ ಎರಡ್ಮೂರು ತಿಂಗಳೇ ಆಯ್ತು. ಕ್ಯಾಂಟೀನ್ನಿನ ಒಳಗೆ ನಮ್ಮ ಲೆಕ್ಚರರ್‌ಗಳಿಗೆ ಅಂತ ಪ್ರತ್ಯೇಕವಾಗಿ ಒಂದು ರೂಮ್ ಇದೆ. ಹುಡುಗರಿಗೆ ಕ್ಯಾಂಟೀನ್ನಿನ ಮುಂಭಾಗದಲ್ಲಿ ಬೇಕಾದಷ್ಟು ಜಾಗ ಇದೆ. ಪ್ರತಿನಿತ್ಯ ನಿಮಗೆ ಬೇಕು ಅಂದಾಗಲೆಲ್ಲಾ ಕ್ಯಾಂಟೀನ್ನಿಗೆ ಹೊಯ್ತ ಬರ್ತಾ ಇದ್ದೀರಿ. ಇದುವರೆಗೆ ಒಂದು ಹುಡುಗಿಯಾದರೂ ಕ್ಯಾಂಟೀನ್ನಿಗೆ ಹೋಗಿಲ್ಲ. ಏಕೆಂದರೆ ಅಲ್ಲಿ ನಿಂತ್ಕೊಳೂಕೆ... ಇಲ್ಲವೇ.... ಕುಂತ್ಕೊಳೂಕೆ ಹುಡುಗಿಯರಿಗೆ ಒಂದು ಚೂರು ಜಾಗ ಇಲ್ಲ. ಕ್ಯಾಂಟೀನ್ನಿಗೆ ಹೋಗಿ ಏನನ್ನಾದರೂ ತಿನ್ನಬೇಕು... ಕುಡೀಬೇಕು ಅಂತ... ನಮಗೂ ನಿಮ್ಮಂಗೆ ಆಸೆ ಇಲ್ವೇ? ಕ್ಯಾಂಟೀನ್ನಿನ ಸೌಲಭ್ಯ ಹುಡುಗಿಯರಿಗೂ ಅಗತ್ಯವಾಗಿದೆ ಅಂತ ನಿಮ್ಮಲ್ಲಿ ಒಬ್ಬರಿಗಾದರೂ ಅನ್ನಿಸಲಿಲ್ವೆ?" ಎಂದು ಪ್ರಶ್ನಿಸಿ... ಇಡೀ ಸಭೆಯನ್ನು ಒಂದು ಕ್ಷಣ ಅವಲೋಕಿಸಿ... ಮತ್ತೆ ಮಾತನ್ನು ಮುಂದುವರಿಸಿದಳು–

"ಈ ಬಗ್ಗೆ ನೀವ್ಯಾರು ಯೋಚನೆ ಮಾಡಲ್ಲ... ಯಾಕ್ ಹೇಳಿ?... ಹೆಣ್ಮಕ್ಳು ಹಂಗೆಲ್ಲಾ ಕ್ಯಾಂಟೀನ್ನಿಗಾಗ್ಲಿ... ಹೋಟೆಲ್‌ಗಾಗ್ಲಿ ಬರಬಾರ್ದು ಅನ್ನುವ ಸಂಪ್ರದಾಯದ ಮನಸ್ಸು ನಿಮ್ಮೆಲ್ಲರದು... ಆದ್ದರಿಂದ ಹುಡುಗಿಯರಾದ ನಮಗೆ ಏನ್ ಅಗತ್ಯವಾಗಿದೆಯೋ, ಅದನ್ನ ನಾವೇ ಕೇಳಿ ಪಡೆದುಕೊಳ್ಳಬೇಕಾಗಿದೆ... ಪ್ರಿನ್ಸಿಪಾಲರನ್ನ ಮತ್ತು ಗುರುವೃಂದದವರನ್ನ ನಾನು ಕೇಳಿಕೊಳ್ಳುವುದು ಇಷ್ಟೆ... ನಾಳೆಯಿಂದಲೇ ನಮ್ಮ ಕಾಲೇಜಿನ ಹುಡುಗಿಯರಿಗೂ ಕ್ಯಾಂಟೀನ್ನಿನ ಸೌಲಭ್ಯವನ್ನು ಪಡೆಯುವ ಅವಕಾಶವನ್ನು ಕಲ್ಪಿಸಿಕೊಡಿ... ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಸಿಕೊಡಿ" ಎಂದು ದೃಢವಾದ ಧ್ವನಿಯಲ್ಲಿ ತನ್ನ ವಿಚಾರಗಳನ್ನು ಮಂಡಿಸಿ, ವೇದಿಕೆಯಿಂದ ಇಳಿದಳು.

ಸಭೆಯು ದಿಗ್ಭ್ರಮೆಗೊಂಡಂತೆ ಕ್ಷಣಕಾಲ ಮೌನವಾಗಿತ್ತು. ಮರು ಕ್ಷಣದಲ್ಲೇ... ಹುಡುಗಿಯರ ಪರವಾಗಿ ಸಣ್ಣಮ್ಮನು ಮಂಡಿಸಿದ ಬೇಡಿಕೆಯನ್ನ ಅನುಮೋದಿಸುವಂತೆ... ಸಭಾಸದನದಲ್ಲಿ ಚಪ್ಪಾಳೆಗಳ ದೊಡ್ಡ ಧ್ವನಿಯು ಒಂದೆರಡು ನಿಮಿಷಗಳ ಕಾಲ ಅನುರಣಿಸಿತು.

ಅಂದು ಸಣ್ಣಮ್ಮನು ಆಡಿದ ನುಡಿಗಳು ಮತ್ತು ಕೇಳಿದ ಪ್ರಶ್ನೆಗಳು... ಇಂದಿಗೂ ನನ್ನ ಕಿವಿಯಲ್ಲಿ ಆಗಾಗ್ಗೆ ಮೊರೆಯುತ್ತಿರುತ್ತವೆ. ನಮ್ಮ ಸಮಾಜದ ವಿವಿಧ ರಂಗಗಳಲ್ಲಿ ಸ್ತ್ರೀಯರು ಅನೇಕ ಬಗೆಯ ಅಗತ್ಯಗಳಿಂದ ವಂಚಿತರಾಗಿದ್ದಾರೆ. ಹಗಲಿರುಳು ದುಡಿದು ದುಡಿದು ಸವೆದು ಹೋಗುತ್ತಿರುವ ಬಹುತೇಕ ಹೆಂಗಸರ ಜೀವನವಂತೂ ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿದೆ.

ಸ್ತ್ರೀ ಸಮುದಾಯದ ಎಲ್ಲಾ ನೆಲೆಗಳಿಂದಲೂ... ಸಣ್ಣಮ್ಮನ ಕೊರಳೊಳಗಿಂದ ಹೊರ ಬಂದಂತೆ "ನಮಗೂ ನಿಮ್ಮಂಗೆ ಆಸೆ ಇಲ್ವೆ?" ಎಂಬ ಮಾತಿನ ಧ್ವನಿಯು... ಗಂಡಸರ ಕಿವಿಗಳ ಮೇಲೆ ನಿರಂತರವಾಗಿ ಅಪ್ಪಳಿಸುವಂತಾದಾಗ ಮಾತ್ರ... ಮಹಿಳೆಯರ ದೈಹಿಕ ಮತ್ತು ಸಾಮಾಜಿಕ ಅಗತ್ಯಗಳು ಪೂರೈಕೆಯಾಗಬಹುದು.

⌘

ಏನ್ ಹೇಳನವ್ವ



ಅಲ್ಲೊಂದು ಊರು. ಆ ಊರಿನಲ್ಲಿ ಒಂದು ದೇವಾಲಯ. ದೇವಾಲಯದಲ್ಲಿ ಒಬ್ಬ ಪೂಜಾರಿ. ಸುಮಾರು ನಲವತ್ತೈದು ವಯಸ್ಸಿನ ಈ ಪೂಜಾರಿ ಅಂತಿಂಥ ಪೂಜಾರಿಯಲ್ಲ! ದೇವತೆಯ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸುವ ಪೂಜಾರಿ. ವಾರದಲ್ಲಿ ಎರಡು ದಿನ ಅಂದರೆ ಪ್ರತಿ ಮಂಗಳವಾರ ಶುಕ್ರವಾರ ದೇವತೆಯು ಈ ಪೂಜಾರಿಯ ಮೈಮೇಲೆ ಬರುತ್ತಿದ್ದಳಂತೆ! ಆಗ ಅವನು ಆಡಿದ್ದೆಲ್ಲವೂ ದೇವತೆಯ ಮಾತು; ಮಾಡಿದ್ದೆಲ್ಲವೂ ದೇವತೆಯ ಕೆಲಸ.

ಈ ಪೂಜಾರಿಯು "ಅದು ಹೇಗೆ ದೆವ್ವ ಬಿಡಿಸುತ್ತಾನೆ?" ಎಂಬುದನ್ನು ನೋಡಬೇಕೆಂಬ ಕುತೂಹಲದಿಂದ, ಕಳೆದ ಆರು ತಿಂಗಳ ಹಿಂದೆ ಒಂದು ಶುಕ್ರವಾರ ಮಂಡ್ಯದ ಗೆಳೆಯ ಸೋಮವರದ ಅವರ ಜೊತೆಗೂಡಿ ನಾನು ಅಲ್ಲಿಗೆ ಹೋದಾಗ, ದೇವಾಲಯದಲ್ಲಿ ಕಂಡ ದೃಶ್ಯ ಮತ್ತು ನಡೆದ ಘಟನೆಗಳು ಈ ರೀತಿ ಇದ್ದವು.

ಕುಂಕುಮ, ಅರಿಶಿಣ ಮತ್ತು ಬಹುಬಗೆಯ ಹೂವುಗಳಿಂದ ದೇವತೆಯನ್ನು ಅಲಂಕರಿಸಲಾಗಿತ್ತು. ದೇವತೆಯ ವಿಗ್ರಹದ ಮುಂದೆ ದೀಪ ಬೆಳಗುತ್ತಿತ್ತು. ಸಾಂಬ್ರಾಣಿಯ ಧೂಪ ಎಲ್ಲೆಡೆಯಲ್ಲೂ ತುಂಬಿತ್ತು. ದೇವತೆಯ ವಿಗ್ರಹದ ಮುಂದೆ ಬಲಬದಿಯಲ್ಲಿ ಪೂಜಾರಿ ಕುಳಿತಿದ್ದ. ಬಾಯಲ್ಲಿ ಏನೇನೋ ಮಂತ್ರಗಳನ್ನು ಉಚ್ಚರಿಸುತ್ತಿದ್ದ. ಉರಿಯುತ್ತಿದ್ದ ಕೆಂಡದ ಮೇಲೆ ಸಾಂಬ್ರಾಣಿಯನ್ನು ಮತ್ತೆ ಮತ್ತೆ ಹಾಕುತ್ತಿದ್ದ. ಅವನ ಮುಂದೆ ಸುಮಾರು ಮೂವತ್ತು ಮಂದಿ ಹೆಂಗಸರು ಕುಳಿತಿದ್ದರು. ಅವರಲ್ಲಿ ಹತ್ತು ಹದಿನೈದು ಮಂದಿ ಸರಿ ಸುಮಾರು ಹದಿನಾರರಿಂದ ಇಪ್ಪತ್ತೈದರ ವಯೋಮಾನದ ಯುವತಿಯರು. ಉಳಿದವರೆಲ್ಲಾ ಐವತ್ತು ಐವತ್ತೈದರ ವಯಸ್ಸಿನ ಹೆಂಗಸರು. ವಯಸ್ಸಾದ ಈ ಹೆಂಗಸರೆಲ್ಲರೂ ಅಲ್ಲಿದ್ದ ಹರೆಯದ ಹೆಂಗಸರ ತಾಯಂದಿರಾಗಿದ್ದರು. ತಮ್ಮ ಹೆಣ್ಣು ಮಕ್ಕಳನ್ನು ಮೆಟ್ಟಿಕೊಂಡು ಕಾಡುತ್ತಿರುವ ದೆವ್ವವನ್ನು ಬಿಡಿಸಲೆಂದು ಅವರೆಲ್ಲರೂ ಈ ಪೂಜಾರಿಯ ಬಳಿಗೆ ತಮ್ಮ ಮಕ್ಕಳನ್ನು ಕರೆತಂದಿದ್ದರು.

ಇದುವರೆಗೆ ಮಂತ್ರಗಳನ್ನು ಹೇಳುತ್ತಾ, ದೇವತೆಯ ಪೂಜೆಯಲ್ಲಿ ಮಗ್ನನಾಗಿದ್ದ ಪೂಜಾರಿಯು, ಈಗ ಇದ್ದಕ್ಕಿದ್ದಂತೆಯೇ ತುಂಬಾ ಆಕಳಿಸತೊಡಗಿದ. ತನ್ನೆರಡು ತೋಳುಗಳನ್ನು ಅತ್ತ ಇತ್ತ ಆಡಿಸುತ್ತಾ, ಮೈಮುರಿಯತೊಡಗಿದ. ಅಲ್ಲಿದ್ದವರೆಲ್ಲರೂ ಅವನನ್ನೇ ಭಯಭಕ್ತಿಯಿಂದ ನೋಡತೊಡಗಿದರು. ಪೂಜಾರಿಯ ಆಕಳಿಕೆ ಮತ್ತಷ್ಟು ಹೆಚ್ಚಾಯಿತು. ಅವನ ಮೈ ಕೈಗಳ ತೊನೆದಾಟ ಅಧಿಕಗೊಳ್ಳುತ್ತಿದ್ದಂತೆಯೇ, ಒಮ್ಮೆ ಜೋರಾಗಿ ಅಬ್ಬರಿಸಿದ.

ಈಗ ತನ್ನ ಮುಂದೆ ಕುಳಿತಿದ್ದ ಯುವತಿಯರಲ್ಲಿ ಒಬ್ಬಳನ್ನು ತನ್ನ ಹತ್ತಿರಕ್ಕೆ ಎಳೆದುಕೊಂಡು, ಒಂದು ಕೈಯಲ್ಲಿ ಅವಳ ನೆತ್ತಿಯ ತಲೆಗೂದಲನ್ನು, ಮತ್ತೊಂದು ಕೈಯಲ್ಲಿ ಅವಳ ರೆಟ್ಟೆಯನ್ನು ಅತಿ ಬಿಗಿಯಾಗಿ ಹಿಡಿದುಕೊಂಡು–

"ಏ... ನನ್ನ ಯಾರು ಅಂತ ತಿಳ್ಕೊಂಡಿದ್ದೀಯೆ... ಅಂಥಿಂಥ ದೇವತೆಯಲ್ಲ!.... ನಿನ್ನಂಥ ನೂರಾರು ದೆವ್ವಗಳನ್ನು ಹೇಳ ಹೆಸರಿಲ್ದಂಗೆ ಮಾಡಿರುವ ಮಹಾದೇವತೆ.... ನನ್ನ ಮುಂದೆ ನಿನ್ನ ಆಟ ಏನೇನೂ ನಡೆಯೂದಿಲ್ಲ" – ಎಂದು ಗಟ್ಟಿಯಾದ ಧ್ವನಿಯಲ್ಲಿ ಹೇಳುತ್ತಾ, ಆ ಯುವತಿಯ ತಲೆಗೂದಲನ್ನು ಬಿಗಿಯಾಗಿ ನುಲಿದು, ಮತ್ತೆ ಮತ್ತೆ ಹೂಂಕರಿಸುತ್ತಾ–

"ಹೂ.... ಹೇಳು ನೀನ್ಯಾರು?" ಎಂದು ಪ್ರಶ್ನಿಸಿದ.

ಪೂಜಾರಿಯ ಕಪಿಮುಷ್ಟಿಯಲ್ಲಿ ಸಿಲುಕಿದ ಯುವತಿಯು ಅಪಾರವಾದ ನೋವು ಮತ್ತು ಭಯದಿಂದ ತತ್ತರಿಸಿ ಹೋಗಿ, ಅವನನ್ನೇ ದೀನ ದೃಷ್ಟಿಯಿಂದ ನೋಡ

ತೊಡಗಿದಳು. ಯುವತಿಯ ಹಿಂದೆಯೇ ಕುಳಿತಿದ್ದ ಅವಳ ತಾಯಿಯು ಮಗಳ ಬೆನ್ನಿಗೆ ಕೈನಿಂದ ತಿವಿದು–

"ಯಾಕೆ ಸುಮ್ಮನಿದ್ದೀಯೆ.... ಮಾತಾಡೆ.... ಅಟ್ಟೀಲಾದ್ರೆ ಅಷ್ಟೊಂದ್ ಸತಿ ಮೈಮೇಲೆ ಬಂದು ಬಾಯಿಗೆ ಬಂದಂಗೆ ಬಡ್ಕೋತಿದ್ದೆ.... ಇಲ್ಲೇನಾಗಿದ್ದದು ನಿಂಗೆ" ಎಂದು ಹಂಗಿಸಿದಳು. ತಾಯಿಯ ದೃಷ್ಟಿಯಲ್ಲಿ ಈಗ ಆಕೆ ತನ್ನ ಮಗಳಾಗಿರಲಿಲ್ಲ; ದೆವ್ವವಾಗಿದ್ದಳು. ಆದ್ದರಿಂದಲೇ ಮಗಳ ನಡೆನುಡಿಗಳೆಲ್ಲವೂ ಅವಳನ್ನು ಮೆಟ್ಟಿಕೊಂಡಿರುವ ದೆವ್ವದ ನಡೆನುಡಿಗಳೆಂದೇ ನಂಬಿದ್ದಳು. ದೆವ್ವದ ಹಿಡಿತಕ್ಕೆ ಒಳಗಾಗಿ ಸಂಕಟಪಡುತ್ತಿರುವ ಮಗಳ ಸ್ಥಿತಿಗಾಗಿ ಕಣ್ಣೀರು ಕರೆಯುತ್ತಾ, ಪೂಜಾರಿಗೆ ಕೈಮುಗಿದು, ಅವನ ಮೈತುಂಬಿ ಬಂದಿರುವ ದೇವತೆಯನ್ನು ಕುರಿತು–

"ಅವ್ವ... ಮಾತಾಯಿ... ಹೆಂಗಾರ ಮಾಡಿ ನನ್ನ ಮಗಳಿಗೆ ಹಿಡಿದಿರುವ ದೆವ್ವ ಬುಡಿಸವ್ವ.... ನೀ ಏನ್ ಕೇಳ್ತೀಯೋ ಅದನ್ನ ಮಾಡಿಸಿಕೊಡ್ತೀನವ್ವ.... ನನ್ನ ಜೀವ ಇರುವ ತನಕ ನಿನ್ನ ಸೇವೆ ಮಾಡ್ತೀನಿ" ಎಂದು ಹರಕೆ ಕಟ್ಟಿಕೊಂಡಳು.

ಪೂಜಾರಿಯು ಈಗ ಮತ್ತಷ್ಟು ಆವೇಶದಿಂದ ಗರ್ಜಿಸುತ್ತಾ, ಆ ಯುವತಿಯ ಮುಡಿಯನ್ನು ಜಗ್ಗತೊಡಗಿದ. ಅವಳು ಅತಿಯಾದ ನೋವಿನಿಂದ ನರಳ ತೊಡಗುತ್ತಿದ್ದಂತೆಯೇ ಅವಳ ಮುಂದೆ ಸಿಪ್ಪೆ ಸುಲಿದ ಒಂದು ತೆಂಗಿನಕಾಯನ್ನು ಇಟ್ಟು–

"ಏ.... ಈಗ ನೀನು ಕಾಯಿನ ಮೇಲೆ ಕುಕ್ಕುರುಗಾಲಿನಲ್ಲಿ ಕುಂತ್ಕೊ.... ನೀನು ಹೆಣ್ಣು ಗಾಳಿಯಾಗಿದ್ದರೆ ಎಡಬದಿಯಿಂದ ತಿರುಗು.... ಗಂಡು ಗಾಳಿಯಾಗಿದ್ದರೆ ಬಲಬದಿಯಿಂದ ತಿರುಗು" ಎಂದು ಸೂಚನೆ ನೀಡಿ, ಅವಳನ್ನು ತೆಂಗಿನ ಕಾಯಿಯ ಮೇಲೆ ಎರಡು ಪಾದಗಳನ್ನಿಟ್ಟು ಕುಳಿತುಕೊಳ್ಳುವಂತೆ ಪೀಡಿಸತೊಡಗಿದ. ಚಿಕ್ಕ ಕಾಯಿಯೊಂದರ ಮೇಲೆ ಪಾದಗಳನ್ನಿಟ್ಟು ಕುಳಿತುಕೊಳ್ಳಲಾಗದೆ, ಆಕೆ ಜಾರಿ ಜಾರಿ ಬೀಳುತ್ತಾ ಒದ್ದಾಡುತ್ತಿರುವಾಗ, ರೆಟ್ಟೆಯನ್ನು ಹಿಡಿದಿದ್ದ ಕೈಯನ್ನು ಸಡಿಲಿಸಿ, ಈಗ ಆಕೆಯನ್ನು ತನ್ನ ಎದೆಗಾನಿಸಿ ಬಿಗಿಯಾಗಿ ತಬ್ಬಿಕೊಂಡು, ಅವಳನ್ನು ಕಾಯಿಯ ಮೇಲೆ ಕುಳಿತುಕೊಳ್ಳುವಂತೆ ಮಾಡಿದ. ಪೂಜಾರಿಯ ಬಲವಾದ ಅಪ್ಪುಗೆಯಲ್ಲಿ ಆಕೆಯು ನಲುಗಿ ಹೋಗುತ್ತಿದ್ದಳು. ಸುತ್ತಮುತ್ತಲಿದ್ದ ಹೆಂಗಸರೆಲ್ಲರೂ ಬಹಳ ಭಯಭಕ್ತಿಯಿಂದ ದೇವತೆಯ ಕಾರ್ಯವನ್ನು ನೋಡತೊಡಗಿದರು.

ಪೂಜಾರಿಯ ಹಿಡಿತ ಮತ್ತಷ್ಟು ಹೆಚ್ಚಾಯಿತು. ಆಕೆಯನ್ನು ಕುರಿತು–

"ಏ.... ಹೇಳು .... ನೀನ್ಯಾರು? .... ಯಾಕೆ ಬಂದೆ? .... ಎಲ್ಲಿಂದ ಬಂದೆ? .... ಬಾಯ್ಬುಡು" ಎಂದು ಅಬ್ಬರಿಸತೊಡಗಿದ. ಪೂಜಾರಿಯ ಪ್ರಶ್ನೆಗಳಿಂದ ಕಂಗಾಲಾದ

ಯುವತಿಯು ಏನೊಂದನ್ನು ಮಾತನಾಡದೆ, ಹಿಂತಿರುಗಿ ತನ್ನ ತಾಯಿಯನ್ನು ನೋಡುತ್ತಾ "ಅವ್ವ... ಅವ್ವ.... ಅವ್ವ" ಎಂದು ನೋವಿನ ಧ್ವನಿಯಿಂದ ಮೊರೆಯಿಟ್ಟಳು. ತಕ್ಷಣವೇ ಅವರ ಅವ್ವ ಮತ್ತಷ್ಟು ಕೆರಳಿ–

"ಚಿನಾಲ್ ಮುಂಡೆ... ಇತ್ತಗೇನ್ ನೋಡಿಯಮ್ಮಿ... ಅತ್ತಗೆ ತಿರಿಕೊಂಡು ಮಾತಾಡಮ್ಮಿ... ನನ್ನ ಮಗಳ ಮೇಲೆ ಯಾಕೆ ಬಂದಿದ್ದೀಯೇ ಕಲಕೆತ್ತ ಮುಂಡೆ.... ಅಟ್ಟೀಲಾದ್ರೆ ದಿನಕ್ಕೆ ನಾಕು ದಪ ಅಯ್ದು ದಪ ಬಂದು ಬಂದು ರಂಪ ಮಾಡ್ತಿದ್ದೆ.... ಇಲ್ಲ್ಯಾಕಮ್ಮಿ ಬಾಯಿ ಬುಡಲ್ಲೆ... ಏನಾರ ಉಣ್ಣು ತಿನ್ನು ಆಸೆಯಿದ್ರೆ ಹೇಳು.... ಅದನ್ನೆಲ್ಲಾ ಪೂರೈಸ್ತೀನಿ" ಎಂದು ಹೇಳುತ್ತಾ, ಪೂಜಾರಿಗೆ ಮತ್ತೊಮ್ಮೆ ಕೈಮುಗಿದು "ಮಾತಾಯಿ, ನನ್ನವ್ವ.... ಈ ಅನಿಷ್ಟದ ದೆವ್ವಕ್ಕೆ ಏನ್ ಶಿಕ್ಷೆ ಕೊಡ್ಬೇಕೊ ಅದನ್ನೆಲ್ಲಾ ಕೊಟ್ಟು, ನನ್ನ ಮಗಳ ಉಳಿಸ್ಕೊಡವ್ವ" ಎಂದು ಬೇಡಿಕೊಂಡಳು.

ಪೂಜಾರಿಯು ಮತ್ತಷ್ಟು ಹುಮ್ಮಸ್ಸಿನಿಂದ ತನ್ನ ಕಾರ್ಯವನ್ನು ಮುಂದುವರಿಸಿದ. ಯುವತಿಯನ್ನು ತೆಂಗಿನಕಾಯಿಯ ಮೇಲೆ ಕುಳಿತಿದ್ದಂತೆಯೇ ನಾನಾ ಬಗೆಗಳಲ್ಲಿ ಪೀಡಿಸತೊಡಗಿದ. ಆಕೆಯು ಬಹಳ ಕಷ್ಟದಿಂದ ಒಂದು ಸಾರಿ ಎಡಮಗ್ಗಲಾಗಿ ತಿರುಗಿದಳು. ಮತ್ತೆ ಅವಳನ್ನು ಕುರಿತು–

"ಏ.... ನಿನ್ನ ಬಾಯ್ ಬಿಡಿಸುವುದು ಹೆಂಗೆ ಅಂತ ನಂಗೆ ಗೊತ್ತು" ಎಂದು ಅಬ್ಬರಿಸಿ, ಮರುಕ್ಷಣದಲ್ಲೇ ಅವಳ ಮುಡಿಯನ್ನು ಎಳೆದು, ಮಕ್ಕಳಿಗೆ ಹಾಲುಣಿಸುವ ಅವಳ ಎದೆಗಳ ಮೇಲೆ ಬಲವಾಗಿ ಹೊಡೆದ. ಪೂಜಾರಿಯ ಹೊಡೆತದಿಂದ ಆಕೆ ನಡುಗತೊಡಗಿದಳು. ಸುತ್ತಮುತ್ತಲಿದ್ದ ಹೆಂಗಸರೆಲ್ಲರೂ ದೇವತೆಯ ಮುಂದೆ ದೆವ್ವ ನಡುಗುತ್ತಿರುವುದನ್ನು ಕಂಡು ಮತ್ತಷ್ಟು ಭಕ್ತಿಭಾವದಿಂದ ಕೈಮುಗಿದರು. ಭಕ್ತರ ಪ್ರತಿಕ್ರಿಯೆಯಿಂದ ಉತ್ತೇಜಿತನಾದ ಪೂಜಾರಿಯು ಯುವತಿಯ ಎದೆಗಳ ಮೇಲೆ ಮತ್ತೆ ಮತ್ತೆ ಬಲವಾಗಿ ಹೊಡೆಯುತ್ತಾ–

"ಏ.... ನಾನು ನಿನ್ನ ಬಿಡೋದಿಲ್ಲ.... ನಿನ್ನ ಜೊತೇಲಿ ಮಲಗ್ತೀನಿ... ಏನಂತೀಯಾ ಇದಕ್ಕೆ?" ಎಂದಾಗ, ಪೂಜಾರಿಯ ಮಾತುಗಳಿಗೆ ಉತ್ತರಿಸದೆ, ಮೂಕಳಾದ ಯುವತಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯತೊಡಗಿತು. ಯುವತಿಯ ಪರವಾಗಿ ಅವಳ ಅವ್ವನೇ ದೇವತೆಗೆ ಉತ್ತರವನ್ನು ನೀಡುತ್ತಾ–

"ಮಾತಾಯಿ ನಿಂಗೆ ಹೆಂಗೆ ಬೇಕೋ ಹಂಗೆ ಮಾಡವ್ವ.... ಒಟ್ಟಿನಲ್ಲಿ ನಮ್ಮ ಮಗೀನ ಜೀವಂತವಾಗಿ ಉಳಿಸ್ಕೊಡವ್ವ" ಎಂದು ಮತ್ತೆ ಬೇಡಿಕೊಂಡಳು. ಪೂಜಾರಿಯು ಯುವತಿಯನ್ನು ಮತ್ತೊಮ್ಮೆ ಬರಸೆಳೆದು ತಬ್ಬಿಹಿಡಿದು–

"ಏ.... ಬಾಯ್ಬುಡು.... ನಾನು ನಿನ್ ತಕೆ ಬಂದಾಗ ಬಲಚರಿಯಿಂದ ಸೆರಗು ಹಾಕ್ತೀಯೋ.... ಎಡಚರಿಯಿಂದ ಸೆರಗು ಹಾಕ್ತೀಯೋ.... ಹೇಳು" ಎಂದು ಆಕೆಯನ್ನು ಒತ್ತಾಯಪಡಿಸುತ್ತ, ಆಕೆಯ ಎದೆಗಳ ಮೇಲೆ ರಪರಪನೆ ಬಡಿದು, ಕೆಲವು ಕ್ಷಣಗಳ ಕಾಲ ಕೈಯನ್ನು ಎದೆಗಳ ಮೇಲಿಟ್ಟು ಹಿಂಸಿಸತೊಡಗಿದ.

ತೆಂಗಿನಕಾಯಿಯ ಮೇಲೆ ಕುಳಿತುಕೊಳ್ಳಲಾಗದೆ ಒದ್ದಾಡುತ್ತಾ, ಜಾರಿ ಜಾರಿ ಬೀಳುತ್ತಾ, ಪಡುತ್ತಿರುವ ಯಾತನೆಯ ಜೊತೆಗೆ ಪೂಜಾರಿಯು ತನ್ನ ಮೃದುವಾದ ಎದೆಗಳ ಮೇಲೆ ಬಡಿದು ನೀಡುತ್ತಿರುವ ಹಿಂಸೆಯನ್ನು ತಾಳಲಾರದೆ ಯುವತಿಯು ತನ್ನ ಹೆತ್ತವ್ವನ ಕಡೆ ಮತ್ತೆ ನೋಡತೊಡಗಿದಳು. ಪೂಜಾರಿಯು ಹಿಡಿದ ಪಟ್ಟನ್ನು ಬಿಡದಂತೆ "ಹೇಳು.... ಯಾವ ಕಡೆಯಿಂದ ಸೆರಗು ಹಾಕ್ತೀಯೆ.... ಹೇಳು" ಎಂದು ಪೀಡಿಸಿದಾಗ, ಯುವತಿಯು ಕಂಬನಿ ತುಂಬಿದ ನೋಟದಿಂದ ತಾಯಿಯತ್ತ ತಿರುಗಿ....

"ಏನ್ ಹೇಳನವ್ವ?" ಎಂದು ಅಸಹಾಯಕಳಾಗಿ ಕೇಳಿದಳು. ಮಗಳ ಪ್ರಶ್ನೆಗೆ ಉತ್ತರ ಕೊಡಲಾಗದೆ ತಾಯಿಯು ಅಳತೊಡಗಿದಳು.

ಪೂಜಾರಿಯು ಯುವತಿಯ ಅವ್ವನನ್ನು ಕುರಿತು–

"ನೀನೇನು ಅಳ್ಬೇಡ.... ಧೈರ್ಯವಾಗಿರು. ನಂಗೆ ಗೊತ್ತದೆ ಹೆಂಗೆ ಇದರ ಬಾಯ್ ಬಿಡಿಸ್ಬೇಕು ಅಂತ.... ಇನ್ನೂ ಐದು ವಾರ ಹಿಂಗೆ ಕರ್ಕೊಂಡು ಬರ್ತೀರು. ನನ್ ಕಣ್ ತಪ್ಪಿಸಿ ಯಾವ ಡಾಕ್ಟರು ತಕೂ ಕರ್ಕೊಂಡು ಹೋಗಿ ತೋರಿಸ್ಬೇಡ, ಆಸ್ಪತ್ರೆ ಮೆಟ್ಟಿಲ ಹತ್ತುದ್ರೆ ನಿನ್ನ ಮಗಳೇ ಕೈಗೆ ಸಿಗೂದಿಲ್ಲ" ಎಂದು ಎಚ್ಚರಿಸಿದ. ಆಗ ಅವರವ್ವ ದೇವತೆಗೆ ಅಡ್ಡಬಿದ್ದು–

"ಇಲ್ಲ ಕಣವ್ವ.... ನನ್ ಕಣ್ಣಾಣೆಗೂ ಎಲ್ಲೂಗ್ಗಿ ಕರ್ಕೊಂಡು ಹೋಗೂದಿಲ್ಲ. ಮೆಟ್ಕೊಂಡು ಇರೂ ದೆವ್ವ ಬುಟ್ಹೋಗು ತನಕ ನಿನ್ನತಕೆ ಕರ್ಕೊಂಡು ಬರ್ತೀನಿ" ಎಂದು ಉತ್ತರಿಸಿದಳು.

ಪೂಜಾರಿಯು ಯುವತಿಯ ಮುಡಿಯನ್ನು ನುಲಿದು, ಅವಳನ್ನು ತನ್ನ ಎಡ ಮಗ್ಗುಲಿಗೆ ಎಳೆದು ಕುಳ್ಳಿರಿಸಿಕೊಂಡು, ಗೋಡೆಗೆ ಆಕೆಯನ್ನು ಒರಗಿಸಿ, ತಾನು ಬಿಗಿಯಾಗಿ ಒತ್ತರಿಸಿಕೊಂಡು ಕುಳಿತುಕೊಂಡ. ಈಗ ತನ್ನ ಮುಂದೆ ಮತ್ತೊಬ್ಬ ಯುವತಿಯನ್ನು ಕರೆತರುವಂತೆ ಇನ್ನೊಬ್ಬ ತಾಯಿಗೆ ಆಜ್ಞಾಪಿಸಿದ.

ನಾನು ಮತ್ತು ನನ್ನ ಗೆಳೆಯ ದೇವತೆಯ ಹೆಸರಿನಲ್ಲಿ ಹರೆಯದ ಹೆಣ್ಣು ಮಕ್ಕಳಿಗೆ ಕೊಡುತ್ತಿದ್ದ ಹಿಂಸೆಯ ಆಚರಣೆಯನ್ನು ನೋಡಲಾಗದೆ ದೇವಾಲಯದಿಂದ ಹೊರಬಂದು ಕುಳಿತುಕೊಂಡೆವು. ಕಾಮುಕ ಹಾಗೂ ವಂಚಕನಾಗಿರುವ ಪೂಜಾರಿಯಿಂದ ಹಳ್ಳಿಯ

ಮುಗ್ಧ ಹೆಣ್ಣು ಮಕ್ಕಳು ಅನುಭವಿಸುತ್ತಿರುವ ದೈಹಿಕ ಮತ್ತು ಮಾನಸಿಕ ಯಾತನೆಯ ಬಗ್ಗೆ ಚಿಂತಿಸುತ್ತಾ, ಇದನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆಂಬ ದಿಕ್ಕಿನಲ್ಲಿ ಯೋಚಿಸಲಾರಂಭಿಸಿದೆವು. ನಮ್ಮ ಉದ್ದೇಶ ದೇವತೆಯ ಪೂಜೆಯನ್ನೇ ಸಂಪೂರ್ಣವಾಗಿ ನಿಲ್ಲಿಸುವುದಾಗಿರಲಿಲ್ಲ. ಏಕೆಂದರೆ ದೇವರ ವಿರುದ್ಧ ಮಾಡುವ ಯಾವುದೇ ಕಾರ್ಯಗಳಿಗೆ ಅಥವಾ ಆಡುವ ಯಾವುದೇ ಮಾತುಗಳಿಗೆ ಜನಸಮುದಾಯದಿಂದ ಬಹಳ ವಿರೋಧ ಕಂಡುಬರುತ್ತದೆ. ಆದ್ದರಿಂದ ದೇವತೆಯನ್ನು ಹೊರತು ಪಡಿಸಿ, ದೇವತೆಯ ಹೆಸರಿನಲ್ಲಿ ಪೂಜಾರಿಯು ಮಾಡುತ್ತಿರುವ ಕಾಮ ವಿಕಾರದ ಕೃತ್ಯವನ್ನು ತಡೆಗಟ್ಟಿ, ಹಿಂಸೆ ಕೊಡುತ್ತಿರುವುದನ್ನು ನಿಲ್ಲುವಂತೆ ಮಾಡಬೇಕು. ಇದನ್ನು ನಮ್ಮ ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡೆವು.

ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡೆವು. ಅಂದಿನಿಂದಲೇ ಆ ದೇವತೆಯ ಭಕ್ತರಂತೆ ನಟಿಸುತ್ತಾ, ಅಲ್ಲಿಗೆ ಬರುತ್ತಿದ್ದ ಭಕ್ತರಿಂದ ಮಾಹಿತಿಗಳನ್ನು ಸಂಗ್ರಹಿಸತೊಡಗಿದೆವು. ನಾಲ್ಕಾರು ವಾರ ದೇವತೆಯ ಪೂಜೆಯನ್ನು ಚಾಚೂ ತಪ್ಪದೆ ಗಮನಿಸಿದೆವು. ಅಲ್ಲಿಗೆ ಬರುತ್ತಿದ್ದ ಭಕ್ತರಲ್ಲಿ ಗಂಡಸರ ಸಂಖ್ಯೆ ಬಹಳ ಕಡಿಮೆಯಿತ್ತು. ವಯಸ್ಸಾದ ಹೆಂಗಸರನ್ನು ಮತ್ತು ದೆವ್ವ ಮೆಟ್ಟಿದವರೆಂದು ಕರೆತರುತ್ತಿದ್ದ ಯುವತಿಯರನ್ನು ಮಾತನಾಡಿಸುತ್ತಾ ಅವರ ಕಷ್ಟಸುಖಗಳನ್ನು ಕೇಳಿದಾಗ, ನಮಗೆ ತಿಳಿದು ಬಂದ ಸಂಗತಿಗಳು ಈ ರೀತಿ ಇದ್ದವು.

ಈ ದೇವಾಲಯಕ್ಕೆ ತಮ್ಮ ಹೆಣ್ಣುಮಕ್ಕಳನ್ನು ಕರೆತರುತ್ತಿದ್ದ ತಾಯಂದಿರಲ್ಲಿ ಬಹುತೇಕ ಮಂದಿ ಸಾಕಷ್ಟು ಹಣಕಾಸಿನ ಅನುಕೂಲವಿಲ್ಲದವರು ಮತ್ತು ಅವಿದ್ಯಾವಂತರು, ದೇವರು ದಿಂಡರಲ್ಲಿ ಅಪಾರವಾದ ನಂಬಿಕೆ ಮತ್ತು ಭಕ್ತಿಯುಳ್ಳವರು. ಇಂತಹ ಮನೋಧರ್ಮದ ತಾಯಂದಿರು ಅಲ್ಲಿಗೆ ಕರೆದುಕೊಂಡು ಬರುತ್ತಿದ್ದ ಹೆಣ್ಣು ಮಕ್ಕಳಲ್ಲಿ ಹೆಚ್ಚಿನ ಮಂದಿ ಚೊಚ್ಚಲ ಬಾಣಂತಿಯರು. ಹೆರಿಗೆಯಾದ ನಂತರದ ಒಂದೆರಡು ತಿಂಗಳಲ್ಲಿ ತೀವ್ರವಾದ ಅನಾರೋಗ್ಯದಿಂದ ಬಳಲಿ ಬೆಂಡಾಗಿದ್ದವರು. ಇವರ ಹೆರಿಗೆಯು ವೈದ್ಯಕೀಯ ಸೌಲಭ್ಯಗಳಿರುವ ಆಸ್ಪತ್ರೆಗಳಲ್ಲಿ ಆಗಿರಲಿಲ್ಲ. ಹಳ್ಳಿಗಾಡಿನಲ್ಲಿರುವ ಹಿರಿಯ ಹೆಂಗಸರೇ ಹೆರಿಗೆಯ ಸಂದರ್ಭದಲ್ಲಿ ದಾದಿಯರಾಗಿ ದುಡಿದಿದ್ದರು. ಆಗ ಮಗುವಿನ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿದಾಗ ಉಂಟಾದ ನಂಜಿನಿಂದಲೋ ಅಥವಾ ಪೌಷ್ಟಿಕಾಂಶಗಳ ಸೇವನೆಯ ಕೊರತೆಯಿಂದಲೋ ಕೆಲವರು ಮಗುವನ್ನು ಕಳೆದುಕೊಂಡು ದುಃಖಿತರಾಗಿದ್ದರು. ಮತ್ತೆ ಕೆಲವರು ಹದಿನೆಂಟು ವರ್ಷ ಆಗುವ ಮೊದಲೇ ಮದುವೆಯಾಗಿ, ಗರ್ಭಿಣಿಯರಾಗಿ, ಮಗುವನ್ನು ಹಡೆದು ನಿತ್ರಾಣಗೊಂಡಿದ್ದರು. ಇನ್ನೂ ಕೆಲವರು ಕುಡುಕ ಗಂಡನ ಕಿರುಕುಳಕ್ಕೆ ಬಲಿಯಾಗಿ, ಮತ್ತೆ ಅಂತಹ ದುಷ್ಟದ

ಗಂಡನ ಜೊತೆ ಸಂಸಾರ ಮಾಡಲು ಹೇಸುತ್ತಿದ್ದರು. ಕೆಲವರು ಮದುವೆಯ ಸಂದರ್ಭದಲ್ಲಿ ನಡೆದಿದ್ದ ಮಾತುಕತೆಯಂತೆ ನಿಗದಿಪಡಿಸಿದ್ದ ವರದಕ್ಷಿಣೆಯ ಮೊತ್ತ ಸಂಪೂರ್ಣವಾಗಿ ಇನ್ನೂ ಸಂದಾಯವಾಗದೇ ಇದ್ದುದರಿಂದ, ಅತ್ತೆಯ ಮನೆಯಲ್ಲಿ ಅನುಭವಿಸಿದ್ದ ಅಪಾರವಾದ ಕಿರುಕುಳವನ್ನು ನೆನಪಿಸಿಕೊಂಡಂತೆಲ್ಲಾ ಬೆಚ್ಚಿಬೀಳುತ್ತಿದ್ದರು. ಅಂತಹ ನರಕಕ್ಕೆ ಮತ್ತೆ ಹಿಂತಿರುಗಿ ಹೋಗಲು ಹಿಂಜರಿಯುತ್ತಿದ್ದರು.

ಈ ರೀತಿ ನಾನಾ ಬಗೆಯ ಕೌಟುಂಬಿಕ, ಸಾಮಾಜಿಕ ಮತ್ತು ಹಣಕಾಸಿನ ಕಾರಣಗಳಿಂದಾಗಿ ಒಳಗೊಳಗೆ ಬೇಯುತ್ತಿದ್ದ ಯುವತಿಯರು ಕೆಲವೊಮ್ಮೆ ಬಾಯಿಗೆ ಬಂದಂತೆ ಬಡಬಡಿಸತೊಡಗಿದ್ದರು. ತಮ್ಮಲ್ಲೇ ಏನೇನೋ ಮಾತನಾಡಿಕೊಳ್ಳುವಷ್ಟು ಮಾನಸಿಕ ದೌರ್ಬಲ್ಯಕ್ಕೆ ಒಳಗಾಗಿದ್ದರು. ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಂಡು ಮಂಕಾಗಿದ್ದರು. ತಮ್ಮ ಹೆಣ್ಣು ಮಕ್ಕಳ ನಡೆನುಡಿಯಲ್ಲಿ ಉಂಟಾದ ಬದಲಾವಣೆಗಳಿಗೆ ಸರಿಯಾದ ಕಾರಣಗಳನ್ನು ಗುರುತಿಸಲಾರದ ಅವಿದ್ಯಾವಂತರಾದ ತಾಯಂದಿರು, ಇದನ್ನೇ 'ದೆವ್ವದ ಕಾಟ' ಇಲ್ಲವೇ 'ಗಾಳಿ ಮೆಟ್ಕೊಂಡಿದೆ' ಎಂದು ಭ್ರಮಿಸಿ, ಈ ದೇವತೆಯ ಬಳಿಗೆ ಕರೆತರುತ್ತಿದ್ದರು. ತಮ್ಮ ಮಕ್ಕಳನ್ನು ಮೆಟ್ಟಿಕೊಂಡಿರುವ ದೆವ್ವವು ದೇವತೆಯ ಶಕ್ತಿ ಮತ್ತು ಮಹಿಮೆಯ ಮುಂದೆ ನಿಲ್ಲಲಾಗದೆ ಓಡಿಹೋಗುವುದೆಂಬ ಮೌಢ್ಯ ಈ ತಾಯಂದಿರಲ್ಲಿತ್ತು.

ತನ್ನ ಬಳಿ ಕರೆತರುವ ಹೆಣ್ಣುಮಕ್ಕಳನ್ನು ಯಾವುದೇ ವೈದ್ಯರ ಬಳಿಗಾಗಲಿ ಅಥವಾ ಆಸ್ಪತ್ರೆಗಾಗಲಿ ಕರೆದುಕೊಂಡು ಹೋಗಲೇಬಾರದೆಂಬ ಪೂಜಾರಿಯ ಮಾತುಗಳನ್ನು ಈ ಹೆಂಗಸರು ದೇವತೆಯ ಆಜ್ಞೆಯೆಂದೇ ನಂಬಿದ್ದರು. ಇಂತಹ ಮೌಢ್ಯದಿಂದ ಈ ಹಿಂದೆ ಇಲ್ಲಿಗೆ ಬರುತ್ತಿದ್ದ ಹೆಣ್ಣು ಮಕ್ಕಳಲ್ಲಿ ಒಂದಿಬ್ಬರ ರೋಗ ಹೆಚ್ಚಾಗಿ ಸಾವನ್ನಪ್ಪಿದ ಸುದ್ದಿಯು ನಮಗೆ ತಿಳಿದು ಬಂದಿತು. ಮೌಢ್ಯದಿಂದ ಕೂಡಿರುವ ಹಳ್ಳಿಯ ಅವಿದ್ಯಾವಂತ ಹೆಂಗಸರು ತಮ್ಮ ಮಕ್ಕಳನ್ನು ಕಳೆದುಕೊಂಡಾಗ ಗೋಳಾಡುತ್ತಾ–

"ಅವಳಿಗೆ ಬದುಕಿ ಉಳಿಯುವ ಅದೃಷ್ಟ ಇರಲಿಲ್ಲ. ಅವಳ ಹಣೆಬರಹವೇ ಅಷ್ಟು, ಅದಕ್ಕೆ ದೆವ್ವ ಮುರ್ಕೊಂತು" ಎಂದು ಅತ್ತು ಸುಮ್ಮನಾಗುತ್ತಿದ್ದರು. ಹಳ್ಳಿಯ ಹೆಂಗಸರ ಈ ಬಗೆಯ ಮೌಢ್ಯವನ್ನು ಪೂಜಾರಿಯು ಚೆನ್ನಾಗಿ ದುರುಪಯೋಗ ಮಾಡಿಕೊಳ್ಳುತ್ತಿದ್ದ. ತನ್ನ ಮೈಮೇಲೆ ದೇವತೆಯು ಮೈತುಂಬಿ ಬರುವ ನಾಟಕವನ್ನಾಡುತ್ತಿದ್ದ. ಹಣ ಸಂಪಾದನೆಯ ಜೊತೆಗೆ, ಯುವತಿಯರ ದೇಹದ ಮೇಲೆಲ್ಲಾ ಕೈಯಾಡಿಸುತ್ತಾ, ದೇವತೆಯ ಹೆಸರಿನಲ್ಲಿ ತನ್ನ ಕಾಮದಾಹವನ್ನು ಹಿಂಗಿಸಿಕೊಳ್ಳುತ್ತಿದ್ದ.

ಇಷ್ಟೆಲ್ಲಾ ಮಾಹಿತಿಗಳನ್ನು ಸಂಗ್ರಹಿಸಿದ ನಂತರ, ನಮ್ಮ ಮುಂದೆ ಎರಡು ಪ್ರಶ್ನೆಗಳು ಎದುರಾದವು. ಅಕ್ಷರಜ್ಞಾನವಿಲ್ಲದೆ, ಅಜ್ಞಾನದಿಂದ ಕೂಡಿರುವ ಹಳ್ಳಿಯ ಹೆಂಗಸರ

ಮನದಲ್ಲಿ ತುಂಬಿರುವ ಮೌಢ್ಯವನ್ನು ನಿವಾರಿಸುವಂತೆ ತಿಳುವಳಿಕೆಯನ್ನು ನೀಡಿ, ಅವರು ಇಂತಹ ದುಷ್ಟ ಪೂಜಾರಿಯ ಬಳಿಗೆ ತಮ್ಮ ಹೆಣ್ಣುಮಕ್ಕಳನ್ನು ಕರೆತರದಂತೆ ಬುದ್ಧಿಯನ್ನು ಹೇಳುವುದೋ ಅಥವಾ ಪೂಜಾರಿಯು ಮಾಡುತ್ತಿರುವ ವಿಕೃತ ಕಾಮ ಮತ್ತು ಹಿಂಸೆಯ ಪೂಜೆಯ ಆಚರಣೆಯನ್ನು ತಡೆಗಟ್ಟುವುದೋ? .... ತಲೆತಲಾಂತರದಿಂದ ನಮ್ಮ ಜನಗಳ ಮನದಲ್ಲಿ ನೆಲೆಸಿರುವ ಮೌಢ್ಯವನ್ನು ನಿವಾರಿಸುವುದು ಬಹಳ ಕಷ್ಟದ ಮತ್ತು ಮಂದಗತಿಯ ಕೆಲಸ. ಆದ್ದರಿಂದ ತುರ್ತಾಗಿ ನಾವು ಮೊದಲು ಪೂಜಾರಿಯು ಹೆಣ್ಣುಮಕ್ಕಳಿಗೆ ಕೊಡುತ್ತಿರುವ ಹಿಂಸೆಯನ್ನು ತಡೆಗಟ್ಟಲು ನಿರ್ಧರಿಸಿದೆವು.

ಸುಮಾರು ಐದು ಸಾವಿರದಷ್ಟು ಜನಸಂಖ್ಯೆಯನ್ನು ಹೊಂದಿ ಪ್ರೌಢಶಾಲೆ, ಜೂನಿಯರ್ ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರ, ಪೋಲಿಸ್ ಠಾಣೆಯನ್ನು ಹೊಂದಿರುವ ಆ ಊರಿನಲ್ಲಿ ಸಾಕಷ್ಟು ಮಂದಿ ವಿದ್ಯಾವಂತರು, ಸರ್ಕಾರಿ ನೌಕರರು ಮತ್ತು ರಾಜಕಾರಣಿಗಳಿದ್ದರು. ಸಾಮಾಜಿಕ ಸುಧಾರಣೆಗಾಗಿ ದುಡಿಯುವ ಸಂಘ ಸಂಸ್ಥೆಗಳಿದ್ದವು. ಆದರೆ ಯಾರೊಬ್ಬರಾಗಲಿ ಅಥವಾ ಯಾವುದೇ ಯುವಕ ಯುವತಿಯರ ಸಂಘಗಳಾಗಲಿ ಹಲವಾರು ವರ್ಷಗಳಿಂದ ತಮ್ಮ ಊರಿನ ದೇವಾಲಯವೊಂದರಲ್ಲಿ ನಡೆಯುತ್ತಿದ್ದ ಇಂತಹ ಕೆಟ್ಟ ಆಚರಣೆಯ ವಿರುದ್ಧ ಒಂದು ಸಣ್ಣ ಧ್ವನಿಯನ್ನೂ ಎತ್ತಿರಲಿಲ್ಲ.

ಏಕೋ.... ಏನೋ... ಇಲ್ಲಿಯವರೆಗೆ ಧೈರ್ಯ ಮತ್ತು ಉತ್ಸಾಹದಿಂದ ಹೆಜ್ಜೆಗಳನ್ನು ಇಟ್ಟಿದ್ದ ನನ್ನಲ್ಲಿ, ಈಗ ಒಂದು ಬಗೆಯ ಹಿಂಜರಿಕೆ ಶುರುವಾಯಿತು. ಈ ಊರಿನವರೇ ಇಂತಹ ಅನ್ಯಾಯವನ್ನು, ಅತ್ಯಾಚಾರವನ್ನು ಮತ್ತು ಹಿಂಸೆಯನ್ನು ನೋಡಿಕೊಂಡು ಸುಮ್ಮನಿರುವಾಗ, ಹೊರ ಊರಿನಿಂದ ಬಂದು ಹೋಗುವ ನಾವಿಬ್ಬರೇ ಹೇಗೆ ತಾನೆ ಈ ಮೌಢ್ಯದ ಹಾಗೂ ಹಿಂಸೆಯ ಆಚರಣೆಯನ್ನು ನಿಲ್ಲಿಸುವುದಕ್ಕೆ ಸಾಧ್ಯ?.... ನಿಲ್ಲಿಸಲು ಪ್ರಯತ್ನಿಸಿದಾಗ ನಮ್ಮ ಮೇಲೆ ಪೂಜಾರಿಯ ಕಡೆಯವರಿಂದ ಹಲ್ಲೆಯಾದರೆ ಏನು ಗತಿ?.... ಇಂತಹ ಭೀತಿಭಾವಕ್ಕೆ ಒಳಗಾದ ನಾನು, ಇಂತಹ ಸಾಮಾಜಿಕ ಅನಿಷ್ಟದ ವಿರುದ್ಧ ಹೋರಾಡಲು ಹಿಂಜರಿದು, "ಊರಿಗಿಲ್ಲದ ಉಸಾಬರಿ ನನಗ್ಯಾಕೆ" ಎಂದು ನನ್ನ ದುಗುಡವನ್ನು ತಿಳಿಸಿ, ಅಂದಿನಿಂದ ಅತ್ತ ಹೋಗುವುದನ್ನೇ ನಿಲ್ಲಿಸಿದೆ.

ಆದರೆ ನನ್ನ ಗೆಳೆಯ ಸೋಮವರದ ಇನ್ನೂ ಹರೆಯದವರು. ಅವರು ಈ ದುಷ್ಟ ಆಚರಣೆಯ ವಿರುದ್ಧ ಹೋರಾಡಿ, ಪೂಜಾರಿಯ ವಂಚನೆ ಮತ್ತು ಕಾಮವಿಕಾರತೆಯನ್ನು ಬಯಲಿಗೆಳೆದು, ಹಳ್ಳಿಯ ಹೆಣ್ಣುಮಕ್ಕಳು ಅನುಭವಿಸುತ್ತಿದ್ದ ನರಕ ಯಾತನೆಯನ್ನು ನಿವಾರಿಸುವ ದೃಢವಾದ ನಿರ್ಧಾರವನ್ನು ಮಾಡಿಕೊಂಡರು.

ಮುಂದಿನ ವಾರಗಳಲ್ಲಿಯೂ ತಪ್ಪದೇ ದೇವಾಲಯಕ್ಕೆ ಭೇಟಿ ನೀಡತೊಡಗಿದರು. ಪೂಜಾರಿಯ ಕೃಪೆಗೆ ಪಾತ್ರನಾಗುವಂತೆ ಬಹಳ ಭಯಭಕ್ತಿಯಿಂದ ಅವನೊಡನೆ ನಡೆದುಕೊಂಡರು. ಪೂಜಾರಿಗೆ ಇವರ ಬಗ್ಗೆ ಸಂಪೂರ್ಣವಾಗಿ ವಿಶ್ವಾಸ ಉಂಟಾಗುತ್ತಿದ್ದಂತೆಯೇ, ಒಂದು ದಿನ ತಮ್ಮ ಗೆಳೆಯ ವೇದಮೂರ್ತಿ ಅವರನ್ನು ಕ್ಯಾಮರಾದೊಡನೆ ಕರೆದುಕೊಂಡು ಹೋದರು. ಪೂಜಾರಿಗೆ ಇಬ್ಬರು ದಿಂಡುರುಳಿದರು. ನಂತರ–

"ನೋಡಿ ಸ್ವಾಮಿ, ನಿಮ್ಮ ಮಹಿಮೆಯನ್ನು ನನ್ನಿಂದ ತಿಳಿದು ಇವರು ಬಂದಿದ್ದಾರೆ. ಇವರು ನಗರದಲ್ಲಿ ಒಂದು ದೊಡ್ಡ ಪೋಟೊ ಸ್ಟುಡಿಯೋ ಇಟ್ಟಿದ್ದಾರೆ. ತಮ್ಮ ಸ್ಟುಡಿಯೋನಲ್ಲಿ ಈ ದೇವತೆಯ ಹಾಗೂ ನಿಮ್ಮ ಭಾವಚಿತ್ರವನ್ನು ದೊಡ್ಡದಾಗಿ ಇಟ್ಟು, ತಮ್ಮ ಗಿರಾಕಿಗಳಿಗೆಲ್ಲಾ ನಿಮ್ಮ ಪೂಜೆಯ ಮಹಿಮೆಯನ್ನು ತಿಳಿಸಿ ಪ್ರಚಾರ ಮಾಡಬೇಕೆಂದಿದ್ದಾರೆ. ಆದ್ದರಿಂದ ನಿಮ್ಮ ಪೋಟೊ ತೆಗೆಯಲು ಅವಕಾಶವನ್ನು ಕೊಡಿ" ಎಂದು ಸೋಮವರದ ಕೇಳಿಕೊಂಡರು. ಇದರಿಂದ ಹಿಗ್ಗಿಹೀರೇಕಾಯಿಯಾದ ಪೂಜಾರಿಯು ಅಂದು ಮತ್ತಷ್ಟು ಜೋರಾಗಿಯೇ ತನ್ನೆಲ್ಲಾ ಆಚರಣೆಗಳನ್ನು ಮಾಡಿದ. ಅವೆಲ್ಲವನ್ನೂ ಫೋಟೊ ತೆಗೆದುಕೊಳ್ಳಲಾಯಿತು.

ಪೋಟೊಗಳು ಕೈಗೆ ಬಂದ ನನ್ನ ಗೆಳೆಯ ದೇವಾಲಯದಲ್ಲಿ ನಡೆಯುತ್ತಿದ್ದ ಎಲ್ಲಾ ಬಗೆಯ ಅನಾಚಾರಗಳನ್ನು ಚಿತ್ರ ಸಹಿತ ವಿವರಿಸಿ, ನಾಡಿನ ಅನೇಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಸಾರ್ವಜನಿಕರ ಗಮನಕ್ಕೆ ತಂದರು. ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಗೊಳ್ಳುತ್ತಿದ್ದಂತೆಯೇ, ಆ ಊರಿನ ವಿದ್ಯಾವಂತ ಯುವಕರು ಎಚ್ಚರಗೊಂಡು ಸಂಘಟಿತರಾದರು. ತಮ್ಮ ಊರಿನಲ್ಲಿ ನಡೆಯುತ್ತಿದ್ದ ಇಂತಹ ಸಾಮಾಜಿಕ ಅನಿಷ್ಟದ ವಿರುದ್ಧ ಹೋರಾಡಿ ಹಿಂಸೆಯ ಆಚರಣೆಯನ್ನು ನಿಲ್ಲಿಸಿ, ಮೌಢ್ಯವನ್ನು ತೊಲಗಿಸುವುದು ತಮ್ಮ ಕರ್ತವ್ಯವೆಂದು ಭಾವಿಸಿ, ದೇವಾಲಯದ ಮುಂದೆ ಪೂಜಾ ದಿನಗಳಲ್ಲಿ ಪ್ರತಿಭಟನೆಯನ್ನು ಮಾಡತೊಡಗಿದರು. ಪೋಲಿಸ್ ಇಲಾಖೆಯು ಇತ್ತ ಗಮನಹರಿಸಿ, ಪೂಜಾರಿಗೆ ಎಚ್ಚರಿಕೆಯನ್ನು ನೀಡಿತು. ಆತನ ಅಶ್ಲೀಲ ಪೂಜಾ ವಿಧಾನದ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡು, ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡುವುದಾಗಿ ಪೋಲಿಸ್ ಅಧಿಕಾರಿಗಳು ಪೂಜಾರಿಗೆ ತಿಳಿಸಿದರು. ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ಪೂಜಾ ಸಮಯದಲ್ಲಿ ಪೋಲಿಸ್ ಕಾವಲನ್ನು ಹಾಕಿ, ಪೂಜಾರಿಯ ಕ್ರಿಯೆಗಳನ್ನು ಗಮನಿಸತೊಡಗಿದರು.

ಕಾನೂನಿನ ಭಯ ಮತ್ತು ಊರಿನ ವಿದ್ಯಾವಂತ ಯುವ ಸಮುದಾಯದ ಸಾಮಾಜಿಕ ಎಚ್ಚರದ ಕಾರಣದಿಂದ ಹೆದರಿದ ಪೂಜಾರಿಯು, ತನ್ನ ಕಾಮ ವಿಕಾರದ ಮತ್ತು

ಹಿಂಸೆಯಿಂದ ಕೂಡಿದ್ದ ಪೂಜಾವಿಧಾನವನ್ನು ಕೂಡಲೇ ಕೈಬಿಟ್ಟ. ಊರಿನ ಹಿರಿಯರು ನ್ಯಾಯ ಪಂಚಾಯ್ತಿ ಮಾಡಿ, ಇಂತಹ ಕೊಳಕನನ್ನು ದೇವಾಲಯದಿಂದ ಒದ್ದು ಓಡಿಸಿ, ಮತ್ತೊಬ್ಬನನ್ನು ನೇಮಿಸಿ, ಒಳ್ಳೆಯ ರೀತಿಯಲ್ಲಿ ಪೂಜಾಕಾರ್ಯಗಳನ್ನು ಮಾಡುವಂತೆ ಸೂಚಿಸಿದರು.

ಪೂಜಾರಿಯ ದುಷ್ಟ ಕಾರ್ಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ಚಿತ್ರಗಳ ಮೂಲಕ ನೋಡಿದ, ಆ ಊರಿನ ಸುತ್ತಮುತ್ತಣ ಹತ್ತಾರು ಹಳ್ಳಿಗಳ ಸಾವಿರಾರು ಮಂದಿ ಹಳ್ಳಿಗರು ದೇವತೆಯ ಹೆಸರಿನಲ್ಲಿ ನಡೆಯುತ್ತಿದ್ದ ಅರ್ಥಹೀನವಾದ ಆಚರಣೆಗಳನ್ನು ಮತ್ತು ಪೂಜಾರಿಯ ಕಾಮದ ಕಾರ್ಯವನ್ನು ಕಂಡು ಅಸಹ್ಯಪಟ್ಟುಕೊಂಡರು. ಬಾಯಿಂದ ಬಾಯಿಗೆ ಈ ವಿಚಾರ ಹಬ್ಬಿತು. ತಮ್ಮ ಹೆಣ್ಣು ಮಕ್ಕಳು ಅನಾರೋಗ್ಯದಿಂದ ಬಳಲಿದಾಗ ವೈದ್ಯರಿಗೆ ತೋರಿಸದೆ, ಈ ಪೂಜಾರಿಯ ಬಳಿಗೆ ಕರೆತರುತ್ತಿದ್ದ ಅವಿದ್ಯಾವಂತ ಹೆಂಗಸರಿಗೆ ಈಗ ಪೂಜಾರಿಯ ವಂಚನೆಯು ತಿಳಿದು, ತಮ್ಮ ತಪ್ಪಿನ ಅರಿವಾಗತೊಡಗಿತು. ದೇವಾಲಯಕ್ಕೆ ಮೌಢ್ಯದಿಂದ ಬರುತ್ತಿದ್ದ ಹೆಂಗಸರು, ಈಗ ವೈದ್ಯಕೀಯ ಸೌಲಭ್ಯಗಳುಳ್ಳ ಆಸ್ಪತ್ರೆಗಳ ಕಡೆಗೆ ತಮ್ಮ ಹೆಣ್ಣು ಮಕ್ಕಳೊಡನೆ ಹೆಜ್ಜೆ ಹಾಕತೊಡಗಿದರು. ಈಗ ಈ ದೇವಾಲಯದಲ್ಲಿ ಯಾವುದೇ ಬಗೆಯ ದುಷ್ಟ ಆಚರಣೆಗಳು ನಡೆಯುತ್ತಿಲ್ಲ. ರೋಗಿಗಳನ್ನು ಕರೆದುಕೊಂಡು ಯಾರೊಬ್ಬರು ಬರುತ್ತಿಲ್ಲ. ಪ್ರಶಾಂತವಾದ ವಾತಾವರಣದಲ್ಲಿ ದೇವತೆಯ ಮುಂದೆ ಜ್ಯೋತಿ ಬೆಳಗುತ್ತಿದೆ.

⌘

ಕರಿಯನ ಪುರಾಣ



"ಏನ್ ನಾಗರಾಜಪ್ಪ ಚೆನ್ನಾಗಿದ್ದೀರಾ?"

ನನ್ನ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿರುವ ವ್ಯಕ್ತಿಯನ್ನು ಕ್ಷಣ ಕಾಲ ಅಚ್ಚರಿಯಿಂದ ನೋಡುತ್ತಾ "ಏನ್ ಕರಿಯ... ನೀನು ಜೋರಾಗಿ ಮೀಸೆ ಬಿಟ್ಟಿರೂದರಿಂದ... ತಕ್ಷಣ ಗುರುತು ಹಿಡಿಯೋಕೆ ಆಗಲಿಲ್ಲ" ಎಂದೆ. ಆತ ನಗುತ್ತಾ ತನ್ನ ತುಟಿಗಳ ಮೇಲೆ ಇಳಿ ಬಿದ್ದಿದ್ದ ಮೀಸೆಯ ಕೂದಲನ್ನು... ಈಗ ಮತ್ತಷ್ಟು ಕೆಳಮುಖವಾಗಿ ಸವರುತ್ತಾ–

"ಈಗ ಹೆಂಡ ಇಳ್ಸೂಕೆ ಹೊಯ್ತಾ ಇದ್ದೀನಿ ಕಣ್ರಪ್ಪ... ಮರ ಹತ್ತಿದಾಗ ಮೊದಲು ಒಂದೆರಡು ತೆಂಗಿನ ಮರದಲ್ಲಿ ಕಟ್ಟಿರೂ ಮಡಕೆಯಲ್ಲಿರೂ ಹೆಂಡನ... ಮರದ ಮ್ಯಾಲೆಯೇ ಕದ್ದು ಕುಡ್ಕೋತೀನಿ. ಆಗ ಮಡಕೆ ಒಳಗೆ ಹುಳ ಉಪ್ಪಟ್ಟೆ ಬಿದ್ದಿರ್ತವಲ್ಲ... ಅವು ಸೋಸೋಗ್ಲಿ ಅಂತ... ಹಿಂಗೆ ಜೋರಾಗಿ ಮೀಸೆ ಬುಟ್ಟಿವ್ನಿ... ಇಲ್ದೇದ್ರೆ ನಮಗ್ಯಾಕ್ರಪ್ಪ

ಇಂಥ ಮೀಸೆ" ಎಂದು ತನ್ನ ಕಲ್ಲಿಮೀಸೆಯ ಓಸ್ನೆಲೆಯನ್ನು ಹೇಳಿದಾಗ... ನನಗೆ ನಗು ಬಂತು.

ನಮ್ಮೂರ ದಲಿತರವನಾದ ಕರಿಯ ಮತ್ತು ನಾನು... ಸರಿ ಸುಮಾರು ಒಂದೇ ವಯಸ್ಸಿನವರು. ಗೌಡರ ಮಗನಾದ ನಾನು ಶಾಲೆಯಲ್ಲಿ ಓದುತ್ತಿದ್ದಾಗ, ಆತ ಜೀತದಾಳಾಗಿ ದುಡಿಯುತ್ತಿದ್ದ. ರಜೆಗೆ ಊರಿಗೆ ಹೋದಾಗಲೆಲ್ಲಾ, ಆತ ನನ್ನೊಡನೆ ಬಹಳ ಸರಸವಾಗಿ ಮಾತನಾಡುತ್ತಿದ್ದ. ಅದೇ ಬಗೆಯ ವಿನೋದ ಪ್ರವೃತ್ತಿಯನ್ನು ತನ್ನ ಕಡು ಬಡತನದ ಜೀವನದುದ್ದಕ್ಕೂ ಉಳಿಸಿಕೊಂಡು ಬಂದಿದ್ದ. ಕಳೆದ ಹದಿನೈದು ವರ್ಷಗಳ ಹಿಂದೆ ಕರಿಯ ಹೇಳಿದ ಕಥೆಯೊಂದನ್ನು ನಾನು ಮರೆಯಲಾಗುತ್ತಿಲ್ಲ. ಮತ್ತೆ ಮತ್ತೆ ಅದು ನನ್ನ ಮನಸ್ಸನ್ನು ಕಾಡುತ್ತಿರುತ್ತದೆ.

ಅಂದು ಕರಿಯನೊಡನೆ ಅದು ಇದು ಮಾತನ್ನಾಡುತ್ತಾ–

"ಏನ್ ಕರಿಯ, ಈಗಲಾದ್ರೂ ಚೆನ್ನಾಗಿದ್ದೀಯಾ?" ಎಂದೆ. "ಅಯ್ಯೋ ಬನ್ರಪ್ಪ... ನಮ್ ಚೆಂದವ ಏನ್ ಕೇಳೀರಿ?... ನೀವ್ ಚೆನ್ನಾಗಿದ್ರೆ ಸರಿ... ಎಲ್ಲಾನೂ ಕೇಳ್ಕೊಂಡು ಬಂದಿರೂರು."

"ಕೇಳ್ಕೊಂಡು ಬಂದಿರೂರು ಅಂದ್ರೆ... ಏನ್ ಕರಿಯ?"

"ನಿಮಗೆ ಗೊತ್ತಿಲ್ವೆ ಆ ಕತೆ?"

"ಯಾವ ಕತೆ?"

ಕರಿಯ ತನ್ನ ಕೈಯನ್ನು ಆಕಾಶದ ಕಡೆಗೆ ತೋರಿಸುತ್ತಾ... ಕಥೆಯನ್ನು ಹೇಳತೊಡಗಿದ.

"ಅಲ್ಲಿ ಮೇಲ್ಗಡೆ ಲೋಕದಲ್ಲಿರೋ ಬ್ರಹ್ಮನಿಗೆ ಈ ಭೂಮೀಲಿ ಎಲ್ಲಾ ತರದ ಪ್ರಾಣಿ ಪಕ್ಷಿಗಳನ್ನು ಸೃಷ್ಟಿ ಮಾಡಿದ ಮೇಲೆ... ನರಮನಸರನ್ನ ಸೃಷ್ಟಿ ಮಾಡ್ಬೇಕು ಅಂತ ಮನಸಾಯ್ತಂತೆ... ಸರಿ, ಸಾಕಷ್ಟು ಒಳ್ಳೆ ಮಣ್ಣು ತಕೊಂಡು ಚೆನ್ನಾಗಿ ಮಿದ್ದಿ, ಹದ ಮಾಡ್ಕೊಂಡು... ಆಮೇಲೆ ಒಸೂಸಿ ತಕೊಂಡು ...ಕಣ್ಣು ಕಿವಿ ಮೂಗು ಎಲ್ಲಾನೂ ತಿದ್ದಿ ತೀಡಿ... ಮನುಸನ ಆಕಾರದ ಬೊಂಬೆಗಳ ಮಾಡಿ, ಜೀವತುಂಬಿ... ಮೊದಲು ನಿಮ್ಮನ್ನೆಲ್ಲಾ ಸೃಷ್ಟಿ ಮಾಡಿದನಂತೆ, ಆಮೇಲೆ..."

ಕರಿಯನ ಕಥಾ ನಿರೂಪಣೆಗೆ ನಾನು ಸ್ವಲ್ಪ ಬ್ರೇಕನ್ನು ಹಾಕುತ್ತಾ–

"ನಮ್ಮ ಜೊತೇಲಿ ನಿಮ್ಮನ್ನೂ ಸೃಷ್ಟಿ ಮಾಡಲಿಲ್ಲವೇ?" ಎಂದು ಪ್ರಶ್ನಿಸಿದೆ.

"ಇಲ್ಲ ಕಣ್ರಪ್ಪ... ನಮ್ಮ ನಿಮ್ಮನ್ನೆಲ್ಲಾ ಒಂದೇ ಮಣ್ಣಲ್ಲಿ ಕಲ್ಸಿ ಮಾಡುದ್ರು....

ಅದ್ಯಾಕೋ... ಏನೋ... ಮೊದಲು ನಿಮ್ಮ.... ಅಂದರೆ ಮೇಲು ಜಾತಿಯವರನ್ನ ಮೊದಲು ಸೃಷ್ಟಿ ಮಾಡಿದ."

"ಹಂಗಾದ್ರೆ ಒಂದೊಂದು ಜಾತಿಯವರನ್ನ ಒಂದೊಂದು ಗುಂಪಾಗಿ ಸೃಷ್ಟಿ ಮಾಡಿ... ಇಲ್ಲಿಗೆ ಕಳಸವ್ನೆ ಅಂತೀಯ?"

"ಹಂಗೆ ಅನ್ಕೊಳಿ...ಮೊದಲು ನಿಮ್ಮ ಮಾಡಿ 'ಹೋಗ್ರಪ್ಪ ಭೂಲೋಕಕ್ಕೆ' ಅಂದ.

ಆಗ ನೀವು "ಭೂಲೋಕಕ್ಕೆ ಹೋಗು ಅಂತೀಯಲ್ಲ, ಅಲ್ಲಿ ನಾವು ಎಲ್ಲಿರ್ಮ?" ಅಂತ ಕೇಳುದ್ರಿ.

"ತಕೊಳಿ ಮನೆ" ಅಂದ. ಆಮೇಲೆ–

"ಅಲ್ಲಿ ಉಣ್ಣೋಕೆ ತಿನ್ನೋಕೆ ಏನ್ ಮಾಡ್ಮ?" ಅಂದ್ರಿ.

"ದಿನಸಿ ಬೆಳ್ಕೊಂಡು ತಿನ್ನೋಕೆ ಹೊಲ, ಗದ್ದೆ, ತೋಟ ಕೊಡ್ತೀನಿ ಹೋಗಿ" ಅಂದ.

"ಮತ್ತೆ ಬಟ್ಟೆ ಬರೆ, ಮೇಲ್ ಖರ್ಚಿಗೆ ಏನ್ ದಾರಿ?"– ಅಂತ ತಿರ್ಗ ಕೇಳುದ್ರಿ.

"ಚಿನ್ನ ಬೆಳ್ಳಿ, ನಗ ನಾಣ್ಯ ತಕೊಂಡು ಈಗ ಇಲ್ಲಿಂದ ಹೊರಡಿ" ಅಂದ.

ಹಿಂಗೆ ನೀವು ಅಲ್ಲಿಂದ ಇಲ್ಲಿಗೆ, ಬರೋಕೆ ಮುಂಚೇನೆ ಹುಷಾರಾಗಿ... ನಿಮಗೆ ಇಲ್ಲಿರೋಕೆ ಏನೇನು ಸೌಕರ್ಯ ಬೇಕೋ, ಅವೆಲ್ಲಾನು ಕೇಳ್ಕೊಂಡು ಬಂದ್ರಿ. ನೀವೆಲ್ಲಾ ಇಲ್ಲಿಗೆ ಬಂದಾದ್ಮೇಲೆ... ನಮ್ಮನ್ನ ಸೃಷ್ಟಿ ಮಾಡಿ, ಜೀವ ತುಂಬಿ–

"ಹೋಗ್ರಪ್ಪ ಭೂಲೋಕಕ್ಕೆ" ಅಂದ.

ಅವನು ಹಂಗೆ ಅಂದದ್ದೆ ತಡ...ಬಿದ್ದಂಬೀಳ ನಾವೆಲ್ಲಾ ದಡಾರ್ನೆ ಅಲ್ಲಿಂದ ಇಲ್ಲಿಗೆ ಬಂದ್ಬುಟ್ವೋ... ಇಲ್ಲಿಗೆ ಬಂದು ನೋಡ್ತೀವಿ... ಎಲ್ಲಾನೂ ನೀವೇ ಆವರಿಸ್ಕೊಂಡು ಕುಂತಿದ್ದೀರಿ! ...ಈಗ ಅವನ್ನ ಕೇಳವ ಅಂದ್ರೆ... ಅವನು ಅಲ್ಲಿ ಮೇಲವ್ನೆ... ನಾವು ಇಲ್ಲಿ ಕೆಳಗಿದ್ದೀವಿ!... ಅದಕ್ಕೆ ಕಣ್ರಪ್ಪ... ನಿಮ್ಮನ್ನೆಲ್ಲಾ ಕೇಳ್ಕೊಂಡು ಬಂದಿರೂರು ಅಂತ ಅನ್ನೋದು."

ಕರಿಯ ಹೇಳಿದ ಪುರಾಣದ ನುಡಿಗಟ್ಟಿನ ಕಥೆಯ ಅಂತರಂಗದಲ್ಲಿ... ಜಾತಿಯೊಂದರ ಕಾರಣದಿಂದಲೇ... ಶತಶತಮಾನಗಳಿಂದಲೂ ವಿದ್ಯೆ, ಸಂಪತ್ತು ಮತ್ತು ಅಧಿಕಾರಗಳಿಂದ ದೂರವಾಗಿ... ಹಸಿವು, ಬಡತನ ಮತ್ತು ಅಪಮಾನಗಳಿಂದ ನರಳುತ್ತಿದ್ದ ಒಂದು ಸಮುದಾಯದ ನೋವಿನ ಧ್ವನಿ... ಅನುರಣನಗೊಳ್ಳುತ್ತಿತ್ತು.

⌘

ನೀವು ಯಾವ ಜನ



ನೂರೆಂಟು ಜಾತಿಗಳಿಂದ ಕೂಡಿರುವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ, ಜಾತಿಯ ಬಗೆಗಿನ ಭ್ರಮೆಗಳು ಬಹು ವಿಲಕ್ಷಣವಾಗಿವೆ. ಜಾತಿ ಶ್ರೇಣಿಯ ಉನ್ನತ ಸ್ತರದಲ್ಲಿರುವ ಬ್ರಾಹ್ಮಣರು ಮೇಲರಿಮೆಯಿಂದ ಕೂಡಿದ್ದರೆ... ಕೆಳಸ್ತರದಲ್ಲಿರುವ ದಲಿತರು ಕೀಳರಿಮೆಯಿಂದ ನರಳುತ್ತಿದ್ದಾರೆ. ಇನ್ನುಳಿದ ನೂರಾರು ಜಾತಿಗಳಿಗೆ ಸೇರಿದ ಜನಗಳ ಮನಸ್ಸಿನ ಸ್ಥಿತಿಯು ತುಂಬಾ ವಿಚಿತ್ರವಾಗಿದೆ. ಜಾತಿ ವ್ಯವಸ್ಥೆಯ ಶ್ರೇಣಿಯಲ್ಲಿ ಮಧ್ಯದಲ್ಲಿರುವ ಒಕ್ಕಲಿಗರು... ತಾವು ದಲಿತರಿಗಿಂತ ಶ್ರೇಷ್ಠರೆಂದು ಮತ್ತು ಬ್ರಾಹ್ಮಣರಿಗಿಂತ ಕೀಳೆಂದು... ದೃಢವಾಗಿ ನಂಬಿದ್ದಾರೆ.

ದೈನಂದಿನ ಜೀವನದಲ್ಲಿ ದೇಹದ ಉಳಿವಿಗೆ ಅಗತ್ಯವಾದ ಕುಡಿಯುವ ನೀರಿನಿಂದ ಹಿಡಿದು... ರಾಷ್ಟ್ರೀಯ ರಾಜಕಾರಣದ ಪ್ರಧಾನಮಂತ್ರಿ ಪೀಠದ ತನಕ... ಜಾತಿಯ ವ್ಯಾಮೋಹ ವ್ಯಾಪಿಸಿರುವುದನ್ನು ನಾವು ನೋಡುತ್ತಿದ್ದೇವೆ. ಸಾಮಾಜಿಕ ಒಡನಾಟದಲ್ಲಿ ನಮ್ಮೊಡನೆ ಸಂಪರ್ಕ ಬೆಳೆಸುವ ಅಥವಾ ಸಮಾಜದಲ್ಲಿ ಉನ್ನತವಾದ ಸ್ಥಾನಮಾನಕ್ಕೆ ಏರುವ ಯಾವುದೇ ವ್ಯಕ್ತಿಯ ಹೆಸರನ್ನು ತಿಳಿದ ನಂತರ... ಆ ವ್ಯಕ್ತಿಯು ಯಾವ ಜಾತಿಗೆ ಸೇರಿದವನೆಂಬುದೇ ನಮಗೆ ಬಹು ಮುಖ್ಯವಾದ ವಿಚಾರವಾಗುತ್ತದೆ. ನಮ್ಮೆಲ್ಲರಲ್ಲೂ ಒಂದಲ್ಲ ಒಂದು ಪ್ರಮಾಣದಲ್ಲಿ ಜಾತಿ ಭ್ರಮೆಯು ನೆಲೆಗೊಂಡಿದೆ. ಇಂತಹ ಸಾಮಾಜಿಕ ನೆಲೆಯಲ್ಲಿ ನಡೆದ ಎರಡು ಪ್ರಸಂಗಗಳನ್ನು ಇನ್ನು ಮುಂದೆ ನಿರೂಪಿಸುತ್ತೇನೆ.

ಪ್ರಸಂಗ –1

ಸುಮಾರು ಮೂವತ್ತು ವರ್ಷಗಳ ಹಿಂದೆ ನಡೆದ ಘಟನೆ. ಅಂದು ಮೈಸೂರಿನಿಂದ ಮಂಗಳೂರಿಗೆ ಸರ್ಕಾರಿ ಬಸ್ಸಿನಲ್ಲಿ ಗೆಳೆಯರೊಡನೆ ಪ್ರಯಾಣಿಸುತ್ತಿದ್ದೆ. ಬಿಳಿಕೆರೆಯನ್ನು ದಾಟುತ್ತಿದ್ದಂತೆಯೇ, ಬಸ್ಸು ಕೆಟ್ಟು ನಿಂತಿತು. ಆಗ ಈಗಿನಂತೆ ಮಂಗಳೂರಿಗೆ ಬಸ್ಸುಗಳ ಓಡಾಟ ಹೆಚ್ಚಾಗಿರಲಿಲ್ಲ. ಮೈಸೂರಿನಿಂದ ಮತ್ತೆ ಬದಲಿ ಬಸ್ಸು ಬರಬೇಕಿತ್ತು. ರಸ್ತೆಯ ಬದಿಯಲ್ಲಿ ಮಾತನಾಡುತ್ತ ಕುಳಿತಿದ್ದ ನಮಗೆ ಬಾಯಾರಿಕೆಯಾಗತೊಡಗಿತು. ಅಲ್ಲೇ ಹತ್ತಿರದಲ್ಲಿ ಕೆ.ಇ.ಬಿ. ಇಲಾಖೆಯ ವಸತಿ ಗೃಹಗಳು ಕಣ್ಣಿಗೆ ಬಿದ್ದವು. ಅಲ್ಲಿಗೆ ಹೋಗಿ, ಒಂದು ಮನೆಯ ಮುಂದೆ ನಿಂತು, ಮನೆಯವರನ್ನು ಕೂಗಿದೆವು. ಒಳಗಿನಿಂದ ಸುಮಾರು ನಲವತ್ತು ವರ್ಷದ ಹೆಂಗಸು ಹೊರ ಬಂದರು.

"ಕುಡಿಯೋದಕ್ಕೆ ಸ್ವಲ್ಪ ನೀರ್ ಕೊಡ್ರಮ್ಮ" ಎಂದು ಕೇಳಿದ ನಮ್ಮನ್ನು ಅವರು ದಿಟ್ಟಿಸಿ ನೋಡತೊಡಗಿದರು. ನಾವು ಹೇಳಿದ್ದು... ಅವರಿಗೆ ಕೇಳಿಸಲಿಲ್ಲವೆಂದು ಭಾವಿಸಿ, ಮತ್ತೊಮ್ಮೆ ಸ್ವಲ್ಪ ಎತ್ತರದ ಧ್ವನಿಯಲ್ಲಿ...

"ಕುಡಿಯೋದಕ್ಕೆ ನೀರು ಬೇಕಾಗಿತ್ತು ಕಣ್ರಮ್ಮ" ಎಂದೆ.

"ನೀವು ಯಾವೂರೋರಪ್ಪ?"

"ನಾವು ಮಂಡ್ಯದೋರು. ಹಿಂಗೆ ಮಂಗಳೂರ್ಗೆ ಹೊಯ್ತಿದ್ವೊ. ಇಲ್ಲೆ ಬಸ್ಸು ಕೆಟ್ಟೋಗಿ ನಿಂತಿದೆ" ಎನ್ನುತಿದ್ದಂತೆಯೇ, ಆಕೆ ಒಳಕ್ಕೆ ಹೋದರು.

ಕೆಲವು ನಿಮಿಷಗಳ ನಂತರ ಸುಮಾರು ಐವತ್ತು ವರ್ಷದ ಒಬ್ಬ ಗಂಡಸು ಹೊರಕ್ಕೆ ಬಂದರು. ನೀರನ್ನು ತರದೇ ಹಾಗೆ ಬರಿ ಕೈಯಲ್ಲಿ ಬಂದವರು... ನಮ್ಮನ್ನು

ಪರೀಕ್ಷಿಸುವಂತೆ... ಮೇಲಿನಿಂದ ಕೆಳಗಿನವರೆಗೆ ನಮ್ಮ ಮುಖಚರ್ಯೆ ಮತ್ತು ಬಟ್ಟೆಬರೆಗಳನ್ನು ನೋಡತೊಡಗಿದರು. ನನಗಂತೂ ತುಂಬಾ ಬೇಸರವಾಯಿತು. “ಯಾಕಾದರೂ ಇವರ ಮನೆಗೆ ಬಂದು ನೀರನ್ನು ಕೇಳಿದೆವೋ?” ಎಂದು ಅನ್ನಿಸತೊಡಗಿತು. ಸ್ವಲ್ಪ ತಾಳ್ಮೆಯನ್ನು ಕಳೆದುಕೊಂಡ ಧ್ವನಿಯಲ್ಲಿ “ರ್‍ರೀ... ಸ್ವಾಮಿ, ಕುಡಿಯೋಕೆ ಸ್ವಲ್ಪ ನೀರು ಕೊಡ್ರಿ” ಎಂದೆ. ಇದುವರೆಗೂ ನಮ್ಮನ್ನು ಕುತೂಹಲ ಬೆರೆತ ದೃಷ್ಟಿಯಿಂದ ನೋಡುತ್ತಿದ್ದ ಆ ವ್ಯಕ್ತಿಯು ಈಗ ಮಾತನಾಡತೊಡಗಿದರು.

“ನೀವು ಯಾವ ಜನ?”

“ಯಾಕೆ?”

“ಮೊದಲು ಹೇಳಿ ಸ್ವಾಮಿ ... ನೀವು ಯಾವ ಜನ ಅಂತ?’

“ಯಾಕ್ರಿ ...ನಮ್ ಜಾತಿ ಕಟ್ಕೊಂಡು ಏನ್ ಮಾಡ್ತೀರಿ?”

“ಸ್ವಾಮಿ... ನಾವು ಏ.ಕೆ.ಗಳು... ನಮ್ಮ ಮನೆ ನೀರನ್ನು ನೀವು ಕುಡೀತಿರಾ?”

“ರ್‍ರೀ... ಏನ್ರೀ ಹಿಂಗೆ ಕೇಳ್ತಾ ನಿಂತ್ಕೊಂಡ್ರಿ ...ನಮಗೆ ತುಂಬಾ ಬಾಯಾರಿಕೆ ಯಾಗಿದೆ. ಮೊದಲು ಸ್ವಲ್ಪ ನೀರು ಕೊಡಿ.”

ಆ ಗಂಡಸು ಒಳಹೋಗಿ ಕ್ಷಣ ಮಾತ್ರದಲ್ಲಿ ಚೆಂಬುಗಳಲ್ಲಿ ತುಂಬಿಕೊಂಡು ತಂದು... ತಣ್ಣನೆಯ ನೀರನ್ನು ನೀಡಿದರು.

ಅಲ್ಲಿಂದ ಹಿಂತಿರುವಾಗ “ಜಾತಿ ಕೇಳಿ ನೀರು ಕೊಡ್ರೀರಲ್ಲ ಯಾಕೆ?” ಎಂದು ಪ್ರಶ್ನಿಸಿದೆ.

“ನೋಡಿ ಸ್ವಾಮಿ.. ಮೊನ್ನೆ ಯಾರೋ ಒಬ್ಬರು ನಿಮ್ಮಂಗೆ ಬಂದು... ನೀರ್ ಈಸ್ಕೊಂಡು ಕುಡುದ್ರು... ಆಮೇಲೆ ನಮ್ಮ ಜಾತಿ ಯಾವುದು ಅಂತ ಕೇಳುದ್ರು... ನಾವು ಹೇಳ್ದೊ... ಆಗ ಅವರು ಬಹಳ ಸಂಕಟಪಟ್ಕೊಂಡು ಹೋದರು... ಅದಕ್ಕೆ ... ಹಿಂಗೆ ಕೇಳ್ದೊ ಸ್ವಾಮಿ.”

(ದಲಿತರನ್ನು ಆದಿ ಕರ್ನಾಟಕದವರೆಂದು ಮೊದಲು ಕರೆಯುತ್ತಿದ್ದರು.

ಏ. ಕೆ. ಎಂಬುದು ಆದಿ ಕರ್ನಾಟಕದ ಇಂಗ್ಲಿಶಿನ ಸಂಕ್ಷಿಪ್ತ ರೂಪ)

ಪ್ರಸಂಗ –2

ಕಾಳಮುದ್ದನ ದೊಡ್ಡಿಯ ನಮ್ಮ ಮನೆಯ ಮುಂಭಾಗದಲ್ಲಿ ಒಂದು ಸಂಜೆ ಸ್ನೇಹಿತರೊಬ್ಬರ ಜೊತೆ ಮಾತನಾಡುತ್ತ ಕುಳಿತಿದ್ದೆ. ಬೆಳಿಗ್ಗೆಯಿಂದಲೂ... ಅಲ್ಲೆ ಅತ್ತಿತ್ತ ತಿರುಗಾಡುತ್ತಿದ್ದ ಒಬ್ಬ ರೈತನು ಬಳಿಗೆ ಬಂದು, ಪಕ್ಕದ ಮನೆಯತ್ತ ಕೈ ತೋರಿಸುತ್ತಾ

"ಈ ವಿಲೇಜ್ ಅಕೌಂಟೆಂಟ್‌ರು ಎಷ್ಟೊತ್ತಿಗೆ ಬರ್ತರೆ ಸ್ವಾಮಿ" ಎಂದ.

"ಗೊತ್ತಿಲ್ಲ ಕಣಯ್ಯ."

"ಪಕ್ಕದ ಮನೆಯಲ್ಲಿ ಇದ್ದೀರಿ ...ಅವರು ಎಷ್ಟೊತ್ತಿಗೆ ಬರ್ತರೆ ಹೊಯ್ತರೆ ಅನ್ನೋದು ಕಾಣ್ರ!" ....ಅವನ ಮಾತಿನ ಧೋರಣೆಯಿಂದ ನನಗೆ ಸ್ವಲ್ಪ ಕೋಪ ಬಂತು.. ಆದರೂ ತಾಳ್ಮೆಯಿಂದಲೇ ಉತ್ತರಿಸಿದೆ.

"ಈಗ ಸ್ಕೂಲುಗಳಿಗೆ ರಜ ನೋಡಪ್ಪ... ಅವರ ಹೆಂಗಸರು ಮಕ್ಳು ಊರಲ್ಲಿಲ್ಲ. ಅದಕ್ಕೆ ಯಾವಾಗ ನೋಡುದ್ರು.... ಅವರ ಮನೆ ಬಾಗಿಲು ಹಾಕ್ದಂಗೆ ಇರ್ತದೆ.... ನಾನು ಹೆಂಗಪ್ಪ ಹೇಳಲಿ.... ಇಷ್ಟೊತ್ತಿಗೆ ಬರ್ತರೆ ಅಂತ!"

"ಅದು ಸರಿಯೆ ಅನ್ನಿ.... ಹೆಂಗಸ್ರು ಮಕ್ಳು ಇಲ್ದೆ ಹೋದ್ಮೇಲೆ.... ಗಂಡಸಿಗೆ ಮನೇಲಿ ತಾನೆ.... ಏನ್ ಕೆಲ್ಸ ?" ಎಂದು ಪ್ರತಿಕ್ರಿಯಿಸಿದನು. ಅವನ ಮಾತಿನ ಶೈಲಿಯಿಂದ ಅಚ್ಚರಿಗೊಂಡ ನಾನು .... ಈಗ ಆತನನ್ನು ಸೂಕ್ಷ್ಮವಾಗಿ ಗಮನಿಸಿದೆ .... ಆತ ಸುಮಾರು ನಲವತ್ತೈದು ವರ್ಷದವನು. ಬೆಳಿಗ್ಗೆಯಿಂದ ಸಂಜೆಯವರೆಗೆ ಕಾದು ಕಾದು ಅವನ ಮುಖ ಬಾಡಿತ್ತು.... ತೊಟ್ಟಿದ್ದ ಅಂಗಿಯು ಅಲ್ಲಲ್ಲಿ ಹರಿದಿತ್ತು.... ಉದ್ದನೆಯ ಚಡ್ಡಿಯನ್ನು ಧರಿಸಿದ್ದ ಅವನು ಬಡತನದ ಬೇಗೆಯಲ್ಲಿ ಬೇಯುತ್ತಿದ್ದುದು ಎದ್ದು ಕಾಣುತ್ತಿತ್ತು. ಅವನೊಡನೆ ಇನ್ನಷ್ಟು ಮಾತನಾಡಬೇಕೆಂಬ ಉದ್ದೇಶದಿಂದ –

"ನಿಂಗೆ ಎಷ್ಟು ಎಕರೆ ಜಮೀನು ಇದೆಯಯ್ಯ?"

"ಓ.... ಎಷ್ಟು ಎಕರೆ ಇದ್ದದು? ....ಒಂದೂವರೆ ಎಕರೆ ಹೊಲ ಅದೆ. ಅದರ ಮ್ಯಾಲೆ ಒಸಿ ಸಾಲ ತಕೋಬೇಕು ಅಂತ ಓಡಾಡ್ತ ಇವ್ನಿ. ಈ ಪುಣ್ಯಾತ್ಮ ....ಕೈಗೂ ಸಿಗೊಲ್ಲ...ಬಾಯ್ಗೂ ಸಿಗೊಲ್ಲ" ಎನ್ನುತ್ತಾ ನಮ್ಮ ಮನೆಯ ಮೆಟ್ಟಿಲುಗಳ ಬಳಿ ಬಂದು–

"ಸ್ವಾಮಿ, ಕುಡಿಯೋಕೆ ಮೂರ್ ನೀರ್ ಕೊಡ್ತೀರಾ?" ಎಂದು ಕೇಳಿದ. ನೀರನ್ನು ತಂದು ಕೊಡಲೆಂದು ನಾನು ಮೇಲಕ್ಕೆ ಏಳುತ್ತಿದ್ದಂತೆಯೇ–

"ಸ್ವಾಮಿ.... ನೀವು ಯಾವ ಜನ?" ಎಂದು ಪ್ರಶ್ನಿಸಿದ.

"ಯಾಕಯ್ಯ?"

"ನೀವು ಯಾವ ಜನ ಅಂತ ....ಮೊದ್ಲು ಹೇಳಿ ಸ್ವಾಮಿ?"

"ನಾನು ಯಾವ ಜಾತಿ ಆದ್ರೆ ನಿಂಗೇನಯ್ಯ ....ನಿಂಗೆ ಕುಡಿಯೋಕೆ ನೀರು ತಾನೇ ಬೇಕಾಗಿರೋದು?"

ಈಗ ಆತ ಎರಡು ಹೆಜ್ಜೆ ಹಿಂದೆ ಸರಿಯುತ್ತಾ....

"ಹಂಗಾದ್ರೆ ಬ್ಯಾಡಿ ಬುಡಿ ನೀರು" ಎಂದ.

"ಯಾಕಯ್ಯ .... ನಿನಗಿಂತ ಕೆಳ ಜಾತಿಯವರ ಮನೆಯಲ್ಲಿ ನೀರು ಕುಡುದ್ರೆ.... ನಿನ್ನ ಜಾತಿ ಕೆಟ್ಟೋದದೆ?" ಎಂದು ಸ್ವಲ್ಪ ಖಾರವಾಗಿ ನುಡಿದೆ. ನನ್ನ ನುಡಿಗಳಿಗೆ ಆತ ತೀವ್ರವಾಗಿ ಪ್ರತಿಕ್ರಿಯಿಸುತ್ತಾ–

"ನೀರು ಕುಡೀದೆ ಹೋದ್ರೆ ಜೀವ ಹೊಂಟೋದದೆ? ....ನೀರೇನು? .... ಇಲ್ಲಿ.... ಇಲ್ದೇದ್ರೆ.... ಇನ್ನೊಂದು ಮನೇಲಿ ಸಿಗ್ತದೆ.... ಹಂಗಂತ .... ಎಲ್ಲೆಲ್ಲೊ ಕುಡುದ್ಬುಟ್ಟು.... ಜಾತಿ ಕೆಡಿಸ್ಕೊಂಡಿರಾ?" ಎನ್ನುತ್ತಾ.... ಪಕ್ಕದ ಮನೆಗಳತ್ತ ನಡೆದ.

⌘

ಬಸವಣ್ಣನ ದಾರಿ



ಇಂದಿಗೆ ಏಳೆಂಟು ವರ್ಷಗಳ ಹಿಂದೆ ಹಳ್ಳಿಯೊಂದರಲ್ಲಿ ನಡೆದ ಘಟನೆಯಿದು. ಊರಿನ ಮಧ್ಯದಲ್ಲಿ ಮಾರಿ ಗುಡಿಯಿದೆ. ಊರ ಹೊರಗೆ ಹರಿಯುತ್ತಿರುವ ಹೊಳೆಯ ತೀರದಲ್ಲಿ ಭೈರವೇಶ್ವರನ ದೇವಾಲಯವಿದೆ. ವರ್ಷಕ್ಕೊಮ್ಮೆ ಭೈರವೇಶ್ವರನ ಹಬ್ಬ ನಡೆಯುವಾಗ ...ಭೈರವನ ತೇರನ್ನು ಮಾರಿ ಗುಡಿಯಿಂದ ದೇವಾಲಯದ ಬಳಿಗೆ ಎಳೆದು ತಂದು... ಮತ್ತೆ ಗುಡಿಯ ಬಳಿಗೆ ಎಳೆದುಕೊಂಡು ಹೋಗುವ ಧಾರ್ಮಿಕ ಆಚರಣೆಯು ಸಾವಿರಾರು ಮಂದಿ ಭಕ್ತರಿಗೆ ಅಪಾರವಾದ ಆನಂದವನ್ನು ಮತ್ತು ಧನ್ಯತೆಯ ಭಾವವನ್ನು ನೀಡುತ್ತದೆ.

ಆರ್ಸಿಯಿಂದಲೂ ಅತ್ಯಂತ ಸಡಗರದಿಂದ ನಡೆದುಕೊಂಡು ಬರುತ್ತಿದ್ದ ಭೈರವೇಶ್ವರ ಹಬ್ಬದ ಆಚರಣೆಯಲ್ಲಿ... ಈ ವರ್ಷ ಹೊಸ ಬೇಡಿಕೆಯೊಂದನ್ನು ಈ ಊರಿನ ದಲಿತರು ಊರಿನ ಮುಖಂಡರ ಮುಂದಿಟ್ಟಿದ್ದರು. ಅದೇನೆಂದರೆ "ಭೈರವೇಶ್ವರನ

ತೇರು ತಮ್ಮ ಕೇರಿಯಲ್ಲೂ ಹಾದು ಹೋಗಬೇಕು. ನಾವು ಕೂಡ ಭೈರವನ ಒಕ್ಕಲು ...ನಮ್ಮ ಕುಲದೇವರನ್ನು ಹತ್ತಿರದಿಂದ ಕಣ್ತುಂಬಾ ನೋಡಿ, ಹಣ್ಣು ಕಾಯಿ ಮಾಡಿಸಿ, ನಾವು ಕೈ ಮುಗಿಯಬೇಕು."

ಒಕ್ಕಲಿಗರು ಹೆಚ್ಚು ಸಂಖ್ಯೆಯಲ್ಲಿ ನೆಲೆಸಿದ್ದ ಈ ಊರಿನಲ್ಲಿ ಒಂದೆರಡು ಬ್ರಾಹ್ಮಣ ಕುಟುಂಬಗಳು ಸೇರಿದಂತೆ ಸಾಕಷ್ಟು ಸಂಖ್ಯೆಯಲ್ಲಿ ಲಿಂಗಾಯತರು, ಗಂಗಾಮತಸ್ಥರು, ಗಾಣಿಗರಿದ್ದರು. ಇವರೆಲ್ಲಾ ವಾಸಿಸುತ್ತಿದ್ದ ಮೇಗಲಕೇರಿ, ಕೆಳಗಲ ಕೇರಿಗಳಲ್ಲಿ ಹಾದು ಬರುತ್ತಿದ್ದ ಭೈರವೇಶ್ವರನ ತೇರು ....ದಲಿತರ ಕೇರಿಗೆ ಮಾತ್ರ ಬರದೆ....ದಲಿತರ ಕೇರಿಯ ಹಿಂಭಾಗದಲ್ಲಿ ಕಿರಿದಾಗಿದ್ದ ದಾರಿಯೊಂದರಲ್ಲಿ ಸಾಗುತ್ತಿತ್ತು. ಆ ದಾರಿ ಕಿರಿದಾಗಿ ಮಾತ್ರವಲ್ಲ... ತುಂಬಾ ಗಲೀಜಾಗಿಯೂ ಇತ್ತು. ಈಗ ದಲಿತರು ಮಂಡಿಸಿದ್ದ ಬೇಡಿಕೆಯು ದೇವರಲ್ಲಿನ ಭಕ್ತಿಯ ದೃಷ್ಟಿಯಿಂದ ಸಹಜವಾಗಿಯೆ ಇತ್ತು. ಆದರೆ ....ಮೇಲುಕೀಳೆಂಬ ಜಾತಿಭ್ರಮೆಯಿಂದ ಕೂಡಿರುವ ಜನ ಸಮುದಾಯದಲ್ಲಿ ಸಾಕಷ್ಟು ಮಂದಿಗೆ ಇದು ತೀರಾ ಕುತಂತ್ರದ, ಅಹಂಕಾರದ ಮತ್ತು ದುರುದ್ದೇಶದಿಂದ ಕೂಡಿರುವ ಬೇಡಿಕೆಯಾಗಿ ಕಂಡು ಬಂದಿತು.

ಹಬ್ಬ ನಡೆಯುವ ಹದಿನೈದು ದಿನಗಳ ಮೊದಲೇ ಎದ್ದ ಈ ಸಮಸ್ಯೆಗೆ ಏನಾದರೊಂದು ಮಾರ್ಗೋಪಾಯವನ್ನು ಕಂಡು ಹಿಡಿಯಲೆಂದು, ಒಂದು ದಿನ ಬೆಳಿಗ್ಗೆ ಮಾರಿ ಗುಡಿಯ ಮುಂದೆ ಊರಿನ ಎಲ್ಲಾ ಜಾತಿಯ ಮುಖಂಡರು ಸಭೆ ಸೇರಿದರು. ಊರಿನಲ್ಲಿ ವಿವಿಧ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಆಗಾಗ್ಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಯುವ ಮುಖಂಡರು ಸಭೆಯಲ್ಲಿ ಹಾಜರಿದ್ದರು.

ಬೆಳಿಗ್ಗೆ ಹತ್ತು ಗಂಟೆಗೆ ಶುರುವಾಗಿದ್ದ ನ್ಯಾಯ ಪಂಚಾಯ್ತಿಯು ಮಧ್ಯಾಹ್ನ ಎರಡು ಗಂಟೆಯಾಗಿದ್ದರೂ ಮುಗಿದಿರಲಿಲ್ಲ.

"ಹಿಂದಿನಿಂದ ಯಾವತ್ತೂ ದಲಿತರ ಕೇರಿಯ ಒಳಕ್ಕೆ ತೇರು ಹೋಗಿಲ್ಲ... ಇವತ್ತು ಅಲ್ಲಿಗೆ ಬರ್ಲಿ ಅಂದ್ರೆ, ಅದೆಂಗೆ ಒಪ್ಪುಕಾದುದು?" ಎಂಬುದು ಮೇಲುಜಾತಿಯ ಮುಖಂಡರೆಲ್ಲರ ವಾದದ ತಿರುಳಾಗಿತ್ತು. "ಆಗ ಹಳೆಯ ದಲಿತರ ಕೇರಿಯು... ಊರಿನ ಒಂದು ಮೂಲೆಯ ಹಳ್ಳದಲ್ಲಿತ್ತು. ಒಂದರ ಮಗ್ಗುಲಲ್ಲಿ ಮತ್ತೊಂದು ಗುಡಿಸಲು ಸೇರ್ಕೊಂಡು ಯಾವ ದಾರಿಯೂ ಇರಲಿಲ್ಲ. ಈಗಾದ್ರೆ... ಸರ್ಕಾರದೋರು ಕೊಟ್ಟಿರುವ ಹೊಲಮಾಳದಲ್ಲಿ ಅಗಲವಾಗಿ ರಸ್ತೆ ಬಿಟ್ಟುಕೊಂಡು, ಮನೆಗಳನ್ನು ಕಟ್ಕೊಂಡಿದ್ದೀವಿ. ದಲಿತರ ಹೊಸ ಕೇರಿಯು ಊರಿನ ಎಲ್ಲಾ ಕೇರಿಗಳಂತೆ ಅಚ್ಚುಕಟ್ಟಾಗಿದೆ....ಅದೂ ಅಲ್ಲದೆ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲೇ ಇದೆ... ಅದಕ್ಕೆ ಭೈರವೇಶ್ವರನ ತೇರು...

ನಮ್ಮ ಕೇರಿ ಒಳಕ್ಕೂ ಬಂದು ಹೋಗ್ಲಿ ಅನ್ನೋದು ನಮ್ಮೆಲ್ಲರ ಆಸೆ" – ಎಂಬುದು ದಲಿತರ ಮುಖಂಡರ, ಅದರಲ್ಲೂ ಪ್ರಮುಖವಾಗಿ ಹೊಸ ತಲೆಮಾರಿನ ವಿದ್ಯಾವಂತ ಯುವಕರ ಪ್ರತಿವಾದವಾಗಿತ್ತು. ಇತ್ತ ದಲಿತರ ಬೇಡಿಕೆಗೆ ಒಪ್ಪಿಗೆಯನ್ನು ನೀಡಲಾಗದೆ...... ಅತ್ತ ಮೇಲುಜಾತಿಯವರ ವಿರೋಧವನ್ನು ಎದುರಿಸಲಾಗದೆ.... ಊರಿನ ಪಟೇಲರು ಈಗ ಉಭಯ ಸಂಕಟಕ್ಕೆ ಒಳಗಾಗಿದ್ದರು. ತಮ್ಮ ಮಾತಿಗೆ ಪ್ರತಿಯಾಡದೆ, ಎಲ್ಲವನ್ನೂ ಒಪ್ಪಿಕೊಳ್ಳುತ್ತಿದ್ದ ಹಳೆಯ ತಲೆಮಾರಿನ ದಲಿತರಲ್ಲಿ ಪ್ರಮುಖನಾಗಿದ್ದ ಕಾಳದಾಸಿಯನ್ನು ಕುರಿತು–

"ನೋಡು ಕಾಳದಾಸಿ... ಎಲ್ಲಾ ವಿಚಾರದಲ್ಲೂ ನಮ್ಮೂರು ಕಾಲದಿಂದಲೂ ಒಗ್ಗಟ್ಟಾಗಿ ಇಲ್ಲಿಗಂಟ ನಡಕೊಂಡು ಬಂದದೆ... ಈಗ ಇದೊಂದು ವಿಷಯದಲ್ಲಿ ರಾದ್ಧಾಂತ ಮಾಡ್ಕೊಳ್ಳೋದು ಬ್ಯಾಡ... ಹಿಂದಿನಿಂದ ತೇರು ಎಲ್ಲೆಲ್ಲಿ ಬರ್ತಿತ್ತೊ ....ಅಲ್ಲೇ ಬರ್ಲಿ... ನಿಮ್ಮ ಹುಡುಗರಿಗೆ ನೀನೇ ಸ್ವಲ್ಪ ತಿಳುವಳಿಕೆ ಹೇಳು" ಎಂದರು. ಕಾಳದಾಸಿಯು ಏನನ್ನಾದರೂ ಹೇಳುವುದಕ್ಕೆ ಮೊದಲೇ, ದಲಿತ ಯುವಕ ಶಿವಣ್ಣನು ಪಟೇಲರನ್ನು ಉದ್ದೇಶಿಸಿ–

"ನೋಡಿ ಸ್ವಾಮಿ... ನಮ್ಮ ಕೇರಿಗೆ ಭೈರವೇಶ್ವರನ ತೇರು ಬಂದಾಕ್ಷಣಕ್ಕೆ ನಾವೆಲ್ಲಾ ಏನೋ ಉದ್ಧಾರವಾಗೋಯ್ತೀವಿ ಅನ್ನುವ ಭ್ರಮೆ ನಮಗಿಲ್ಲ... ಈ ಊರ್ನಲ್ಲಿ ನಾವು ಎಲ್ಲರಂಗೆ ಒಂದು ಒಕ್ಕಲಾಗಿ... ಮನುಷ್ಯರಾಗಿ ಬಾಳ್ತಿದ್ದೀವಿ ಅನ್ನೋದನ್ನ ಗ್ಯಾರಂಟಿ ಮಾಡ್ಕೋಕೆ ಈ ರೀತಿ ಕೇಳ್ಕೊಳ್ತ ಇದ್ದೀವಿ. ಊರಿನ ಹಿರಿಯರಾದ ನೀವೆಲ್ಲಾ ದೊಡ್ಡ ಮನಸ್ಸು ಮಾಡಿ ಒಪ್ಕೋಬೇಕು" ಎಂದು ವಿನಂತಿಸಿಕೊಂಡ.

ಎಂ.ಎ.,ಪದವೀಧರನಾಗಿದ್ದ ಶಿವಣ್ಣನು... ಅಂಬೇಡ್ಕರ್ ಅವರು ರಚಿಸಿದ್ದ ಗ್ರಂಥಗಳೆಲ್ಲವನ್ನು ಚೆನ್ನಾಗಿ ಅಧ್ಯಯನ ಮಾಡಿಕೊಂಡಿದ್ದ. ಯಾವುದೇ ವಿಚಾರವನ್ನಾಗಲಿ ನಾಲ್ಕು ಮಂದಿಯ ಮುಂದೆ ತಾಳ್ಮೆಯಿಂದ ಪ್ರತಿಪಾದಿಸುವ ಕಲೆಯಲ್ಲಿ ಪರಿಣಿತನಾಗಿದ್ದ.

ದಲಿತ ಯುವಕ ಶಿವಣ್ಣನು ಊರಿನಲ್ಲಿ ಮಾಡುತ್ತಿದ್ದ ರಚನಾತ್ಮಕವಾದ ಕಾರ್ಯಗಳಿಗೆ ಮೇಲುಜಾತಿಯ ವಿದ್ಯಾವಂತ ಯುವಕರ ಬೆಂಬಲವಿತ್ತು.

ಮತ್ತೆ ಇನ್ನೊಂದು ಗಂಟೆ ಚರ್ಚೆ ಮುಂದುವರಿಯಿತು. ಕಟ್ಟಕಡೆಗೊಮ್ಮೆ ಮೇಲು ಜಾತಿಯ ನ್ಯಾಯಸ್ಥರೊಬ್ಬರು ಒಂದು ಸಲಹೆಯನ್ನು ಸಭೆಯ ಮುಂದಿಟ್ಟರು.

"ನೋಡ್ರಪ್ಪ ...ನಾವೆಲ್ಲಾ ಅಷ್ಟೊತ್ತಿನಿಂದಲೂ, ನಮ್ಮ ನಮ್ಮ ಮೂಗಿನ ನೇರಕ್ಕೆ ಮಾತಾಡ್ಕೊಳ್ತ ಇದ್ದೀವಿ, ಇನ್ನೂ ನಾಲ್ಕು ದಿನ ಮಾತಾಡುದ್ರು ...ಇದು ಬಗೆಹರಿಯುವಂಗೆ ಕಾಣೂದಿಲ್ಲ. ಅದಕ್ಕೆ ನಾನೊಂದು ಮಾರ್ಗ ಹೇಳ್ತೀನಿ ...ಕೇಳಿ."

ಪಟೇಲರು ಈಗ ಸಭೆಯ ಸದ್ದನ್ನು ಅಡಗಿಸಿ, ಅವರ ಮಾತಿನ ಕಡೆ ಎಲ್ಲರ ಗಮನ ಹರಿಯುವಂತೆ ಮಾಡಿದ ನಂತರ, ನ್ಯಾಯಸ್ಥರು ಮಾತನ್ನು ಮುಂದುವರಿಸಿ

"ನಮ್ಮೂರಿನ ಬಸವಣ್ಣ ದೇವರನ್ನು ಪೂಜೆ ಮಾಡಿ, ಮಾರಿಗುಡಿ ತಾವಿಂದ ಬುಟ್ಬುಡ್ಮ... ಅದ ಮುಂದೆ ಬುಟ್ಕೊಂಡು ....ನಾವೆಲ್ಲಾ ಹಿಂದೆ ಹಿಂದೆ ಹೋಗವ ...ಅದು ಯಾವ ಯಾವ ಕೇರಿಗಳಲ್ಲಿ ಹಾದು.... ಭೈರವೇಶ್ವರನ ದೇಗುಲಕ್ಕೆ ಹೊಯ್ತದೋ ....ಅಲ್ಲೆಲ್ಲಾ ತೇರನ್ನು ಎಳೆಯೋಣ" ಎಂದರು.

ಊರಿನ ಎಲ್ಲರ ಜಮೀನುಗಳಲ್ಲಿಯೂ ನಾನಾ ಬಗೆಯ ಮೇವನ್ನು ಮೇದು, ಆಕಾರದಲ್ಲಿ ಆನೆಯಂತಿದ್ದ ಬಸವ, ಗುಣದಲ್ಲಿ ತುಂಬಾ ಸಾಧು ಸ್ವಭಾವದ್ದಾಗಿತ್ತು. ಊರಿನ ಎಲ್ಲಾ ಕೇರಿಗಳಲ್ಲೂ ತಿರುಗಾಡುತ್ತಿದ್ದ ಬಸವನಿಗೆ, ಜಾತಿ ಮತ ಕುಲಗಳ ಭೇದವಿಲ್ಲದೆ ಎಲ್ಲರೂ ಅದಕ್ಕೆ ಕೈ ತಿಂಡಿಯನ್ನು ನೀಡುತ್ತಿದ್ದರು. ಈ ರೀತಿ ಊರಿನವರೆಲ್ಲರ ಪ್ರೀತಿ ಮತ್ತು ಭಕ್ತಿಗೆ ಬಸವ ಪಾತ್ರವಾಗಿತ್ತು.

ನ್ಯಾಯಸ್ಥರೊಬ್ಬರು ಹೇಳಿದ ಮಾತಿಗೆ ಕೆಲವೇ ಕ್ಷಣಗಳಲ್ಲಿ ಸಭೆಯಲ್ಲಿದ್ದ ಬಹುತೇಕ ಮಂದಿ ತಮ್ಮ ಸಮ್ಮತಿಯನ್ನು ನೀಡಿದರು. ಶಿವಣ್ಣನಂತೆ ವಿಚಾರವಂತರಾಗಿದ್ದ ಯುವಕರಿಗೆ ಈಗ ಬಾಯಿ ಕಟ್ಟಿದಂತಾಗಿತ್ತು. ವಿಧಿಯಿಲ್ಲದೆ ಹೊಸ ತಲೆಮಾರಿನ ಯುವಕರು 'ಬಸವಣ್ಣ ದೇವರ ಸೂತ್ರ' ಕ್ಕೆ ಅನಿವಾರ್ಯವಾಗಿ ತಲೆಬಾಗಬೇಕಾಯಿತು. ಮಾತು ಬಲ್ಲ ಮನುಷ್ಯರು ಪರಸ್ಪರ ಚರ್ಚಿಸಿ, ಅರಿವಿನಿಂದ ಬಗೆಹರಿಸಿಕೊಳ್ಳಬೇಕಾಗಿದ್ದ ಸಮಸ್ಯೆಗೆ.... ಮಾತು ಬಾರದ ಬಸವ ...ಈಗ ಪರಿಹಾರವನ್ನು ಸೂಚಿಸಬೇಕಾದ ವಿಲಕ್ಷಣ ಸಂದರ್ಭ ಬಂದೊದಗಿತ್ತು.

ಅಲ್ಲೆ ...ಸ್ವಲ್ಪ ದೂರದಲ್ಲಿ ಮೆಲುಕು ಹಾಕುತ್ತಾ ಕೆಡೆದುಕೊಂಡಿದ್ದ ಬಸವನನ್ನು ಮೇಲಕ್ಕೇಳಿಸಿ, ಮಾರಿಗುಡಿಯ ಮುಂದಕ್ಕೆ ಕರೆತಂದು, ತಮಡಪ್ಪನವರಿಂದ ಪೂಜೆ ಮಾಡಿಸಿ, ತೀರ್ಥವನ್ನು ಚಿಮುಕಿಸಿ, ಬಸವನನ್ನು ಮುಂದಿಟ್ಟುಕೊಂಡು ಅಲ್ಲಿದ್ದವರೆಲ್ಲರೂ ಹಿಂಬಾಲಿಸಿದರು.

ಮುಂದೆ ಮುಂದೆ ಬಸವ ...ಹಿಂದೆ ಹಿಂದೆ ಜನ. ಊರಿನ ಮೇಗಲ ಕೇರಿ... ಕೆಳಗಲ ಕೇರಿಗಳಲ್ಲಿ ಹಾದು ಬಂದ ಬಸವ ...ದಲಿತರ ಕೇರಿಯ ಬಳಿಗೆ ಬಂದಾಗ, ಪಕ್ಕದಲ್ಲಿ ಕಿರಿದಾಗಿದ್ದ ದಾರಿಯತ್ತ ಹೋಗದೆ ...ನೇರವಾಗಿ ಅಗಲವಾಗಿದ್ದ ರಸ್ತೆಯನ್ನು ಪ್ರವೇಶಿಸಿ... ಮದಗಜದಂತೆ ಹೆಜ್ಜೆಗಳನ್ನು ಇಡುತ್ತಾ ದಲಿತರ ಕೇರಿಯ ಮೂಲಕವಾಗಿ, ಭೈರವೇಶ್ವರ ದೇಗುಲದ ಬಳಿಗೆ ಬಂದಿತು.

ಅಂಬೇಡ್ಕರ್ ವಿಚಾರ ಕ್ರಾಂತಿಗೆ ...ಬಸವಣ್ಣ ದಾರಿಯನ್ನು ತೋರಿಸಿತ್ತು.

⌘

ನಾಲ್ಕು ಕಾಲಿನ ಬ್ಯಾಟೆ



ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಹಳ್ಳಿಯೊಂದರಲ್ಲಿ ನಡೆದ ಘಟನೆಯಿದು. ದಲಿತರ ಕೇರಿಯಲ್ಲಿ ಪಂಚಾಯ್ತಿ ಸೇರಿತ್ತು. ಕಾಡಮ್ಮನ ಹತ್ತು ವರ್ಷದ ಮಗ ಬೋರ ಅಪರಾಧಿ ಸ್ಥಾನದಲ್ಲಿ ನಿಂತಿದ್ದ. ಹಿಂದಿನ ರಾತ್ರಿ ಊರ ಗೌಡರ ಹೊಲದಲ್ಲಿ ಬೋರ ಅವರೆ ಕಾಯನ್ನು ಕದ್ದು ಕುಯ್ಯುತ್ತಿದ್ದಾಗ... ಗೌಡರ ಮನೆಯ ಆಳು ಕರಿಯನ ಕೈಗೆ ಸಿಕ್ಕಿ ಬಿದ್ದು... ಗೌಡರ ಬಳಿಗೆ ಎಳೆದೊಯ್ದಾಗ–

"ಅದೇನ್ ವಿಚಾರಣೆ ಮಾಡಿ, ನೀವೇ ದಂಡ ಹಾಕಿ, ನೀವೇ ವಸೂಲ್ ಮಾಡ್ಕೊಳ್ಳಿ" ಎಂದು ಗೌಡರು ದಲಿತರ ಕೇರಿಯ ನ್ಯಾಯಸ್ಥರ ಪಾಲಿಗೆ ಎಲ್ಲವನ್ನು ಬಿಟ್ಟಿದ್ದರು.

ವಿಚಾರಣೆ ಪ್ರಾರಂಭವಾಗುತ್ತಿದ್ದಂತೆಯೇ, ಕಾಡಮ್ಮ ದೊಡ್ಡದಾಗಿ ರಾಗ ತೆಗೆದು– "ಯಾರೂ ಮಾಡಬಾರದ ಅಪರಾಧವ ನನ್ಮಗ ಮಾಡಿದ್ದನಾ?... ಎಲ್ಲೋ ಜೀವ ತಡೀನಾರ್ದೆ... ಮೂರು ಅವರೆ ಕಾಯಿ ಕಿತ್ಬುಟ್ಟವ್ನೆ... ನೀವ್ಯಾರೂ ಗೌಡರ ಹೊಲದಲ್ಲಿ ಅವರೆ ಕಾಯ್ನ ಯಾವತ್ತೂ ಕದ್ದು ಕೂದೇ ಇಲ್ಲವ್ರೋ... ಯಾರ್ಯಾರು ಹೆಂಗೆಂಗೆ ಅನ್ನೋದನ್ನ... ನಾನು ಕಾಣ್ನೆ" ಎಂದು ಸಭೆಗೆ ಸವಾಲನ್ನು ಹಾಕಿದಳು. ಕಳೆದ ನಾಲ್ಕು ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದ ಕಾಡಮ್ಮ, ತನ್ನ ಎರಡು ಮಕ್ಕಳಿಗಾಗಿ ಎಡಗೈಲಿ ಜೀವ ಹಿಡ್ಕೊಂಡು, ಕೂಲಿ ನಾಲಿ ಮಾಡ್ಕೊಂಡು ಜೀವನ ತಳ್ಳುತ್ತಿದ್ದ ಕಡು ಬಡವೆ. ದಲಿತರ ಕೇರಿಯ ಒಂದು ಮೂಲೆಯಲ್ಲಿದ್ದ ಮುರುಕಲು ಗುಡಿಸಲೊಂದನ್ನು ಬಿಟ್ಟರೆ ಅವಳದೆನ್ನುವ ಮತ್ತಾವ ಸ್ಥಿರಾಸ್ತಿಯು ಇರಲಿಲ್ಲ. ಎರಡು ಸಣ್ಣ ಆಡಿನ ಮರಿಗಳು ಮತ್ತು ಒಂದು ಹೋತ... ಅವಳ ಪಾಲಿನ ಚರಾಸ್ತಿ.

ವಿಚಾರಣೆಯನ್ನು ಮಾಡುವುದಕ್ಕೆ ಮೊದಲೇ ತಿರುಗಿ ಬಿದ್ದ ಕಾಡಮ್ಮನ ಕೇಸನ್ನು, ದಲಿತರ ಪಂಚಾಯ್ತಿ ಕಟ್ಟೆಯಿಂದ ಗೌಡರ ಪಂಚಾಯ್ತಿ ಕಟ್ಟೆಗೆ ವರ್ಗಾಯಿಸಲಾಯ್ತು. ನಾಲ್ಕು ದಿನಗಳ ನಂತರ ಗೌಡರ ದೊಡ್ಡ ಮನೆಯ ಮುಂದೆ ವಿಚಾರಣೆಯು ಮತ್ತೆ ಪ್ರಾರಂಭಗೊಂಡಿತು. ಕಾಡಮ್ಮನು ಗೌಡರ ಮುಂದೆ ತನ್ನ ಅಹವಾಲನ್ನು ಮಂಡಿಸಿದಳು.

"ಏನೋ... ನನ್ನ ಮಗ ತಪ್ಪು ಮಾಡ್ಬುಟ್ಟವ್ನೆ ಕಣ್ರಪ್ಪ... ಹಸಿ ಅವರೆ ಕಾಳು ತಿನ್ನಬೇಕು ಅನ್ನೊ ಆಸೇಗೆ ಹಿಂಗೆ ಮಾಡ್ಬುಟ್ಟವ್ನೆ... ಇದೊಂದ್ ಸತಿ ನನ್ಮಗನ ತಪ್ಪ ಹೊಟ್ಟೇಲಿ ಹಾಕೊಂಡು ಮನ್ನಿಸ್ಬುಡಪ್ಪ" ಎಂದು ಕೈ ಮುಗಿದು ಕೇಳಿಕೊಂಡಳು.

"ಅದ್ಸರಿ ಕನಮ್ಮಿ ಕಾಡಿ... ಕೇಳಿದ್ರೆ ನಾನೇ ಮೂರು ಕುಯ್ಕೊಂಡ್ಹೋಗು ಅಂತ ಹೇಳ್ತಿರಲಿಲ್ವೆ.. ಅಂತಾದ್ರಲ್ಲಿ ಕದ್ದು ಕುಯ್ಯೋಕೆ ಏನಾಗಿತ್ತು ನಿನ್ ಮಗನಿಗೆ?"

"ತಪ್ಪು ಕಣ್ರಪ್ಪ... ನಾನು ಇಲ್ಲ ಅಂದ್ನೆ".

"ನೋಡು... ಈಗ ನಿನ್ನ ಮಗನಿಗೆ ದಂಡ ಹಾಕ್ದೆ ಬುಟ್ಬುಟ್ರೆ... ನಾಳೆ ಹೊತಾರೆ ಹೊತ್ಗೆ... ನನ್ನ ಹೊಲವೆಲ್ಲಾ ಕೂಳೆ ಆಗೊಯ್ತದೆ. ಅದಕ್ಕೆ ಏನಂತೀಯೆ ನೀನು?"

"ಅಪ್ಪೋ... ನಾ ಗಂಡ ಸತ್ತ ಮುಂಡೆ... ಬಡವೆ ಕಣ್ರಪ್ಪ. ನಾನು ದಂಡ ಕಟ್ಟಲಾರೆ. ನಿಮ್ ಪಾದ ಅಂತೀನಿ... ನಿಮ್ ದಮ್ಮಯ್ಯ ಅಂತೀನಿ, ಇದೊಂದು ಸತಿ ಬುಟ್ಬುಡ್ರಪ್ಪ" ಎಂದು ಇನ್ನಿಲ್ಲದಂತೆ ಗೋಗರೆದಳು. ಕಾಡಮ್ಮನ ಮೊರೆಗೆ ಈಗ ಯಾವ ಬೆಲೆಯೂ ಇರಲಿಲ್ಲ. ಏಕೆಂದರೆ ಸಾರ್ವಜನಿಕವಾಗಿ ಬಹಿರಂಗಗೊಂಡಿರುವ ಈ ಅಪರಾಧಕ್ಕೆ ಶಿಕ್ಷೆಯ ರೂಪದಲ್ಲಿ ಏನಾದರೊಂದು ಬಗೆಯ ದಂಡವನ್ನು ವಿಧಿಸುವುದು ಗೌಡರ ಪಾಲಿಗೆ ಅನಿವಾರ್ಯವಾಗಿತ್ತು.

ದಲಿತರ ಕೇರಿಯಲ್ಲಿನ ನ್ಯಾಯಸ್ಥರಲ್ಲಿ ಒಂದಿಬ್ಬರು... ಕಾಡಮ್ಮನಿಗೆ ಆಗದವರು... ಆಕೆಯ ಬಳಿ ಇರುವ ಹೋತದ ವಿಷಯವನ್ನು ಈಗಾಗಲೇ ಗೌಡರಿಗೆ ತಿಳಿಸಿ, ಅದನ್ನೇ ದಂಡದ ರೂಪದಲ್ಲಿ ಕಟ್ಟಿಸಿಕೊಳ್ಳಬಹುದೆಂದು ಗೌಡರ ಕಿವಿಯಲ್ಲಿ ಊದಿದ್ದರು. ಹೋತವನ್ನು ಕುಯ್ದು, ಅರ್ಧಪಾಲನ್ನು ಗೌಡರಿಗೆ ಒಪ್ಪಿಸಿ, ಉಳಿದರ್ಧ ಪಾಲನ್ನು ದಲಿತರ ಕೇರಿಯ ನ್ಯಾಯಸ್ಥರೆಲ್ಲಾ ಹಂಚಿಕೊಂಡು ತಮ್ಮ ಬಾಯ್ ಚಪಲವನ್ನು ತೀರಿಸಿಕೊಳ್ಳಬೇಕೆಂಬ ಉದ್ದೇಶ ಅವರದಾಗಿತ್ತು.

ಗೌಡರು ಕಾಡಮ್ಮನನ್ನು ಕುರಿತು–

"ಕಾಡಿ... ಇವತ್ತು ನಿನ್ನ ಮಗನನ್ನ ಹಂಗೆ ಬಿಟ್ಟೆ ಅಂತ್ಲೆ ಇಟ್ಕೊ... ನಾಳಾಕೆ ಇನ್ನೂ ಒಂದು ದೊಡ್ಡದುಕ್ಕೆ ಕೈ ಹಾಕ್ತಾನೆ. ಆಗ ನೀನೇ ಅವನನ್ನ ಕಳ್ಳನನ್ನಾಗಿ ಮಾಡ್ದಂಗೆ ಆಗೊದಿಲ್ವೆ? ... ಅದಕ್ಕೆ ಅವನ್ಗೂ ಒಂದು ಬೆದರಿಕೆ ಇರ್ಲಿ ಅಂತ, ಈಗೊಂದು ದಂಡ ಹಾಕ್ತೀನಿ... ಅದ ನೀನು ಕಟ್ಟಲೇಬೇಕು" ಎಂದರು. ಕಳಾಹೀನಳಾದ ಕಾಡಮ್ಮ ಮರು ಮಾತನಾಡದೆ ಅಲ್ಲಿ ಕುಳಿತಿದ್ದ ನ್ಯಾಯಸ್ಥರೆಲ್ಲರನ್ನೂ ಒಮ್ಮೆ ನೋಡಿದಳು. ಅವಳ ಕಣ್ಣುಗಳಿಂದ ಕಂಬನಿಗಳು ಉರುಳತೊಡಗಿದವು. ಗೌಡರು ಅಂತಿಮ ತೀರ್ಮಾನವನ್ನು ನೀಡುತ್ತಾ "ನಾಲ್ಕು ಕಾಲಿನ ಒಂದು ಬ್ಯಾಟೆಯನ್ನು ತಂದು ಒಪ್ಪಿಸ್ಬುಡು" ಎಂದು ಹೇಳಿ ಮೇಲೆದ್ದರು. ಕಾಡಮ್ಮನ ಬಳಿಯಿದ್ದ ಹೋತವೇ ನಾಲ್ಕು ಕಾಲಿನ ಬ್ಯಾಟೆಯಾಗಿತ್ತು.

ಹೋತವನ್ನು ದಂಡವಾಗಿ ಕೊಡಲು... ತುಂಬಾ ಸಂಕಟಗೊಂಡ ಕಾಡಮ್ಮ ಈ ವಿಷಯವನ್ನು ನಗರದಲ್ಲಿದ್ದ ಸಣ್ಣಪ್ಪನವರಿಗೆ ತಿಳಿಸಿದಳು. ಪದವೀಧರರಾಗಿದ್ದ ದಲಿತರ ಸಣ್ಣಪ್ಪ... ಯಾವುದೇ ಸರ್ಕಾರಿ ನೌಕರಿಗೆ ಸೇರದೆ, ತಮ್ಮ ಸಮುದಾಯದ ದೈನಂದಿನ ಸಮಸ್ಯೆಗಳ ಪರಿಹಾರಕ್ಕೆ, ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟಿದ್ದ ಮಧ್ಯವಯಸ್ಸಿನ ವ್ಯಕ್ತಿ. ಸಣ್ಣಪ್ಪನವರಲ್ಲಿ ಒಂದು ಹವ್ಯಾಸವಿತ್ತು. ಅದೇನೆಂದರೆ, ಯಾವುದೇ ಹಳ್ಳಿಗೆ ಹೋದಾಗ, ಸಮಸ್ಯೆಯಿಂದ ನರಳುತ್ತಿರುವವರ ಗುಡಿಸಲಿನ ಒಳಗೆಲ್ಲಾ ಓಡಾಡಿ, ಅಲ್ಲಿ ಕಂಡು ಬರುವ ವಸ್ತುಗಳೆಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸುವುದರ ಮೂಲಕವೇ, ಅವರ ಆರ್ಥಿಕ ಸ್ಥಿತಿಗತಿಗಳನ್ನು ಗ್ರಹಿಸಿಕೊಳ್ಳುತ್ತಿದ್ದರು. ಅನಂತರ ಅದಕ್ಕೆ ತಕ್ಕಂತೆ ಸಮಸ್ಯೆಯ ಪರಿಹಾರಕ್ಕೆ ಸೂಕ್ತವಾದ ಮಾರ್ಗ ಅನುಸರಿಸುತ್ತಿದ್ದರು.

ಕಾಡಮ್ಮನ ಗುಡಿಸಲಿನ ಒಳಕ್ಕೆ ಬಂದ ಸಣ್ಣಪ್ಪನವರ ಕಣ್ಣಿಗೆ... ನಾಲ್ಕಾರು ಮಡಕೆ ಕುಡಿಕೆಗಳು, ಹರಿದ ಚಿಂದಿ ಬಟ್ಟೆಗಳು, ಒಂದೆರಡು ಗೋಣಿ ತಾಟುಗಳು ಕಂಡು ಬಂದವು. ಮೂಲೆಯೊಂದರಲ್ಲಿದ್ದ ದೊಡ್ಡ ಮಂಕರಿಯೊಳಗಿಂದ ಚಿಲಿಪಿಲಿ ಧ್ವನಿ ಕೇಳಿ

ಬರುತ್ತಿತ್ತು. ಮಂಕರಿಯನ್ನು ಎತ್ತಿ ನೋಡಲೆಂದು ಸಣ್ಣಪ್ಪನವರು ಪ್ರಯತ್ನಿಸುತ್ತಿದ್ದಂತೆಯೇ, ಕಾಡಮ್ಮ ಅವರನ್ನು ತಡೆಯುತ್ತಾ–

"ಮ್ಯಾಕ್ಕೆ ಎತ್ ಬ್ಯಾಡಿ ಕಣ್ರಪ್ಪ... ಆಚೆಗೆ ಹೊಂಟೊಯ್ತವೆ."

"ಒಳಗೆ ಏನಿದ್ದವಮ್ಮ?"

"ಕೋಳಿ... ಮರಿ ಮಾಡದೆ ಕಣ್ರಪ್ಪ... ಎಲ್ಲಾ ಇನ್ನೂ ಹೂ ಮರಿಗಳು."

"ಎಷ್ಟಿದ್ದವು?"

"ಒಂದು ಹತ್ ಹನ್ನೆರಡು ಅವೆ ಕಣ್ರಪ್ಪ".

"ಬಾಮ್ಮ... ಗೌಡರ ಹಟ್ಟೀತಕೆ ಹೋಗ್ ಬರ್ಮ... ನನಗೆ ಅವರು ಮೊದಲಿಂದ್ಲೂ... ಬೋ ಪರಿಚಯ" ಎಂದು ಹೇಳಿ ಕಾಡಮ್ಮನನ್ನು ಕರೆದುಕೊಂಡು ಹೊರಟರು.

ಗೌಡರು, ಜಗಲಿಯ ಮೇಲೆ ಕುಳಿತಿದ್ದರು.

"ನಮಸ್ಕಾರ ಗೌಡ್ರೆ" ಎಂದ ಸಣ್ಣಪ್ಪನವರನ್ನು ಜಗಲಿ ಕಟ್ಟೆಯ ಮೇಲಕ್ಕೆ ಕರೆಯುತ್ತಾ–

"ಬನ್ನಿ ಸಣ್ಣಪ್ಪ...ಕಾಡಿ ನ್ಯಾಯ ಬಗೆಹರಿಸೋಕೆ ಬಂದ್ರ" ಎಂದರು.

"ಹೂ ಕಣ್ ಗೌಡ್ರೆ... ನನ್ನತಕೆ ಬಂದು ...ಅತ್ತೂ ಕರೆದು ಕೇಳ್ಕೊಂಡ್ಲು... ಅದಕ್ಕೆ ಬಂದೆ."

"ಏನ್ ಮಾಡೋದು ಸಣ್ಣಪ್ಪ... ನಿಮ್ಮ ಜನಕ್ಕೆ ಎಲ್ಲಾನು ಬುಟ್ಟಿದ್ದೆ. ಅವರವ್ರೆ ಬಗೆಹರಿಸಿಕೊಳ್ಳದೇ, ನನ್ನತಕೆ ತಿರ್ಗ ಬಂದ್ರು... ಊರಿನ ಪದ್ಧತಿಯಂತೆ ನಾನು ದಂಡ ಹಾಕ್ಲೆ ಬೇಕಾಯ್ತು".

"ಏನ್ ದಂಡ ಹಾಕಿದ್ದೀರಿ?"

"ಯಾಕೆ?... ಕಾಡಿ... ನಿಮ್ ಜೊತೇಲಿ ಹೇಳ್ಲಿಲ್ವೆ... ಅದೇ ನಾಲ್ಕು ಕಾಲಿನ ಒಂದು ಬ್ಯಾಟೆ."

"ಊರಿನ ಗೌಡರು ನೀವು ದಂಡ ಹಾಕಿದ ಮ್ಯಾಲೆ... ಇಲ್ಲ ಅನ್ನೋಕೆ ಆದದೆ... ಕಾಡಮ್ಮನ ಕೈಲಿ ಕಟ್ಟಿಸ್ತೀನಿ ಬುಡಿ" ಎಂದು ಹೇಳಿ, ಜಗುಲಿಯಿಂದ ಕೆಳಕ್ಕಿಳಿದು ಬಂದ ಸಣ್ಣಪ್ಪನವರು, ಕಾಡಮ್ಮನ ಕಿವಿಯಲ್ಲಿ ಏನನ್ನೋ ಮೆಲ್ಲನೆ ಉಸುರಿದರು.

ಕಾಡಮ್ಮ ದಡದಡನೆ ಗುಡಿಸಲ ಕಡೆಗೆ ಹೋಗಿ, ಕೆಲವೇ ಕ್ಷಣಗಳಲ್ಲಿ ತನ್ನ ಸೆರಗಿನ ಮರೆಯಲ್ಲಿ ಏನನ್ನೊ ಮುಚ್ಚಿಕೊಂಡು ಬಂದು ಸಣ್ಣಪ್ಪನವರ ಮುಂದೆ ನಿಂತು

ಕೊಂಡಳು. ಈಗ ಸಣ್ಣಪ್ಪನವರು ಒಮ್ಮೆ ಗೌಡರನ್ನು ನೋಡಿ ಅನಂತರ ಕಾಡಮ್ಮನನ್ನು ಕುರಿತು–

"ಗೌಡರಿಗೆ ನಾಲ್ಕು ಕಾಲುಗಳ ಬ್ಯಾಟೆಯನ್ನು ಒಪ್ಪಿಸ್ಬುಡಮ್ಮ" ಎಂದರು. ಕೂಡಲೇ, ಕಾಡಮ್ಮ ತನ್ನ ಸೆರಗಿನೊಳಗಿಂದ ಎರಡು ಕೋಳಿ ಮರಿಗಳನ್ನು ಹೊರ ತೆಗೆದು, ಗೌಡರ ಮುಂದೆ ಬಿಟ್ಟಳು.

"ಇದೇನ್ ಸಣ್ಣಪ್ಪ!" ಎಂದು ಅಚ್ಚರಿಯಿಂದ ಗೌಡರು ಉದ್ಗಾರವೆಳೆದರು.

"ಗೌಡರು ದಂಡ ಹಾಕಿದಂಗೂ ಆಯ್ತು... ಬಡವೆ ಕಾಡಮ್ಮ ದಂಡ ಕಟ್ಟಿದಂಗೂ ಆಯ್ತು... ದಯಮಾಡಿ ಗೌಡ್ರು ಒಪ್ಪಿಸ್ಕೋಬೇಕು" ಎಂದ ಸಣ್ಣಪ್ಪನವರ ಕಳಕಳಿಯ ಮಾತುಗಳ ಮುಂದೆ... ಗೌಡರು ಶರಣಾದರು.

⌘

ಕಾಫಿತೋಟದ ಕರಿಬೋರ



ಕೊಡಗಿನ ಕಾಫಿತೋಟವೊಂದರಲ್ಲಿ ಹತ್ತಾರು ವರ್ಷಗಳ ಕಾಲ ಕೂಲಿಯಾಳಾಗಿ ದುಡಿದು ಬರಿಗೈಯಲ್ಲಿ ಊರಿಗೆ ಹಿಂತಿರುಗಿದ್ದರೂ ...ಕರಿಬೋರ ಅವರ ಹೆಸರಿನ ಜೊತೆಯಲ್ಲಿ ಕಾಫಿತೋಟ ಸೇರಿಕೊಂಡಿತ್ತು. ಚಿಕ್ಕಂದಿನಲ್ಲಿ ನಾನು ಅವರನ್ನು ಗಮನಿಸುವ ವೇಳೆಗೆ... ಹಣ್ಣು ಹಣ್ಣು ಮುದುಕರಾಗಿದ್ದರು. ವಾರದಲ್ಲಿ ಒಂದೆರಡು ದಿನ, ದಲಿತರ ಕೇರಿಯಿಂದ ನಮ್ಮ ತೋಟದ ಮನೆಗೆ, ತಮ್ಮ ಪುಟ್ಟ ಮೊಮ್ಮಗನೊಡನೆ ದೊಣ್ಣೆಯೂರಿಕೊಂಡು ಬಂದು, ನಮ್ಮ ತಾಯಿಯಿಂದ ಒಂದು ಹೊತ್ತಿನ ಅನ್ನವನ್ನು ಪಡೆದುಕೊಂಡು ಹೋಗುತ್ತಿದ್ದರು.

ಅನ್ನವನ್ನು ಪಡೆಯುವುದಕ್ಕೆ ಮೊದಲು, ನಮ್ಮ ದನಗಳ ಗೊಂತಿನಲ್ಲಿದ್ದ ಸಗಣಿಯನ್ನು ಕುಕ್ಕುರುಗಾಲಿನಲ್ಲಿ ಕುಳಿತುಕೊಂಡೇ... ತಮ್ಮ ನಡುಗುವ ಕೈಗಳಿಂದ ತಳ್ಳಿ... ಅನಂತರ ಕಡ್ಡಿ ಬರಲಿನಿಂದ ಗುಡಿಸಿ, ಕಸ ತೆಗೆಯುತ್ತಿದ್ದರು... ಒಂದೊಂದು

ದಿನ ತೋಟದ ತೆವರಿಯಲ್ಲಿದ್ದ ಹುಲ್ಲನ್ನು ಕುಯ್ದು... ಸಣ್ಣ ಕರುಗಳ ಮುಂದೆ ಹಾಕುತ್ತಿದ್ದರು. ನಮ್ಮ ತಾಯಿ ಎಷ್ಟೇ ಬೇಡವೆಂದರೂ ಕೇಳದೇ, ಅವರು ಏನಾದರೊಂದು ಬಗೆಯ ಕೆಲಸದಲ್ಲಿ ತೊಡಗುತ್ತಿದ್ದರು.

"ಈ ಕರಿಬೋರನಂಥ ಒಳ್ಳೆಯ ಮನುಷ್ಯರು ಬಹಳ ಅಪರೂಪ... ಈತ ಎಂಥ ನಿಯತ್ತಿನ ವ್ಯಕ್ತಿ ಅಂದ್ರೆ... ಇವನು ಗಟ್ಟಿ ಮುಟ್ಟಾಗಿ ದುಡಿಯುವ ಆಳಾಗಿದ್ದಾಗ, ಕಣದಲ್ಲಿ ಒಕ್ಕಣೆ ಮಾಡಿದ ರಾಶಿಯನ್ನು ಕಾಯುವುದಕ್ಕೆ ನಮ್ಮ ಗೌಡರಾಗಲೀ... ಮನೆಯ ಮಕ್ಕಳಾಗಲಿ ರಾತ್ರಿ ಹೊತ್ತು ಕಣದಲ್ಲಿ ಮಲಗುತ್ತಿರಲಿಲ್ಲ. ಕರಿಬೋರ ಕಣದಲ್ಲಿ ಅವ್ನೆ ಅಂದ್ರೆ... ಒಂದು ಕಾಳು ಕಡ್ಡಿಯು ಅಲ್ಲಿಂದ ಕಳುವಾಗುವುದಿಲ್ಲವೆಂಬ ನಂಬಿಕೆ ನಮ್ಮೆಲ್ಲರಲ್ಲಿತ್ತು" ಎಂದು ಕರಿಬೋರ ಅವರ ಕಾಯಕ ನಿಷ್ಠೆಯ ಬಗ್ಗೆ ನಮ್ಮ ತಾಯಿ ಅನೇಕ ದೃಷ್ಟಾಂತಗಳನ್ನು ಹೇಳುತ್ತಿದ್ದರು.

ಹಣದ ವಿಷಯದಲ್ಲಿ ಅವರ ಪ್ರಾಮಾಣಿಕತನವನ್ನು ಎತ್ತಿ ಹಿಡಿಯುವ ಮತ್ತೊಂದು ಘಟನೆ ಈ ರೀತಿಯಿತ್ತು.

ಒಂದು ದಿನ ನಮ್ಮ ತಾಯಿ ಎರಡು ಕುಡ್ಲುಗಳನ್ನು ಮತ್ತು ಎರಡು ರೂಪಾಯಿಯನ್ನು ಕರಿಬೋರ ಅವರಿಗೆ ಕೊಟ್ಟು... ಆಚಾರಿ ಕೈಯಲ್ಲಿ ಕುಡ್ಲು ತಟ್ಟಿಸಿಕೊಂಡು ಬರಲು ಕಳುಹಿಸಿದರು. ಸ್ವಲ್ಪ ಸಮಯದ ನಂತರ ಹಿಂತಿರುಗಿ ಬಂದು, ತಟ್ಟಿಸಿಕೊಂಡು ತಂದ ಕುಡ್ಲುಗಳನ್ನು ನಮ್ಮ ತಾಯಿಯ ಕೈಗೆ ನೀಡಿದ ನಂತರ–

"ತಕೊಳ್ರವ್ವ... ನಿಮ್ಮ ಎರಡು ರೂಪಾಯ್ನ" ಎಂದರು.

"ಯಾಕ್ ಕರಿ ಬೋರ... ಆಚಾರಿಗೆ ದುಡ್ಡು ಕೊಡಲಿಲ್ವೆ?"

"ನಿಮ್ಮನೆ ಕುಡ್ಲು ಅಂತ ಗೊತ್ತಾದ್ಮೇಲೆ...ಗೌಡ್ರು ಮನೇಲಿ ಹಡದೆ ಈಸ್ಕೋತೀನಿ... ದುಡ್ಡು ಬ್ಯಾಡ ಅಂದ ಕಣ್ರವ್ವ" ಎಂದು ಹೇಳಿ, ಹಣವನ್ನು ಹಿಂತಿರುಗಿಸುತ್ತಿದ್ದಾಗ, ಅವರ ಕೈಯಲ್ಲಿದ್ದ ಮತ್ತೊಂದು ಕುಡ್ಲನ್ನು ಕಂಡು–

"ಇದ್ಯಾವುದು... ಇನ್ನೊಂದು ಕುಡ್ಲು? ಎಂದು ಪ್ರಶ್ನಿಸಿದರು.

"ನಂದೆ ಕಣ್ರವ್ವ.. ಯಾತಕ್ಕಾದರೂ ಬೇಕಾಯ್ತದೆ ಅಂತ... ಇದನ್ನೂ ಒಸಿ ತಟ್ಟಿಸಿಕೊಂಡು ಬಂದೆ... ಇದಕ್ಕೆ ಬ್ಯಾರೆ ನಂದೊಂದು ರೂಪಾಯಿ ಕೊಟ್ಟೆ ಕಣ್ರವ್ವ" ಎಂದರು.

"ನಮ್ಮ ಮನೇದೆ ಅಂತ ಹೇಳಿ ತಟ್ಟಿಸಿಕೊಂಡಿದ್ರೆ ಆಯ್ತಿರಲಿಲ್ವೆ ...ಅದಕ್ಯಾಕೆ ದುಡ್ಡು ಕೊಟ್ಟೆ?"

"ಯಾಕ್ರವ್ವ ಹಂಗೆ ಸುಳ್ಳು ಹೇಳ್ಬೇಕು?... ಇಕ್ಕೊಂಡು ಉಣ್ಣು ತಾವು... ಕದ್ದುಕೊಂಡು ಉಣ್ಬೇಕೆ?" ಎಂದು ಮರು ಪ್ರಶ್ನಿಸಿದ ಕರಿಬೋರ ಅವರ ಪ್ರಾಮಾಣಿಕತನದ ಮನೋಧರ್ಮವನ್ನು ಕಂಡು...ನಮ್ಮ ತಾಯಿ ಅಚ್ಚರಿ ಹಾಗೂ ಗೌರವ ಭಾವದಿಂದ ಮೂಕರಾಗಿದ್ದರು.

ಬೇಸಿಗೆಯ ರಜೆಯಲ್ಲಿ ನಾನು ಊರಿಗೆ ಹೋದಾಗಲೆಲ್ಲಾ ಕರಿಬೋರ ಅವರನ್ನು ನೋಡುತ್ತಿದ್ದೆ. ಇಂದಿಗೆ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಅವರು ನನ್ನೊಡನೆ ಆಡಿದ್ದ ಒಂದು ಮಾತು ... ಇಂದು ಅವರು ಕಣ್ಮರೆಯಾಗಿದ್ದರೂ... ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಒಂದು ದಿನ ಅವರು ನಮ್ಮ ಮನೆಗೆ ಬಂದು, ಎಂದಿನಂತೆ ದನದ ಕೊಟ್ಟಿಗೆಯ ಒಳಕ್ಕೆ ಹೋಗಿ ಕಸ ತೆಗೆಯುತ್ತಿದ್ದಾಗ–

"ಇದೇನು ... ಇಂಥ ಇಳಿ ವಯಸ್ಸಿನಲ್ಲೂ ನೀವು ಹಿಂಗೆ ಕೆಲಸ ಮಾಡ್ಬೇಕೆ ... ಸುಮ್ಮನೆ ಅನ್ನ ಈಸ್ಕೊಂಡೋದ್ರೆ ಆಗೂದಿಲ್ವೆ?" ಎಂದು ಪ್ರಶ್ನಿಸಿದೆ.

"ಅಪ್ಪಾಜಿ..." ಅವರು ನನ್ನನ್ನು ಪ್ರೀತಿಯಿಂದ ಕರೆಯುತ್ತಿದ್ದ ಪದ.

"ಅಪ್ಪಾಜಿ... ನಾನು ಬಂದಾಗಲೆಲ್ಲಾ... ಅವ್ವಾವ್ರು ಒಂದು ತುತ್ತು ಅನ್ನ ಕೊಡ್ತಾರೆ ಸರಿ... ಆದರೆ ಏನಾದ್ರೂ ನನ್ನ ಕೈಲಾದ ಒಂಚೂರು ಗೇಮೆ ಮಾಡ್ದೆ... ಅದನ್ನ ಉಣ್ಣಕೋದ್ರೆ... ಅನ್ನ ನನ್ನ ಗಂಟಲಲ್ಲಿ ಇಳಿಯೂದಿಲ್ಲ ಕಣ್ರಪ್ಪ" ಎಂದು ಹೇಳಿ ... ಅವರು ಕೊಟ್ಟಿಗೆಯಲ್ಲಿನ ಗಂಜಲನ್ನು ಬಳಿಯತೊಡಗಿದರು.

ಡಿ.ವಿ ಗುಂಡಪ್ಪನವರು 'ಮಂಕುತಿಮ್ಮನ ಕಗ್ಗ'ದಲ್ಲಿ "ಅನ್ನವನು ಉಣುವಂದು ನೀನ್ ಕೇಳ್... ಅದನು ಬೇಯಿಸಿದ ನೀರು... ನಿನ್ನ ಬೆವರಿನ ಹನಿಯೋ... ಅನ್ಯರ ಕಣ್ಣೀರೋ..." ಎಂದು ಹಾಡಿರುವ ಕವಿವಾಣಿಯ ಆದರ್ಶವು... ಕರಿಬೋರ ಅವರ ಬದುಕಿನಲ್ಲಿ ವಾಸ್ತವವಾಗಿತ್ತು.

ಚಿಕ್ಕಂದಿನಲ್ಲಿ ನಾನು... ಕರಿಬೋರ ಅವರ ಬದುಕಿನ ರೀತಿಯನ್ನು ಕುತೂಹಲದಿಂದ ಗಮನಿಸುತ್ತಿದ್ದೆನೆ ಹೊರತು... ಅವರ ಕಡು ಬಡತನದ ಬಾಳಿಗೆ ಕಾರಣಗಳೇನೆಂಬುದನ್ನು ವಿಶ್ಲೇಷಣೆ ಮಾಡಿರಲಿಲ್ಲ. ಈಗ ಒಮ್ಮೆ ಅವರ ಬದುಕಿನತ್ತ ನೋಡಿದಾಗ...ಜಾತಿ ಶ್ರೇಣಿಗಳಿಂದ ಕೂಡಿರುವ ನಮ್ಮ ಸಾಮಾಜಿಕ ವ್ಯವಸ್ಥೆ... ಭೂ ಒಡೆತನದ ಜಮೀನ್ದಾರಿ ಪದ್ಧತಿ ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ನಡುವೆ... ಕಾಫಿತೋಟದ ಕರಿಬೋರ ಅವರಂತಹ ಕೋಟಿಗಟ್ಟಲೆ ದೈಹಿಕ ಶ್ರಮಜೀವಿಗಳು ...ತಮ್ಮ ಪ್ರಾಮಾಣಿಕತನದ ದುಡಿಮೆಗೆ ಯೋಗ್ಯವಾದ ಪ್ರತಿಫಲವನ್ನು ಪಡೆಯಲಾಗದೆ... ತಮ್ಮ ಜೀವನದ ಉದ್ದಕ್ಕೂ ಬಡತನದ ಬೇಗೆಯಲ್ಲೇ ಹುಟ್ಟಿ....ಬೆಳೆದು....ಬಾಳಿ....ಬೆಂದು ಹೋಗುತ್ತಿರುವ ಕಟು ಸತ್ಯದ ಅರಿವಾಗುತ್ತದೆ.

⌘

ರಕ್ತ ಯಾರದಮ್ಮ



ಇಂದಿಗೆ ಸುಮಾರು ಹನ್ನೆರಡು ವರ್ಷಗಳ ಹಿಂದೆ ಹಳ್ಳಿಯೊಂದರಲ್ಲಿ ನಡೆದ ಘಟನೆಯಿದು.

ನಗರದಲ್ಲಿದ್ದ ಕಾಲೇಜಿಗೆ ಪ್ರತಿನಿತ್ಯ ಹಳ್ಳಿಯಿಂದ ಜೊತೆಯಾಗಿ ಹೋಗಿ ಬರುತ್ತಿದ್ದ ನಾಲ್ಕು ಮಂದಿ ವಿದ್ಯಾರ್ಥಿಗಳಲ್ಲಿ ...ಮೂರು ಮಂದಿ ಒಕ್ಕಲಿಗ ಹುಡುಗರು, ತಮ್ಮ ಗೆಳೆಯನ ಮನೆಯಲ್ಲಿ ಒಂದು ದಿನ ಊಟ ಮಾಡಿದರು. ಆತ ದಲಿತ ಜಾತಿಯವನಾಗಿದ್ದರಿಂದ ಈ ಸುದ್ದಿ ಕಾಳ್ಗಿಚ್ಚಿನಂತೆ ಊರಲ್ಲೆಲ್ಲಾ ಹಬ್ಬಿತು. ಇದೇ ರೀತಿ ಸಡಿಲಬಿಟ್ಟರೆ, ನಾಳೆ ಇನ್ನೊಂದು ಹಂತ ತಲುಪಿ, ಹಿಂದಿನಿಂದಲೂ ಬಿಗಿಯಾದ ಕಟ್ಟುಪಾಡುಗಳಿಂದ ನಡೆದುಕೊಂಡು ಬಂದಿರುವ ಮೇಲು ಕೀಳಿನ ಜಾತಿ ವ್ಯವಸ್ಥೆಯೇ ಕುಸಿದು ಬೀಳಬಹುದೆಂಬ ಭೀತಿಗೆ ಒಳಗಾದ ಒಕ್ಕಲಿಗರು... ಇಂಥಾದ್ದನ್ನೆಲ್ಲಾ

ಮೊಳಕೆಯಲ್ಲೇ ಮುರಿದು ಹಾಕಬೇಕೆಂದು ನಿರ್ಧರಿಸಿದರು. ಊರಿನ ಎಲ್ಲಾ ಜಾತಿಯ ಮುಖಂಡರ ಸಮ್ಮುಖದಲ್ಲಿ ನ್ಯಾಯ ಪಂಚಾಯ್ತಿ ಮಾಡಿ... ಊಟ ಹಾಕಿದ್ದ ದಲಿತರಿಗೆ ಎಚ್ಚರಿಕೆಯನ್ನು ನೀಡಿ... ಊಟ ಮಾಡಿದ್ದ ಒಕ್ಕಲಿಗ ಹುಡುಗರ ಕರ್ಮಾಂತರ ಮಾಡಿಸಿ ತಲೆ ಬೋಳಿಸಿ... ಕುಲಕ್ಕೆ ಕೂಡಿಸಿಕೊಳ್ಳಬೇಕೆಂಬ ಆಜ್ಞೆಯನ್ನು ನೀಡಿದರು.

ತಲೆತಲಾಂತರದಿಂದ ಆಚರಣೆಯಲ್ಲಿ ಬಂದಿದ್ದ ಜಾತಿಬದ್ಧ ವ್ಯವಸ್ಥೆಯ ಪರವಾಗಿದ್ದ ಪಂಚಾಯ್ತಿದಾರರ ಮುಂದೆ... ಕಾಲೇಜಿನ ಹುಡುಗರ ವೈಚಾರಿಕವಾದ ಮಾತುಗಳಿಗೆ ಯಾವುದೇ ಬೆಲೆ ಸಿಗಲಿಲ್ಲ. ಊರಿನವರ ಸಾಮೂಹಿಕ ಬಹಿಷ್ಕಾರದ ಬೆದರಿಕೆಗೆ ಗುರಿಯಾಗಿದ್ದ ತಂತಮ್ಮ ತಾಯ್ತಂದೆಯರನ್ನು ಸಾಮಾಜಿಕ ಇಕ್ಕಟ್ಟಿನಿಂದ ಪಾರು ಮಾಡಲೆಂದೋ ಅಥವಾ ಸಂಪ್ರದಾಯದ ಹೆಸರಿನಲ್ಲಿ ವಿಧಿಸಿರುವ ದಂಡನೆಯನ್ನು ಎದುರಿಸುವ ದಿಟ್ಟತನದ ನಿಲುವುಗಳನ್ನು... ಇನ್ನೂ ಹೊಂದದಿರುವ ಕಾರಣದಿಂದಲೋ... ಒಕ್ಕಲಿಗ ಹುಡುಗರು ತಲೆ ಬೋಳಿಸಿಕೊಂಡು ಜಾತಿ ಕಟ್ಟಳೆಗೆ ಶರಣಾದರು.

ಒಂದೆರಡು ವಾರಗಳಲ್ಲಿ ಈ ಸುದ್ದಿ ಒಬ್ಬರಿಂದ ಮತ್ತೊಬ್ಬರಿಗೆ ಹರಡಿ... ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಗೊಂಡಿತು. ಪೋಲಿಸಿನವರು ಈ ಹಳ್ಳಿಗೆ ಬಂದು ಮಾಹಿತಿಯನ್ನು ಸಂಗ್ರಹಿಸತೊಡಗಿದರು. ಇದರಿಂದ ಹಳ್ಳಿಯಲ್ಲಿ ಬಿಗುವಿನ ವಾತಾವರಣ ಉಂಟಾಗಿ... ಜಾತಿ ದ್ವೇಷದ ಕಿಡಿಗಳು ಭುಗಿಲೇಳತೊಡಗಿದವು. ಇನ್ನು ಮುಂದೆ ಬೇಸಾಯದ ಕೆಲಸಗಳಿಗೆ ದಲಿತರನ್ನು ಕರೆಯಬಾರದೆಂದು ಒಕ್ಕಲಿಗರು ಗುಟ್ಟಾಗಿ ನಿರ್ಧರಿಸಿಕೊಂಡರು.

ಜಿಲ್ಲಾ ಕೇಂದ್ರದಲ್ಲಿ ನೆಲೆಸಿದ್ದ ದಲಿತರ ನೇತಾರ ಸಣ್ಣಪ್ಪನವರಿಗೆ ಈ ಸುದ್ದಿ ಗೊತ್ತಾಗಿ ತುಂಬ ಸಂಕಟವಾಯಿತು. ಮಣ್ಣಿನ ಮಕ್ಕಳಾಗಿ ಒಂದೇ ಊರಿನಲ್ಲಿ ಬಾಳುತ್ತಿರುವ ಶ್ರಮಜೀವಿಗಳಾದ ದಲಿತರ ಮತ್ತು ಒಕ್ಕಲಿಗರ ನಡುವೆ ಸಾಮರಸ್ಯವನ್ನು ಮೂಡಿಸಲು ಸಣ್ಣಪ್ಪನವರು ಮುಂದಾದರು. ಸಮಾನತೆಯ ಸಮಾಜದ ನಿರ್ಮಾಣಕ್ಕಾಗಿ ಸಂಘರ್ಷದ ಹಾದಿಯಲ್ಲಿ ಸಾಗಿದ್ದ ಅಂಬೇಡ್ಕರ್ ಅವರ ವಿಚಾರಗಳೆಲ್ಲವನ್ನೂ ಚೆನ್ನಾಗಿ ಅಧ್ಯಯನ ಮಾಡಿಕೊಂಡಿದ್ದ ಸಣ್ಣಪ್ಪನವರಿಗೆ... ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯಿಂದ ಕೂಡಿದ ಶಾಂತಿಯುತವಾದ ಹೋರಾಟದ ಹಾದಿಯಲ್ಲಿಯೂ... ಅಪಾರವಾದ ನಂಬಿಕೆಯಿತ್ತು. ಶತ ಶತಮಾನಗಳಿಂದ ಜನಸಮುದಾಯದ ಮನದಲ್ಲಿ ನೆಲೆಗೊಂಡಿರುವ ಜಾತಿ ವ್ಯವಸ್ಥೆಯ ಬೇರುಗಳನ್ನು... ಸ್ವಲ್ಪ ಮಟ್ಟಿಗಾದರೂ ಸಡಿಲಗೊಳಿಸಿ... ವಿವಿಧ ಜಾತಿಗಳ ಜನರ ನಡುವೆ ಮೊದಲು ಪರಸ್ಪರ ಮಾನವೀಯ ಸಂಬಂಧಗಳನ್ನು

ಕಲ್ಪಿಸುವ ಪ್ರಯತ್ನದಲ್ಲಿ ಸಣ್ಣಪ್ಪನವರು... ತಮ್ಮನ್ನು ತಾವು ಅನೇಕ ವರ್ಷಗಳಿಂದ ತೊಡಗಿಸಿಕೊಂಡಿದ್ದರು. ಇಂತಹ ಕಾರ್ಯವನ್ನು ಮಾಡಲೆಂದು ಒಂದು ದಿನ ಬೆಳಿಗ್ಗೆ ಈ ಹಳ್ಳಿಗೆ ನಾಲ್ಕಾರು ಮಂದಿ ಹಿರಿಯರೊಡನೆ ಬಂದರು. ಹಿರಿಯರ ಗುಂಪಿನಲ್ಲಿ ಬ್ರಾಹ್ಮಣ, ಒಕ್ಕಲಿಗ, ಶೆಟ್ಟಿ ಮುಂತಾದ ಜಾತಿಗೆ ಸೇರಿದ ಜನರಿದ್ದರು.

ಅಡ್ಡ ರಸ್ತೆಯ ಬಳಿ ಬಸ್ಸಿನಿಂದ ಇಳಿದು, ಉರಿಯುತ್ತಿರುವ ಬಿಸಿಲಿನಲ್ಲಿ ನಡೆದುಕೊಂಡು, ನೇರವಾಗಿ ಊರ ಗೌಡರ ಮನೆಯ ಬಳಿಗೆ ಬಂದು ನಿಲ್ಲುತ್ತಿದ್ದಂತೆಯೇ... ಒಳಗಿನಿಂದ ಹೊರಕ್ಕೆ ಬಂದ ಹೆಂಗಸೊಬ್ಬರು ತಲೆ ಬಾಗಿಲಲ್ಲಿ ನಿಂತುಕೊಂಡು–

"ಮನೆಯಲ್ಲಿ ಗೌಡರಿಲ್ಲ" ಎಂದರು.

"ಎಲ್ಲಿಗೆ ಹೋಗವ್ರೆ?"

"ಅದೆಲ್ಲಿಗೆ ಹೋಗಿದ್ದರೋ... ನಾವು ಕಾಣೊ" ಎಂದು ತಾತ್ಸಾರದಿಂದ ಉತ್ತರಿಸಿದರು. ಶಾಂತಿ ಸಂಧಾನದ ಗುಂಪಿನ ಆಗಮನದ ಸುಳಿವನ್ನು ಹೇಗೋ ಅರಿತಿದ್ದ ಗೌಡರು... ತಮ್ಮ ಹೆಂಡತಿ ಮಕ್ಕಳಿಗೆ... ಬಂದವರ ಮುಂದೆ ಏನೊಂದು ವಿಷಯವನ್ನು ಕುರಿತು ಬಾಯಿ ಬಿಡದಂತೆ ಎಚ್ಚರಿಕೆ ನೀಡಿ, ಹೊತ್ತಿಗೆ ಮುಂಚೆಯೇ ಗದ್ದೆ ಕಡೆಗೆ ಹೋಗಿದ್ದರು.

ಸಣ್ಣಪ್ಪನವರ ಜೊತೆಯಲ್ಲಿ ಬಂದಿದ್ದ ಮಧ್ಯ ವಯಸ್ಸಿನ ಹೆಂಗಸೊಬ್ಬರು... ಈಗ ಗೌಡರ ಮನೆಯ ಒಂದೆರಡು ಮೆಟ್ಟಿಲುಗಳನ್ನೇರಿ ನಿಂತು–

"ನೀವು ಗೌಡರಿಗೆ ಏನಾಗ್ಬೇಕು?" ಎಂದು ಕೇಳಿದಾಗ ... ಬಾಗಿಲಲ್ಲಿ ನಿಂತಿದ್ದ ಹೆಂಗಸು "ನಾವು... ಅವರ ಮನೆಯವರು" ಎಂದು ಉತ್ತರಿಸಿದರು.

"ಹಾಗಾದರೆ... ಪರ ಊರಿನಿಂದ ಬಂದಿರುವ ನಮ್ಮನ್ನ ಈ ಬಿಸಿಲಿನಲ್ಲಿ ಬೀದಿಯಲ್ಲೇ ನಿಲ್ಲಿಸಿದ್ದೀರಲ್ಲ... ಪಡಸಾಲೆ ಮೇಲಕ್ಕಾದರೂ ಕರೆಯಿರಿ" ಎಂದು ಮುಗುಳ್ನಗುತ್ತ ನುಡಿದಾಗ... ಗೌಡತಿ ಕೆರಳಿ ಕೆಂಡವಾದರು.

"ಜಾತಿ ಕೆಡ್ಸಿ... ಊರನ್ನೆಲ್ಲಾ ಎಕ್ಕಹುಟ್ಟಿಸೋಕೆ ಬಂದಿದ್ದೀರಲ್ಲ... ಅದಕ್ಕೆ ನಿಮ್ಮನ್ನ... ಬನ್ರವ್ವ ಒಳಾಕೆ ಅಂತ... ಆರತಿ ಎತ್ತಿ ಕರೀಬೇಕಾಗಿತ್ತೆ?"

"ನಾವು ಹಾಗೆ ಊರಿಗೆ ಕೇಡು ಮಾಡೋಕೆ ಬಂದಿಲ್ಲ ಕಣ್ರಮ್ಮ" ಎಂದು ಸಣ್ಣಪ್ಪನವರು ನುಡಿದಾಗ–

"ಇನ್ನೇನು ಮಾಡುವುದಕ್ಕೆ ಬಂದಿದ್ದೀರಿ?... ದನವ ಎಮ್ಮೆ ಮಾಡೋಕೆ... ಎಮ್ಮೆಯ ದನ ಮಾಡೋಕೆ... ಬಂದಿದ್ದೀರಾ?" ಎಂದು ಮತ್ತಷ್ಟು ಒರಟೊರಟಾಗಿ ನುಡಿದರು.

ಅಲ್ಲಿಗೆ ಬಂದಿದ್ದ ಹಿರಿಯರಲ್ಲಿ... ಇಬ್ಬರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿದ್ದವರು. ಮತ್ತಿತರರು ಸಾಮಾಜಿಕ ಕಾರ್ಯಕರ್ತರಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ದುಡಿದಿದ್ದವರು. ಇಂತಹ ಅಪಮಾನದ ಮಾತುಗಳನ್ನು ನಗುನಗುತ್ತಾ ಸಹಿಸಿಕೊಳ್ಳುವ ತಾಳ್ಮೆ ಅವರಲ್ಲಿತ್ತು. ಇಷ್ಟರಲ್ಲಿ ಮನೆಯ ಒಳಗಡೆಯಿಂದ ಎಳೆಯ ಮಗುವೊಂದು ಕಿಟಾರನೆ ಕಿರುಚಿದ ಶಬ್ದ ಕೇಳಿ ಬಂತು. ಕೂಡಲೇ ಗೌಡತಿಯು ಮನೆಯ ಒಳಕ್ಕೆ ಸರಿದರು. ಮಗುವಿನ ಅಳುವಿನ ಜೊತೆ ಜೊತೆಗೆ ಒಬ್ಬ ಹೆಂಗಸಿನ ನರಳುವ ಧ್ವನಿಯೂ ಬರತೊಡಗಿತು.

ಬಂದಿದ್ದವರೆಲ್ಲರೂ ಈಗ ಪಡಸಾಲೆಯನ್ನೇರಿ ಕುಳಿತುಕೊಂಡರು. ಕೆಲವು ಕ್ಷಣಗಳ ನಂತರ ಮತ್ತೆ ಹೊರ ಬಂದ ಗೌಡತಿ... ತಾವು ಕರೆಯದಿದ್ದರೂ, ತಮ್ಮ ಮನೆ ಪಡಸಾಲೆಯಲ್ಲಿ ಕುಳಿತುಕೊಂಡಿರುವವರನ್ನು... ಕೆಕ್ಕರಿಸಿಕೊಂಡು ನೋಡತೊಡಗಿದರು. ಸಣ್ಣಪ್ಪನವರು ಗೌಡತಿಯನ್ನು ಕುರಿತು–

“ಮನೆಯಲ್ಲಿ ಯಾರಿಗಾದರೂ ಹುಷಾರು ಇಲ್ವೇನ್ರಮ್ಮ... ನೋಡಿ... ನಿಮ್ಮ ಜೊತೆಯಲ್ಲಿ ಮೊದಲು ಮಾತನಾಡಿದ ಇವರು... ಒಳ್ಳೆಯ ಲೇಡಿ ಡಾಕ್ಟ್ರು... ಏನಾದ್ರು ತೊಂದರೆ ಇದ್ರೆ... ಇವರಿಗೆ ತೋರಿಸಿ” ಎಂದರು. ಇದುವರೆಗೂ ರೋಷಾವೇಶದಿಂದ ಕುದಿಯುತ್ತಿದ್ದ ಗೌಡತಿಯ ಮುಖದಲ್ಲಿ... ಈಗ ಬದಲಾವಣೆಯು ಕಂಡು ಬಂದಿತು. ಒಂದೆರಡು ಕ್ಷಣಗಳ ನಂತರ, ಮೃದುವಾದ ಧ್ವನಿಯಲ್ಲಿ ಗೌಡತಿಯು ಡಾಕ್ಟರಮ್ಮನವರನ್ನು ಕುರಿತು–

“ನನ್ನ ಮಗಳು ಎರಡು ತಿಂಗಳ ಬಾಣಂತಿ ಕಣವ್ವ, ಅವಳಿಗೆ ಮೊನ್ನೆ ಬಂದ ಜ್ವರ ಕಮ್ಮಿಯಾಗ್ಲೇ ಇಲ್ಲ. ಒಂದೇ ಸಮನೆ ಹಾಕೊಂಡು ಸೀಯ್ತಾವೆ” ಎಂದು ನುಡಿದು ಮೌನವಾದರು. ಈಗ ಡಾಕ್ಟರಮ್ಮ ತಾವಾಗಿಯೇ ಒಳಕ್ಕೆ ಹೋಗಿ, ರೋಗಿಯನ್ನು ಪರೀಕ್ಷಿಸಿ ಔಷಧೋಪಚಾರದ ಬಗ್ಗೆ ಸೂಚನೆಗಳನ್ನು ನೀಡಿ, ಹೊರಕ್ಕೆ ಬಂದು ಕುಳಿತರು. ಸ್ವಲ್ಪ ಸಮಯದ ನಂತರ ಗೌಡತಿಯು ಒಂದು ತಟ್ಟೆಯ ತುಂಬಾ ಬಾಳೆಯ ಹಣ್ಣುಗಳನ್ನು ತಂದು ಎಲ್ಲರ ಮುಂದಿಟ್ಟು– ‘ತಕೊಳಿ... ಹಣ್ಣು ತಿನ್ನಿ” ಎಂದರು.

“ನಿಮ್ಮ ಮಗಳು ತುಂಬಾ ನಿಶ್ಶಕ್ತಿಯಾಗಿದ್ದಾಳೆ. ನಾನು ಬರೆದು ಕೊಟ್ಟಿರುವ ಮಾತ್ರೆಗಳನ್ನು ಈಗಲೇ ತರಿಸಿ, ಟೈಮಿಗೆ ಸರಿಯಾಗಿ ಕೊಡಿ. ಜ್ವರ ಬಿಟ್ಮೇಲೆ ಟಾನಿಕ್ ಕೊಡಿ” ಎಂದು ಡಾಕ್ಟರಮ್ಮ ಮತ್ತೊಮ್ಮೆ ಸೂಚನೆ ನೀಡಿದರು.

“ಅವಳು ಮೊದಲಿನಿಂದಲೂ ಹಂಗೆ ಒಣೀಕೊಂಡಳ್ವೆ ಕಣವ್ವ... ಈ ಸತಿ ಚೊಚ್ಚಲ ಹೆರಿಗೇಲಿ ಭೋ ಕಷ್ಟವಾಗೋಯ್ತು... ಮೈಸೂರಲ್ಲಿ ಆಸ್ಪತ್ರೆಗೆ ಸೇರಿಸಿದ್ದೊ... ಆಪ್ಲೇಸನ್ ಮಾಡಿ ಮಗ ತೆಗುದ್ರು.”

"ಹಂಗಾದ್ರೆ ... ಆಗ ರಕ್ತ ಬಹಳ ಹೋಗಿರಬೇಕು. ಅದಕ್ಕೆ ಇಷ್ಟೊಂದು ನಿಶ್ಯಕ್ತಿ" ಎಂದು ಸಣ್ಣಪ್ಪನವರು ಪ್ರತಿಕ್ರಿಯಿಸಿದಾಗ–

"ಹೂ ಕಣಪ್ಪ... ಆಗ ನನ್ನ ಮಗಳಿಗೆ ಮೂರು ಸೀಸ ರಕ್ತ ಕೊಟ್ರು."

"ಮಗಳಿಗೆ ನಿಮ್ಮ ರಕ್ತಾನೆ ಕೊಟ್ರ?"

"ಇಲ್ಲ ಕಣಪ್ಪ... ನಂದು ಆಗಲಿಲ್ಲ... ನಮ್ಮ ಗೌಡರದೂ ಆಗಲಿಲ್ಲ... ಅವಳ ಗಂಡಂದೂ ಹೊಂದೂದಿಲ್ಲ ಅಂದ್ಬುಟ್ರು".

"ಹಂಗಾದ್ರೆ ರಕ್ತ ಯಾರು ಕೊಟ್ರು?"

"ಆಸ್ಪತ್ರೇಲಿ ಯಾರ್ದೋ ಇತ್ತಂತೆ... ಅದನ್ನೇ ಕೊಟ್ರು".


"ನಿಮ್ಮ ಮಗಳಿಗೆ ಕೊಟ್ಟ ರಕ್ತ... ಯಾವ ಜಾತಿಯವರದಂತೆ?" ಎಂದು ಸಣ್ಣಪ್ಪನವರು ಪ್ರಶ್ನಿಸಿದಾಗ... ಇದುವರೆಗೂ ನಿರಾಳವಾಗಿ ಮಾತನಾಡುತ್ತಿದ್ದ ಗೌಡತಿಯ ಗಂಟಲು... ಈಗ ಕಟ್ಟಿದಂತಾಯಿತು.

"ನೋಡುದ್ರಾ... ಆವತ್ತು ನಿಮ್ಮ ಮಗಳ ಜೀವ ಉಳಿಸಿದ್ದು... ಹೆತ್ತ ತಾಯಿಯಾದ ನಿಮ್ಮ ರಕ್ತವಲ್ಲ... ನಿಮ್ಮ ನೆಂಟರಿಷ್ಟರದಲ್ಲ... ನಿಮ್ಮ ಜಾತಿಯ ಜನರದ್ದಲ್ಲ... ಯಾರೋ ನಾಲ್ಕು ಜನ... ಎಲ್ಲರಂಗೂ ಇರುವ ಮನುಷ್ಯರದು" ಎಂದು ಡಾಕ್ಟರಮ್ಮ ಹೇಳಿದ ಮಾತುಗಳನ್ನು... ಗೌಡತಿಯು ಮೂಕರಂತೆ ನಿಂತು ಆಲಿಸಿದರು.

'ಈಗ ನೀವೇ ಹೇಳಿ... ಮನುಷ್ಯರಲ್ಲಿ ಮೇಲು ಕೀಳು ಅಂತ ಇಪ್ಪತ್ತೆಂಟು ತರ ಜಾತಿ ಭೇದ ಮಾಡ್ಬೇಕೊ... ಇಲ್ಲ ನಾವು ಮನುಷ್ಯರೆಲ್ಲಾ ಒಂದೇ ಅಂತ ಅರಿತ್ಕೊಂಡು ಬಾಳುವುದು ಒಳ್ಳೇಯದೊ' ಎಂದು ಸಣ್ಣಪ್ಪನವರು ಆತ್ಮೀಯವಾದ ಧ್ವನಿಯಲ್ಲಿ ವಿವರಿಸಿದಾಗ... ಆ ಒಂದು ಗಳಿಗೆಯಲ್ಲಿ ... ಗೌಡತಿಯ ಮನದಲ್ಲಿ ಆವರಿಸಿದ್ದ ಜಾತಿ ಭ್ರಮೆಯು ಕಳೆದು ಮಾನವೀಯ ಭಾವನೆಯು ಮೂಡಿದುದರ ಸಂಕೇತದಂತೆ ... ಗೌಡತಿಯ ಕಣ್ಣುಗಳು ಅರಳಿದವು.

⌘

ಪರಮಹಂಸರ ಪಾಲಿನ ಬಾಡು



ಗ್ರಾಮೀಣ ಪ್ರದೇಶದಲ್ಲಿರುವ ನಮ್ಮ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿರುವ ಹುಡುಗರಲ್ಲಿ ಮಾಂಸಾಹಾರಿಗಳೇ ಹೆಚ್ಚು. ವರ್ಷಕ್ಕೊಮ್ಮೆ 'ಹಾಸ್ಟೆಲ್ ಡೇ' ಬಂದಾಗ ಬಾಡಿನೂಟವೇ ಆಗಬೇಕು. ಅದಿಲ್ಲವೆಂದರೆ 'ಹಾಸ್ಟೆಲ್ ಡೇ' ಆಚರಿಸುವುದರಲ್ಲಿ ಅರ್ಥವಿಲ್ಲ. ಇಂತಹ ದಿನದಲ್ಲಿ ವಿದ್ಯಾರ್ಥಿನಿಲಯದ ಪಾಲಕರು ತಮ್ಮ ನೆರವಿಗೆ ಒಂದಿಬ್ಬರು ಅಧ್ಯಾಪಕರನ್ನು ಕರೆಯುತ್ತಿದ್ದರು. ಏಕೆಂದರೆ, ಮಾಂಸವನ್ನು ಬಡಿಸುವಾಗ, ಒಂದೆರಡು ತುಂಡು ಹೆಚ್ಚು ಕಡಿಮೆಯಾದರೂ, ಹುಡುಗರು ತಮ್ಮಲ್ಲೇ ತಲೆ ತಲೆ ಕೆಚ್ಚಾಡುವುದು ಗ್ಯಾರಂಟಿ.

'ಹಾಸ್ಟೆಲ್ ಡೇ' ಪ್ರಯುಕ್ತ ಒಂದು ಭಾನುವಾರ ಮಧ್ಯಾಹ್ನ ಬಾಡಿನೂಟ ನಡೆಯುತ್ತಿತ್ತು. ಇಬ್ಬರು ಹುಡುಗರ ಸಹಾಯದಿಂದ ವಿದ್ಯಾರ್ಥಿಗಳ ದೊನ್ನೆಗೆ ಮಾಂಸವನ್ನು

ಸಮ ಪ್ರಮಾಣದಲ್ಲಿ ಎಚ್ಚರಿಕೆಯಿಂದ ಹಾಕಿಸುವುದರಲ್ಲಿ ಮಗ್ನನಾಗಿದ್ದೆ. ಅಷ್ಟರಲ್ಲಿ ಒಬ್ಬ ಹುಡುಗ ನನ್ನ ಬಳಿಗೆ ಬಂದು–

"ಸಾರ್, ಪರಮಹಂಸರ ಪಾಲಿನ ಬಾಡಿನ ದೊನ್ನೇನ ಹಂಗೆ ಎತ್ತಿಡಬೇಕಂತೆ ಸಾರ್" ಎಂದ.

"ಏನಯ್ಯ ನೀನು ಹೇಳ್ತಿರೋದು?... ಯಾವ ಪರಮಹಂಸರ ಪಾಲು?"

"ರಾಮಕೃಷ್ಣ ಪರಮಹಂಸರ ಪಾಲಿನ ದೊನ್ನೆ ಸಾರ್".

ಅವನ ಪಕ್ಕದಲ್ಲಿದ್ದ ಮತ್ತೊಬ್ಬ ವಿದ್ಯಾರ್ಥಿ ವಿವರಣೆಯನ್ನು ನೀಡತೊಡಗಿದ –

"ಸಾರ್, ಇವತ್ತು ರಾತ್ರಿ ನಡೆಯುವ 'ದಿವ್ಯ ದೇಗುಲ' ನಾಟಕದ ರಾಮಕೃಷ್ಣ ಪರಮಹಂಸರ ಪಾತ್ರ ಮಾಡವ್ನಲ್ಲ.... ಸೆಕೆಂಡ್ ಬಿ.ಎ. ದೊಳ್ಳೇಗೌಡ... ಅವನು, ಇವನ ಕೈಯಲ್ಲಿ ಹಿಂಗೆ ಹೇಳಿ ಕಳ್ಸವ್ನೆ ಸಾರ್. ಇವನು... ಅದೇ ನಾಟಕದಲ್ಲಿ ಒಂದು ಪಾತ್ರ ಮಾಡವ್ನೆ. ಇವರೆಲ್ಲಾ ದೊಳ್ಳೇಗೌಡನ್ನ... 'ಪರಮಹಂಸರು' ಅಂತ್ಲೆ ಕರೆಯೋದು ಸಾರ್."

"ಅವನಿಗೆ ಈಗ್ಲೆ ಬಂದು ಊಟ ಮಾಡೋಕೆ ಏನಂತೆ?"

"ಈಗ ಮಾಡಬಾರದಂತೆ ಸಾರ್. ನಾಟಕ ಕಲಿಸಿರುವ ನಮ್ಮ ಲೆಕ್ಚರರ್ ತಿಮ್ಮೇಗೌಡರು... ದೊಳ್ಳೇಗೌಡನಿಗೆ ಇವತ್ತು ಬಾಡು ತಿನ್ಬೇಡ ಅಂತ ಕಂಡಿಶನ್ ಮಾಡವ್ರೆ ಸಾರ್."

"ಯಾಕಂತೆ?"


"ಪರಮಹಂಸರ ಅಹಿಂಸೆಯ ಸಂದೇಶವನ್ನು ಸಾರುವ ಪಾತ್ರವನ್ನು ಮಾಡುತ್ತಿರುವುದರಿಂದ... ಮಾಂಸ ಮಡ್ಡಿ ತಿನ್ನದೇ, ಶುಚಿಯಾಗಿರ್ಬೇಕು ಅಂತ... ಅವನಿಗೆ ಅಪ್ಪಣೆ ಮಾಡವ್ರೆ ಸಾರ್."

ಅತ್ತ ನಾಟಕದ ನಿರ್ದೇಶಕರಾದ ಗುರುಗಳ ಮಾತನ್ನು ಮೀರಲಾರದೆ, ಇತ್ತ ಬಾಡನ್ನು ತಿನ್ನುವ ಮೋಹವನ್ನು ಬಿಡಲಾರದೆ ದೊಳ್ಳೇಗೌಡನು, ನಾಟಕ ಮುಗಿದ ಮೇಲೆ ಬಾಡನ್ನು ತಿನ್ನುವ ಯೋಜನೆಯನ್ನು ಹಾಕಿಕೊಂಡು, ತನ್ನ ಪಾಲಿನ ಬಾಡಿನ ದೊನ್ನೆಯನ್ನು ಕಾದಿರಿಸುವುದಕ್ಕೆ ಹೇಳಿ ಕಳುಹಿಸಿದ್ದ.

ಪರಮಹಂಸ ಪಾತ್ರಧಾರಿ ದೊಳ್ಳೇಗೌಡರಿಗೆ... ಅಂದು ರಾತ್ರಿ ತಿನ್ನಲೆಂದು ಎರಡು ದೊನ್ನೆಗಳಲ್ಲಿ ಬಾಡನ್ನು ತುಂಬಿಸಿಟ್ಟೆನು.

⌘

ಅನುಕಂಪ ಅತಿಯಾದಾಗ



ಒಂದು ದಿನ ಮಧ್ಯಾಹ್ನ ಸುಮಾರು ಮೂರೂವರೆ ಗಂಟೆಯ ಸಮಯದಲ್ಲಿ ಮೈಸೂರಿನಿಂದ ಮಂಡ್ಯಕ್ಕೆ ಒಂದು ಸರ್ಕಾರಿ ಬಸ್ ವಾಯುವೇಗದಲ್ಲಿ ಬರುತ್ತಿತ್ತು. ಬಸ್ಸಿನೊಳಗಿದ್ದ ಪ್ರಯಾಣಿಕರಲ್ಲಿ ಬಹುತೇಕ ಮಂದಿ ಮಂಪರಿನಲ್ಲಿದ್ದರು. ವೇಗವಾಗಿ ಸಾಗುತ್ತಿರುವ ಬಸ್ಸಿನ ಮೊರೆತ ಮತ್ತು 'ಬರ್ರೋ' ಎಂದು ಬೀಸುತ್ತಿರುವ ಗಾಳಿಯ ಶಬ್ದ ಮಾತ್ರ ಕೇಳಿ ಬರುತ್ತಿತ್ತು. ಮಾರ್ಗ ಮಧ್ಯದಲ್ಲಿ ಉಂಟಾದ ಯಾವುದೋ ಅಡಚಣೆಯಿಂದಾಗಿ ಡ್ರೈವರನು ಬಸ್ಸಿಗೆ ಏಕ್‌ದಂ ಬ್ರೇಕನ್ನು ಹಾಕಿ.... ಬಲಕ್ಕೆ ಸ್ವಲ್ಪ ಎಳೆದು, ಮತ್ತೆ ಎಡಕ್ಕೆ ಬಸ್ಸನ್ನು ತರುತ್ತಿದ್ದಂತೆಯೇ... ಬಸ್ಸಿನ ಒಳಗಡೆ "ದಢ್" ಎಂಬ ಶಬ್ದ ಕೇಳಿ ಬಂತು. ಅದರ ಜೊತೆಯಲ್ಲಿಯೇ "ಅಯ್ಯೋ...." ಎಂಬ ಸಂಕಟದ ಧ್ವನಿಯೂ ಹೊರಹೊಮ್ಮಿತು.

ಪ್ರಯಾಣಿಕರ ಸೀಟುಗಳ ಮೇಲ್ಭಾಗದಲ್ಲಿ ಸಣ್ಣ ಪುಟ್ಟ ಸಾಮಾನುಗಳನ್ನು ಇಡಲೆಂದಿರುವ ಲಗೇಜಿನ ಹಂತದಲ್ಲಿಟ್ಟಿದ್ದ, ಮಧ್ಯಮ ಗಾತ್ರದ ಒಂದು ಸೂಟ್‌ಕೇಸ್ ಉರುಳುವಾಗ... ಪ್ರಯಾಣಿಕರೊಬ್ಬರ ತಲೆಗೆ ಬಡಿದು ಕೆಳಕ್ಕೆ ಬಿದ್ದಿತ್ತು.

ಆ ಪ್ರಯಾಣಿಕರ ವಯಸ್ಸು ಸುಮಾರು ಐವತ್ತಾಗಿತ್ತು. ತಲೆಯ ಮೇಲ್ಭಾಗದ ಕೂದಲು ಸಂಪೂರ್ಣವಾಗಿ ಉದುರಿ ಹೋಗಿದ್ದುದರಿಂದ, ಅವರ ತಲೆಯು ತಾಮ್ರದ ಚೆಂಬಿನಂತೆ ಹೊಳೆಯುತ್ತಿತ್ತು. ಸೂಟ್‌ಕೇಸಿನ ಪೆಟ್ಟಿನಿಂದಾಗಿ, ತಲೆಯ ಮೇಲ್ಭಾಗದಲ್ಲಿ ದೊಡ್ಡ ಗುಪ್ಪೆಯೊಂದು ಬುರುಬುರುನೆ ಊದಿಕೊಂಡಿತ್ತು. ತೀವ್ರವಾದ ನೋವಿನಿಂದ ಆಘಾತಗೊಂಡಿದ್ದ ಅವರ ಮುಖದಲ್ಲಿ ಅಪಾರವಾದ ಯಾತನೆ ಕಂಡು ಬರುತ್ತಿತ್ತು.

ಅಕ್ಕಪಕ್ಕದಲ್ಲಿ ಮತ್ತು ಹಿಂದೆ ಮುಂದೆ ಕುಳಿತಿದ್ದ ಸಹ ಪ್ರಯಾಣಿಕರಿಗೆ ಅವರ ಸ್ಥಿತಿಯನ್ನು ಕಂಡು ಬಹಳ ಅನುಕಂಪ ಉಂಟಾಯಿತು. ಈಗ ತಲಾಗಿ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಲಾರಂಭಿಸಿದರು.

"ಇಷ್ಟು ದೊಡ್ಡ ಸೂಟ್‌ಕೇಸನ್ನು ಅಲ್ಲಿ ಇಟ್ಟಿದ್ದೋರು ಯಾರು?"

"ಯಾರದ್ರೀ... ಈ ಸೂಟ್‌ಕೇಸ್?"

"ಇಷ್ಟು ದೊಡ್ಡದನ್ನು ಕೆಳಗಡೆ ಇಟ್ಕೋಬೇಕು ಅನ್ನೋ ತಿಳುವಳಿಕೆ ಇರಬೇಡ್ವೇನ್ರೀ?"

ಈಗ ಬಸ್ಸು ಮಂದಗತಿಯಲ್ಲಿ ಸಾಗುತ್ತಿತ್ತು. ಕೆಳಗೆ ಬಿದ್ದಿದ್ದ ಸೂಟ್‌ಕೇಸ್ ಅನಾಥವಾಗಿತ್ತು... ಸಹ ಪ್ರಯಾಣಿಕರಲ್ಲಿ ಕೆಲವರ ಅನುಕಂಪ ಮತ್ತು ಕೋಪದ ಪ್ರಮಾಣ ಏರುತ್ತಿತ್ತು.

"ಪಾಪ! ಎಂಥ ಏಟಾಯ್ತು?... ಅಲ್ನೋಡಿ ಅವರು ಇನ್ನೂ ಹೇಗೆ ನೋವು ತಿಂತಾವರೆ?".

"ಇಷ್ಟೆಲ್ಲಾ ಆದ್ರೂ... ಆ ಸೂಟ್‌ಕೇಸ್ ನಂದು ಅಂತ ಯಾರೂ ಹೇಳ್ತಾ ಇಲ್ವಲ್ಲ!"

"ಯಾವ ಬೋಳಿಮಗಂದೋ ಕಾಣನಲ್ಲ... ಅವನ್ತಲೆ ಮ್ಯಾಲೆ ಬಿದ್ದಿದ್ರೆ... ಆಗ ಗೊತ್ತಾಗೂದು ಎಂಥ ನೋವಾಯ್ತದೆ ಅಂತ."

ಬಯ್ಗುಳಗಳ ಜಾಟಿ ಏಟುಗಳು ಬೀಳಲಾರಂಭಿಸಿದವು. ಸೂಟ್‌ಕೇಸ್ ತನ್ನದೆಂದು ಯಾರೊಬ್ಬರೂ ಮುಂದೆ ಬರಲಿಲ್ಲವಾದ್ದರಿಂದ, ಸಹ ಪ್ರಯಾಣಿಕರಲ್ಲಿ ಕೆಲವರು ಮತ್ತಷ್ಟು ಉದ್ರಿಕ್ತರಾದರು. ಆ ಸೂಟ್‌ಕೇಸನ್ನು ನೋಡಿದಂತೆಲ್ಲಾ... ಅವರ ಕೋಪ ಇಮ್ಮಡಿಗೊಳ್ಳತೊಡಗಿತು.

"ಯಾವ್ದೋನು ನಂದು ಅಂತ ಹೇಳ್ತಾಯಿಲ್ಲ... ಅದನ್ನ ಎತ್ತಿ ಬಸ್ಸಿನಿಂದ ಆಚೆಗೆ ಎಸೀರಿ."

"ಎತ್ತಿ ಬಿಸಾಕ್ರಿ ಆಚೆಗೆ."

"ಏನ್ ನೋಡ್ತಾ ಇದ್ದೀರಿ.... ತೂದ್ ಬಿಸಾಕ್ರಿ ಆಚೇಗೆ." ಎಂಬ ಮಾತಿನ ಧ್ವನಿಗಳು ಹೆಚ್ಚಾಗುತ್ತಿದ್ದಂತೆಯೇ, ಅದನ್ನು ಎತ್ತಿ ಹೊರಕ್ಕೆ ಎಸೆಯಲೆಂದು ಒಬ್ಬ ಸಿದ್ಧನಾಗಿ ಸೂಟ್‌ಕೇಸಿಗೆ ಕೈ ಹಾಕಿದ. ಪೆಟ್ಟು ತಿಂದು ಇದುವರೆಗೂ ಮೂಕರಾಗಿ ನೋವನ್ನು ಅನುಭವಿಸುತ್ತಿದ್ದ ಬೋಳುತಲೆಯ ವ್ಯಕ್ತಿಯು.... ಸೂಟ್‌ಕೇಸನ್ನು ಬಿಗಿಯಾಗಿ ಹಿಡಿದುಕೊಂಡು ಮೆಲ್ಲನೆ ಹೇಳಿದರು.

"ಇದು ನಂದೆ ಕಣ್ರಪ್ಪ".

⌘

ಪುಟಾಣಿ ಮಗುವೇ ಕೇಳು



ಹಳ್ಳಿಗಾಡಿನ ಮಕ್ಕಳಿಗೆ ಉತ್ತಮ ವಿದ್ಯೆ ದೊರಕುವಂತಾಗಲೆಂಬ ಸದುದ್ದೇಶದಿಂದ, ಶಾಲಾ ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಿ ಬೆಳೆಸುತ್ತಿರುವ, ಶಿಕ್ಷಣ ಸಂಸ್ಥೆಯ ಅಧ್ಯಕ್ಷರೊಬ್ಬರ ಜೀವನದಲ್ಲಿ ನಡೆದ ಘಟನೆಯಿದು.

ಸುಮಾರು ಮೂವತ್ತು ವರ್ಷಗಳ ಹಿಂದೆ ಕಾಲೇಜನ್ನು ಪ್ರಾರಂಭಿಸಿದ ಹೊಸದರಲ್ಲಿ ಕಾಲೇಜು ಅಧ್ಯಾಪಕರ ಸಭೆಯೊಂದರಲ್ಲಿ.... "ನೀವು ನಮ್ಮ ಹಳ್ಳಿಯ ಹುಡುಗರಿಗೆ ಅವರು ಪ್ರತಿ ನಿತ್ಯ ಹೇಗೆ ಮಡಿ ಬಟ್ಟೆ ಉಟ್ಕೊಂಡು.... ಎಣ್ಣೆ ಹಾಕಿ ತಲೆ ಬಾಚ್ಕೊಂಡು.... ಚಪ್ಪಲಿ ಹಾಕಿಕೊಂಡು.... ಕಾಲೇಜಿಗೆ ನೀಟಾಗಿ ಬರ್ಬೇಕು ಅನ್ನೋದನ್ನ.... ಮೊದಲು ಒಂದೆರಡು ತರಗತಿಯಲ್ಲಿ ಪದೇ ಪದೇ ಹೇಳಿ, ಅನಂತರ ಅವರಿಗೆ ಒಳ್ಳೆಯ ನಡೆನುಡಿಗಳ ತರಬೇತಿ ನೀಡಿ, ಆಮೇಲೆ ಪಾಠಗಳನ್ನು ಕಲಿಸಿ" ಎಂದು ತಮಗಿರುವ ಕಳಕಳಿಯನ್ನು ವ್ಯಕ್ತಪಡಿಸಿದ್ದರು. ಇವತ್ತಿಗೂ ನಮ್ಮ ಗ್ರಾಮೀಣ ಮಕ್ಕಳು ಪರೀಕ್ಷೆಗಳಲ್ಲಿ ಒಳ್ಳೆಯ ಫಲಿತಾಂಶವನ್ನು ಪಡೆದಾಗ, ಪಠ್ಯೇತರ ಚಟುವಟಿಕೆಗಳಲ್ಲಿ ಮತ್ತು ಆಟೋಟಗಳಲ್ಲಿ ವಿಜೇತರಾದರೆಂಬ ಸುದ್ದಿಯನ್ನು ಕೇಳಿದಾಗ.... ಅಧ್ಯಕ್ಷರು ಪಡುವ ಸಂತೋಷ ಅಷ್ಟಿಷ್ಟಲ್ಲ.

ಪ್ರೈಮರಿ ಶಾಲೆಯಿಂದ ಹಿಡಿದು ಕಾಲೇಜಿನವರೆಗೆ ಹಬ್ಬಿರುವ ಶಿಕ್ಷಣ ಸಂಸ್ಥೆಯಲ್ಲಿ.... ಆಗಿಂದಾಗ್ಗೆ ಸೃಷ್ಟಿಗೊಳ್ಳುವ ಅಧ್ಯಾಪಕ ಹುದ್ದೆಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡುವುದಕ್ಕಾಗಿ ನಡೆಯುವ ಸಂದರ್ಶನದಲ್ಲಿ ಅಧ್ಯಕ್ಷರು ಭಾಗಿಯಾಗುತ್ತಾರೆ. ಜಾತಿ, ಮತ, ಪ್ರಾಂತ್ಯ ಮತ್ತು ಸ್ವಜನ ಪಕ್ಷಪಾತಗಳಿಂದ ದೂರವಿರುವ ಅಧ್ಯಕ್ಷರಿಗೆ.... "ಮೇಷ್ಟ್ರುಗಳು ಅಂದರೆ.... ಮಕ್ಕಳ ಭವಿಷ್ಯವನ್ನು ಎಲ್ಲಾ ರೀತಿಯಿಂದಲೂ ಉತ್ತಮವಾಗಿ ರೂಪಿಸುವ ಹೊಣೆಯನ್ನು ಹೊರಬೇಕಾದವರು" ಎಂಬ ಭಾವನೆಯಿದೆ. ಆದ್ದರಿಂದಲೇ ಅವರು ಆಯ್ಕೆ ಸಮಿತಿಯಲ್ಲಿದ್ದಾಗ, ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ್ದು.... ಇಂಟರ್‌ವ್ಯೂನಲ್ಲಿ ಚೆನ್ನಾಗಿ ಮಾಡುವ ಪ್ರತಿಭಾವಂತ ಅಭ್ಯರ್ಥಿಗಳು.... ಮತ್ತಾರ ಬೆಂಬಲವೂ ಇಲ್ಲದೆ ಆಯ್ಕೆಗೊಳ್ಳುವುದು ಖಚಿತ.

ಅಧ್ಯಾಪಕರ ಹುದ್ದೆಗಳಿಗೆ ಅಭ್ಯರ್ಥಿಗಳಾಗಿ ಬಂದವರಿಗೆ, ಅಧ್ಯಕ್ಷರು ಯಾವಾಗಲೂ ಕೇಳುವುದು ಒಂದೇ ಬಗೆಯ ಪ್ರಶ್ನೆ. ಅದೇನೆಂದರೆ–

"ನೋಡಿ.... ನನ್ನನ್ನು ಮತ್ತು ಇಲ್ಲಿ ಅಕ್ಕ ಪಕ್ಕದಲ್ಲಿ ಕುಳಿತಿರುವ ಆಯ್ಕೆ ಸಮಿತಿಯ ಸದಸ್ಯರನ್ನು... ನಿಮ್ಮ ವಿದ್ಯಾರ್ಥಿಗಳೆಂದು ಭಾವಿಸಿಕೊಂಡು, ನಮಗೆ ಚೆನ್ನಾಗಿ ಮನದಟ್ಟಾಗುವಂತೆ ನೀವು ಪರಿಣತಿಯನ್ನು ಪಡೆದಿರುವ ವಿಷಯವನ್ನು ಕುರಿತು ಹತ್ತು ನಿಮಿಷಗಳ ಕಾಲ ಪಾಠಮಾಡಿ" ಎಂದು ಕೇಳುತ್ತಾರೆ.

ಆಗ ಅಭ್ಯರ್ಥಿಗಳು ಆಡುವ ಮಾತಿನ ಶೈಲಿ, ಅಭಿವ್ಯಕ್ತಿಸುವ ಹಾವ ಭಾವ ಮತ್ತು ವಿಷಯ ನಿರೂಪಣೆಯಲ್ಲಿನ ಸ್ಪಷ್ಟತೆಯನ್ನು ಸೂಕ್ಷ್ಮವಾಗಿ ಗಮನಿಸಿ, ಪ್ರತಿಭಾವಂತರಾಗಿ ಕಂಡು ಬಂದವರನ್ನು, ಇತರ ಯಾವುದೇ ಒತ್ತಡಕ್ಕೂ ಮಣಿಯದೇ, ಕೂಡಲೇ ಆಯ್ಕೆ ಮಾಡುತ್ತಾರೆ.

ಒಮ್ಮೆ ಪ್ರೈಮರಿ ಶಾಲೆಗೆ ಅಧ್ಯಾಪಕಿಯರ ಆಯ್ಕೆ ನಡೆಯುತ್ತಿತ್ತು. ಎಂದಿನಂತೆ ಅಧ್ಯಕ್ಷರು ಆಯ್ಕೆ ಸಮಿತಿಯ ಇತರ ನಾಲ್ಕಾರು ಸದಸ್ಯರೊಡನೆ ಕುಳಿತಿದ್ದರು. ಅಧ್ಯಕ್ಷರಿಗೆ ಸಿಗರೇಟು ಸೇದುವ ಚಟವಿತ್ತು. ಸಂದರ್ಶನ ನಡೆಯುತ್ತಿರುವಾಗಲೇ, ಆಗಿಂದಾಗ್ಗೆ ಸಿಗರೇಟನ್ನು ಹಚ್ಚುತ್ತಿದ್ದರು. ಅಭ್ಯರ್ಥಿಯೊಬ್ಬಳು ಒಳಕ್ಕೆ ಬಂದಾಗ ಸಿಗರೇಟನ್ನು ಸೇದುತ್ತಾ ಕುಳಿತಿದ್ದ ಅಧ್ಯಕ್ಷರು, ಯಥಾ ಪ್ರಕಾರ ಮಾಮೂಲಿ ಪ್ರಶ್ನೆಯಾಗಿ....

"ನೋಡಮ್ಮಾ.... ನಿನ್ನ ಮುಂದೆ ಇರುವ ನನ್ನನ್ನು ಮತ್ತು ಇವರೆಲ್ಲರನ್ನು (ಸಮಿತಿಯ ಇತರ ಸದಸ್ಯರು).... ಈಗ ಪ್ರೈಮರಿ ಒಂದನೇ ಕ್ಲಾಸಿನ ಪುಟಾಣಿ ಮಕ್ಕಳು ಅಂತ ತಿಳ್ಕೊಂಡು.... ನಮಗೆ ಚೆನ್ನಾಗಿ ಅರ್ಥವಾಗುವಂತೆ .... ಒಂದು ಹತ್ತು ನಿಮಿಷ ಏನಾದ್ರೂ ಪಾಠ ಮಾಡಮ್ಮ" ಎಂದರು. ಈಗ ಮತ್ತೊಮ್ಮೆ ಅಧ್ಯಕ್ಷರು ಸೇದಿ

ಬಿಟ್ಟ ಸಿಗರೇಟಿನ ಹೊಗೆಯು ಕೊಠಡಿಯಲ್ಲಿ ಹಬ್ಬುತ್ತಿರುವುದನ್ನು ನೋಡುತ್ತಾ.... ಆಕೆಯು ಸುಮ್ಮನೆ ಕುಳಿತಿದ್ದಳು.

"ಯಾಕಮ್ಮ? .... ಸುಮ್ಮನೆ ಕುಳಿತುಬಿಟ್ಟೆ .... ನಮ್ಮನ್ನು ಪುಟಾಣಿ ಮಕ್ಳು ಅಂತ ಕಲ್ಪಿಸಿಕೊಂಡು .... ಏನಾದ್ರು ಹೇಳಮ್ಮ" ಎಂದು ಮೃದುವಾದ ರೀತಿಯಲ್ಲಿ ಉತ್ತೇಜಿಸಿದರು.

ಈಗ ಆಕೆಯು ಅಧ್ಯಕ್ಷರನ್ನು ಮತ್ತು ಆಯ್ಕೆ ಸಮಿತಿಯ ಸದಸ್ಯರನ್ನು ಒಮ್ಮೆ ನೋಡಿ ನಗುಮುಖದಿಂದ ಮಾತನಾಡತೊಡಗಿದಳು.

"ಪುಟಾಣಿ ಮಕ್ಕಳೇ.... ಇವತ್ತು ನೀವೆಲ್ಲಾ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಶಾಲೆಗೆ ಬಂದಿದ್ದೀರಿ.... ಇಲ್ಲಿ ನೀವೆಲ್ಲಾ ಚೆನ್ನಾಗಿ ಆಟ ಆಡ್ಕೊಂಡು ನಗನಗ್ತಾ ಇರಬೇಕು. ಅಆ.... ಇಈ.... ಉಊ.... ಅಂತ ಹೇಳ್ಕೊಂಡು ಅಕ್ಷರಗಳನ್ನು ಕಲಿಯುತ್ತಾ.... ಒಳ್ಳೆಯ ಬುದ್ಧಿಯನ್ನು ಪಡೆಯಬೇಕು.... ಗೊತ್ತಾಯ್ತ?" ಎಂದು ಹೇಳುತ್ತಾ ಈಗ ಅಧ್ಯಕ್ಷರನ್ನೇ ನೇರವಾಗಿ ನೋಡುತ್ತಾ–

"ಇಷ್ಟು ಚಿಕ್ಕ ವಯಸ್ಸಿನಲ್ಲೇ ನೀನು ಸಿಗರೇಟು ಸೇದುವುದನ್ನು ಕಲ್ತಿದ್ದೀಯಲ್ಲ! .... ಯಾರಪ್ಪ ನಿಂಗೆ ಕಲಿಸಿದವರು? .... ಈ ಅಭ್ಯಾಸ ತುಂಬಾ ಕೆಟ್ಟುದ್ದು ಮಗು.... ಈಗ ನಿನ್ನ ಕೈಯಲ್ಲಿರುವ ಸಿಗರೇಟನ್ನು ಬಿಸಾಕಪ್ಪ.... ಮುಂದೆ ನೀನು ತುಂಬಾ ಒಳ್ಳೆಯ ಹುಡುಗನಾಗಿ ಬೆಳೆಯಬೇಕು" ಎಂದು ಹೇಳುತ್ತಿದ್ದಂತೆಯೇ, ಅಧ್ಯಕ್ಷರು ತಮ್ಮ ಮುಂದಿದ್ದ ಆಶ್ಟ್ರೇನಲ್ಲಿ ಸಿಗರೇಟನ್ನು ಹೊಸಕಿ ಹಾಕಿ.... ತುಂಬಾ ಸಂತೋಷಚಿತ್ತದಿಂದ–

"ನೋಡಮ್ಮ... ನಿನ್ನ ಧೈರ್ಯವನ್ನು ಮೆಚ್ಚಿಕೊಂಡೆ. ಮಕ್ಕಳ ನಡೆನುಡಿಯಲ್ಲಿ ಕೆಟ್ಟದ್ದನ್ನು ಕಂಡ ಕೂಡಲೇ.... ಅದನ್ನು ಗುರುತಿಸಿ ಪ್ರೀತಿಯಿಂದ ತಿದ್ದಿ ಸರಿಪಡಿಸುವ ಗುಣ ನಿನ್ನಲ್ಲಿದೆ. ಮುಂದಕ್ಕೆ ನೀನು ಒಳ್ಳೆಯ ಟೀಚರ್ ಆಗ್ತೀಯ" ಎಂದು ಶಹಬಾಸ್‌ಗಿರಿ ನೀಡಿ, ಆಕೆಯನ್ನು ಅಧ್ಯಾಪಕಿಯಾಗಿ ನೇಮಕ ಮಾಡಿದರು.

⌘

ಅಕ್ಕತಂಗೇರು....ಕತ್ತೆಮುಂಡೇರು



ಮನೆಯಲ್ಲಿ ಮೂರು ವರ್ಷದ ಪುಟ್ಟ ಬಾಲಕ ರಾಜೇಶನು ಎಲ್ಲರ ಕಣ್ಮಣಿಯಾಗಿದ್ದ.... ಹರಳು ಹುರಿದಂತೆ ಮಾತನಾಡುವ ರಾಜೇಶನ ಮಾತುಗಳನ್ನು ಕೇಳುತ್ತಾ ನಕ್ಕು ನಲಿಯುವುದರ ಜೊತೆಗೆ, ಇಷ್ಟು ಚಿಕ್ಕ ವಯಸ್ಸಿನಲ್ಲೇ ಬಹಳ ಸ್ಪಷ್ಟವಾಗಿ ಮಾತನಾಡುವುದರ ಬಗ್ಗೆ.... ಮನೆಯವರೆಲ್ಲರು ತುಂಬಾ ಹೆಮ್ಮೆಪಡುತ್ತಿದ್ದರು.

ಒಂದು ದಿನ ರಾಜೇಶನ ತಾಯಿಯನ್ನು ನೋಡಲೆಂದು ಇಬ್ಬರು ಹೆಂಗಸರು ಬಂದರು. ಸುಮಾರು ಇಪ್ಪತ್ತೈದು ಮೂವತ್ತು ವರ್ಷ ವಯಸ್ಸಿನ ಈ ಸೋದರಿಯರು ರೂಪದಲ್ಲಿ ಒಬ್ಬರನ್ನೊಬ್ಬರು ಬಹಳವಾಗಿ ಹೋಲುತ್ತಿದ್ದರು. ರಾಜೇಶನ ತಾಯಿಗೆ

ಮೊನ್ನೆ ದೇವಸ್ಥಾನದಲ್ಲಿ ಹೊಸದಾಗಿ ಪರಿಚಯವಾಗಿದ್ದ ಇವರು, ಇದೇ ಮೊದಲ ಬಾರಿಗೆ ರಾಜೇಶನ ಮನೆಗೆ ಬಂದಿದ್ದರು.

ಮನೆಗೆ ಬಂದ ಅತಿಥಿಗಳಿಗೆ ರಾಜೇಶನ ತಾಯಿಯು ತಿಂಡಿ ಕಾಫಿಯನ್ನು ನೀಡಿ, ಅವರೊಡನೆ ಮಾತನಾಡುತ್ತ ಕುಳಿತಿದ್ದಾಗ.... ಹೊರಗಡೆ ಆಟವಾಡಿಕೊಂಡು ಮನೆಗೆ ಬಂದ ರಾಜೇಶ, ತನ್ನ ತಾಯಿಯ ಜೊತೆಯಲ್ಲಿದ್ದ ಅಪರಿಚಿತರನ್ನು ಕಂಡು ಕುತೂಹಲದಿಂದ–

"ಅಮ್ಮ....ಅಮ್ಮ....ಇವರ್ಯಾರಮ್ಮ?" ಎಂದ.

"ನಿಮ್ಮ ಅತ್ತೆದೀರು ಕಣಪ್ಪ".

"ಇಬ್ಬರು ಒಂದೇ ತರ ಅವ್ರೆ!"

"ಅಕ್ಕತಂಗೀರು ಕಣಪ್ಪ".

"ಹಂಗಾದ್ರೆ....... ಅಕ್ಕತಂಗೇರು ಕತ್ತೆಮುಂಡೇರು".

ರಾಜೇಶನ ಮಾತುಗಳನ್ನು ಕೇಳಿ, ಅತಿಥಿಗಳು ಮಾನಸಿಕವಾಗಿ ತುಂಬಾ ಆಘಾತಗೊಂಡರು. ತಾಯಿಯು ಮಗನ ಕೆನ್ನೆಗೆ ಚಟೀರ್ ಎಂದು ಬಾರಿಸಿ–

"ಎಲ್ಲೊ ಕಲಿತೆ ಇಂಥ ಕೆಟ್ಟ ಮಾತುಗಳನ್ನ?" ಎಂದು ಅಬ್ಬರಿಸಿದರು.

ಪೆಟ್ಟನ್ನು ತಿಂದ ರಾಜೇಶನು "ಅಜ್ಜಿ ಆವತ್ತು ನಿಮ್ಜೊತೇನೆ ಹೇಳ್ತಿರಿಲಿಲ್ವ... ಅಕ್ಕ ತಂಗೇರು... ಕತ್ತೆ ಮುಂಡೇರು ಅಂತ" ಎಂದು ಹೇಳುತ್ತಾ ಅಳಲಾರಂಭಿಸಿದ.

ನಡೆದಿದ್ದ ಘಟನೆ ಏನೆಂದರೆ ಮೊನ್ನೆ ಹಳ್ಳಿಯಿಂದ ಬಂದಿದ್ದ ರಾಜೇಶನ ಅಜ್ಜಿಯು ಮಗಳೊಡನೆ ತಮ್ಮ ಊರಿನ ಮನೆಯೊಂದರ ಆಗುಹೋಗುಗಳನ್ನು ಕುರಿತು ಮಾತನಾಡುತ್ತಾ ಆ ಮನೆಗೆ ಸೊಸೆಯಂದಿರಾಗಿ ಬಂದ ಅಕ್ಕ ತಂಗಿಯರು ಈಗ ಪರಸ್ಪರ ಗುದ್ದಾಡಿಕೊಂಡು, ಮನೆತನದ ನಾಶಕ್ಕೆ ಕಾರಣವಾಗುತ್ತಿರುವುದನ್ನು ವಿವರಿಸುತ್ತ "ಅಕ್ಕತಂಗೇರು ಕತ್ತೆಮುಂಡೇರು" ಎಂದು, ಅವರ ಊರಿನ ಹೆಂಗಸರನ್ನು ಬಯ್ದಿದ್ದರು. ಇದನ್ನು ಕೇಳಿಸಿಕೊಂಡಿದ್ದ ರಾಜೇಶನು, ಇಂದು ಆ ಪದಗಳನ್ನು ಮತ್ತೆ ಈ ಸಂದರ್ಭದಲ್ಲಿ ಹೇಳಿದ್ದನು.

ಥಟ್ಟನೆ ಈ ಘಟನೆಯನ್ನು ನೆನಪಿಸಿಕೊಂಡ ರಾಜೇಶನ ತಾಯಿಯು, ತನ್ನ ಮಗನ ಬಾಯಲ್ಲಿ ಬಂದಿದ್ದ ಕೆಟ್ಟ ಪದಗಳಿಗೆ ಕಾರಣವಾಗಿದ್ದ ಸನ್ನಿವೇಶವನ್ನು ಅತಿಥಿಗಳಿಗೆ


ವಿವರಿಸಿದರು. ಹಿರಿಯರಾಡಿದ್ದ ಬಯ್ಗುಳದ ಪದಗಳ ಅರ್ಥ ತಿಳಿಯದೆ ಮಾತನಾಡಿದ ಬಾಲಕನ ಮುಗ್ಧ ಮನಸ್ಸಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡ ಅಕ್ಕತಂಗಿಯರು ಈಗ ಸಮಾಧಾನಗೊಂಡರು.

ಇನ್ನೂ ಅಳುತ್ತಲೇ ಇದ್ದ ರಾಜೇಶನ ಗಲ್ಲವನ್ನು ತಂಗಿಯು ಮೃದುವಾಗಿ ಹಿಂಡಿ ಮುದ್ದಿಸಿ ಸಂತೈಸತೊಡಗಿದರೆ, ಅಕ್ಕನು ರಾಜೇಶನ ತಾಯಿಯನ್ನು ಕುರಿತು–

"ಇದಕ್ಕೆ ನೋಡಿ ಮಕ್ಕಳ ಮುಂದೆ ದೊಡ್ಡವರು ಮಾತನಾಡುವಾಗ ಒಳ್ಳೆಯ ಮಾತುಗಳನ್ನೇ ಆಡ್ಬೇಕು ಅನ್ನೋದು" ಎಂದು ಗಂಭೀರವಾಗಿ ನುಡಿದರು.

⌘

ನೀನೆಂಥ ಹೆಣ್ಣೆ



ಇಂದಿಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ನಡೆದ ಘಟನೆಯಿದು. ಮೂರು ದಿನಗಳ ಅದ್ದೂರಿ ಮದುವೆ. ನಮ್ಮ ದೊಡ್ಡಪ್ಪನವರು ಕುಬೇರನ ಬಳಗದವರು. ದುಡ್ಡಿಗೇನು ಬರವಿರಲಿಲ್ಲ. ಕೊಳ್ಳೇಗಾಲದಿಂದ ಚನ್ನಪಟ್ಟಣಕ್ಕೆ ಆಗಮಿಸಿದ್ದ ವರನ ತಂಡದವರಿಗೆ ಎಲ್ಲಾ ರೀತಿಯಿಂದಲೂ ಆನಂದವನ್ನುಂಟು ಮಾಡಲು ನಮ್ಮವರೆಲ್ಲಾ ಸೊಂಟಕಟ್ಟಿ ನಿಂತಿದ್ದರು.

ಧಾರೆಯ ಸಮಯ. ಚಪ್ಪರದಡಿಯಲ್ಲಿ ಗಡಿಬಿಡಿಯಿಂದ ಶಾಸ್ತ್ರಗಳು ಜರುಗುತ್ತಿದ್ದವು. ಮದುವೆಗೆ ಕೊಳ್ಳೇಗಾಲದಿಂದ ಬಂದಿದ್ದ ಬೀಗರ ಕಡೆಯ ಎಳೆಯ ಮಗುವೊಂದು ಬಹಳ ಚಂಡಿ ಮಾಡುತ್ತಿತ್ತು. ಅಳುತ್ತಿದ್ದ ಮಗುವನ್ನು ಸಂತೈಸಲು

ಅದರ ತಾಯಿ ಮಾಡುತ್ತಿದ್ದ... ಎಲ್ಲಾ ಪ್ರಯತ್ನಗಳು ವಿಫಲಗೊಳ್ಳುತ್ತಿದ್ದವು. ಮಗುವಿನ ರಂಪದಿಂದ ಮದುವೆಯ ಸಂಭ್ರಮದಲ್ಲಿ ಓಡಾಡಿ ನಲಿಯಲು ಅವಕಾಶವಿಲ್ಲದ ಆ ತಾಯಿಗೆ ಕೋಪ ಮತ್ತು ಅಳು... ಎರಡು ಏಕ ಕಾಲದಲ್ಲಿ ಬಂದಿತ್ತು. ಅಷ್ಟರಲ್ಲಿ ಅಲ್ಲಿಗೆ ಬಂದ ನಮ್ಮ ದೊಡ್ಡಮ್ಮನವರನ್ನು ಕಂಡು–

"ನೋಡ್ರಿಯಾ... ಈ ಹಾಳಾದ ಕೂಸು ರಂಪ ಮಾಡ್ತಾದೆ... ಇದ ನೇಣಾಕೋಕೆ ಒಂದು ಹಗ್ಗ ಕೊಡ್ರಿಯಾ" ಎಂದಳು.

ನಮ್ಮ ದೊಡ್ಡಮ್ಮ ನಗುತ್ತಾ–

"ಮಕ್ಕಳು ಅತ್ತದ್ದಕ್ಕೆಲ್ಲಾ ಕೋಪ ಮಾಡ್ಕೊಂಡ್ರೆ ಹೇಗಮ್ಮ! ... ಸ್ವಲ್ಪ ಹಾಲನ್ನಾದರೂ ಕುಡಿಸು" ಎಂದು ಸಲಹೆ ನೀಡಿದರು.

"ಅಯ್ಯೋ... ಇದಕ್ಕೆ ಹಾಲು ಗೀಲು ಎಲ್ಲಾ ಕುಡಿಸಿದ್ದೀನಿ... ಹಾಳಾದ್ದು ಒಂದೇ ಸಮನೆ ಅಳ್ತಾದೆ. ಒಂದು ಹಗ್ಗ ಕೊಡ್ರಿಯಾ... ನೇಣಾಕುದ್ರೆ ಸದ್ದಿಲ್ಲದೆ ಬಿತ್ತುಕೊತದೆ."

ನಮ್ಮ ದೊಡ್ಡಮ್ಮ ಅವಳ ಮಾತನ್ನು ಕೇಳಿ ಗಾಬರಿಯಾದರು.

"ಮಗೂನ ಸ್ವಲ್ಪ ಸಮಾಧಾನ ಮಾಡಮ್ಮ... ಚಪ್ಪರದ ಮುಂದಕ್ಕಾದರೂ ಎತ್ತಿಕೊಂಡು ಹೋಗಿ, ಏನನ್ನಾದರೂ ತೋರ್ಸಮ್ಮ" ಎನ್ನುತ್ತಿದ್ದಂತೆಯೇ–

"ಏನಮ್ಮ? ಮಗೀನ ನೇಣಾಕೋಕೆ ಒಂದು ಹಗ್ಗ ಕೊಡು ಅಂದ್ರೆ ಏನೇನೋ ಹೇಳ್ತೀಯಲ್ಲ... ಒಳ್ಳೆ ನೆಂಟಸ್ತನ ಆದಂಗಾಯ್ತು" ಎಂದು ಆಕೆ ವ್ಯಂಗ್ಯವಾಡಿದಳು. ಈಗ ನಮ್ಮ ದೊಡ್ಡಮ್ಮನ ಸಿಟ್ಟು ನೆತ್ತಿಗೇರಿತು.

"ಇದೇನಮ್ಮ? ಹಿಂಗೆ ಹುಚ್ಚು ಹುಚ್ಚಾಗಿ ಮಾತಾಡ್ತಿ... ಅಳೂ ಮಗುವನ್ನ ಎಲ್ಲಾದರೂ ನೇಣಾಕ್ತರೇನು?" ಎಂದುದಕ್ಕೆ,

ಆಕೆ ಮತ್ತಷ್ಟು ಕುಪಿತಳಾಗಿ–

"ಇನ್ನೇನು ಮಾಡ್ತಾರೆ? ... ನನಗಲ್ಲ... ನಿಂಗೆಲ್ಲೋ ಹುಚ್ಚು ಹಿಡಿದೈತೆ... ಮಗೀನ ನೇಣಾಕೋಕೆ ಒಂದು ಹಗ್ಗ ಕೊಡದೇ ಇರೋಳು... ನೀನೆಂಥ ಹೆಣ್ಣೆ?" ಎಂದು ಹಂಗಿಸಿದಾಗ... ಪರಿಸ್ಥಿತಿ ಬಹಳ ವಿಕೋಪಕ್ಕೆ ತಿರುಗತ್ತಲಿತ್ತು.

ಅಷ್ಟರಲ್ಲಿ ಎರಡು ಕಡೆಯವರಿಗೂ ಆಪ್ತರಾಗಿದ್ದ ಮತ್ತು ಎರಡು ಕಡೆಯ ಆಡು ನುಡಿಯ ಸೊಗಡನ್ನು ಚೆನ್ನಾಗಿ ಅರಿತಿದ್ದ ವ್ಯಕ್ತಿಯೊಬ್ಬರು ಅಲ್ಲಿಗೆ ಬಂದು, ನಡೆದ ಸಂಗತಿಯನ್ನು ಕೇಳಿ, ಮುಗುಳ್ನಗುತ್ತಾ... ಮೊದಲು ನಮ್ಮ ದೊಡ್ಡಮ್ಮನನ್ನು ಕುರಿತು–

“ನೋಡಿ... ಕೊಳ್ಳೇಗಾಲದ ಕಡೆ ಮಗುವನ್ನ ನೇಣಾಕೋದು ಅಂದ್ರೆ... ಎರಡು ಕಂಬಗಳಿಗೆ ಹಗ್ಗ ಕಟ್ಟಿ... ತೊಟ್ಟಿಲಂತೆ ಮಾಡಿ... ಬಟ್ಟೆ ಹಾಕಿ ಮಲಗಿಸುವುದು” ಎಂದಾಗ... ನಮ್ಮ ದೊಡ್ಡಮ್ಮನವರು ಮುಖ ಅಚ್ಚರಿಯಿಂದ ಅರಳಿತು... ಈಗ ಕೊಳ್ಳೇಗಾಲದ ತಾಯಿಯನ್ನು ಉದ್ದೇಶಿಸಿ–

“ನೋಡ್ರಿಯಾ ... ಈ ಕಡೆ ನೇಣಾಕೋದು ಅಂದ್ರೆ... ಹಗ್ಗವನು ಕೊರಳಿಗೆ ಬಿಗಿದು ಕಟ್ಟಿ ಸಾಯಿಸುವುದು” ಎಂದಾಗ ಕೆರಳಿ ಕೆಂಡವಾಗಿದ್ದ ಆಕೆ ತಣ್ಣಗಾದಳು.

⌘

ಗುರುವಿಗೆ ತಿರುಮಂತ್ರ



ನಾನು ಪಿ.ಯು.ಸಿ., ತರಗತಿಯಲ್ಲಿ ಓದುತ್ತಿದ್ದಾಗ... ಫಿಸಿಕ್ಸ್ ಲೆಕ್ಚರರ್ ಗೋವಿಂದಪ್ಪನವರು ವಿದ್ಯಾರ್ಥಿಗಳೆಲ್ಲರ ಅಚ್ಚುಮೆಚ್ಚಿನ ಉಪನ್ಯಾಸಕರಾಗಿದ್ದರು. ವಿಜ್ಞಾನ ಸಂಬಂಧಿಯಾದ ವಿಷಯಗಳನ್ನು ಅತ್ಯಾಕರ್ಷವಾದ ರೀತಿಯಲ್ಲಿ ಬೋಧಿಸುತ್ತಿದ್ದ ಗೋವಿಂದಪ್ಪನವರು ತಾವು ತೆಗೆದುಕೊಳ್ಳುತ್ತಿದ್ದ ಪ್ರತಿಯೊಂದು ಪೀರಿಯಡ್‌ಗಳಲ್ಲೂ ... ತಪ್ಪದೇ... ನಾಲ್ಕಾರು ನಿಮಿಷಗಳ ಕಾಲ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗುವಂಥ ವಿವೇಕವನ್ನು ಹೇಳುತ್ತಿದ್ದರು. ಅವರ ಪಾಠವನ್ನು ಕೇಳಿ, ಬಹಳಷ್ಟು ವರ್ಷಗಳು ಕಳೆದಿದ್ದರೂ ಅವರ ತರಗತಿಗಳಲ್ಲಿ ಕೇಳಿದ್ದ, ಹಲವಾರು

ನುಡಿಗಳು... ಇನ್ನೂ ನನ್ನ ಕಿವಿಯಲ್ಲಿ ಆಗಾಗ್ಗೆ ಅನುರಣಿಸುತ್ತಿವೆ. ನಡೆದಿದ್ದ ಒಂದೆರಡು ಘಟನೆಗಳು ಕಣ್ಣಿಗೆ ಕಟ್ಟಿದಂತಿವೆ.

ಒಂದು ದಿನ ತರಗತಿಯೊಂದರಲ್ಲಿ ನಮ್ಮೆಲ್ಲರನ್ನು ಕುರಿತು–

"ಈ ಕೊಠಡಿಯ ಕಸವನ್ನು ಕಾಲೇಜಿನಲ್ಲಿರುವ ಜವಾನ ದಿನಕ್ಕೆ ಎಷ್ಟು ಸಾರಿ ತೆಗೆಯುತ್ತಾನೆ" ಎಂದು ಪ್ರಶ್ನಿಸಿದರು.

"ದಿನಕ್ಕೆ ಒಂದು ಸಾರಿ ಸಾರ್" ಎಂದು ಹಲವರು ಒಂದೇ ಬಾರಿಗೆ ಉತ್ತರಿಸಿದಾಗ ಮತ್ತೊಂದು ಪ್ರಶ್ನೆಯನ್ನು ಹಾಕಿದರು–

"ನಿಮ್ಮ ತಾಯಿ ದಿನಕ್ಕೆ ಎಷ್ಟು ಸಾರಿ ಮನೆಯೊಳಗಿನ ಕಸವನ್ನು ತೆಗೆಯುತ್ತಾರೆ?"

"ಎರಡು ಸತಿ ಸಾರ್... ಮೂರು ಸಾರಿ ಸಾರ್... ನಾಲ್ಕು ಟೈಮ್ ಸಾರ್" ಎಂದು ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಉತ್ತರಿಸತೊಡಗಿದರು. ಒಂದೆರಡು ನಿಮಿಷಗಳ ಕಾಲ ತಾಳ್ಮೆಯಿಂದ ಆಲಿಸುತ್ತಿದ್ದು... ಅನಂತರ "ಸಾಕು ನಿಲ್ಲಿಸಿ" ಎಂದು ಹೇಳಿ ವಿದ್ಯಾರ್ಥಿಗಳ ಸದ್ದು ನಿಂತ ಮೇಲೆ–

"ನೋಡಿ... ಪ್ರತಿಯೊಬ್ಬ ತಾಯಿಯು ತನ್ನ ಮನೆಯ ಕಸವನ್ನು ... ನೀವೆಲ್ಲಾ ಹೇಳಿದ ಹಾಗೆ... ದಿನಕ್ಕೆ ಎರಡು ಸಾರಿ... ಮೂರು ಸಾರಿ ತೆಗೆಯುವುದರ ಜೊತೆಗೆ... ಕಸ ಬಿದ್ದಂತೆಲ್ಲಾ... ಮಕ್ಕಳನ್ನು ಬಯ್ಕೊಂಡೋ... ಆಡ್ಕೊಂಡೋ... ಗುಡಿಸ್ತನೇ ಇರ್ತರೆ ...ಅಲ್ವೇನ್ರಿ?" ಎಂದರು.

"ಹೌದು ಸಾರ್" ಎಂದು ನಾವೆಲ್ಲಾ ಒಕ್ಕೊರಳಿನಿಂದ ಸಮ್ಮತಿಸಿದೆವು.

"ಮನೆಯಲ್ಲಿ ನಿರಂತರವಾಗಿ ಬೀಳುತ್ತಿರುವ ಕಸವನ್ನು ತಾಯಿಯು ಪದೇ ಪದೇ ತೆಗೆಯುತ್ತಾ... ಮನೆಯನ್ನು ಶುಚಿಯಾಗಿಡುವಂತೆಯೇ... ನಮ್ಮ ಮನಸ್ಸಿನೊಳಗೆ ಸದಾಕಾಲ ಬೀಳುತ್ತಲೇ ಇರುವ ಆಲಸ್ಯ, ಬೇಜವಾಬ್ದಾರಿತನ ಮುಂತಾದ ನಾನಾ ಬಗೆಯ ದೂಳನ್ನು... ನಾವು ಪ್ರತಿನಿತ್ಯ ಆಗಾಗ್ಗೆ ವಿವೇಕವೆಂಬ ನುಡಿಗಳ ಪೊರಕೆಯಿಂದ ಗುಡಿಸಿಕೊಂಡು ಶುಚಿ ಮಾಡಿಕೊಳ್ಳುತ್ತಾ ಇರಬೇಕು" ಎಂದು ತಿಳಿಯಾದ ಮಾತುಗಳಲ್ಲಿ ವಿವರಿಸಿದರು.

ಗೋವಿಂದಪ್ಪನವರು ಉಪನ್ಯಾಸದ ಮತ್ತೊಂದು ವಿಶೇಷವೆಂದರೆ... ಗಂಭೀರವಾದ ಶೈಲಿಯಲ್ಲಿ ಯಾವುದೇ ವಿಷಯವನ್ನು ನಿರೂಪಿಸುತ್ತಿದ್ದಂತೆಯೇ... ಕೆಲವೊಮ್ಮೆ ತಿಳಿಹಾಸ್ಯದ ನುಡಿಗಳಿಂದ ವಿದ್ಯಾರ್ಥಿಗಳನ್ನು ಮುದಗೊಳಿಸುತ್ತಿದ್ದರು. ಮೂವತ್ತೈದು ವರ್ಷಗಳ ಹಿಂದೆ ಕಾಲೇಜಿಗೆ ಬರುತ್ತಿದ್ದ ವಿದ್ಯಾರ್ಥಿಗಳಲ್ಲಿ ಎಷ್ಟೋ ಮಂದಿ, ಇಸ್ತ್ರಿಯನ್ನೇ ಕಾಣದ

ಬಟ್ಟೆಗಳನ್ನು ತೊಟ್ಟು, ಬರಿಗಾಲಲ್ಲಿ ಬರುತ್ತಿದ್ದುದೂ ಉಂಟು. ಗೋವಿಂದಪ್ಪನವರು ಇದರ ಬಗ್ಗೆಯೂ ಗಮನ ಹರಿಸಿ– "ಬಟ್ಟೆಗಳನ್ನ ಇಸ್ತ್ರಿ ಮಾಡಿ, ನೀಟಾಗಿ ಹಾಕಿಕೊಂಡು ಬನ್ನಿ, ತಲೆಗೆ ಕೊಬ್ಬರಿ ಎಣ್ಣೆಯನ್ನೋ... ಇಲ್ಲ ... ಹರಳೆಣ್ಣೆಯನ್ನೋ ಹಾಕಿಕೊಂಡು ಬನ್ರಯ್ಯ. ಒಂದು ವೇಳೆ ತಲೆಗೆ ಹಾಕಿಕೊಳ್ಳಲು ಉತ್ತಮವಾದ ಎಣ್ಣೆ ಸಿಗದೇದ್ರೆ.. ಸೀಮೆಯೆಣ್ಣೆಯನ್ನಾದರೂ ಹಾಕಿಕೊಂಡು, ತಲೆ ಬಾಚ್ಕೊಂಡು ಬನ್ನಿ" ಎಂದಾಗ ವಿದ್ಯಾರ್ಥಿಗಳು ಜೋರಾಗಿ ನಕ್ಕಿದ್ದರು. ಮತ್ತೊಮ್ಮೆ ಹಲವು ವಿದ್ಯಾರ್ಥಿಗಳು ಕಾಲೇಜಿಗೆ ಬರಿಗಾಲಲ್ಲೇ ಬರುತ್ತಿರುವುದನ್ನು ಗಮನಿಸಿ– "ಏನಾದರೂ ಮಾಡಿ, ಸ್ವಲ್ಪ ದುಡ್ಡನ್ನು ಹೊಂದಿಸಿಕೊಂಡು, ಒಂದು ಜೊತೆ ಚಪ್ಪಲಿಯನ್ನು ಕಡ್ಡಾಯವಾಗಿ ಪ್ರತಿಯೊಬ್ಬರು ತೆಗೆದುಕೊಳ್ರಯ್ಯ. ಒಂದು ವೇಳೆ ತಕೊಳೋಕೆ ಆಗಲಿಲ್ಲ ಅಂದ್ರೆ.. ಯಾರದಾದರೂ ಚಪ್ಪಲಿಗಳನ್ನು ಕದ್ದಾದರೂ ಹಾಕೊಂಡು ಬನ್ರಯ್ಯ" ಎಂದಾಗ ಹುಡುಗರ ಕೇಕೆ... ತರಗತಿಯ ಮಾಳಿಗೆಯನ್ನೇ ಹಾರಿಸುವಂತಿತ್ತು.

ಒಂದು ದಿನ ತರಗತಿಗೆ ಬಂದ ಗೋವಿಂದಪ್ಪನವರು... ಏಕೊ... ಏನೊ ...ಎಂದಿನಂತೆ ಉತ್ಸಾಹದಿಂದಿರಲಿಲ್ಲ. ಅವರು ಹಾಜರಾತಿಯನ್ನು ಮಂದಗತಿಯಲ್ಲಿ ಹಾಕತೊಡಗುತ್ತಿದ್ದಂತೆಯೇ... ನನಗೆ ನೆನ್ನೆ ನಡೆದಿದ್ದ ಕಬಡಿ ಪಂದ್ಯ ನೆನಪಿಗೆ ಬಂತು. ನಮ್ಮ ಕಾಲೇಜಿನ ಅಧ್ಯಾಪಕರು ಮತ್ತು ಅಧ್ಯಾಪಕೇತರರು, ತಮ್ಮಲ್ಲೇ ಎರಡು ಪಂಗಡಗಳನ್ನು ಮಾಡಿಕೊಂಡು, ಕಬಡಿ ಪಂದ್ಯವೊಂದನ್ನು ಏರ್ಪಡಿಸಿಕೊಂಡಿದ್ದರು. ಕಾಲೇಜಿನ ಒಳ ಆವರಣದಲ್ಲಿ ನಡೆದ ಈ ಸ್ನೇಹಪರ ಪಂದ್ಯಕ್ಕೆ ಕಾಲೇಜಿನ ವಿದ್ಯಾರ್ಥಿಗಳಾದ ನಾವೆಲ್ಲಾ ಪ್ರೇಕ್ಷಕರಾಗಿದ್ದೆವು. ಪಂದ್ಯದಲ್ಲಿ ಗೋವಿಂದಪ್ಪನವರು ತುಂಬಾ ಚೆನ್ನಾಗಿ ಆಟವಾಡಿ... ಅನೇಕರನ್ನು ಕ್ಯಾಚ್ ಹಿಡಿದಿದ್ದಲ್ಲದೇ... ರೈಡಿಂಗ್‌ನಲ್ಲಿಯೂ ಹಲವರನ್ನು ಔಟ್ ಮಾಡಿ... ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಬಹುಶಃ ನೆನ್ನೆಯ ಆಟದ ಪ್ರಯುಕ್ತ ಮೇಷ್ಟ್ರು ತುಂಬಾ ಆಯಾಸಗೊಂಡಿರಬಹುದೆಂದು ನಾನು ಊಹಿಸಿಕೊಂಡೆನು.

ಹಾಜರಾತಿಯನ್ನು ಹಾಕಿ ಮುಗಿಸಿದ ಕೂಡಲೇ, ಗೋವಿಂದಪ್ಪನವರು ಸ್ವಲ್ಪ ಗಡಸು ಧ್ವನಿಯಲ್ಲಿ–

"ನೆನ್ನೆ ನಡೆದ ಕಬಡಿ ಮ್ಯಾಚಿಗೆ ನೀವೆಲ್ಲಾ ಬಂದಿದ್ರೇನಯ್ಯ?" ಎಂದು ಕೇಳಿದರು. "ಬಂದಿದ್ದೊ ಸಾರ್" ಎಂದು ಉತ್ಸಾಹದಿಂದ ಹುಡುಗರು ಉತ್ತರಿಸುತ್ತಿದ್ದಂತೆಯೇ, ಮುಂದಿನ ಬೆಂಚಿನಲ್ಲಿ ಕುಳಿತಿದ್ದ ಒಬ್ಬ ಹುಡುಗನು–

"ನೀವು ತುಂಬಾ ಚೆನ್ನಾಗಿ ಆಡಿದಿರಿ ಸಾರ್" ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದ. ಇಂತಹ ಹೊಗಳಿಕೆಯಿಂದಲೂ ಕಿಂಚಿತ್ತಾದರೂ ಉಲ್ಲಾಸಗೊಳ್ಳದ ಗೋವಿಂದಪ್ಪನವರು ನಮ್ಮೆಲ್ಲರನ್ನೂ ಒಮ್ಮೆ ಅವಲೋಕಿಸಿ ಗಂಭೀರವಾದ ಧ್ವನಿಯಲ್ಲಿ–

"ನೋಡ್ರಯ್ಯಾ... ನೆನ್ನೆ ಕಬಡಿ ಕೋರ್ಟಿನ ಬೌಂಡರಿ ಗೆರೆಯ ಬಳಿ ಬಿಟ್ಟಿದ್ದ ನನ್ನ ಹೊಸ ಚಪ್ಪಲಿಗಳನ್ನು... ಯಾರೋ ಮೆಟ್ಕೊಂಡು ಹೋಗಿದ್ದಾರೆ... ಅಲ್ಲಿ ಇದ್ದೋರೆಲ್ಲಾ... ನಾವು ನಾವೇ ಅಲ್ವೇನ್ರಯ್ಯ" ಎಂದು ಪ್ರಶ್ನಿಸಿದರು.

ಮೇಷ್ಟ್ರ ಚಪ್ಪಲಿ ಕಳವಿನ ಸುದ್ದಿಯನ್ನು ಅವರ ಬಾಯಿಂದಲೇ ಕೇಳಿ ... ತರಗತಿಯು ಕ್ಷಣ ಕಾಲ ಮೌನವಾಯಿತು. ಒಂದೆರಡು ಕ್ಷಣಗಳ ನಂತರ... ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಒಬ್ಬ ಹುಡುಗ–

"ನೀವೇ ಹೇಳ್ತ ಇದ್ರಲ್ಲ ಸಾರ್... ಚಪ್ಪಲಿ ಇಲ್ದೇದ್ರೆ.. ಯಾರದನ್ನಾದರೂ ಕದ್ದಾದರು ಹಾಕೊಂಡು ಬನ್ನಿ ಅಂತ... ಬಹುಶಃ ಚಪ್ಪಲಿಯಿಲ್ಲದ ಯಾರೋ ಒಬ್ಬ ವಿದ್ಯಾರ್ಥಿ ... ನಿಮ್ಮ ಮಾತನ್ನು ಪಾಲಿಸಿರಬೇಕು ಅಂತ ಕಾಣ್ಸತ್ತೆ ಸಾರ್... ಹೋಗ್ಲಿ ಬಿಡಿ ಸಾರ್..." ಎಂದಾಗ –

ಇಡೀ ತರಗತಿ 'ಗೊಳ್' ಎಂದು ನಕ್ಕಿತು...ಆದರೆ ಗೋವಿಂದಪ್ಪನವರು ನಗಲಿಲ್ಲ.

⌘

ಒಬ್ಬ ಇದ್ದಾನೆ ಸಾರ್



ನಗರದ ಬಡಾವಣೆಯೊಂದರಲ್ಲಿ ದೊಡ್ಡ ಕಾಂಪೌಂಡಿನೊಳಗೆ ಪುಟ್ಟ ಮನೆಯೊಂದಿತ್ತು. ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಕಟ್ಟಿಸಲಾಗಿದ್ದ ಈ ಮನೆಯಲ್ಲಿ ... ಸ್ನಾನದ ಮತ್ತು ಕಕ್ಕಸಿನ ಕೊಠಡಿಗಳು ಹೊರಭಾಗದಲ್ಲಿದ್ದವು. ಈ ಮನೆಯಲ್ಲಿ ... ಜಗದೀಶ ತನ್ನ ಹೆಂಡತಿ ಮತ್ತು ಒಂದು ಮಗುವಿನೊಡನೆ ನಾಲ್ಕಾರು ವರ್ಷಗಳಿಂದ ನೆಲೆಸಿದ್ದನು. ಜಗದೀಶ... ದಿನಸಿ ಅಂಗಡಿಯ ಮಾಲೀಕನಾಗಿದ್ದ; ಅವನ ಹೆಂಡತಿಯು ನಗರದ ಮಾಧ್ಯಮಿಕ ಶಾಲೆಯೊಂದರಲ್ಲಿ ಉಪಾಧ್ಯಾಯಿನಿಯಾಗಿದ್ದಳು.

ಇದುವರೆಗೂ ನೆಮ್ಮದಿಯಿಂದಿದ್ದ ಈ ಕುಟುಂಬಕ್ಕೆ, ಈಗ ಎರಡು ತಿಂಗಳಿಂದ ಕಳ್ಳರ ಕಾಟ ಶುರುವಾಗಿತ್ತು. ಒಂದು ರಾತ್ರಿ... ಸ್ನಾನದ ಮನೆಗೆ ಹಾಕಿದ್ದ ಬೀಗವನ್ನು ಒಡೆದು, ಅಲ್ಲಿ ಹೂತಿದ್ದ ಸ್ನಾನದ ಹಂಡೆಯನ್ನು ಹಾರೆಯಿಂದ ಮೀಟಿ ತೆಗೆದು, ಹಂಡೆಯನ್ನು ಯಾರೋ ಅಪಹರಿಸಿಕೊಂಡು ಹೋಗಿದ್ದರು. ಕಳುವಾದ ತಾಮ್ರದ ಹಂಡೆಯ ನಷ್ಟಕ್ಕಿಂತಲೂ ಹೆಚ್ಚಾಗಿ, ಕಳ್ಳರು ಮನೆಗೆ ನುಗ್ಗಿ ಬಂದಿದ್ದುದು... ಗಂಡಹೆಂಡತಿಯರಲ್ಲಿ ಭೀತಿಯನ್ನು ಹುಟ್ಟಿಸಿತ್ತು. ಹಂಡೆ ಕಳುವಾದ ವಿಷಯವನ್ನು ನೆರೆಹೊರೆಯವರಲ್ಲಿ ಹೇಳಿಕೊಂಡರೇ ಹೊರತು, ಪೋಲಿಸ್ ಕಂಪ್ಲೇಂಟ್ ಕೊಡಲಿಲ್ಲ. ಈಗ ಮತ್ತೆ ಹೊಸದಾಗಿ ಒಂದು ಪುಟ್ಟ ಹಂಡೆಯನ್ನು ಖರೀದಿಸಿ ತಂದು, ಪ್ರತಿ ದಿನ ಬೆಳಿಗ್ಗೆ ಸ್ನಾನದ ಮನೆಯಲ್ಲಿನ ಮೂರು ದೊಡ್ಡ ಕಲ್ಲುಗಳ ಮೇಲಿಟ್ಟು, ನೀರನ್ನು ಕಾಯಿಸಿಕೊಳ್ಳುತ್ತಿದ್ದರು. ರಾತ್ರಿಯ ವೇಳೆ ಮತ್ತೆ ಹಂಡೆಯನ್ನು ಮನೆಯೊಳಕ್ಕೆ ಎತ್ತಿಟ್ಟುಕೊಳ್ಳುತ್ತಿದ್ದರು.

ಒಂದು ದಿನ ಮಧ್ಯಾಹ್ನ ಮಗುವಿನೊಡನೆ ಒಂದು ಸಣ್ಣ ನಿದ್ದೆಯನ್ನು ಮಾಡಿದ ನಂತರ, ಹೆಂಡತಿಯು ಮುಖ ತೊಳೆಯಲೆಂದು ಸ್ನಾನದ ಮನೆಗೆ ಬಂದಾಗ, ಹಂಡೆ ಕಣ್ಮರೆಯಾಗಿತ್ತು. ವ್ಯಾಪಾರವನ್ನು ಮುಗಿಸಿಕೊಂಡು, ರಾತ್ರಿ ಮನೆಗೆ ಹಿಂತಿರುಗಿದ ಜಗದೀಶನಿಗೆ ವಿಷಯವನ್ನು ತಿಳಿಸುತ್ತಾ–

"ಹಾಡು ಹಗಲಲ್ಲೇ... ಜನ ಇದ್ದಾಗಲೇ, ಮನೆಯೊಳಕ್ಕೆ ಬಂದು, ಎತ್ತಿಕೊಂಡು ಹೋಗಿದ್ದಾರಲ್ಲ!... ಹಿಂಗಾದ್ರೆ ಮುಂದಕ್ಕೆ ಏನ್ರಿ ಮಾಡೋದು?... ನಂಗ್ಯಾಕೊ ತುಂಬಾ ಭಯವಾಗುತ್ತೆ" ಎಂದಾಗ...ಜಗದೀಶನೂ ಬಹಳ ಆತಂಕಕ್ಕೆ ಒಳಗಾದ. ಆದರೂ ಅದನ್ನು ತೋರ್ಪಡಿಸಿಕೊಳ್ಳದೇ, ಹೆಂಡತಿಗೆ ಧೈರ್ಯ ಹೇಳುತ್ತಾ–

"ಯಾರೋ... ಸಣ್ಣ ಪುಟ್ಟ ಕಳ್ಳರೇನೋ ಕಣೆ... ಅದಕ್ಯಾಕೆ ಹಿಂಗೆ ಹೆದರಿಕೊಳ್ತೀಯ" ಎಂದ.

"ನಾವು ತಪ್ಪು ಮಾಡ್ಬಿಟ್ವೊ ಕಣ್ರಿ... ಮೊದಲನೇ ಹಂಡೆ ಕಳುವಾದಾಗ್ಲೆ ಪೋಲಿಸರಿಗೆ ಒಂದು ಕಂಪ್ಲೇಂಟು ಕೊಡಬೇಕಾಗಿತ್ತು."

"ಅಯ್ಯೋ ಸುಮ್ನಿರೆ...ನಾವು ಕಂಪ್ಲೇಂಟ್ ಕೊಟ್ಟಾಕ್ಷಣಕ್ಕೆ ಅವರೇನು ಕಳ್ಳರನ್ನು ಹಿಡಿದು ಜೈಲಿಗೆ ಹಾಕ್ಬುಡ್ತಿದ್ರಾ?"

"ಹಾಕ್ತಿದ್ರೋ... ಬಿಡ್ತಿದ್ರೋ... ನಮ್ಮ ಬಡಾವಣೆಯಲ್ಲಿ ಕಳ್ಳತನಗಳು ಆಗ್ತಾ ಇವೆ ಅನ್ನೋದನ್ನ ಪೋಲಿಸರ ಗಮನಕ್ಕೆ ತಂದಂಗೆ ಆಗ್ತಿರಲಿಲ್ವೆ?"

"ಲೇ... ನಿಂಗೆ ಪೋಲಿಸ್ನೋರ ಸಹವಾಸ ಎಂಥದು ಅಂತ ಗೊತ್ತಿಲ್ಲ... ನಮ್ಮಪ್ಪ ಆಗಾಗ ಹೇಳ್ತಾಯಿದ್ರು... ಪೋಲಿಸ್ ಸ್ಟೇಷನ್ನಿಗೆ ... ಕೋರ್ಟಿಗೆ... ಆಸ್ಪತ್ರೆಗೆ... ಏಕ್‌ದಮ್ ಹೋಗ್ಬಾರದು... ತೀರಾ ಅನಿವಾರ್ಯ ಅನ್ನುಸುದ್ರೆ ಮಾತ್ರ... ಅವುಗಳ ಮೆಟ್ಟಿಲು ಹತ್ತಬೇಕು ಅಂತ."

"ರ್‍ರೀ... ನೀವು ಯಾವುದೋ ಓಬಿರಾಯನ ಕಾಲದಲ್ಲಿ ಇದ್ದೋರಂಗೆ ಮಾತನಾಡ್ತ ಇದ್ದೀರಲ್ಲ! ... ಏನಾದರಾಗ್ಲಿ... ಬೆಳಿಗ್ಗೆ ನೀವು ಅಂಗಡಿಗೆ ಹೋಗುವುದಕ್ಕೆ ಮುಂಚೆ ಒಂದು ಕಂಪ್ಲೇಂಟ್ ಕೊಡ್ಲೇಬೇಕು" ಎಂದು ಒತ್ತಾಯ ಮಾಡಿದಾಗ, ಒಲ್ಲದ ಮನಸ್ಸಿನಿಂದಲೇ ಒಂದು ಕಂಪ್ಲೇಂಟನ್ನು ಬರೆದಿಟ್ಟು ಕೊಂಡಿದ್ದು, ಮಾರನೆಯ ದಿನ ಬೆಳಿಗ್ಗೆ ಜಗದೀಶ... ಪೋಲಿಸ್ ಸ್ಟೇಷನ್ನಿನ ಮೆಟ್ಟಿಲನ್ನು ತುಳಿದ.

ಒಂದು ಬಗೆಯ ಅಂಜಿಕೆಯಿಂದಲೇ ಪೋಲಿಸ್ ಸ್ಟೇಷನ್ನಿನ ಆವರಣವನ್ನು ಪ್ರವೇಶಿಸಿದ ಜಗದೀಶನಿಗೆ... ಸ್ವಲ್ಪ ಧೈರ್ಯ ತಂದು ಕೊಟ್ಟ ಸಂಗತಿಯೆಂದರೆ... ಅಂದು ಸ್ಟೇಷನ್ನಿನಲ್ಲಿ ಒಬ್ಬ ಪೇದೆ ಮತ್ತು ದಫೇದಾರ್ ಅವರನ್ನು ಬಿಟ್ಟರೆ, ಮತ್ತಾರೂ ಇರಲಿಲ್ಲ. ಪೇದೆಯ ಸೂಚನೆಯಂತೆ, ದಫೇದಾರ್ ಅವರ ಹಸ್ತ... ಕಂಪ್ಲೇಂಟಿನ ಅರ್ಜಿಯನ್ನು ಕೊಟ್ಟಾಗ ಅವರು ಒಮ್ಮೆ ಜಗದೀಶನನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿ ನೋಡಿ... ಅನಂತರ ಕಂಪ್ಲೇಂಟನ್ನು ಓದತೊಡಗಿದರು. ಓದಿ ಮುಗಿಸಿದ ನಂತರ, ಜಗದೀಶನನ್ನು ತಮ್ಮ ಎದುರಿಗಿದ್ದ ಸ್ಟೂಲಿನ ಮೇಲೆ ಕುಳಿತುಕೊಳ್ಳಲು ಸೂಚಿಸಿ, ಕಂಪ್ಲೇಂಟಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಲೆಂದು... ದಫೇದಾರ್ ಅವರು ತನಿಖೆಯನ್ನು ಪ್ರಾರಂಭಿಸಿದರು.

"ನಿಮ್ಮ ಮನೆಯಲ್ಲಿ ಎಷ್ಟು ಜನ ಇದ್ದೀರಿ?"

"ಮೂರು ಜನ ಇದ್ದೀವಿ ಸಾರ್... ನಾನು, ನನ್ನ ಹೆಂಡ್ತಿ, ನಮ್ಮದೊಂದು ಮಗು".

"ಸಾಮಾನ್ಯವಾಗಿ ನಿಮ್ಮ ಮನೆಗೆ ಯಾರ್‍ಯಾರು ಬಂದು ಹೋಗ್ತಿರ್‍ತರೆ?"

"ನಮ್ಮ ನೆಂಟರಿಷ್ಟರು... ಸ್ನೇಹಿತರು ಆಗಾಗ್ಯೆ ಬರ್‍ತಿರ್‍ತರೆ ಸಾರ್".

"ಅವರಲ್ಲಿ... ನಿಮಗೆ ಯಾರ ಮೇಲಾದರೂ ಅನುಮಾನ ಇದೆಯಾ?"

"ಇದೇನ್ ಸಾರ್ ಹಿಂಗೆ ಕೇಳ್ತೀರಿ! ... ಮನೆಗೆ ಬಂದೋರ್ ಮೇಲೆಲ್ಲಾ ಅನುಮಾನ ಪಡೋದು... ನಮಗೆ ಧರ್ಮನಾ ಸಾರ್?"

"ನೋಡ್ರಿ... ಹೇಳಿ ಕೇಳಿ ನಮ್ಮದು ಪೋಲಿಸ್ ಡಿಪಾರ್ಟ್‌ಮೆಂಟ್... ಅನುಮಾನಾಸ್ಪದವಾಗಿ ಕಂಡು ಬಂದರೆ... ಹೆತ್ತ ಅಪ್ಪ ಅವ್ವನೇ ಆಗಿರ್ಲಿ... ಯಾರನ್ನೂ ಬಿಡದೇನೆ ತನಿಖೆ ಮಾಡೋದು ನಮ್ಮ ಇಲಾಖೆಯ ಧರ್ಮ."

ದಫೇದಾರ್ ಅವರ ತನಿಖಾ ವೈಖರಿಯನ್ನು ಕಂಡು ಜಗದೀಶ ಸ್ವಲ್ಪ ಗಾಬರಿಗೊಂಡ. ದಫೇದಾರ್ ಅವರಿಂದ ಪ್ರಶ್ನೆಗಳು ಪುಂಖಾನುಪುಂಖವಾಗಿ ಹೊರಬೀಳತೊಡಗಿದವು.

"ನಿಮ್ಮ ಮನೆಗೆ ಹೊರಗಿನವರು ಯಾರಾದರೂ ಬಂದು ಹೋಗೋದು ಉಂಟೇನ್ರೀ?... ಸರಿಯಾಗಿ ಜ್ಞಾಪಿಸಿಕೊಂಡು ಹೇಳಿ."

"ಸಾರ್... ನನ್ನ ಹೆಂಡತಿ... ಮಿಡಲ್ ಸ್ಕೂಲ್ ಮೇಡಮ್ ಆಗಿದ್ದಾಳೆ. ಒಂದು ಹತ್ತು ಹದಿನೈದು ಹುಡುಗರು. ಪ್ರತಿನಿತ್ಯ ಸಂಜೆ ವೇಳೆ ಪಾಠಕ್ಕೆ ಅಂತ ನಮ್ಮ ಮನೆಗೆ ಬಂದು ಹೋಗ್ತಾರೆ ಸಾರ್."

"ಅವರಲ್ಲೇ ಒಬ್ಬರು ಯಾಕೆ... ಈ ಕಳ್ಳತನ ಮಾಡಿರ್ಬಾರದು?"

"ಅವರೆಲ್ಲಾ ದೊಡ್ಡದೊಡ್ಡ ಆಫೀಸರ್ಸ್ ಮಕ್ಕಳು ಸಾರ್."

"ಆದರೇನ್ರಿ... ಆಫೀಸರ್ಸ್‌ಗಳಲ್ಲೇ... ಸಾಕಷ್ಟು ಮಂದಿ ಕಳ್ಳರಿಲ್ವೇನ್ರೀ?... ಲಂಚ ಹೊಡೆಯೂದು ... ಕಳ್ಳತನಕ್ಕಿಂತ ಕೆಟ್ಟದ್ದಲ್ವೇನ್ರೀ?"

ದಫೇದಾರ್ ಅವರ ವೈಚಾರಿಕ ವಿಶ್ಲೇಷಣೆಯನ್ನು ಕೇಳಿ, ಜಗದೀಶ ನಿಬ್ಬೆರಗಾದ... ಆದರೂ ಅವರ ಸಂದೇಹವನ್ನು ತಳ್ಳಿ ಹಾಕುತ್ತಾ–

"ಪಾಠಕ್ಕೆ ಬರೋರೆಲ್ಲಾ ತುಂಬಾ ಚಿಕ್ಕ ವಯಸ್ಸಿನ... ಸಣ್ಣ ಮಕ್ಕಳು ಸಾರ್".

"ಅವರಲ್ಲೇ ನಿಮ್ಮ ಹಂಡೆಯನ್ನು ಹೊತ್ಕೊಂಡು ಹೋಗುವಷ್ಟು ಶಕ್ತಿಯಿರುವ ದೊಡ್ಡ ಹುಡುಗರು... ಯಾರಾದರೂ ಇದ್ರೆ... ಅಂಥಾವರನ್ನು ಗುರುತಿಸಿ ಹೇಳಿ".

ಈಗ ಜಗದೀಶನ ಸ್ಥಿತಿ ಇಕ್ಕುಳಕ್ಕೆ ಸಿಲುಕಿದ ಅಡಕೆಯಂತಾಗಿತ್ತು. ತನ್ನನ್ನು ಪೋಲೀಸ್ ಸ್ಟೇಷನ್ನಿಗೆ ಬರುವಂತೆ ಮಾಡಿದ್ದ ಹೆಂಡತಿಯನ್ನು ಮನದಲ್ಲಿಯೇ ಶಪಿಸುತ್ತಾ... ಏನು ಹೇಳಬೇಕೆಂದು ತೋಚದೆ ಸುಮ್ಮನೆ ಕುಳಿತ.

ಮತ್ತೆ ದಫೇದಾರ್ ಅವರಿಂದ ಹುಕುಂ ಹೊರಟಿತು.

"ಸರಿಯಾಗಿ ಜ್ಞಾಪಿಸಿಕೊಂಡು ಹೇಳ್ರಿ".

ಜಗದೀಶ ಈಗ... ಪಾಠಕ್ಕೆ ಬರುತ್ತಿದ್ದ ಹುಡುಗರೆಲ್ಲರ ದೈಹಿಕ ಆಕಾರಗಳೆಲ್ಲವನ್ನೂ ನೆನಪಿಸಿಕೊಳ್ಳುತ್ತಿದ್ದು... ಒಂದೆರಡು ಕ್ಷಣಗಳ ನಂತರ,

"ಒಬ್ಬ ಇದ್ದಾನೆ ಸಾರ್" ಎಂದ.

"ಅವನ ಹೆಸರೇನು? ...ಯಾರ ಮಗ ಅವನು? ...ಅವನ ಮನೆ ಎಲ್ಲಿದೆ?" ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಕರೆದರು.


ಈಗ ಜಗದೀಶ ... ಬಾಯಿತಪ್ಪಿ ಮಾತನಾಡಿದವನಂತೆ... ತನ್ನ ಕೆಳತುಟಿಯನ್ನು ಕಚ್ಚಿಕೊಂಡು ಮತ್ತೆ ಮೌನಿಯಾದ.

"ಇದ್ಯಾಕ್ರಿ ಹಿಂಗೆ ಹಿಂಜರಿತೀರ?... ಅವನೆಂಥ ಅಪಲತ್ಗಾರನ ಮೊಮ್ಮಗನೇ ಆಗಿರ್ಲಿ... ಇಲ್ಲವೇ... ದೊಡ್ಡ ಆಫೀಸರ್ ಮಗನೇ ಆಗಿರ್ಲಿ... ಸ್ಟೇಷನ್ನಿಗೆ ಎಳೆದು ತರಿಸಿ ಬಾಯಿ ಬಿಡಿಸ್ತೀನಿ. ನೀವು ಧೈರ್ಯವಾಗಿ ಹೇಳಿ... ಅವನು ಯಾರ ಮಗ ಅಂತ" ಎಂದು ಪೀಡಿಸತೊಡಗಿದರು. ಹೇಳಲೋ... ಬೇಡವೋ ಎಂಬ ದ್ವಂದ್ವದಲ್ಲಿ ಕೆಲವು ಕ್ಷಣಗಳ ಕಾಲ ತೊಳಲಾಡುತ್ತಿದ್ದ ಜಗದೀಶ... ದಫೇದಾರರ ಒತ್ತಾಯವನ್ನು ತಡೆಯಲಾಗದೆ... ಕೊನೆಗೂ ಬಾಯ್ಬಿಟ್ಟ–

"ಆ ದೊಡ್ಡ ಹುಡುಗ... ನಿಮ್ಮ ಸರ್ಕಲ್ ಇನ್‌ಸ್ಪೆಕ್ಟರ ಮಗ ಸಾರ್."

⌘

ಯಾಕಪ್ಪ ಅಂದ್ರೆ.. ಏನಪ್ಪ ಅಂದ್ರೆ



ಇಂದಿಗೆ ಸುಮಾರು ಹದಿನೈದು ವರ್ಷಗಳ ಹಿಂದೆ ನಗರವೊಂದರಲ್ಲಿ ಪದವಿ ತರಗತಿಯ ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಕೇಂದ್ರದಲ್ಲಿ ನಡೆದ ಘಟನೆಯಿದು.

ಮೌಲ್ಯ ಮಾಪನ ಕೇಂದ್ರದಲ್ಲಿ ಪ್ರತಿ ಐದು ಮಂದಿ ಮೌಲ್ಯಮಾಪಕರಿಗೆ ಒಬ್ಬರು ಉಪ ಮುಖ್ಯ ಪರೀಕ್ಷಕರು ಇರುತ್ತಾರೆ. ಇವರ ಕಾರ್ಯವೇನೆಂದರೆ... ಮೌಲ್ಯ ಮಾಪನಗೊಂಡ ಪ್ರತಿ ಹದಿನೈದು ಉತ್ತರ ಪತ್ರಿಕೆಗಳಲ್ಲಿ... ತಮಗೆ ಇಚ್ಛೆ ಬಂದ ಒಂದೆರಡನ್ನು ಆಯ್ಕೆ ಮಾಡಿಕೊಂಡು, ಅವನ್ನು ಕೂಲಂಕಷವಾಗಿ ಅವಲೋಕಿಸಿ ಮತ್ತೊಮ್ಮೆ ಅಂಕಗಳನ್ನು ನೀಡುವುದರ ಜೊತೆಗೆ... ಮೌಲ್ಯಮಾಪಕರು ಉತ್ತರಗಳನ್ನ ಸರಿಯಾಗಿ ಪರಿಶೀಲಿಸಿ, ಅರ್ಹತೆಗೆ ತಕ್ಕಂತೆ ಅಂಕಗಳನ್ನು ನೀಡಿದ್ದಾರೆಯೇ... ಯಾವುದಾದರೂ ಉತ್ತರಗಳಿಗೆ ಅಂಕಗಳನ್ನು ನೀಡದೇ, ಕೈಬಿಟ್ಟಿದ್ದಾರೆಯೇ... ಒಟ್ಟು ಅಂಕಗಳನ್ನು ಕೂಡಿ, ಮುಖ ಪುಟದಲ್ಲಿ ಮೊತ್ತವನ್ನು ನಮೂದಿಸುವಾಗ, ಏನಾದರೂ ತಪ್ಪುಗಳನ್ನು ಮಾಡಿದ್ದಾರೆಯೇ... ಯಾವುದೇ ರೀತಿಯಲ್ಲಿಯೂ ವಿದ್ಯಾರ್ಥಿಗಳ ಪರಿಶ್ರಮಕ್ಕೆ

ಅನ್ಯಾಯವಾಗದಂತೆ ಮೌಲ್ಯಮಾಪನ ಕಾರ್ಯವನ್ನು ಶ್ರದ್ಧೆಯಿಂದ ಮಾಡುತ್ತಿದ್ದಾರೆಯೇ ಎಂಬುದನ್ನು... ತಾವು ನೀಡಿದ ಅಂಕಗಳ ಜೊತೆಯಲ್ಲಿ ತುಲನಾತ್ಮಕವಾಗಿ ಹೋಲಿಸಿ ನೋಡಿ, ಖಚಿತ ಪಡಿಸಿಕೊಳ್ಳುವುದಾಗಿರುತ್ತದೆ.

ಈ ಕೆಳಕಂಡ ಘಟನೆ ನಡೆದ ಸಂದರ್ಭದಲ್ಲಿ ಐದು ಮಂದಿ ಮೌಲ್ಯಮಾಪಕರ ತಂಡದಲ್ಲಿ ನಾನು ಒಬ್ಬನಾಗಿದ್ದೆ. ನಮ್ಮ ಉಪ ಮುಖ್ಯ ಪರೀಕ್ಷಕರು ಉತ್ತಮ ವಿದ್ವಾಂಸರೆಂದು ಮತ್ತು ಅತ್ಯುತ್ತಮ ಅಧ್ಯಾಪಕರೆಂದು ಖ್ಯಾತಿಯನ್ನು ಪಡೆದಿದ್ದು... ಮಾತಿನಲ್ಲಿ ತುಂಬಾ ವಿನೋದ ಪ್ರವೃತ್ತಿಯುಳ್ಳವರಾಗಿದ್ದರು. ವೃತ್ತಿಯಲ್ಲಿ ನಮ್ಮೆಲ್ಲರಿಗಿಂತ ಹತ್ತಾರು ವರ್ಷ ಹಿರಿಯರಾಗಿದ್ದರು. ಮೌಲ್ಯಮಾಪನ ಕಾರ್ಯದಲ್ಲಿ ನಾವು ಮಾಡುತ್ತಿದ್ದ ನಾನಾ ಬಗೆಯ ತಪ್ಪುಗಳನ್ನು ಕಂಡು ಹಿಡಿದಾಗ... ತಪ್ಪು ಮಾಡಿದವರಿಗೆ ಅವನ್ನು ತೋರಿಸಿ... ತುಸು ಹಾಸ್ಯ ಬೆರೆತ ವಿಡಂಬನೆಯ ನುಡಿಗಳ ಮೂಲಕ ಚುಚ್ಚಿ ಎಚ್ಚರಿಸಿ... ಸೂಕ್ತವಾದ ಮಾರ್ಗದರ್ಶನ ನೀಡುತ್ತಾ... ಮೌಲ್ಯಮಾಪನ ಕಾರ್ಯ ಅತ್ಯಂತ ಕ್ರಮಬದ್ಧವಾಗಿ ನಡೆಯುವಂತೆ ನೋಡಿಕೊಳ್ಳುವುದರಲ್ಲಿ ಪರಿಣತರಾಗಿದ್ದರು.

ನಮ್ಮ ತಂಡಕ್ಕೆ ಒಂದು ಚಿಕ್ಕ ಕೊಠಡಿಯನ್ನು ನೀಡಲಾಗಿತ್ತು. ಮೌಲ್ಯಮಾಪನ ಕಾರ್ಯ ಪ್ರಾರಂಭಗೊಂಡು ನಾಲ್ಕೈದು ದಿನವಾಗಿತ್ತು. ಯಾಂತ್ರಿಕವಾಗಿ ಕಾರ್ಯ ಸಾಗುತ್ತಿತ್ತು. ಒಂದು ದಿನ ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯದಲ್ಲಿ... ಉತ್ತರ ಪತ್ರಿಕೆಯೊಂದನ್ನು ಅವಲೋಕಿಸುತ್ತಿದ್ದ ನಮ್ಮ ಉಪ ಮುಖ್ಯ ಪರೀಕ್ಷಕರು... ಇದ್ದಕ್ಕಿದ್ದಂತೆಯೇ ಗಟ್ಟಿಯಾಗಿ ನಗಲಾರಂಭಿಸಿದರು. ಆಗ ನಮ್ಮಲ್ಲಿ ಒಬ್ಬ ಮೌಲ್ಯಮಾಪಕರು ಹೊರಗೆ ಹೋಗಿದ್ದರು. ಉಳಿದ ನಾವು ನಾಲ್ವರು ಅಚ್ಚರಿಯಿಂದ ಅವರನ್ನೇ ನೋಡತೊಡಗಿದೆವು. ಒಂದೆರಡು ಕ್ಷಣಗಳ ನಂತರ... ತಮ್ಮ ನಗೆಯನ್ನು ನಿಲ್ಲಿಸಿ, ಪಕ್ಕದಲ್ಲಿ ಕುಳಿತಿದ್ದ ನನ್ನ ಕೈಗೆ ಮೌಲ್ಯಮಾಪನಗೊಂಡಿದ್ದ ಉತ್ತರ ಪತ್ರಿಕೆಯೊಂದನ್ನು ಕೊಡುತ್ತಾ–

"ನಾಗರಾಜ್... ಇದರಲ್ಲಿ ಐದು ಮುಖ್ಯ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಲಾಗಿದೆ. ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಯನ್ನು ಮೊದಲು ಓದಿ... ಅನಂತರ ಅದಕ್ಕೆ ಇಲ್ಲಿ ಬರೆದಿರುವ ಉತ್ತರವನ್ನು ಸ್ವಲ್ಪ ಜೋರಾಗಿ ಓದಿ" ಎಂದು ಹೇಳಿ... ಉಳಿದವರಿಗೂ ಅದನ್ನು ಕೇಳಿಸಿಕೊಳ್ಳುವಂತೆ ಸೂಚಿಸಿದರು. ನಾನು ಓದತೊಡಗಿದೆ–

ಪ್ರಶ್ನೆ: ನಳನು ದಮಯಂತಿಯನ್ನು ಅರಣ್ಯ ಮಧ್ಯದಲ್ಲಿ ತೊರೆದು ಹೋಗಲು ಕಾರಣಗಳೇನು? ವಿವರಿಸಿ.

ಉತ್ತರ: ನಳನು ದಮಯಂತಿಯನ್ನು ಯಾಕಪ್ಪ ತೊರೆದನು ಅಂದ್ರೆ ದಮಯಂತಿಯು ಏನಪ್ಪ ಅಂದ್ರೆ, ನಳನು ಯಾಕಪ್ಪ ಅಂದ್ರೆ, ದಮಯಂತಿಯು ಏನಪ್ಪ ಅಂದ್ರೆ..."

ಅಲ್ಲಿದ್ದವರೆಲ್ಲರೂ ಗಹಗಹಿಸಿ ನಗಲಾರಂಭಿಸಿದರು. ನಾನು ಓದುವುದನ್ನು ನಿಲ್ಲಿಸಿ–

"ಇದೇನ್ ಸಾರ್... ಹೀಗೆ ಉತ್ತರವನ್ನು ಬರೆದಿದ್ದಾನೆ?" ಎಂದು ಕೇಳುತ್ತಾ... ನಗತೊಡಗಿದೆನು.

"ವಿದ್ಯಾರ್ಥಿ ಬರೆದಿರುವುದು ಹೇಗಾದರೂ ಇರಲಿ... ಅಂಥ ಉತ್ತರಕ್ಕೆ ಅಧ್ಯಾಪಕರು ಎಷ್ಟು ನಂಬರ್ ಕೊಟ್ಟಿದ್ದಾರೆ ಅನ್ನೋದನ್ನ ನೋಡಿ" ಎಂದರು.

ಉತ್ತರ ಪತ್ರಿಕೆಯತ್ತ ಮತ್ತೆ ಕಣ್ಣಾಡಿಸಿದೆ. ಹತ್ತು ಅಂಕದ ಪ್ರಶ್ನೆಗೆ ಐದು ಅಂಕವನ್ನು ನೀಡಲಾಗಿತ್ತು.

"ಇದೇನ್ ಸಾರ್... ಇಂಥ ವ್ಯಾಲ್ಯುಯೇಷನ್!" ಎಂದು ಆತಂಕದಿಂದ ನುಡಿದೆ.

"ಮುಂದಿನ ನಾಲ್ಕು ಪ್ರಶ್ನೆಗಳನ್ನೂ... ಅವುಗಳಿಗೆ ಬರೆದಿರುವ ಉತ್ತರಗಳನ್ನೂ ಓದಿ" ಎಂದು ಆದೇಶಿಸಿದರು... ಮತ್ತೆ ಓದತೊಡಗಿದೆ.

ಪ್ರಶ್ನೆ: ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಸಮಾಜದ ಅಂಕು ಡೊಂಕುಗಳನ್ನು ವಿಮರ್ಶಿಸಿ.

ಉತ್ತರ: ಬಸವಣ್ಣನವರ ವಚನಗಳು ಯಾಕಪ್ಪ ಅಂದ್ರೆ, ಸಮಾಜದ ಅಂಕುಡೊಂಕುಗಳು ಏನಪ್ಪ ಅಂದ್ರೆ, ಬಸವಣ್ಣನವರ ವಚನಗಳು ಯಾಕಪ್ಪ ಅಂದ್ರೆ, ಸಮಾಜದ ಅಂಕುಡೊಂಕುಗಳು ಏನಪ್ಪ ಅಂದ್ರೆ...

ಅಲ್ಲಿದ್ದವರೆಲ್ಲರೂ ಈಗ ಹೊಟ್ಟೆ ಹುಣ್ಣಾಗುವಂತೆ ಬಿದ್ದು ಬಿದ್ದು ನಗುತ್ತಿದ್ದರು. ಈಗ ನಾನು ಗಟ್ಟಿಯಾಗಿ ಓದುವುದನ್ನು ನಿಲ್ಲಿಸಿ... ಇನ್ನುಳಿದ ಮೂರು ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಅವಲೋಕಿಸಿದೆ.

"ಯಾಕಪ್ಪ ಅಂದ್ರೆ... ಏನಪ್ಪ ಅಂದ್ರೆ" ಎಂಬ ಪದಗಳನ್ನೇ ಪದೇ ಪದೇ ಬಳಸಿ... ಪ್ರತಿಯೊಂದು ಪ್ರಶ್ನೆಗೂ ಒಂದರಿಂದ ಒಂದೂವರೆ ಪುಟದಷ್ಟು ಉತ್ತರವನ್ನು ಬರೆಯಲಾಗಿತ್ತು. ಮೌಲ್ಯಮಾಪಕರು ಅವೆಲ್ಲಕ್ಕೂ ನಾಲ್ಕಾರು ಕಡೆಗಳಲ್ಲಿ "ರೈಟ್ ಮಾರ್ಕ್" ಹಾಕಿ... ಪ್ರತಿಯೊಂದು ಉತ್ತರಕ್ಕೂ ಐದೈದು ನಂಬರ್ ಹಾಕಿದ್ದರು. ಕೆಲವು ಕ್ಷಣಗಳ ನಂತರ ಉಪ ಮುಖ್ಯ ಪರೀಕ್ಷಕರು ನಮ್ಮೆಲ್ಲರನ್ನೂ ಉದ್ದೇಶಿಸಿ–

"ನೋಡಿ... ನಿಜಕ್ಕೂ ಇದು ನಗುವಂಥಾದ್ದಲ್ಲ... ಆದರೆ ಏನು ಮಾಡೋಣ?... ನಾವೆಲ್ಲಾ ಎಷ್ಟು ಅಧೋಗತಿಗೆ ಇಳಿದಿದ್ದೇವೆ ಅಂದ್ರೆ.. ದುಃಖಿಸಬೇಕಾದುದಕ್ಕೆ ನಗ್ತೀವಿ.... ನಗಬೇಕಾದುದಕ್ಕೆ ಅಳ್ತೀವಿ" ಎಂದು ಗಂಭೀರವಾಗಿ ನುಡಿದಾಗ... ನಗೆ ನಿಂತು... ಮೌನ ಆವರಿಸಿತು.

ಅಷ್ಟರಲ್ಲಿ ... ಕಾಫಿ ಕುಡಿಯಲೆಂದು ಹೊರಗೆ ಹೋಗಿದ್ದ ಮತ್ತೊಬ್ಬ ಅಧ್ಯಾಪಕರು ಒಳಕ್ಕೆ ಬಂದರು... ಅವರೇ ಈ ಉತ್ತರ ಪತ್ರಿಕೆಯ ಬೆಲೆ ಕಟ್ಟಿದ್ದವರು. ಕೊಠಡಿಯೊಳಕ್ಕೆ ಕಾಲಿಡುತ್ತಿದ್ದಂತೆಯೇ ಅವರು ಉಪ ಮುಖ್ಯ ಪರೀಕ್ಷಕರನ್ನು ನೋಡುತ್ತಾ–

"ನೀವೆಲ್ಲಾ ನಗ್ತಾ ಇದ್ದುದ್ದು... ಹೊರಗಡೆ ಕ್ಯಾಂಟಿನ್‌ವರೆಗೂ ಕೇಳಿಸ್ತಿತ್ತು... ಅಂಥ ಸ್ವಾರಸ್ಯಕರವಾದ ವಿಷಯ ಏನ್ ಸಾರ್?" ಎಂದು ವಿಚಾರಿಸಿದರು.

"ಇಲ್ಲೊಂದು ಉತ್ತರ ಪತ್ರಿಕೆಯಿದೆ... ಇದನ್ನ ನೀವೇ ಓದಿ ನೋಡಿ" ಎಂದು ಹೇಳಿ, ಅದನ್ನು ಅವರಿಗೆ ಕೊಡುವಂತೆ ನನಗೆ ಸೂಚಿಸಿದರು. ಅವರು ಅಲ್ಲಿನ ಉತ್ತರಗಳನ್ನು ಓದುತ್ತಿದ್ದಂತೆ... ನಮ್ಮಂತೆಯೇ ನಗುತ್ತಾ–

"ಇದ್ಯಾರ್ ಸಾರ್... ಹೀಗೆ ಬರೆದಿದ್ದಾರೆ!" ಎಂದು ಅಚ್ಚರಿಯನ್ನು ವ್ಯಕ್ತಪಡಿಸಿದರು.

"ಬರೆದವರು ಯಾರಾದರೂ ಆಗಿರ್ಲಿ... ಅದಕ್ಕೆ ನೀವು ಎಷ್ಟು ನಂಬರನ್ನು ಕೊಟ್ಟಿದ್ದೀರಿ ಅನ್ನೋದನ್ನ ನೋಡಿ" ಎಂದು ಉಪ ಮುಖ್ಯ ಪರೀಕ್ಷಕರು ಗಂಭೀರವಾಗಿ ನುಡಿದರು.

ಉತ್ತರ ಪತ್ರಿಕೆಯಲ್ಲಿನ ಎಲ್ಲಾ ಐದು ಪ್ರಶ್ನೋತ್ತರಗಳನ್ನೂ ಮತ್ತು ಅವಕ್ಕೆ ತಾವು ನೀಡಿದ್ದ ಅಂಕಗಳನ್ನೂ... ಒಂದೆರಡು ನಿಮಿಷಗಳ ಕಾಲ ಕಣ್ಣಾಡಿಸಿ ನೋಡಿ... ಮುಖ ಪುಟದಲ್ಲಿದ್ದ ಇಪ್ಪತ್ತೈದು ಅಂಕಗಳು ಮತ್ತು ಅದರ ಕೆಳಗಿದ್ದ ತಮ್ಮ ಸಹಿಯನ್ನು ನೋಡುತ್ತಿದ್ದಂತೆಯೇ... ಅವರ ಮುಖ ಕಪ್ಪಾಯಿತು.

ಈಗ ಉಪ ಮುಖ್ಯ ಪರೀಕ್ಷಕರು ತುಂಬಾ ವ್ಯಂಗ್ಯದ ಧ್ವನಿಯಲ್ಲಿ–

"ಒಂದು ವೇಳೆ ಆ ವಿದ್ಯಾರ್ಥಿ ಇನ್ನೆರಡು ಮುಖ್ಯ ಪ್ರಶ್ನೆಗಳಿಗೆ ಇದೇ ರೀತಿ ಉತ್ತರವನ್ನು ಬರೆದಿದ್ದಲ್ಲಿ... ಇನ್ನೂ ಹತ್ತು ನಂಬರ್‌ಗಳು ಬಂದು... ಆತ ಪಾಸಾಗುತ್ತಿದ್ದ ಅಲ್ವೇನ್ರಿ?" ಎಂದು ಕೇಳಿದಾಗ ... ಮೌಲ್ಯ ಮಾಪಕರು ತಲೆ ತಗ್ಗಿಸಿಕೊಂಡು... ಉತ್ತರ ಪತ್ರಿಕೆಯನ್ನೇ ತಿರುಗ ಮುರುಗ ನೋಡತೊಡಗಿದರು.

ಈಗ ಇಡೀ ಕೊಠಡಿ ನಿಶ್ಶಬ್ದವಾಗಿತ್ತು. ಉಪ ಮುಖ್ಯ ಪರೀಕ್ಷಕರು ಬಹಳ ಗಂಭೀರವಾದ ಧ್ವನಿಯಲ್ಲಿ ಅವರನ್ನು ಉದ್ದೇಶಿಸಿ–

“ನೋಡಿ... ಅಧ್ಯಾಪಕರಾದ ನಾವು... ತರಗತಿಗಳಲ್ಲಿ ಪಾಠವನ್ನು ನ್ಯಾಯವಾಗಿ ಮಾಡ್ದೆ ಹೋದ್ರೆ... ಹಾಳಾಗ್ಲಿ ಹೋಗ್ಲಿ... ಆದರೆ ಮೌಲ್ಯಮಾಪನಕ್ಕೆಂದು ಬಂದಾಗ ... ವಿದ್ಯಾರ್ಥಿಗಳ ಭವಿಷ್ಯವನ್ನ ನಿರ್ಣಯಿಸುವ ಕಾರ್ಯದಲ್ಲಿ ನಾವು ನಿಯುಕ್ತರಾಗಿದ್ದೇವೆ ಎಂಬ ಹೊಣೆಗಾರಿಕೆಯನ್ನು ಅರಿತುಕೊಂಡು... ಪ್ರತಿಯೊಂದು ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಎಚ್ಚರಿಕೆಯಿಂದ ಮಾಡಬೇಕ್ರಿ... ವಿದ್ಯಾರ್ಥಿಗಳ ಪ್ರತಿಭೆ ಮತ್ತು ಪರಿಶ್ರಮಕ್ಕೆ ತಕ್ಕಂತೆ ಅಂಕಗಳನ್ನ ನೀಡಬೇಕೆ ಹೊರತು... ಹಿಟ್ಟು ಬೂದಿ ಎಲ್ಲವನ್ನೂ ಒಂದೇ ಮಾಡಬಾರದು.

ನೋಡಿ... ಒಂದು ಮಾತನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ... ಯಾವುದೇ ಕ್ಷೇತ್ರದಲ್ಲಾಗಲೀ ತಮ್ಮ ಪಾಲಿನ ಕಾರ್ಯವನ್ನು ಯಾರು ಅತ್ಯಂತ ಪ್ರೀತಿ, ಶ್ರದ್ಧೆ ಮತ್ತು ಪ್ರಾಮಾಣಿಕತನದಿಂದ ಮಾಡುವುದಿಲ್ಲವೋ... ಅಂಥಾವರು... ಆತ್ಮಗೌರವವಿಲ್ಲದ ವ್ಯಕ್ತಿಗಳು... ನಾವು ಹಣವನ್ನು ಸಂಪಾದನೆ ಮಾಡುವಂತೆಯೇ... ಆತ್ಮಗೌರವವನ್ನು ಸಂಪಾದಿಸಬೇಕು” ಎಂದು ನುಡಿದು ... ಆ ಉತ್ತರ ಪತ್ರಿಕೆಯನ್ನು ಅವರಿಂದ ಹಿಂದಕ್ಕೆ ಪಡೆದು... ಅದಕ್ಕೆ ಸೊನ್ನೆಯನ್ನು ಸುತ್ತಿದರು.

⌘

ದೇವರು ಕರುಣಿಸಿದ ಮಸಾಲೆ



ಪ್ರಾಥಮಿಕ ಶಾಲೆಯ ನಾಲ್ಕನೆಯ ತರಗತಿಯಲ್ಲಿ ನಾನು ಓದುತ್ತಿದ್ದಾಗ ನಡೆದ ಘಟನೆಯಿದು. ಆಗ ನಮಗಿದ್ದ ನಾಲ್ಕು ಮಂದಿ ಮೇಷ್ಟರುಗಳಲ್ಲಿ.... ನರಸಿಂಹಯ್ಯ ಎಂಬುವರು ವಿದ್ಯಾರ್ಥಿಗಳ ಪಾಲಿಗೆ ಅಚ್ಚುಮೆಚ್ಚಿನ ಮೇಷ್ಟ್ರು. ತುಂಬಾ ಚೆನ್ನಾಗಿ ಪಾಠ ಮಾಡುವುದರ ಜೊತೆಗೆ ಪ್ರತಿ ನಿತ್ಯ ಮಧ್ಯಾಹ್ನದ ನಂತರ ತರಗತಿ ಬಿಡುವ ಮುನ್ನ.... ಸುಮಾರು ಹತ್ತು ಹದಿನೈದು ನಿಮಿಷಗಳ ಕಾಲ–

"ಜೈ ಗಣೇಶ ಜೈ ಗಣೇಶ ಜೈ ಗಣೇಶ ಪಾಹಿಮಾಮ್
ಶ್ರೀ ಗಣೇಶ ಶ್ರೀ ಗಣೇಶ ಶ್ರೀ ಗಣೇಶ ರಕ್ಷಮಾಮ್"

ಎಂದು ದೇವರ ಸ್ತುತಿ ಗೀತೆಗಳನ್ನು ಗಟ್ಟಿಯಾಗಿ ಹೇಳಿಕೊಡುತ್ತಿದ್ದರು. ತರಗತಿಯಲ್ಲಿ ನಾವೆಲ್ಲಾ ಸಾಮಾಹಿಕವಾಗಿ ಗೀತೆಗಳನ್ನು ದೊಡ್ಡ ಧ್ವನಿಯಲ್ಲಿ ಹೇಳಬೇಕಿತ್ತು. ಒಂದೊಂದು ದಿನ ನಾವು ನಿರುತ್ಸಾಹದಿಂದ ಸರಿಯಾಗಿ ಹೇಳದಿದ್ದಾಗ.....

"ಏನ್ರಯ್ಯಾ ನೀವು?...... ದೇವರ ಹೆಸರನ್ನು ಹೇಳುವುದಕ್ಕೆ ನಿಮಗೆ ಬಾಯಿಲ್ಲ. ......ನೋಡ್ರಯ್ಯ, ಚೆನ್ನಾಗಿ ತಿಳ್ಕೊಳ್ಳಿ...... ದೇವರ ಪ್ರಾರ್ಥನೆ ಮಾಡೋದರಿಂದ ಒಳ್ಳೇ

ವಿದ್ಯೆ ಹತ್ತುತ್ತೆ...... ಬುದ್ಧಿ ಬರುತ್ತೆ. ನಿಮಗೆ ಇನ್ನೊಂದು ವಿಷಯ ಗೊತ್ತೇನ್ರಯ್ಯ? ...... ಬೀದಿಯಲ್ಲಿ ನಾಯಿಗಳು ಯಾಕೆ ಪದೇ ಪದೇ ಬೊಗಳ್ತಿರ್ತವೆ ಅಂತ?" ಎಂದು ಪ್ರಶ್ನಿಸಿದರು. ಆಗ ನಮ್ಮಲ್ಲಿ ಯಾರ್‍ಯಾರು, ಏನೇನು ಉತ್ತರಗಳನ್ನು ಹೇಳಿದೆವು ಎನ್ನುವುದು...... ಈಗ ನನಗೆ ಮರೆತು ಹೋಗಿದೆ. ವಿದ್ಯಾರ್ಥಿಗಳ ಉತ್ತರಗಳೆಲ್ಲವನ್ನೂ ನಿರಾಕರಿಸಿ, ನಮ್ಮ ಮೇಷ್ಟ್ರು ಹೇಳಿದ ಮಾತುಗಳು ಮಾತ್ರ ನನ್ನ ನೆನಪಿನಲ್ಲಿ ಚೆನ್ನಾಗಿ ಉಳಿದಿವೆ.

"ನೋಡ್ರಯ್ಯಾ.... ನಾಯಿಗಳಿಗೆ ದೇವರನ್ನು ಪ್ರಾರ್ಥನೆ ಮಾಡ್ಬೇಕು ಅನ್ನಿಸಿದಾಗಲೆಲ್ಲಾ ಹಾಗೆ ಬೊಗಳ್ತಿರ್ತವೆ... ಬೌ ...ಬೌ ಅಂತ ಒಂದಕ್ಕಿಂತ ಮತ್ತೊಂದು ಜೋರಾಗಿ ಬೊಗಳುತ್ತಾ.... ತಮ್ಮ ತಮ್ಮ ಇಷ್ಟ ದೇವತೆಗಳನ್ನು ನೆನಪಿಸಿಕೊಳ್ತವೆ. ಅಂತಾದ್ದರಲ್ಲಿ ಆ ನಾಯಿಗಳಿಗಿಂತ ನೀವು ಕಡೆಯಾಗ್ತೀರಾ?" ಎಂದು ಹಂಗಿಸಿದರು.

ಎಂದಿನಂತೆ ಒಂದು ದಿನ ಮಧ್ಯಾಹ್ನ ನಾಲ್ಕು ಗಂಟೆಯ ಸಮಯದಲ್ಲಿ ನರಸಿಂಹಯ್ಯ ಮೇಷ್ಟ್ರು ನಮಗೆ ದೇವರ ಪ್ರಾರ್ಥನಾ ಗೀತೆಗಳನ್ನು ಸುಶ್ರಾವ್ಯವಾಗಿ ಹೇಳಿಕೊಡುತ್ತಿದ್ದರು. ಅಷ್ಟರಲ್ಲಿ ಹೋಟೆಲ್ ಸಪ್ಲೈಯರ್ ಒಬ್ಬ...... ಒಂದು ಕೈಯಲ್ಲಿ ಮಸಾಲೆ ದೋಸೆಯಿರುವ ತಟ್ಟೆಯನ್ನು ......ಮತ್ತೊಂದು ಕೈಯಲ್ಲಿ ನೀರಿನ ಲೋಟವನ್ನು ಹಿಡಿದುಕೊಂಡು ತರಗತಿಯ ಒಳಕ್ಕೆ ಬಂದನು. ಪ್ರಾರ್ಥನೆಯನ್ನು ನಿಲ್ಲಿಸಿದ ಮೇಷ್ಟ್ರು...... ಅವನತ್ತ ಪ್ರಶ್ನಾರ್ಥಕ ದೃಷ್ಟಿಯನ್ನು ಬೀರಿದರು.

"ನಿಮಗೆ ಮಸಾಲೆ ದೋಸೆ ಕೊಟ್ಟುಬಿಟ್ಟು ಬಾ ಅಂತ...... ಗೌಡರು ಕಳುಹಿಸಿದರು ಸಾರ್" ಎಂದ.

"ಯಾವ ಗೌಡ್ರಯ್ಯ?"

"ನಗರಕೆರೆ ಗೌಡ್ರು ಸಾರ್, ತಕೊಳಿ ಸಾರ್......ಮಸಾಲೆ ತಿಂತಾಯಿರಿ, ಹೋಗ್ಬುಟ್ಟು ಕಾಫಿ ತರ್ತೀನಿ" ಎನ್ನುತ್ತಾ...... ತಟ್ಟೆ ಲೋಟಗಳನ್ನು ಮೇಷ್ಟ್ರು ಕೈಗೆ ನೀಡಿ ಸಪ್ಲೈಯರ್ ಹಿಂತಿರುಗಿದ.

ಮದ್ದೂರು ಟೌನಿನ ಮಧ್ಯಭಾಗದಲ್ಲಿ ಹರಿಯುತ್ತಿರುವ ಕೆಮ್ಮಣ್ಣು ನಾಲೆಯ ಪಕ್ಕದಲ್ಲಿ ನಮ್ಮ ಪ್ರಾಥಮಿಕ ಶಾಲೆಯಿತ್ತು. ಇದರ ಮುಂಭಾಗದ ಪೇಟೆ ಬೀದಿಯಲ್ಲಿ ಉಡುಪಿ ಬ್ರಾಹ್ಮಣರ ಒಂದೆರಡು ಹೋಟೆಲ್‌ಗಳಿದ್ದವು. ಸಂಜೆ ವೇಳೆಗೆ ಅಲ್ಲಿಗೆ ಬರುತ್ತಿದ್ದ ಸುತ್ತಮುತ್ತಣ ಹಳ್ಳಿಗಳ ದೊಡ್ಡ ದೊಡ್ಡ ಗೌಡರುಗಳು ತಮಗೆ ಪರಿಚಯವಿದ್ದ ಮೇಷ್ಟರುಗಳಿಗೆ.... ತಮ್ಮ ಪ್ರೀತಿ ಮತ್ತು ಗೌರವ ಸೂಚಕವಾಗಿ... ಈ ರೀತಿ ಆಗಾಗ್ಗೆ ತಿಂಡಿ ಕಾಫಿಯನ್ನು ಕಳುಹಿಸುತ್ತಿದ್ದರು.

ನರಸಿಂಹಯ್ಯನವರು ಮಸಾಲೆ ದೋಸೆಯ ತಟ್ಟೆಯನ್ನು ನಮ್ಮ ಮುಂದೆ ಎತ್ತಿ ಹಿಡಿದು ತೋರಿಸುತ್ತಾ–

"ನೋಡುದ್ರೇನಯ್ಯಾ.... ದೇವರನ್ನು ಪ್ರೀತಿಯಿಂದ ಪ್ರಾರ್ಥನೆ ಮಾಡಿದರೆ.. ಅವನು ಹೇಗೆ ಕರುಣಿಸ್ತಾನೆ ಅಂತ.. ನೀವು ಕೂಡ ನನ್ನ ಹಾಗೆ ದೇವರ ಸ್ಮರಣೆ ಮಾಡಿದರೆ ನಿಮಗೂ ಮುಂದಕ್ಕೆ ಮಸಾಲೆ ದೋಸೆ ಕಾಫಿ ಎಲ್ಲಾ ಸಿಗ್ತವೆ' ಎಂದು ಹೇಳಿ, ಅಲ್ಲೆ ಒಂದು ಪಕ್ಕದಲ್ಲಿ ಕುಳಿತುಕೊಂಡು ಸಂತೋಷದಿಂದ ದೋಸೆಯನ್ನು ತಿನ್ನಲಾರಂಭಿಸಿದರು. ಕೆಲವು ನಿಮಿಷಗಳಲ್ಲೇ ದೋಸೆಯನ್ನು ಮೇಷ್ಟ್ರು ತಿಂದು ಮುಗಿಸುವಷ್ಟರಲ್ಲಿ... ಸಪ್ಲೈಯರ್ ಗಾಬರಿಯಿಂದ.... "ಸಾರ್... ಸಾರ್" ಎನ್ನುತ್ತಾ ಒಳನುಗ್ಗಿ ಬಂದ.

"ಏನಯ್ಯ?" ಎಂದರು ಮೇಷ್ಟ್ರು.

"ದೋಸೆ ತಿಂದೇ ಬಿಟ್ರ ಸಾರ್?"

"ಇನ್ನೊಂದು ಸ್ವಲ್ಪ ಇದೆ ಕಣಯ್ಯ ...ಯಾಕೆ?"

"ಸಾರ್... ಈ ದೋಸೆ ನಿಮಗಲ್ಲ ಸಾರ್. ಪಕ್ಕದ ರೂಮಿನಲ್ಲಿ, ಮೂರನೆಯ ಕ್ಲಾಸಿನಲ್ಲಿ ರಾಮಪ್ಪನೋರು ಅಂತ ಇದ್ದಾರಲ್ಲ... ಆ ಮೇಷ್ಟರಿಗಂತೆ ದೋಸೆ ಕಳುಹಿಸಿದ್ದು".

"ಈಗ ನಾನೇನಪ್ಪ ಮಾಡ್ಲಿ......ನೀನು ತಂದುಕೊಟ್ಟೆ... ನಾನು ತಿಂದು ... ಮುಗಿಸಿದೆ.... ಎಲ್ಲಾ ಆ ಭಗವಂತನ ಲೀಲೆ... ಕಾಫಿ ತರಲಿಲ್ಲವೇನಯ್ಯ?"

"ಇಲ್ಲ ಸಾರ್...... ಗೌಡರು ನನ್ನನ್ನು ಚೆನ್ನಾಗಿ ಬಯ್ದು, ಕಾಫಿಯನ್ನು ಕ್ಯಾನ್ಸಲ್ ಮಾಡ್ಬುಟ್ರು ಸಾರ್" ಎಂದ ಸಪ್ಲೈಯರ್.

ಈಗ ಮೇಷ್ಟ್ರು ಮುಖ ಸ್ವಲ್ಪ ಕಳೆಗುಂದಿತು. ಮಸಾಲೆಯನ್ನು ಕರುಣಿಸಿದ ದೇವರು.... ಕಾಫಿಯನ್ನು ಕ್ಯಾನ್ಸಲ್ ಮಾಡಬೇಕಾದರೆ... ನಮ್ಮ ಮೇಷ್ಟ್ರು ಮಾಡಿದ ಪ್ರಾರ್ಥನೆಯಲ್ಲೇ ಏನೋ ದೋಷವಿದ್ದಿರಬೇಕೆಂದು.... ಚಿಕ್ಕ ಮಕ್ಕಳಾದ ನಾವೆಲ್ಲಾ ಅಂದು ಮಾತನಾಡಿಕೊಂಡೆವು..

⌘

ಟಗರು ಮತ್ತು ಪ್ರೀತಿ



ನಾನು ಏಳೆಂಟು ವರ್ಷದ ಬಾಲಕನಾಗಿದ್ದಾಗ ನಡೆದ ಘಟನೆಯಿದು. ನಮ್ಮೂರಿನಲ್ಲಿ ಒಂದು ದಿನ ಬೆಳಿಗ್ಗೆ ಒಂದಿಬ್ಬರು ಆಳುಗಳೊಡನೆ ಹೊಲದ ಬಳಿಗೆ ಹೋದೆನು. ನಮ್ಮ ಸಂಗಡ ಮನೆಯಿಂದ ಒಂದು ಟಗರು ಕೂಡ ಬಂದಿತ್ತು.

ಈ ವರ್ಷ ಮಳೆಗಾಲ ಚೆನ್ನಾಗಿ ನಡೆದು ಹೊಲಮಾಳದಲ್ಲಿ ಎತ್ತ ನೋಡಿದರೆ ಅತ್ತ.... ರಾಗಿ ಪೈರುಗಳು ತೆಂಡೆ ತೆಂಡೆಗಳಾಗಿ ಕವಲೊಡೆದು ಸೊಂಪಾಗಿ ಬೆಳೆದಿದ್ದವು.... ಅವರೆ, ಹುಚ್ಚೆಳ್ಳು, ನವಣೆ, ತೊಗರಿ, ಜೋಳ ಮುಂತಾದ ಪೈರುಪಚ್ಚೆಗಳು ಸಾಲಾರಂಭದಲ್ಲಿ ಕಂಗೊಳಿಸುತ್ತಿದ್ದವು. ಹೊಲಕ್ಕೆ ಬರುತ್ತಿದ್ದಂತೆಯೇ ಆಳುಗಳು ಟಗರನ್ನು ಅದರ ಇಚ್ಛೆ ಬಂದ ಕಡೆ ಮೇಯಲೆಂದು ಬಿಟ್ಟು.... "ನೀವು ತೆವರಿ ಮ್ಯಾಲೆ ಕುಂತ್ಕೊಳ್ರಪ್ಪ" ಎಂದು ನನಗೆ ಹೇಳಿ ಅವರಿಬ್ಬರೂ ಅಲ್ಲಲ್ಲಿ ಬೆಳೆದಿದ್ದ ಕಳೆಯನ್ನು ಕೀಳುವುದರಲ್ಲಿ ಮಗ್ನರಾದರು.

ಏಕೋ.... ಏನೊ.... ಮೇಯಲೆಂದು ಬಿಟ್ಟಿದ್ದ ಟಗರು ಎಲ್ಲೂ ಬಾಯಾಡಿಸದೆ, ತೆವರಿಯ ಮೇಲೆ ಸುಮ್ಮನೆ ನಿಂತಿತ್ತು. ಅದನ್ನು ನೋಡಿದ ನನಗೆ "ಇದೇನಿದು ಇಷ್ಟೊಂದು ಹಸುರಿದ್ದರೂ, ರಾಗಿ ಗರಿಯನ್ನಾಗಲಿ...... ಅವರೆ ಎಲೆಯನ್ನಾಗಲಿ...... ಗರಕೆ ಹುಲ್ಲನ್ನಾಗಲಿ ತಿನ್ನದೆ ನಿಂತಿದೆಯಲ್ಲ!" ಎಂದು ಅಚ್ಚರಿಯುಂಟಾಯಿತು. "ಟಗರು ಹಸ್ಕೊಂಡು ನಿಂತಿದೆಯಲ್ಲಾ!" ಎಂಬ ಕರುಣೆ ಉಂಟಾಯಿತು. ಕೂಡಲೇ, ತೆವರಿಯಲ್ಲಿ ಚೆನ್ನಾಗಿ ಬೆಳೆದಿದ್ದ ಗರಕೆ ಹುಲ್ಲಿನಲ್ಲಿ ಒಂದು ಹಿಡಿಯಷ್ಟನ್ನು ನನ್ನ ಪುಟ್ಟ ಕೈಗಳಿಂದ ಕಿತ್ತುಕೊಂಡೆನು. ನಾನು ಹುಲ್ಲನ್ನು ಕೀಳುತ್ತಿದ್ದಾಗಲೂ...... ಟಗರು ನಿಂತ ಕಡೆಯಲ್ಲೆ ...... ಸುಮ್ಮನೆ ತಲೆಯೆತ್ತಿ ನಿಂತಿತ್ತು. ನನಗೆ ಅದರ ಸ್ಥಿತಿಯನ್ನು ಕಂಡು ಅಯ್ಯೋ ಎನ್ನಿಸಿತು.

ಈಗ ಟಗರಿನ ಮುಂದಕ್ಕೆ ಹೋಗಿ.... ಅದರ ಬಾಯಿಯ ಬಳಿ ಹುಲ್ಲಿನ ಎಸಳುಗಳನ್ನು ಹಿಡಿದೆನು. ಆಗ ಅದು ಒಂದೆರಡು ಹೆಜ್ಜೆ ಹಾಗೆಯೇ ಹಿಂದಕ್ಕೆ ಜರುಗಿತು. ನಾನು ಮತ್ತಷ್ಟು ಮುಂದಕ್ಕೆ ಹೋಗಿ .... ಅದರ ಮಟ್ಟಕ್ಕೆ ಬಗ್ಗಿ.... ಅದರ ಬಾಯಿಗೆ ಹುಲ್ಲನ್ನು ಹಿಡಿದೆನು. ಅದು ಹಿಮ್ಮುಖವಾಗಿ ಜರುಗತೊಡಗಿತು. ನಾನು ಮುಮ್ಮುಖವಾಗಿ ಅದರ ಬಾಯಿಯ ಬಳಿಯಲ್ಲೆ ಹುಲ್ಲನ್ನು ಹಿಡಿದು.... ಸ್ವಲ್ಪ ಸ್ವಲ್ಪವಾಗಿ ಮುಂದಕ್ಕೆ ನಡೆದನು. ಒಂದೆರಡು ಕ್ಷಣಗಳಲ್ಲಿ ಇದ್ದಕ್ಕಿದ್ದಂತೆಯೇ ಅದು ತೀವ್ರವಾದ ವೇಗದಿಂದ ಮುಂದಕ್ಕೆ ನುಗ್ಗಿ ಬಂದು ನನಗೆ ಢಿಕ್ಕಿ ಹೊಡೆಯಿತು. ಅದರ ಬಿರುಸಿನ ಹೊಡೆತಕ್ಕೆ ಸಿಲುಕಿ 'ದೊಪ್ಪೆಂದು' ತೆವರಿಯಿಂದ ಕೆಳಕ್ಕೆ ಉರುಳಿ ಬಿದ್ದೆನು. ಆಳುಗಳಿಬ್ಬರೂ ದೂರದಲ್ಲಿ ಇದ್ದುದರಿಂದ, ಅವರಿಗೆ ಏನೊಂದೂ ತಿಳಿಯಲಿಲ್ಲ.

ಕೆಳಕ್ಕೆ ಉರುಳಿ ಬಿದ್ದ ನನ್ನ ಮೈಗೆ ಸ್ವಲ್ಪ ಪೆಟ್ಟಾಗಿತ್ತು. ಆದರೆ ಅದಕ್ಕಿಂತ ಹೆಚ್ಚಾಗಿ ಮನಸ್ಸಿಗೆ ತುಂಬಾ ನೋವಾಗಿತ್ತು...... "ನಾನು ಅದಕ್ಕೆ ಹುಲ್ಲನ್ನು ತಿನ್ನಿಸಲೆಂದು ಹೋದರೆ, ಅದು ನನ್ನನ್ನು ಹೀಗೆ ಗುದ್ದಿ ಕೆಡವಿತಲ್ಲ! ....ಇದ್ಯಾಕೆ ಹೀಗೆ ಮಾಡಿತು?" ಎಂಬ ಕಹಿಯಾದ ಭಾವನೆಯು ನನ್ನ ಮನದಲ್ಲಿ ಆಳವಾಗಿ ಬೇರೂರಿತು. ಮತ್ತೆ ಅದರ ಬಳಿಗೆ ನಾನು ಹೋಗಲಿಲ್ಲ.

ಆದರೆ ನನ್ನ ಮುಗ್ಧ ಮನದ ಮೇಲೆ ಅಂದು ಆದ ಆಘಾತ ಇಂದು ಮನುಷ್ಯ ಜೀವನದಲ್ಲಿನ ಹಲವಾರು ಘಟನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ನನ್ನ ಕಣ್ಣ ಮುಂದಿನ ಸಮಾಜದಲ್ಲಿನ ಹತ್ತಾರು ಕುಟುಂಬಗಳಲ್ಲಿ–

"ತಾವು ಪ್ರೀತಿಯಿಂದ ಹೆತ್ತು ಹೊತ್ತು ಬೆಳೆಸಿದ ಮಕ್ಕಳಿಂದಲೇ, ಅನಂತರದ ದಿನಗಳಲ್ಲಿ ನಾನಾ ಕಾರಣಗಳಿಂದಾಗಿ ವಿವಿಧ ಬಗೆಯ ಆಘಾತಗಳಿಗೆ ಗುರಿಯಾದ ತಂದೆ ತಾಯಂದಿರ ಚಿಂತಾಜನಕ ಸ್ಥಿತಿಯನ್ನು ಕಂಡಾಗ..... ತನ್ನ ಮೈಮನಗಳನ್ನು

ಅರ್ಪಿಸಿಕೊಂಡು, ತಾನು ಬಹಳವಾಗಿ ಪ್ರೀತಿಸುವ ಗಂಡನಿಂದಲೇ ಕಾಲಕ್ರಮೇಣ ವಂಚಿತಳಾಗಿ, ಕಣ್ಣೀರನಲ್ಲೆ ಕೈ ತೊಳೆಯುತ್ತಿರುವ ಹೆಣ್ಣನ್ನು ಕಂಡಾಗ ...... ಒಟ್ಟಾರೆಯಾಗಿ ಸಮಾಜದ ಎಲ್ಲಾ ರಂಗಗಳಲ್ಲಿಯೂ...... ಯಾವುದೇ ಒಬ್ಬ ವ್ಯಕ್ತಿಯ, ಒಂದು ಕುಟುಂಬದ, ಒಂದು ಸಂಸ್ಥೆಯ ಅಥವಾ ಜನ ಸಮುದಾಯದ ಒಳಿತಿಗಾಗಿಯೇ ತಮ್ಮದೆಲ್ಲವನ್ನು ಧಾರೆಯೆರೆದು ...... ಅನಂತರ ಕಾಲ ಉರುಳಿದಂತೆ ತಾವು ಪ್ರೀತಿಸಿ ಬೆಳೆಸಿದವರಿಂದಲೇ ಬಹು ಬಗೆಯ ನೋವುಗಳಿಗೆ ಗುರಿಯಾಗಿ ನರಳುತ್ತಿರುವವರನ್ನು ಕಂಡಾಗಲೆಲ್ಲಾ ...... ಟಗರು ನನ್ನನ್ನು ಗುದ್ದಿ ಕೆಡವಿದ ಘಟನೆಯು ನೆನಪಾಗುತ್ತಿರುತ್ತದೆ.

⌘

ಹಳ್ಳಿಗಾಡಿನ ಪ್ರೀತಿಯ ಗುರು



ಕಾಳಮುದ್ದನ ದೊಡ್ಡಿಯಲ್ಲಿರುವ ಭಾರತಿ ಪ್ರಥಮ ದರ್ಜೆ ಕಾಲೇಜಿನ ಪ್ರಾರಂಭದ ಹಂತದಲ್ಲಿ ಹನ್ನೆರಡು ವರ್ಷಗಳ ಕಾಲ ಪ್ರಿನ್ಸಿಪಾಲರಾಗಿ ಕಾರ್ಯವನ್ನು ನಿರ್ವಹಿಸಿ... ಕಾಲೇಜಿನ ಸರ್ವತೋಮುಖವಾದ ಶೈಕ್ಷಣಿಕ ಬೆಳವಣಿಗೆಗೆ ಅತ್ಯುತ್ತಮವಾದ ಅಡಿಪಾಯವನ್ನು ಹಾಕಿದ್ದ ಡಿ. ಚನ್ನಯ್ಯನವರು ಮೊನ್ನೆ ನಿಧನರಾದರು. ನಿವೃತ್ತಿಗೊಂಡು ಹದಿನಾರು ವರ್ಷಗಳಾಗಿದ್ದರೂ ದೊಡ್ಡಿಯಲ್ಲಿರುವ ತಮ್ಮ ಮಗಳ ಮನೆಗೆ ಬಂದಾಗಲೆಲ್ಲಾ... ಕಾಲೇಜಿಗೆ ಬಂದು... ಜಿ. ಮಾದೇಗೌಡರ ಕ್ರಿಯಾಶೀಲ ಮಾರ್ಗದರ್ಶನದಲ್ಲಿ ಪ್ರಗತಿ ಪಥದಲ್ಲಿ ಸಾಗುತ್ತಿರುವ ಕಾಲೇಜನ್ನು ಕಣ್ತುಂಬ ನೋಡಿ ಸಂತೋಷಪಡುತ್ತಿದ್ದರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ನೀಲಕಂಠನಹಳ್ಳಿ ಗ್ರಾಮದಲ್ಲಿ ಸಾಮಾನ್ಯ ರೈತ ಕುಟುಂಬವೊಂದರಲ್ಲಿ 1923ರಲ್ಲಿ ಜನಿಸಿದ ಚೆನ್ನಯ್ಯನವರು... ಮುಂದೆ ಮೈಸೂರು

ವಿಶ್ವವಿದ್ಯಾನಿಲಯದಲ್ಲಿ ಬಿ.ಎಸ್ಸಿ., ಮತ್ತು ಬಿ.ಇಡಿ., ಪದವಿಗಳನ್ನು ಪಡೆದು... ಮೊದಲು ಕೃಷ್ಣರಾಜಪೇಟೆಯ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅಲ್ಲಿ ಒಂಬತ್ತೂವರೆ ವರ್ಷಗಳ ಕಾಲ ಸಲ್ಲಿಸಿದ ಸೇವೆಯನ್ನೂ ... ಇಂದಿಗೂ ಅವರ ವಿದ್ಯಾರ್ಥಿಗಳಾಗಿದ್ದವರು "ನಮ್ಮ ಡಿ.ಸಿ ಅವರು ಅಂದ್ರೆ... ಅತ್ಯಂತ ಶಿಸ್ತಿನ... ಪ್ರೀತಿಯ ಮೇಷ್ಟ್ರು" ಎಂದು ಸಂತೋಷದಿಂದ ನೆನೆದುಕೊಳ್ಳುತ್ತಾರೆ.

ಅನಂತರ ಮದ್ದೂರಿನ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದಾಗ... ಸ್ನಾತ್ತಕೋತ್ತರ ಪದವಿಯ ಉನ್ನತ ಅಧ್ಯಯನಕ್ಕೆ ಆಯ್ಕೆಗೊಂಡು ಭೌತಶಾಸ್ತ್ರದಲ್ಲಿ ಎಂ.ಎಸ್ಸಿ., ಪದವಿಯನ್ನು ಪಡೆದು... ಹುಣಸೂರಿನ ಜೂನಿಯರ್ ಕಾಲೇಜಿನಲ್ಲಿ ಲೆಕ್ಚರರ್ ಆಗಿ ನೇಮಕಗೊಂಡರು. 1971 ರಲ್ಲಿ ಜಿ. ಮಾದೇಗೌಡರು ವಿದ್ಯಾ ಇಲಾಖೆಯೊಡನೆ ವ್ಯವಹರಿಸಿ, ಡೆಪ್ಯುಟೇಶನ್ ಆಧಾರದ ಮೇಲೆ ಇವರನ್ನು ಭಾರತೀ ಕಾಲೇಜಿನ ಪ್ರಿನ್ಸಿಪಾಲರಾಗಿ ಕರೆತಂದರು, ಅಂದಿನಿಂದ ... 1983 ರಲ್ಲಿ ನಿವೃತ್ತರಾಗುವ ತನಕ ಡಿ.ಚನ್ನಯ್ಯನವರ ಪಾಲಿಗೆ ಭಾರತಿ ಕಾಲೇಜೇ... ಎಲ್ಲವೂ ಆಗಿತ್ತು. ಕಾಲೇಜನ್ನು ಭೌತಿಕವಾಗಿ, ಶೈಕ್ಷಣಿಕವಾಗಿ ಮತ್ತು ನೈತಿಕವಾಗಿ ಉತ್ತಮರೀತಿಯಲ್ಲಿ ರೂಪಿಸಲು ಅವರು ಪಟ್ಟ ಪ್ರಯತ್ನಗಳು ಮತ್ತು ಮಾಡಿದ ಕಾರ್ಯಗಳು... ಶಿಕ್ಷಣಕ್ಷೇತ್ರದಲ್ಲಿರುವ ಪ್ರತಿಯೊಬ್ಬರಿಗೂ ಅನುಕರಣೀಯವಾದುದರಿಂದ... ಅವರ ಅಧ್ಯಾಪನದ ಮತ್ತು ಪ್ರಿನ್ಸಿಪಾಲರಾಗಿ ಆಡಳಿತ ನಡೆಸಿದ ಸಂದರ್ಭದಲ್ಲಿನ ಒಂದೆರಡು ಘಟನೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಅತ್ಯಂತ ಇಂಪಾದ ಧ್ವನಿಯನ್ನು ಹೊಂದಿದ್ದ ಡಿ. ಚನ್ನಯ್ಯನವರು... ವಿಜ್ಞಾನದ ವಿಷಯಗಳನ್ನು ಬಹಳ ಸರಳವಾದ ನುಡಿಗಳ ಮೂಲಕ, ಅತ್ಯಾಕರ್ಷವಾದ ಶೈಲಿಯಲ್ಲಿ ನಿರೂಪಿಸುತ್ತಾ... ವಿದ್ಯಾರ್ಥಿಗಳಿಗೆ ಸುಲಭ ಗ್ರಾಹ್ಯವಾಗುವಂತೆ ಬೋಧಿಸುತ್ತಿದ್ದರು. ಅತ್ಯುತ್ತಮವಾಗಿ ಪಾಠ ಪ್ರವಚನಗಳನ್ನು ಮಾಡುವುದರ ಜೊತೆಗೆ... ಹಳ್ಳಿಗಾಡಿನಿಂದ ಶಾಲಾ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳ ಬಗ್ಗೆ ಅಪಾರವಾದ ಪ್ರೀತಿ ಮತ್ತು ಭರವಸೆಯನ್ನಿಟ್ಟುಕೊಂಡಿದ್ದ ಗುರುವಾಗಿದ್ದರು. ಬಡ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದಷ್ಟು ಮಟ್ಟಿಗೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡುತ್ತಾ... ಅವರ ಶೈಕ್ಷಣಿಕ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದ್ದರು.

ಭಾರತಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ನಾನು 1972ರಲ್ಲಿ ಸೇರಿದಾಗ. ಕಾಲೇಜಿನ ಅಧ್ಯಾಪಕ ವರ್ಗದಲ್ಲಿ ಒಂದಿಬ್ಬರನ್ನು ಹೊರತುಪಡಿಸಿ... ಉಳಿದ ನಾವೆಲ್ಲರೂ ಯೌವನದ ಹಂತದಲ್ಲಿದ್ದೆವು. ತರುಣ ಅಧ್ಯಾಪಕರಾಗಿದ್ದ ನಮ್ಮನ್ನು ಕುರಿತು ಪ್ರಿನ್ಸಿಪಾಲ್ ಡಿ. ಚನ್ನಯ್ಯನವರು–

"ನೋಡಿ... ನಮ್ಮ ಹಳ್ಳಿಯ ಮಕ್ಕಳು ಬುದ್ಧಿಶಕ್ತಿಯಲ್ಲಾಗಲಿ...ಪ್ರತಿಭೆಯಲ್ಲಾಗಲಿ ಯಾರಿಗಿಂತೇನು ಕಡಿಮೆಯಿಲ್ಲ. ಸರಿಯಾದ ಶಿಕ್ಷಣವನ್ನು ನಾವು ಅವರಿಗೆ ನೀಡಿದರೆ... ಅವರು ಜೀವನವನ್ನು ಉತ್ತಮವಾಗಿ ರೂಪಿಸಿಕೊಂಡು... ಸಮಾಜದಲ್ಲಿ ಉಪಯುಕ್ತ ವ್ಯಕ್ತಿಗಳಾಗಿ ಬೆಳೆಯುತ್ತಾರೆ... ನಮ್ಮ ಹಳ್ಳಿಯ ಹುಡುಗರು ಸ್ವಲ್ಪ ಒರಟರು... ಆದರೆ ತುಂಬಾ ಮುಗ್ಧರು. ಅವರನ್ನು ನಮ್ಮ ಪ್ರೀತಿಯ ನಡೆನುಡಿಗಳಿಂದಲೇ ವಿಶ್ವಾಸಕ್ಕೆ ತೆಗೆದುಕೊಂಡು... ಹತೋಟಿಯಲ್ಲಿಟ್ಟುಕೊಂಡು ವಿದ್ಯೆಯನ್ನು ಹೇಳಿದರೆ... ಮುಂದಕ್ಕೆ ಇಲ್ಲಿ ಒಂದು ಒಳ್ಳೆಯ ಕಾಲೇಜನ್ನು ನಾವು ರೂಪಿಸಬಹುದು" ಎಂದು ಮಾರ್ಗದರ್ಶನ ನೀಡುತ್ತಿದ್ದರು.

ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದು... ನಗರ ಪ್ರದೇಶಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ... ಅಧ್ಯಾಪಕ ವೃತ್ತಿಗೆ ಬಂದಿದ್ದ ನಮ್ಮೆಲ್ಲರಲ್ಲೂ ಆತ್ಮವಿಶ್ವಾಸವನ್ನು ಮೂಡಿಸುವುದಕ್ಕಾಗಿ–

"ನಾವು ಯಾವುದರಲ್ಲೂ ... ಯಾರಿಗಿಂತಲೂ ಕೀಳಲ್ಲ... ಹಿಂದೆಲ್ಲಾ ಬ್ರಾಹ್ಮಣರೇ ಒಳ್ಳೇಯ ಮೇಷ್ಟ್ರುಗಳು... ಅವರಲ್ಲದೇ ಇನ್ಯಾವ ಜಾತಿಯವರು ಚೆನ್ನಾಗಿ ವಿದ್ಯೆ ಹೇಳಲಾರರು ಅಂತ ಜನ ಮಾತಾಡ್ಕೊಳ್ತಿದ್ದರು... ಆದರೆ ಅದೆಲ್ಲಾ ಒಂದು ಭ್ರಮೆ... ನಾನೇ ಹತ್ತಾರು ವರ್ಷಗಳಿಂದ ಅನೇಕ ಹೈಸ್ಕೂಲು ಕಾಲೇಜುಗಳಲ್ಲಿ ಎಲ್ಲಾ ಜಾತಿಗಳಲ್ಲೂ ಒಳ್ಳೊಳ್ಳೆ ಮೇಷ್ಟ್ರುಗಳು ಇರುವುದನ್ನು ಕಣ್ಣಾರ ಕಂಡಿದ್ದೀನಿ. ಯಾವುದೇ ವ್ಯಕ್ತಿ ಉತ್ತಮ ಅಧ್ಯಾಪಕನಾಗುವುದಕ್ಕೆ ಅವನು ಹುಟ್ಟಿರುವ ಜಾತಿ ಮುಖ್ಯವಲ್ಲ... ಅವನು ನಿರಂತರವಾಗಿ ಓದುತ್ತಾ... ತನ್ನ ಸಬ್ಜೆಕ್ಟ್ ಅನ್ನು ಸಮಗ್ರವಾಗಿ ತಿಳ್ಕೊಂಡು... ತನ್ನ ಶಕ್ತಿ ಸಾಮರ್ಥ್ಯವನ್ನೆಲ್ಲಾ ಬಳಸಿ ಕೌಶಲ್ಯ ಪೂರ್ಣವಾಗಿ ವಿದ್ಯಾರ್ಥಿಗಳಿಗೆ ಪ್ರೀತಿಯಿಂದ ಪಾಠವನ್ನು ಮಾಡುವುದಕ್ಕೆ ಪ್ರಯತ್ನಿಸಿದರೆ ಸಾಕು... ಕೆಲವೇ ವರ್ಷಗಳಲ್ಲಿ ಅತ್ಯುತ್ತಮ ಅಧ್ಯಾಪಕನಾಗಿ ರೂಪುಗೊಳ್ಳುತ್ತಾನೆ. ತರಗತಿಗಳಲ್ಲಿ ಪಾಠ ಮಾಡುವಾಗ ...ವಿದ್ಯಾರ್ಥಿಗಳ ಮುಖದಲ್ಲಿ ಕಂಡು ಬರುವ ಸಂತೋಷ... ಸಂತೃಪ್ತಿಯಿದೆಯಲ್ಲಾ... ಅದೇ ಅವನೊಬ್ಬ ಒಳ್ಳೆಯ ಅಧ್ಯಾಪಕ ಅನ್ನೋದಕ್ಕೆ ಸಾಕ್ಷಿ... ವಿದ್ಯಾರ್ಥಿಗಳ ನಡೆ ನುಡಿಗಳನ್ನು ತಿದ್ದಿ... ಅವರಿಗೆ ಒಳ್ಳೆಯ ವಿದ್ಯಾಬುದ್ಧಿ ಕಲಿಸಿ... ಅವರನ್ನು ಉತ್ತಮವಾಗಿ ಬೆಳೆಸಿ... ಅನಂತರ ಅವರಿಂದ ಪಡೆಯುವ ಪ್ರೀತಿ ಗೌರವಗಳೇ ಅಧ್ಯಾಪಕನಾದವನ ಪಾಲಿಗೆ ದೊಡ್ಡ ಸಂಪತ್ತು" ಎಂದು ವಿವರವಾಗಿ ಆಗಾಗ್ಗೆ ಹೇಳುತ್ತಿದ್ದು... ಉತ್ತಮ ಅಧ್ಯಾಪಕರಾಗಿ ಬೆಳೆಯಲು ಅಗತ್ಯವಾದ ಮನೋಸ್ಥೈರ್ಯವನ್ನು ಮತ್ತು ಅಧ್ಯಾಪಕ ವೃತ್ತಿಯ ಮೌಲ್ಯವನ್ನು ನಮ್ಮೆಲ್ಲರ ಮನದಲ್ಲಿ ಬಿತ್ತುತ್ತಿದ್ದರು.

ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದ ಚನ್ನಯ್ಯನವರು... ಭಾರತಿ ಕಾಲೇಜಿನಲ್ಲಿ ವೈಜ್ಞಾನಿಕ ವಿಷಯಗಳ ಅಧ್ಯಯನಕ್ಕೆ ಉತ್ತಮವಾದ ಅಸ್ತಿಭಾರವನ್ನು ಹಾಕಿದರು. ಅವರು ಪ್ರಿನ್ಸಿಪಾಲರಾಗಿ ಬಂದಾಗ ಭಾರತಿ ಕಾಲೇಜಿನಲ್ಲಿ ಪಿಯುಸಿ ಹಂತದಲ್ಲಿ ಕಲೆ ಮತ್ತು ವಿಜ್ಞಾನದ ವಿಷಯಗಳು... ಪದವಿಯ ಹಂತದಲ್ಲಿ ಕಲಾ ವಿಷಯಗಳು ಮಾತ್ರ ಬೋಧಿಸಲ್ಪಡುತ್ತಿದ್ದವು. ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿನ ವಿಜ್ಞಾನ ವಿಭಾಗದ ಅನೇಕ ಪ್ರೊಫೆಸರ್‌ಗಳೊಡನೆ ಒಳ್ಳೆಯ ಸ್ನೇಹ ಸಂಬಂಧವನ್ನು ಹೊಂದಿದ್ದ ಚನ್ನಯ್ಯನವರು ಅವರೆಲ್ಲರ ಉತ್ತೇಜನ ಮತ್ತು ಮಾರ್ಗದರ್ಶನದಿಂದ ಪ್ರೇರಿತರಾಗಿ... ನಮ್ಮ ಹಳ್ಳಿಯ ಮಕ್ಕಳು ವಿಜ್ಞಾನದಲ್ಲಿ ಪದವಿಯನ್ನು ಪಡೆಯುವಂತಾಗಲೆಂಬ ಉದ್ದೇಶದಿಂದ ಬಿ.ಎಸ್‌ಸಿ., ತರಗತಿಗಳನ್ನು ತೆರೆದರು. ಮೊದಲ ವರ್ಷದ ಬಿ.ಎಸ್‌ಸಿ., ತರಗತಿಗೆ ಕೇವಲ ಇಬ್ಬರು ವಿದ್ಯಾರ್ಥಿಗಳು ಸೇರಿದರು. ಇದರಿಂದ ನಿರಾಶರಾಗದೆ... ಅಂದು ದೂರದೃಷ್ಟಿಯಿಂದ ಪ್ರಯೋಗಾಲಯಗಳನ್ನು... ಸುಸಜ್ಜಿತವಾಗಿ ಅಭಿವೃದ್ಧಿಗೊಳಿಸಿ ಮುಂದುವರಿಸಿದ್ದರಿಂದಲೇ... ಇಂದು... ಮೈಸೂರು ವಿಶ್ವವಿದ್ಯಾನಿಲಯದ ಮೆಟ್ಟಿಲುಗಳ ಬಳಿಯಲ್ಲೇ ಇರುವ ಯುವರಾಜ ಕಾಲೇಜಿನಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅವಕಾಶವಿರುವ ವಿಜ್ಞಾನದ ವಿಷಯಗಳಲ್ಲಿ... ಬಹುತೇಕ ವಿಷಯಗಳು ಕಾಳಮುದ್ದನ ದೊಡ್ಡಿಯ ಭಾರತಿ ಕಾಲೇಜಿನಲ್ಲಿ ಬೋಧಿಸಲ್ಪಡುತ್ತಿದ್ದು... ಹಳ್ಳಿಗಾಡಿನ ವಿದ್ಯಾರ್ಥಿಗಳು ವೈಜ್ಞಾನಿಕ ರಂಗದಲ್ಲಿ ಉನ್ನತವಾದ ಸಾಧನೆಗಳನ್ನು ಮಾಡಲು ಸಹಕಾರಿಯಾಗಿದೆ.

ಅತ್ಯಂತ ಪ್ರಾಮಾಣಿಕರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ಡಿ. ಚನ್ನಯ್ಯನವರಿಗೆ ಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಜಿ. ಮಾದೇಗೌಡರು, ಕಾರ್ಯದರ್ಶಿಗಳಾಗಿದ್ದ ಅಣ್ಣೂರು ಸಿದ್ದೇಗೌಡರು, ಭಾರತೀ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಹೆಚ್. ಕೆಂಡೇಗೌಡರು ಮತ್ತು ಸಂಸ್ಥೆಯ ಸದಸ್ಯರೆಲ್ಲರೂ ಎಲ್ಲಾ ಬಗೆಯಿಂದಲೂ ಪ್ರೋತ್ಸಾಹ ನೀಡುತ್ತಾ... ಕಾಲೇಜಿನ ರಚನಾತ್ಮಕವಾದ ಯೋಜನೆಗಳಿಗೆ ಆರ್ಥಿಕವಾದ ಬೆಂಬಲವನ್ನು ನೀಡುತ್ತಿದ್ದುದರಿಂದ ... ಭಾರತಿ ಕಾಲೇಜು ದಿನೇ ದಿನೇ ಪ್ರಗತಿಯನ್ನು ಪಡೆದು... ಮಂಡ್ಯ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸುವಂತಾಯಿತು.

ಜಿ. ಮಾದೇಗೌಡರೊಡನೆ ತಾವು ನಡೆಸಿದ ಮಾತುಕತೆಗಳಲ್ಲಿ ಕೆಲವನ್ನು ಆಗಾಗ್ಗೆ ನಮ್ಮೊಡನೆ ಹೇಳುತ್ತಾ ಮಾದೇಗೌಡರ ವ್ಯಕ್ತಿತ್ವದ ಬಗ್ಗೆ ಬೆಳಕನ್ನು ಚೆಲ್ಲುತ್ತಿದ್ದರು.

1977ರ ವರೆಗೆ ಕಾಲೇಜಿನ ಸಿಬ್ಬಂದಿ ವರ್ಗದ ಸಂಬಳಕ್ಕೆ ಸರ್ಕಾರದ ವತಿಯಿಂದ ಶೇ.80ರಷ್ಟು ಮಾತ್ರ ಅನುದಾನವಾಗಿ ದೊರೆಯುತ್ತಿತ್ತು. ಇನ್ನುಳಿದ ಶೇ.20ರಷ್ಟನ್ನು

ವಿದ್ಯಾಸಂಸ್ಥೆಯ ವತಿಯಿಂದ ತುಂಜಿ... ಪ್ರತಿ ತಿಂಗಳು ಸಂಬಳವನ್ನು ನೀಡುವುದು ಅತ್ಯಂತ ಜವಾಬ್ದಾರಿಯುತ ಕಾರ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಕೆಲವೊಮ್ಮೆ ಹಣಕಾಸಿನ ಮುಗ್ಗಟ್ಟು ಸಂಸ್ಥೆಯನ್ನು ಕಾಡುತ್ತಿತ್ತು. ಆಗ ಒಂದು ದಿನ ಪ್ರಿನ್ಸಿಪಾಲ್ ಡಿ. ಚನ್ನಯ್ಯನವರು ಮಾದೇಗೌಡರೊಡನೆ ಮಾತನಾಡುತ್ತಾ–

"ನಮ್ಮ ಸಂಸ್ಥೆಯು ಇಷ್ಟೊಂದು ಕಷ್ಟಕ್ಕೆ ಒಳಗಾಗ್ಬುಟ್ತಲ್ಲ ಸಾರ್" ಎಂದು ಕಂಗಾಲಾಗಿ ನುಡಿದಾಗ... ಮಾದೇಗೌಡರು "ನೋಡಿ ಸಾರ್" ... ತಮಗಿಂತ ಮೂರ್ನಾಕು ವರ್ಷಗಳಷ್ಟು ಹಿರಿಯರಾಗಿದ್ದ ಚೆನ್ನಯ್ಯನವರನ್ನು ಮಾದೇಗೌಡರು ಯಾವಾಗಲೂ 'ಸಾರ್' ಎಂದೇ ಮಾತನಾಡಿಸುತ್ತಿದ್ದರು.

"ನೋಡಿ ಸಾರ್... ಭಾರತಿ ವಿದ್ಯಾ ಸಂಸ್ಥೆಯನ್ನು ತುಂಬಾ ಒಳ್ಳೆಯ ಉದ್ದೇಶದಿಂದ ಸ್ಥಾಪಿಸಲಾಗಿದೆ. ನಮ್ಮ ಹಳ್ಳಿಯ ಮಕ್ಕಳು ವಿದ್ಯೆ ಕಲಿತು, ದೊಡ್ಡವರಾಗಿ ಬೆಳೆಯಬೇಕೆಂಬ ಆಸೆಯಿಂದ ಇದನ್ನು ಕಟ್ಟಲಾಗಿದೆ. ಇವತ್ತು ಸ್ವಲ್ಪ ಕಷ್ಟ ಇರಬಹುದು. ಆದರೆ ಮುಂದಕ್ಕೆ ನೀವೇ ನೋಡುವಿರಂತೆ. ಇದು ಎಷ್ಟು ದೊಡ್ಡದಾಗಿ ಬೆಳೆಯುತ್ತದೆ ಅನ್ನೋದನ್ನ!" ಎಂದು ಧೈರ್ಯ ತುಂಜಿದ್ದನ್ನು... ಆಗಾಗ್ಗೆ ನೆನಪಿಸಿಕೊಳ್ಳುತ್ತಾ... "ನಾವು ಯಾವುದೇ ಕಾರ್ಯಕ್ಕೆ ಕೈ ಹಾಕಿದರೂ ಸದುದ್ದೇಶ ನಮ್ಮದಾಗಿರಬೇಕು" ಎಂದು ಉಪದೇಶಿಸುತ್ತಿದ್ದರು.

ಬೆಳಗ್ಗೆ ಹತ್ತು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ನಡೆಯುತ್ತಿದ್ದ ಕಾಲೇಜಿನಲ್ಲಿ ಪಿನ್ಸಿಪಾಲರಾಗಿ ಆಡಳಿತ ನಿರ್ವಹಿಸುವುದರ ಜೊತೆಗೆ... ಸಂಜೆಯ ವೇಳೆ ಮತ್ತೆ ಬಿಡುವು ಮಾಡಿಕೊಂಡು... ಭಾರತಿ ವಿದ್ಯಾರ್ಥಿ ನಿಲಯದ ಪಾಲಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಿದ್ದರು.

ಭಾರತಿ ವಿದ್ಯಾರ್ಥಿ ನಿಲಯಕ್ಕೆ ಅಗತ್ಯವಾದ ಸೌದೆಯನ್ನು... ಮಂಡ್ಯದ ಸೌದೆ ಡಿಪೋಗಳಿಗೆ ಬರುವ ಕೊಡಗಿನ ಲಾರಿಗಳಿಂದ ನೇರವಾಗಿ ತರಿಸಲಾಗುತ್ತಿತ್ತು. ಅಂತಹ ವೇಳೆಯಲ್ಲಿ ಸೌದೆಯ ಮರದ ತುಂಡುಗಳನ್ನು ಲಾರಿಯಿಂದ ಕೆಳಕ್ಕೆ ಹಾಕುವಾಗ... ಅಲ್ಲೇ ನಿಂತುಕೊಂಡು, ಸೂಕ್ಷ್ಮವಾಗಿ ಪರಿಶೀಲಿಸಿ... ಅವುಗಳಲ್ಲಿ ಕುರ್ಚಿ ಮತ್ತು ಮೇಜಿನ ಕಾಲುಗಳಾಗುವಂಥ ಮರದ ತುಂಡುಗಳನ್ನು ಆಯ್ಕೆ ಮಾಡಿ... ಪ್ರತ್ಯೇಕವಾಗಿ ಒಂದು ಪಕ್ಕಕ್ಕೆ ಇಡಿಸಿ... ಅನಂತರ ಅವುಗಳಿಂದ ಸಂಸ್ಥೆಗೆ ನಾಲ್ಕಾರು ಉಪಕರಣಗಳನ್ನು ಮಾಡಿಸುತ್ತಿದ್ದರು.

ಒಮ್ಮೆ ಯಾರೋ ಒಬ್ಬರು... ಒಂದು ವಿಲಾಯ್ತಿ ಹಸುವಿನ ಗಂಡು ಕರುವನ್ನು ಅನಾಥವಾಗಿ ಬಿಡುವುದನ್ನು ಕಂಡು ... ಅದನ್ನು ಕೇಳಿ ಪಡೆದು... ಸಂಸ್ಥೆಯ ವಿಸ್ತಾರವಾದ

ಆವರಣದ ಹುಲ್ಲುಗಾವಲಿನಲ್ಲಿ ಮೇಯಲು ಬಿಟ್ಟು... ಮಮತೆಯಿಂದ ಸಾಕಿ ಸಲುಹಿದರು. ಅದು ಮುಂದೆ ದೊಡ್ಡ ಹೋರಿಯಾಗಿ ಬೆಳೆಯಿತು. ಸುತ್ತ ಮುತ್ತಲಿನ ಹಳ್ಳಿಯ ರೈತರು ತಮ್ಮ ಹಸುಗಳಿಗೆ ಇದರಿಂದ 'ಹೋರಿ ಬಿಡಿಸಿ' ಕೊಳ್ಳತೊಡಗಿದರು. ಇದರಿಂದ ಬರುವ ಅಲ್ಪ ಪ್ರಮಾಣದ ಆದಾಯವು ವಿದ್ಯಾಸಂಸ್ಥೆಗೆ ಸೇರುತ್ತಿತ್ತು. ವಿದ್ಯಾರ್ಥಿ ನಿಲಯಕ್ಕೆ ಬೇಕಾದ ಪಡಿತರಗಳನ್ನು ಅಂಗಡಿಯಿಂದ ತರಿಸಿಕೊಳ್ಳಲು ಮತ್ತು ಸಂಸ್ಥೆಯ ಆವರಣದೊಳಗೆ ಕಟ್ಟುತ್ತಿದ್ದ ಕಟ್ಟಡಗಳ ಬಳಿಗೆ ಅಗತ್ಯವಾದ ಸಾಮಾನು ಸರಂಜಾಮುಗಳನ್ನು ಸಾಗಿಸಲು... ಮರದ ಗಾಡಿಯೊಂದರ ಅಗತ್ಯವಿತ್ತು. ಆಗ ದೊಡ್ಡ ಹೋರಿಯ ಅಳತೆಗೆ ತಕ್ಕಂತೆ ಒಂದು ಒಂಟೆತ್ತಿನ ಗಾಡಿಯನ್ನು ಚೆನ್ನಯ್ಯನವರು ಮಾಡಿಸಿದರು. ಈ ಹೋರಿಯು ಒಂಟೆತ್ತಿನ ಗಾಡಿಯ ಮೂಲಕ ಸಂಸ್ಥೆಗೆ ಅಮೋಘವಾದ ಸೇವೆಯನ್ನು ಸಲ್ಲಿಸಿತು.

ಭಾರತಿ ವಿದ್ಯಾಸಂಸ್ಥೆಯ ಆವರಣದೊಳಗೆ ನಿರ್ಮಾಣಗೊಳ್ಳುತ್ತಿದ್ದ ಯಾವುದೇ ಕಟ್ಟಡಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡು, ಸಂಜೆಯ ವೇಳೆಯಲ್ಲಿ ತಾವೇ ಖುದ್ದಾಗಿ ನಿಂತು, ಕಾಲೇಜಿನ ಅಟೆಂಡರ್‌ಗಳನ್ನು ಕಟ್ಟಿಕೊಂಡು ಹೊಸದಾಗಿ ನಿರ್ಮಾಣಗೊಳ್ಳುತ್ತಿದ್ದ ಸಿಮೆಂಟ್ ಕಟ್ಟಡಗಳಿಗೆ ನೀರನ್ನು ಸಿಂಪಡಿಸುತ್ತಾ ಕ್ಯೂರಿಂಗ್ ಮಾಡುತ್ತಿದ್ದರು.

ಭಾರತಿ ವಿದ್ಯಾಸಂಸ್ಥೆಗೆ ಸೇರಿದ ಜಮೀನು ಕರಡಕೆರೆ ಗ್ರಾಮದ ಎಲ್ಲೆಯಲ್ಲಿತ್ತು. ಅದನ್ನು ಬಹುಕಾಲದಿಂದ ಸಾಗುವಳಿ ಮಾಡುತ್ತಿರಲಿಲ್ಲ. ಅಲ್ಲಿ ಸಾಗುವಳಿಯನ್ನು ಮತ್ತೆ ಆರಂಭಿಸಿ, ಅದರಿಂದ ಬರುವ ಉತ್ಪನ್ನವು ಸಂಸ್ಥೆಗೆ ಸೇರುವಂತೆ ಮಾಡಿದರು.

ಈ ರೀತಿ ತಾವು ಪ್ರಿನ್ಸಿಪಾಲರಾಗಿದ್ದ ಅವಧಿಯಲ್ಲಿ ಭಾರತೀ ಕಾಲೇಜಿನ ಅಂತರಂಗದ ಶೈಕ್ಷಣಿಕ ವ್ಯವಸ್ಥೆಯನ್ನು ಉತ್ತಮವಾಗಿ ರೂಪಿಸಲು ಮತ್ತು ವಿದ್ಯಾಸಂಸ್ಥೆಯ ಬಹಿರಂಗದ ಕಾರ್ಯ ಚಟುವಟಿಕೆಗಳು ಸುಗಮವಾಗಿ ನಡೆಯಲು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಡಿ. ಚನ್ನಯ್ಯನವರು ಎಲ್ಲರನ್ನು ಪ್ರೀತಿ ಗೌರವಗಳಿಂದ ನಡೆಸಿ ಕೊಳ್ಳುತ್ತಾ ಹಳ್ಳಿಗಾಡಿನ ಪ್ರೀತಿಯ ಗುರುವಾಗಿ ಸಾರ್ಥಕವಾದ ಬದುಕನ್ನು ನಡೆಸಿದರು.

⌘

ವ್ಯವಸಾಯ/ಆರೋಗ್ಯ



ಮಾಧ್ಯಮಿಕ ಶಾಲೆಯ ಆರನೆಯ ತರಗತಿಯಲ್ಲಿ ನಾನು ಓದುತ್ತಿದ್ದಾಗ ನಡೆದ ಘಟನೆಯಿದು.

ಆಗಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಐದನೆಯ ತರಗತಿಯಿಂದ ತೇರ್ಗಡೆಯಾಗಿ, ಆರನೆಯ ತರಗತಿಗೆ ಬರುತ್ತಿದ್ದ ವಿದ್ಯಾರ್ಥಿಗಳು 'ವ್ಯವಸಾಯ ಅಥವಾ ಆರೋಗ್ಯ ಶಾಸ್ತ್ರ'ಗಳೆಂಬ ಎರಡು ವಿಷಯಗಳಲ್ಲಿ, ಯಾವುದಾದರೊಂದನ್ನು ಆಯ್ಕೆ ಮಾಡಿಕೊಂಡು, ಎಂಟನೆಯ ತರಗತಿಯವರೆಗೆ ವಿಶೇಷ ವಿಷಯವನ್ನಾಗಿ ಓದುವ ಅವಕಾಶವಿತ್ತು. ನಮ್ಮ ತರಗತಿಯಲ್ಲಿದ್ದ ವಿದ್ಯಾರ್ಥಿಗಳಲ್ಲಿ ಐದು ಮಂದಿ ಹುಡುಗಿಯರನ್ನು ಹೊರತು ಪಡಿಸಿ, ಇನ್ನುಳಿದ ನಲವತ್ತು ಮಂದಿ ಹುಡುಗರೆಲ್ಲರೂ ಐದನೆಯ ತರಗತಿಯಲ್ಲಿದ್ದಾಗಲೇ

ಮುಂದೆ ವ್ಯವಸಾಯವನ್ನು ತೆಗೆದುಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದ್ದೆವು. ಇದಕ್ಕೆ ಕಾರಣವೇನೆಂದರೆ ವ್ಯವಸಾಯದ ಬಗೆಗಿನ ಆಸಕ್ತಿಯಿಂದಲ್ಲ... ಆರೋಗ್ಯ ಶಾಸ್ತ್ರವನ್ನು ಪಾಠಮಾಡುತ್ತಿದ್ದ ಮೇಷ್ಟ್ರು ರಂಗೇಗೌಡರ ಬಗೆಗಿನ ಭಯದಿಂದ!

ಸುಮಾರು ನಲವತ್ತರ ಪ್ರಾಯದ ರಂಗೇಗೌಡರು ಹುಡುಗರನ್ನು ಚೆನ್ನಾಗಿ ತದಕುವುದರಲ್ಲಿ ಇಡೀ ಸ್ಕೂಲಿನಲ್ಲಿಯೇ ಎತ್ತಿದ ಕೈ... ಸಣ್ಣ ಪುಟ್ಟ ಕಾರಣಕ್ಕೆಲ್ಲಾ ವಿದ್ಯಾರ್ಥಿಗಳ ಮೈ ಕೈ ಮೇಲೆಲ್ಲಾ ಬಾಸುಂಡೆಗಳು ಏಳುವಂತೆ ಬೆತ್ತದಿಂದ ಸಿಕ್ಕಾಬಟ್ಟೆ ಬಡಿಯುತ್ತಾರೆಂಬ ಸುದ್ದಿಯೇ ... ನಮ್ಮೆಲ್ಲರನ್ನು ತೀವ್ರವಾದ ಆತಂಕಕ್ಕೆ ಗುರಿ ಮಾಡಿತ್ತು. ಕೆಲವೊಮ್ಮೆ ಅವರು ತಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳ ಬೆನ್ನಿನ ಮೇಲೆ ಗುದ್ದುತ್ತಿದ್ದಾಗ ಉಂಟಾಗುತ್ತಿದ್ದ ಶಬ್ದ... ಅಕ್ಕಪಕ್ಕದಲ್ಲಿದ್ದ ನಮ್ಮ ಕೊಠಡಿಗೂ ಕೇಳಿಸುತ್ತಿದ್ದು... ನಮ್ಮೆಲ್ಲರನ್ನು ಅಂಜುವಂತೆ ಮಾಡಿತ್ತು. ಇಂತಹ ಮೇಷ್ಟರ ಸಹವಾಸವೇ ಬೇಡವೆಂಬ ಒಕ್ಕೊರಳಿನ ಒಮ್ಮತದ ತೀರ್ಮಾನಕ್ಕೆ ಬಂದಿದ್ದ ನಮಗೆ... ವ್ಯವಸಾಯದ ಮೇಷ್ಟ್ರು ಸೀತಾರಾಮಯ್ಯನವರ ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತು. ವಯಸ್ಸಿನಲ್ಲಿ ಐವತ್ತರ ಗಡಿಯನ್ನು ದಾಟಿದ್ದ ಸೀತಾರಾಮಯ್ಯನವರು ಯಾವೊಬ್ಬ ವಿದ್ಯಾರ್ಥಿಯನ್ನಾಗಲಿ ತೀವ್ರವಾಗಿ ದಂಡಿಸುವುದಿಲ್ಲವೆಂದೂ... ಎಲ್ಲೋ ಅಪರೂಪಕ್ಕೆ ಒಮ್ಮೊಮ್ಮೆ ಕೋಪ ಬಂದಾಗ... ತಮ್ಮ ಕೊಡೆಯಾಕಾರದ ಉದ್ದನೆಯ ವಾಕಿಂಗ್ ಸ್ಟಿಕ್ ಅನ್ನು ವಿದ್ಯಾರ್ಥಿಗಳ ಕೊರಳಿಗೆ ಹಾಕಿ, ತಮ್ಮ ಬಳಿಗೆ ಎಳೆದುಕೊಂಡು... ಒಂದೋ... ಎರಡೋ ಕಪಾಲಮೋಕ್ಷ ಮಾಡುತ್ತಾರೆಂಬ ಸುದ್ದಿ ಕೇಳಿ ಬಂದಿತ್ತು. ರಂಗೇಗೌಡರ ಕಠಿಣ ಶಿಕ್ಷೆಯ ಮುಂದೆ... ಇದು ಏನೇನು ಅಲ್ಲದ ಸಾದಾ ಸಜ ಎನಿಸಿತ್ತು.

ವ್ಯವಸಾಯವನ್ನೇ ಆಯ್ಕೆ ಮಾಡಿಕೊಳ್ಳುವುದಕ್ಕೆ ಇದ್ದ ಮತ್ತೊಂದು ಪ್ರಮುಖ ಕಾರಣವೆಂದರೆ, ನಮ್ಮ ಶಾಲೆಯಿಂದ ಎರಡು ಫರ್ಲಾಂಗ್ ದೂರದಲ್ಲಿದ್ದ ನಮ್ಮ ಶಾಲೆಯ ಒಡೆತನಕ್ಕೆ ಸೇರಿದ್ದ ಹಣ್ಣಿನ ತೋಟದ ಆಕರ್ಷಣೆ... ಈ ತೋಟದಲ್ಲಿ ಸೀಬೆ, ನೆಲ್ಲಿ, ಫರಂಗಿ, ಹಲಸು, ಸಪೋಟ, ಸೀತಾಫಲ, ರಾಂಫಾಲ, ತೆಂಗು ಮುಂತಾದ ಹತ್ತಾರು ಬಗೆಯ ಹಣ್ಣು ಕಾಯಿಗಳ ಮರ ಗಿಡಗಳು ಸೊಂಪಾಗಿ ಬೆಳೆದು ಕಂಗೊಳಿಸುತ್ತಿದ್ದವು. ವಿದ್ಯಾರ್ಥಿಗಳ ಪಾಲಿಗೆ ಸೀಬೆಕಾಯಿ ಮತ್ತು ನೆಲ್ಲಿಕಾಯಿ ಗಿಡಗಳು ಅತ್ಯಂತ ಪ್ರಿಯವಾಗಿದ್ದವು.

ವಾರದಲ್ಲಿ ಎರಡು ದಿನ ಒಂದೆರಡು ಗಂಟೆಗಳ ಕಾಲ ಈ ತೋಟದಲ್ಲಿ ಬೇಸಾಯಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿ ಶ್ರಮಪಟ್ಟಿದ್ದಕ್ಕಿಂತ ಹೆಚ್ಚಾಗಿ... ತೋಟದಲ್ಲಿನ ಹಣ್ಣುಗಳನ್ನು ಕದ್ದು ತಿಂದು ... ಅವುಗಳ ರುಚಿಯನ್ನು ಬಣ್ಣಿಸುತ್ತಿದ್ದ... ನಮ್ಮ ಮುಂದಿನ

ತರಗತಿಯ ವಿದ್ಯಾರ್ಥಿಗಳ ಸಾಹಸದ ಅನುಭವಗಳನ್ನು ಕೇಳುತ್ತಿದ್ದರೆ... ಆರನೆಯ ತರಗತಿಗೆ ನಾವು ಯಾವಾಗ ಹೋಗುತ್ತೇವೆಯೋ ಎಂದು ಮನಸ್ಸು ಹಂಬಲಿಸುತ್ತಿತ್ತು. ಅಂಥ ದಿನ ಬಂದೇ ಬಿಟ್ಟಿತು. ಐದನೆಯ ತರಗತಿಯಿಂದ ತೇರ್ಗಡೆಯಾಗಿ ಆರನೆಯ ತರಗತಿಗೆ ಬಂದು ಕುಳಿತ ಮೊದಲನೆಯ ದಿನ... ಮಧ್ಯಾಹ್ನ ಮೂರು ಘಂಟೆಗೆ ಕನ್ನಡದ ತರಗತಿಯು ಮುಗಿಯುತ್ತಿದ್ದಂತೆಯೇ, ಕನ್ನಡ ಮೇಷ್ಟ್ರು ಚೌಡಯ್ಯನವರು ನಮ್ಮೆಲ್ಲರನ್ನು ಕುರಿತು–

"ಪ್ರತಿ ಸೋಮವಾರ ಮತ್ತು ಶುಕ್ರವಾರ ಮಧ್ಯಾಹ್ನ ಮೂರು ಗಂಟೆಯಿಂದ ನಾಲ್ಕು ಗಂಟೆಯವರೆಗೆ ವ್ಯವಸಾಯ ಮತ್ತು ಆರೋಗ್ಯ ಶಾಸ್ತ್ರದ ತರಗತಿಗಳು ನಡೆಯುತ್ತವೆ. ಆರೋಗ್ಯ ಶಾಸ್ತ್ರವನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳು, ಇದೇ ರೂಮಿನಲ್ಲಿ ಕುಳಿತುಕೊಂಡಿರಿ... ರಂಗೇಗೌಡರು ಬರ್ತ್ತರೆ. ವ್ಯವಸಾಯವನ್ನು ತೆಗೆದುಕೊಳ್ಳುವವರು ಪಕ್ಕದ ರೂಮಿಗೆ ಎದ್ದು ಹೋಗಿ" ಎಂದು ಹೇಳಿ, ಹೊರ ಹೋಗುತ್ತಿದ್ದಂತೆಯೇ... ನಾವೆಲ್ಲಾ 'ಹೊಂಗ್ಲೋ' ಎಂದು ಅರಚುತ್ತಾ... ಪಕ್ಕದ ಕೊಠಡಿಯತ್ತ ಓಡಿದೆವು.

ಬೇಸಾಯದ ಉಪಕರಣಗಳಿಂದ ಕೂಡಿ, ಸ್ವಲ್ಪ ಇಕ್ಕಟ್ಟಾಗಿದ್ದ ವ್ಯವಸಾಯದ ಕೊಠಡಿಯಲ್ಲಿ ನಾವು ನಲವತ್ತು ಮಂದಿಯೂ ತುಂಬಾ ಉತ್ಸಾಹದಿಂದ ಜಾಗ ಮಾಡಿಕೊಂಡು ಕುಳಿತುಕೊಂಡೆವು. ಸೀತಾರಾಮಯ್ಯನವರು ನಮ್ಮೆಲ್ಲರನ್ನೂ ನೋಡಿ, ಅಚ್ಚರಿಗೊಂಡು–

"ಇದೇನ್ರೊ... ಎಲ್ಲಾ ಬಂದ್ಬುಟ್ರಿ!" ಎಂದು ಉದ್ಗಾರವೆಳೆದರು.

"ಹುಡುಗೀರೆಲ್ಲಾ ಅಲ್ಲೇ ಅವ್ರೆ ಸಾರ್" ಎಂದು ಜೋರಾಗಿ ಕೂಗಿ ಹೇಳಿದೆವು. ವ್ಯವಸಾಯವನ್ನು ತೆಗೆದುಕೊಳ್ಳುವುದಕ್ಕೆ ಹುಡುಗಿಯರಿಗೆ ಅವಕಾಶವಿರಲಿಲ್ಲ. ಆದ್ದರಿಂದ ಅವರು ಅನಿವಾರ್ಯವಾಗಿ ಅಲ್ಲೇ ಕುಳಿತಿದ್ದರೆಂಬುದನ್ನು ಅರಿತಿದ್ದ ಸೀತಾರಾಮಯ್ಯನವರು–

"ಅದ್ಸರಿ ಕಣ್ರೊ... ಹುಡುಗರಲ್ಲಿ ಕೆಲವರಾದರೂ ಆರೋಗ್ಯದ ತರಗತಿಯಲ್ಲಿ ಇರ್ಲೇಬೇಕು" ಎಂದು ತಮ್ಮ ಕಳವಳವನ್ನು ವ್ಯಕ್ತಪಡಿಸುವಷ್ಟರಲ್ಲಿ... ಹೆಡ್ ಮಾಸ್ಟರ್ ಅವರ ಜೊತೆಗೂಡಿ ರಂಗೇಗೌಡರು ಬೆತ್ತ ಹಿಡಿದುಕೊಂಡೇ ವ್ಯವಸಾಯದ ಕೊಠಡಿಯೊಳಕ್ಕೆ ಧಾವಿಸಿ ಬಂದರು. ಮತ್ತೆ ಎದ್ದು ಕುಳಿತ ನಾವೆಲ್ಲಾ ರಂಗೇಗೌಡರ ಕೆಂಗಣ್ಣಿನ ನೋಟವನ್ನು ಎದುರಿಸಲಾಗದೆ ಬೆಚ್ಚಿ ಬೆದರಿದೆವು. ಹೆಡ್ ಮಾಸ್ಟರ್ ಅವರು ಮುಗುಳ್ನಗುತ್ತಾ–

"ಏನ್ ಸೀತಾರಾಮಯ್ಯನವರೇ... ಎಲ್ಲರನ್ನೂ ನೀವೇ ಕರ್ಕೊಂಡು ಬಿಟ್ರೆ... ಆರೋಗ್ಯ ಶಾಸ್ತ್ರದ ಕಥೆ ಏನಾಗಬೇಕು?" ಎಂದು ಪ್ರಶ್ನಿಸಿದರು.

"ಅದನ್ನೇ ನಾನು ಹೇಳ್ತಿದ್ದೆ ಸಾರ್... ಸ್ವಲ್ಪ ಜನ ಆರೋಗ್ಯದ ಕ್ಲಾಸಿಗೆ ಹೋಗಿ ಅಂತ" ಎಂದು ವಿನಮ್ರವಾಗಿ ನುಡಿದರು. ಈಗ ರಂಗೇಗೌಡರು ನಮ್ಮೆಲ್ಲರನ್ನೂ ಕೆಲವು ಕ್ಷಣಗಳ ಕಾಲ ಕ್ರೂರವಾಗಿ ದಿಟ್ಟಿಸಿ ನೋಡುತ್ತಿದ್ದು–

"ಕೋಟೆ ಬೀದಿಯಿಂದ ಬರ್ತಾಯಿರುವ ಬ್ರಾಹ್ಮಣ ಹುಡುಗರು ಯಾರ್‍ಯಾರಿದ್ದೀರಿ... ಎದ್ದು ನಿಂತ್ಕೊಳಿ" ಎಂದು ಆಜ್ಞಾಪಿಸಿದರು. ಸುಮಾರು ಹದಿನೈದು ಮಂದಿ ಒಬ್ಬೊಬ್ಬರಾಗಿ ಎದ್ದು ನಿಂತರು. ರಂಗೇಗೌಡರ ಧ್ವನಿ ಅಬ್ಬರಿಸಿತು–

"ನೀವು ಯಾವ ಗದ್ದೆ ತೆವರಿ ಕಡಿದು, ನಾಟಿ ಹಾಕಬೇಕಾಗಿದೆಯೋ... ಬನ್ರೋ... ಈ ಕಡೆ" ಎಂದು ಮುಂದಕ್ಕೆ ಕರೆದು, ಬೆತ್ತದಿಂದ ಪ್ರತಿಯೊಬ್ಬರ ಕೈಮೇಲೆ ಒಂದೊಂದು ಏಟನ್ನು ಬಾರಿಸುತ್ತಾ–

"ನಡೀರಿ... ಆ ರೂಮಿಗೆ" ಎಂದು ಆದೇಶಿಸಿದರು.

ಏಟುಗಳನ್ನು ತಿಂದ ಬ್ರಾಹ್ಮಣ ಹುಡುಗರು ಕೈಗಳನ್ನು ತೀಡಿಕೊಳ್ಳುತ್ತಾ ತೆರಳಿದ ನಂತರ, ಮತ್ತೆ ರಂಗೇಗೌಡರ ಧ್ವನಿ ಗುಡುಗಿತು.

"ಪೇಟೆ ಬೀದಿಯಿಂದ ಬರ್ತಾಯಿರುವ ಶೆಟ್ಟರ ಹುಡುಗರೆಲ್ಲಾ ಎದ್ದು ನಿಂತ್ಕೊಳಿ".

ಐದಾರು ಮಂದಿ ಭಯದಿಂದಲೇ ಎದ್ದು ನಿಂತರು.

"ಲೇ... ನೀವೇನು ಗೊಬ್ಬರ ಹೊರುವುದಕ್ಕೆ ಹೋಗ್ತಿರೇನೋ" ಎಂದು ವ್ಯಂಗ್ಯವಾಡುತ್ತಾ, ಅವರೆಲ್ಲರನ್ನೂ ಬೆತ್ತದಿಂದ ಬಡಿದು, ಆರೋಗ್ಯ ಶಾಸ್ತ್ರದ ತರಗತಿಯತ್ತ ದಬ್ಬಿದರು.

ಇನ್ನುಳಿದ ನಾವೆಲ್ಲಾ...ಅಂದರೆ ಒಕ್ಕಲಿಗರು, ಲಿಂಗಾಯತರು, ಈಡಿಗರು, ಅಗಸರು, ದಲಿತರು ಮತ್ತು ಇನ್ನಿತರ ಜಾತಿಯವರು ಮೇಗಳಕೇರಿ–ಕೆಳಗಲಕೇರಿ–ಹೊಳೆ ಬೀದಿ ಹಾಗೂ ದಲಿತರ ಕೇರಿಯಿಂದ ಬರುತ್ತಿದ್ದವರಾಗಿದ್ದೆವು. ರಂಗೇಗೌಡರು ಇನ್ನು ಯಾವ ಯಾವ ಜಾತಿಗಳ ವಿಚಾರಣೆ ಮಾಡಿ ... ನಮ್ಮಲ್ಲಿ ಯಾರ್‍ಯಾರನ್ನು ಬಡಿದು... ಆರೋಗ್ಯ ಶಾಸ್ತ್ರದ ಕಡೆಗೆ ಎಳೆದೊಯ್ಯುತ್ತಾರೆಯೋ ಎಂದು ನಡುಗತೊಡಗಿದೆವು. ಅಷ್ಟರಲ್ಲಿ ಹೆಡ್‌ಮಾಸ್ಟರ್ ಮಾತನಾಡತೊಡಗಿದರು.

"ರಂಗೇಗೌಡರೇ ... ಇನ್ನು ಸಾಕು ಬಿಡಿ... ಆರೋಗ್ಯ ಶಾಸ್ತ್ರಕ್ಕೆ ಹುಡುಗಿಯರೂ ಸೇರಿದಂತೆ ಇಪ್ಪತ್ತೈದರ ಮೇಲೆ ಆಯ್ತಲ್ಲ... ವ್ಯವಸಾಯಕ್ಕೂ ಒಂದು ಹದಿನೈದು ಇಪ್ಪತ್ತು ಮಂದಿ ಇರ್ಲಿ" ಎಂದಾಗ–

ರಂಗೇಗೌಡರು ಮರು ಮಾತಿಲ್ಲದೇ ಹೊರಟರು. ಇದುವರೆಗೂ ಎಡಗೈಯಲ್ಲಿ ಜೀವ ಹಿಡಿದುಕೊಂಡು ಕುಳಿತಿದ್ದ ನಾವೆಲ್ಲಾ... ವ್ಯವಸಾಯದಲ್ಲೇ ಉಳಿಯುವುದಕ್ಕೆ ಪ್ರಮುಖವಾಗಿ ನೆರವಾದ ಕೆಳಜಾತಿಯಲ್ಲಿ ಹುಟ್ಟಿದ್ದಕ್ಕಾಗಿ... ಅಂದು ತುಂಬಾ ಹೆಮ್ಮೆಪಟ್ಟುಕೊಂಡೆವು.

⌘

ಇಬ್ಬರು ಗುರುಗಳು



ಇಂದಿಗೆ ಸರಿಯಾಗಿ ಮೂವತ್ತು ವರ್ಷಗಳ ಹಿಂದೆ... ನಾನು ಮಂಗಳೂರಿನಲ್ಲಿ ಕನ್ನಡ ಎಂ.ಎ., ತರಗತಿಯಲ್ಲಿ ಓದುತ್ತಿದ್ದಾಗ, ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿದ್ದ ಇಬ್ಬರು ವ್ಯಕ್ತಿಗಳ ವಿಶಿಷ್ಟ ಗುಣವನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

1

ಸ್ನಾತಕೋತ್ತರ ಕೇಂದ್ರದ ನಿರ್ದೇಶಕರೂ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಎಸ್.ವಿ. ಪರಮೇಶ್ವರ ಭಟ್ಟರ ತರಗತಿಯೆಂದರೆ... ಅದು ಕವಿ ಪ್ರತಿಭೆಯ, ವಿದ್ವಾಂಸನ ಪಾಂಡಿತ್ಯದ, ಸಹೃದಯನ ಸರಸ ಸಜ್ಜನಿಕೆಯ ನುಡಿಗಳಿಂದ ಕೂಡಿ ... ವಿದ್ಯಾರ್ಥಿಗಳ

ಬುದ್ಧಿಭಾವಗಳನ್ನು ಉದ್ದೀಪನಗೊಳಿಸುವ ರಸಮಯ ಕ್ಷಣಗಳೆಂದೇ ಅರ್ಥ. ಭಟ್ಟರು ಎಂದೂ ಯಾವುದೇ ಒಂದು ಪಠ್ಯವನ್ನಾಗಲಿ... ಆದಿಯಿಂದ ಅಂತ್ಯದವರೆಗೆ ಕ್ರಮಬದ್ಧವಾಗಿ ಬೋಧಿಸಿದವರಲ್ಲ. ಅವರು ಮಾಡುತ್ತಿದ್ದ ಪಾಠ... ನಿಜಕ್ಕೂ ಎಲ್ಲಾ ದೃಷ್ಟಿಗಳಿಂದಲೂ "ಪ್ರೊಫೆಸರ್ ಪಾಠ"ವೇ ಆಗಿರುತ್ತಿತ್ತು. ಸಾಹಿತ್ಯ ಕೃತಿಗಳ ಅಧ್ಯಯನ ಮತ್ತು ವಿಶ್ಲೇಷಣೆಯ ಬಗ್ಗೆ ವಿಶಿಷ್ಟವಾದ ಹೊಳಹುಗಳು ವಿದ್ಯಾರ್ಥಿಗಳ ಮನದಲ್ಲಿ ಮೂಡುವಂತೆ, ಅತ್ಯಂತ ಗಂಭೀರವಾದ ಶೈಲಿಯಲ್ಲಿ ಉಪನ್ಯಾಸ ಮಾಡುತ್ತಾ... ಮರುಕ್ಷಣದಲ್ಲೇ ಹಾರಿಸುತ್ತಿದ್ದ ಹಾಸ್ಯ ಚಟಾಕಿಯಿಂದ ಉಂಟಾದ ವಿದ್ಯಾರ್ಥಿಗಳ ನಗೆಯ ಅಬ್ಬರಕ್ಕೆ ತರಗತಿಯ ಮಾಳಿಗೆಯೇ ಹಾರಿ ಹೋಗುತ್ತಿತ್ತು!

ವಾರಕ್ಕೊಮ್ಮೆ ನಡೆಯುತ್ತಿದ್ದ ಸೆಮಿನಾರ್‌ಗಳಲ್ಲಿ... ಅವರು ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರೋತ್ಸಾಹದಾಯಕವಾಗಿ ಆಡುತ್ತಿದ್ದ ಮಾತುಗಳನ್ನು ನೆನೆಸಿಕೊಂಡರೆ... ಈಗಲೂ ರೋಮಾಂಚನವಾಗುತ್ತದೆ. ಸಂಸ್ಕೃತ ಮತ್ತು ಕನ್ನಡ ಸಾಹಿತ್ಯವನ್ನು ವಿಸ್ತಾರವಾಗಿ ಅಧ್ಯಯನ ಮಾಡಿದ್ದ ಪರಮೇಶ್ವರ ಭಟ್ಟರು.. ಆಗ ತಾನೆ ಸಾಹಿತ್ಯದ ನೆಲೆಯಲ್ಲಿ ಅಂಬೆಗಾಲಿಡುತ್ತಿದ್ದ ವಿದ್ಯಾರ್ಥಿಗಳಾದ ನಾವು, ಸಾಹಿತ್ಯ ಗೋಷ್ಠಿಗಳಲ್ಲಿ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಶ್ರದ್ಧೆಯಿಂದ ಆಲಿಸುತ್ತ... ಅವು ಅತ್ಯುತ್ತಮವಾದ ವಿಚಾರಗಳು ಎನ್ನುವಂತೆ ಹೊಗಳುತ್ತಾ... ವಿದ್ಯಾರ್ಥಿ ಸಮುದಾಯದಲ್ಲಿ ಸಾಹಿತ್ಯದ ಬಗ್ಗೆ ಅಪಾರವಾದ ಪ್ರೀತಿ ಮತ್ತು ಕುತೂಹಲವನ್ನು ಕೆರಳಿಸುತ್ತಿದ್ದರು.

ತಾಯಿಯ ಮಡಲಿನಲ್ಲಿ ತೊದಲು ನುಡಿಗಳನ್ನಾಡುತ್ತ... ಆಕೆಯ ಪ್ರೀತಿಯ ಆರೈಕೆಯಲ್ಲಿ ಮಗು ಮಾತನ್ನು ಕಲಿಯುವಂತೆ... ನಾವು ಭಟ್ಟರ ಬಳಿಯಲ್ಲಿ ಸಾಹಿತ್ಯದ ನುಡಿಗಟ್ಟುಗಳನ್ನು ಕಲಿತೆವು. ಎಲ್ಲಕ್ಕಿಂತ ಮಿಗಿಲಾಗಿ ಗುರುವಿನ ಸ್ಥಾನದಲ್ಲಿರುವವರು... ತಮ್ಮ ವಿದ್ಯಾರ್ಥಿ ಸಮುದಾಯವನ್ನು ಯಾವುದೇ ಬಗೆಯ ತರತಮಭಾವಗಳಿಂದ ಕಾಣದೇ... ಎಲ್ಲರನ್ನೂ ಪ್ರೀತಿ ಮತ್ತು ವಿಶ್ವಾಸದಿಂದ ಬೆಳೆಸಬೇಕೆಂಬುದನ್ನು ಆಚರಿಸಿ ತೋರಿಸಿದ ಅವರ ವ್ಯಕ್ತಿತ್ವ ... ಸದಾಕಾಲ ನನ್ನಂಥ ನೂರಾರು ಮಂದಿ ಶಿಷ್ಯರಿಗೆ ಇಂದಿಗೂ ಮಾರ್ಗದರ್ಶಕವಾಗಿದೆ.

2

ಆಗ ತಾನೆ ಒಂದೆರಡು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಸ್ನಾತ್ತಕೋತ್ತರ ಕೇಂದ್ರ ಹೊಸವಾಗಿ ಪ್ರಾರಂಭಗೊಂಡಿದ್ದರಿಂದ... ವಿದ್ಯಾರ್ಥಿಗಳಲ್ಲಿ ಕೆಲವರಿಗೆ ನಗರದ ಅತಿ ದೊಡ್ಡ ಕಾಲೇಜಿನ ವಿದ್ಯಾರ್ಥಿ ನಿಲಯವೊಂದರಲ್ಲಿ ವಸತಿ ಸೌಲಭ್ಯವನ್ನು

ಕಲ್ಪಿಸಲಾಗಿತ್ತು. ಹಾಸ್ಟೆಲ್‌ಗೆ ಸೇರಿದ ಮಾರನೆಯ ದಿನವೇ, ಅಲ್ಲಿ ನಡೆದ ಘಟನೆಯು... ಇನ್ನೂ ನನ್ನ ಮನದಲ್ಲಿ ಅಚ್ಚೊತ್ತಿದಂತಿದೆ.

ಬೆಳಗಿನ ತಿಂಡಿಗೆ ತಡವಾಗಿ ಹೋದಾಗ ... ಊಟದ ಕೊಠಡಿಯ ಬಾಗಿಲು ಮುಚ್ಚಿತ್ತು. ನಾನು ಮತ್ತು ನನ್ನ ಸ್ನೇಹಿತರಿಬ್ಬರೂ ಒಟ್ಟಾಗಿ ದಡದಡನೆ ಬಾಗಿಲನ್ನು ಬಡಿದೆವು. ಕೆಲವು ಕ್ಷಣಗಳ ನಂತರ ಬಾಗಿಲು ತೆರೆಯಿತು. ಒಳಕ್ಕೆ ಹೋಗಲು ನಾವು ಹೆಜ್ಜೆಗಳನ್ನಿಡುತ್ತಿದ್ದಂತೆಯೇ... ಬಾಗಿಲನ್ನು ತೆರೆದಿದ್ದ ಅಡಿಗೆ ಭಟ್ಟರೊಬ್ಬರು, ನಮಗೆ ಅಡ್ಡಲಾಗಿ ತಮ್ಮ ಕೈಯನ್ನು ಒಡ್ಡಿ–

"ನಿಮಗೆ ಈಗ ಒಳಕ್ಕೆ ಪ್ರವೇಶವಿಲ್ಲ. ಈಗ ಹೋಗಿ... ಮಧ್ಯಾಹ್ನ... ವೇಳೆಗೆ ಸರಿಯಾಗಿ ಊಟಕ್ಕೆ ಬನ್ನಿ" ಎಂದರು. ಸುಮಾರು ಮೂವತ್ತೈದು ನಲವತ್ತು ವರ್ಷ ವಯಸ್ಸಿನ ಭಟ್ಟರ ವರ್ತನೆಯಿಂದ ಕುಪಿತರಾದ ನಾವು, ತಲಾಗಿ ಒಂದೊಂದು ಮಾತನಾಡತೊಡಗಿದೆವು.

"ಈಗ ಯಾಕ್ರಿ ತಿಂಡಿ ಕೊಡೊಲ್ಲ?"

"ತಿಂಡಿ ಏನಾದ್ರೂ ಮುಗಿದು ಹೋಗಿದೆಯೇನ್ರಿ?"

"ಹುಡುಗರೆಲ್ಲಾ ಈಗ ತಾನೆ... ತಿಂಡಿ ತಿನ್ನೋಕೆ ಶುರು ಮಾಡಿದ್ದಾರಲ್ರಿ?"

ನಮ್ಮೆಲ್ಲರ ಮಾತುಗಳಿಂದ ಸ್ವಲ್ಪವೂ ವಿಚಲಿತರಾಗದ ಭಟ್ಟರು, ಬಿರುಗಣ್ಣಿನಿಂದ ನಮ್ಮೆಲ್ಲರನ್ನೂ ಒಮ್ಮೆ ನೋಡಿ–

"ಒಳಗಡೆ ಬೇಕಾದಷ್ಟು ತಿಂಡಿ ಇದೆ... ಆದರೆ ವೇಳೆ ಮೀರಿ ಬಂದವರಿಗೆ ಕೊಡೊಲ್ಲ" ಎಂದು ಖಚಿತವಾದ ಧ್ವನಿಯಲ್ಲಿ ನುಡಿದರು.

"ಏನ್ರೀ ಭಟ್ಟರೇ... ಒಂದು ಹತ್ತು ನಿಮಿಷ ತಡವಾಗಿ ಬಂದಾಕ್ಷಣಕ್ಕೆ... ಏನ್ರಿ ಆಗೋಯ್ತು?" ಎಂದು ನಾನು ಒರಟಾಗಿ ಕಿರುಚಿದೆ.

"ಅದೆಲ್ಲಾ ನಂಗೊತ್ತಿಲ್ಲ... ಈಗ ಇಲ್ಲಿಂದ ನೀವು ಹೊರಡಿ... ನನಗೆ ಕೈತುಂಬಾ ಕೆಲಸ ಇದೆ" ಎಂದು ಶಾಂತಚಿತ್ತರಾಗಿಯೇ ಹೇಳಿದರು. ತಿಂಡಿಯನ್ನು ತಿನ್ನುತ್ತಾ ಕುಳಿತಿರುವ ಹುಡುಗರ ಮುಂದೆ... ತಿಂಡಿಗಾಗಿ ಪರದಾಡುತ್ತಿರುವ ನಮಗೆ ತುಂಬಾ ಅವಮಾನವಾದಂತಾಯಿತು.

"ಬನ್ರೋ ... ಹೋಗೋಣ ಒಂದು ತಿಂಡಿಗಾಗಿ ಇವರ ಮುಂದೆ ಯಾಕೆ ಹಲ್ಲು ಕಿರೀಬೇಕು"

ಎಂದು ಪ್ರತಿಭಟಿಸುತ್ತಾ ... ಅಲ್ಲಿಂದ ಹಿಂತಿರುಗಿದೆವು.

ಅಂದು ತರಗತಿಗೆ ಬಂದಾಗ, ಅಲ್ಲಿದ್ದ ಸೀನಿಯರ್ ಎಂ.ಎ., ವಿದ್ಯಾರ್ಥಿಗಳು ಅಡಿಗೆ ಭಟ್ಟರ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದರು. ನಮ್ಮನ್ನು ತಡೆದು, ಹಿಂದಕ್ಕೆ ಅಟ್ಟಿದ್ದವರೇ... ವಿದ್ಯಾರ್ಥಿ ನಿಲಯದ ಹೆಡ್ ಕುಕ್. ಅವರನ್ನು ಎಲ್ಲರೂ ದೊಡ್ಡ ಭಟ್ಟರೆಂದೇ ಕರೆಯುತ್ತಾರೆ. ಕಾಲದ ಬಗ್ಗೆ ಬಹಳ ಕಟ್ಟುನಿಟ್ಟಿನ ವ್ಯಕ್ತಿ. ವಿದ್ಯಾರ್ಥಿ ನಿಲಯದಲ್ಲಿ ಪ್ರತಿ ದಿನ ತಿಂಡಿ ಮತ್ತು ಊಟವನ್ನು ಎರಡೆರಡು ಬ್ಯಾಚ್‌ಗಳಲ್ಲಿ ನೀಡಲಾಗುತ್ತದೆ. ಪ್ರತಿಯೊಂದು ಬ್ಯಾಚಿಗೂ ಎರಡು ಸಾರಿ ಗಂಟೆ ಹೊಡೆಯಲಾಗುತ್ತದೆ. ಎರಡನೆಯ ಗಂಟೆ ಬಾರಿಸಿದ ನಂತರ, ಊಟದ ಕೊಠಡಿಯ ಪ್ರವೇಶ ದ್ವಾರವನ್ನು ಮುಚ್ಚಲಾಗುತ್ತದೆ. ಯಾವುದೇ ಕಾರಣದಿಂದಲೂ... ವೇಳೆ ಮೀರಿ ಬರುವ ವಿದ್ಯಾರ್ಥಿಗಳಿಗೆ ಊಟ ತಿಂಡಿಯನ್ನು ಕೊಡುವುದಿಲ್ಲ.


ಅಂದು ಮಧ್ಯಾಹ್ನ... ವೇಳೆಗೆ ಸರಿಯಾಗಿ ಊಟಕ್ಕೆ ಹೋದಾಗ... ದೊಡ್ಡ ಭಟ್ಟರು ನಮ್ಮನ್ನು ಬಹಳ ಪ್ರೀತಿಯಿಂದ ಕಂಡರು. ಬೆಳಗಿನ ಕಹಿ ಘಟನೆಯಿಂದ ನಾವು ಮೂವರು ಮುಖ ಗಂಟು ಹಾಕಿಕೊಂಡು ಊಟ ಮಾಡುತ್ತಿದ್ದರೆ... ಭಟ್ಟರು ಮಾತ್ರ ನಗುನಗುತ್ತಾ ಉಣಬಡಿಸಿದರು.

ಇಡೀ ಒಂದು ವರ್ಷದಲ್ಲಿ ಒಂದು ದಿನವಾದರೂ ದೊಡ್ಡ ಭಟ್ಟರು ತಮ್ಮ ಕರ್ತವ್ಯಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿದ್ದನ್ನು ನಾನು ನೋಡಿಲ್ಲ. ಕಾಲೇಜು ಹಾಸ್ಟೆಲ್‌ನಲ್ಲಿದ್ದ ಸುಮಾರು ಇನ್ನೂರೈವತ್ತು ವಿದ್ಯಾರ್ಥಿಗಳನ್ನು... ತಮ್ಮ ಶಿಸ್ತಿನ ಮತ್ತು ಪ್ರೀತಿ ಪೂರ್ವಕವಾದ ನಡೆನುಡಿಗಳಿಂದ ನಿಯಂತ್ರಿಸುತ್ತಿದ್ದ ಅವರ ವ್ಯಕ್ತಿತ್ವಕ್ಕೆ ನಾನು ಮಾರುಹೋದೆನು.

"ಕಾಲದ ಬೆಲೆಯನ್ನು ತಿಳಿದವನು... ಬಾಳಿನ ಮಹತ್ವವನ್ನು ಅರಿಯಬಲ್ಲ" ಎಂಬ ಹಿರಿಯರ ಆದರ್ಶ ವಾಣಿಯನ್ನು ...ತಮ್ಮ ಬದುಕಿನಲ್ಲಿ ಆಚರಿಸಿ ತೋರಿಸಿದ ದೊಡ್ಡ ಭಟ್ಟರು... ನನ್ನ ಪಾಲಿಗೆ ಮತ್ತೊಬ್ಬ ಗುರುವಾದರು.

⌘

ತಪ್ಪು ತಿಳುವಳಿಕೆ



ಕಡಲತೀರದ ಮಂಗಳೂರು ನಗರದಲ್ಲಿ ಕನ್ನಡ ಎಂ.ಎ., ಕೋರ್ಸಿಗೆ ಸೇರಿದ ಪ್ರಾರಂಭದ ದಿನಗಳಲ್ಲಿ ಉತ್ಸಾಹದ ಜೊತೆಜೊತೆಗೆ... ಹೊಸ ಜಾಗ, ಹೊಸ ಜನ, ಹೊಸ ಪರಿಸರದಲ್ಲಿ... ಏನೋ ... ಎಂತೋ' ಎಂಬ ಆತಂಕದ ಭಾವನೆಗಳು ನನ್ನ ಮನದಲ್ಲಿ ತುಂಬಿದ್ದವು. ಕರ್ನಾಟಕದ ನಾನಾ ಜಿಲ್ಲೆಗಳಿಂದ ಬಂದಿದ್ದ ಸಹಪಾಠಿಗಳ ಸ್ನೇಹಪೂರ್ವಕವಾದ ಒಡನಾಟ ಮತ್ತು ಗುರುಗಳ ಪ್ರೀತಿಯ ಸಹಚರ್ಯೆಯಿಂದ ಸ್ನಾತಕೋತ್ತರ ಕೇಂದ್ರದಲ್ಲಿನ ವಾತಾವರಣ ಬಹಳ ಆಹ್ಲಾದಕರವಾಗಿತ್ತು. ಆದರೆ ವಿದ್ಯಾರ್ಥಿನಿಲಯದಲ್ಲಿ ನಾನು ಅಪಾರವಾದ ಮುಜುಗರವನ್ನು ಅನುಭವಿಸುತ್ತಿದ್ದೆನು. ಸೀನಿಯರ್ ಎಂ.ಎ., ವಿದ್ಯಾರ್ಥಿಯೊಬ್ಬರಿದ್ದ ಕೊಠಡಿಗೆ ನನ್ನನ್ನು ಹಾಕಿದ್ದರು.

ವಯಸ್ಸಿನಲ್ಲಿ ನನಗಿಂತ ಮೂರ್‍ನಾಲ್ಕು ವರ್ಷ ದೊಡ್ಡವರಾಗಿದ್ದ ಅವರು ... ಏಕೋ... ಏನೋ... ನನ್ನೊಡನೆ ಸರಿಯಾಗಿ ಮಾತನಾಡುತ್ತಿರಲಿಲ್ಲ. ನಾನಾಗಿಯೇ ಮಾತನಾಡಿಸಿದಾಗ ಮಾತ್ರ... ಒಂದೆರಡು ಪದಗಳಲ್ಲಿ ಪ್ರತಿಕ್ರಿಯಿಸಿ, ಮುಖಗಂಟು ಹಾಕಿಕೊಂಡು, ತಮ್ಮ ಪಾಡಿಗೆ ತಾವಿರುತ್ತಿದ್ದರು. ಆದರೆ ಹಾಸ್ಟೆಲ್‌ನ ಇತರ ಹುಡುಗರೊಡನೆ ಅವರು ಸಾಕಷ್ಟು ಸಲುಗೆಯಿಂದ ವರ್ತಿಸುತ್ತ, ನಗುನಗುತ್ತ ಮಾತನಾಡುತ್ತಿದ್ದರು. ಅವರ ಈ ಬಗೆಯ ವರ್ತನೆಯಿಂದ, ಇಬ್ಬರೇ ಇದ್ದ ಆ ರೂಮಿನಲ್ಲಿ ನನಗೆ ಉಸಿರು ಕಟ್ಟಿದಂತಾಗಿತ್ತು.

ಹೀಗೆ ಸುಮಾರು ಹದಿನೈದು ದಿನಗಳು ಉರುಳುತ್ತಿದ್ದಂತೆ... ಒಂದು ದಿನ ಬೆಳಿಗ್ಗೆ ಅವರು ನರಳುವ ಧ್ವನಿ ಕೇಳಿಬಂತು. ಹಾಸಿಗೆಯಲ್ಲಿ ಮಲಗಿಕೊಂಡೇ ನರಳುತ್ತಿದ್ದ ಅವರ ಬಳಿಗೆ ಹೋಗಿ–

"ಯಾತಕ್ಕೆ ತುಂಬಾ ನರಳ್ತಾಯಿದ್ದೀರಿ... ಹುಷಾರಿಲ್ವ ನಿಮಗೆ" ಎಂದು ವಿಚಾರಿಸಿದೆ. ತಮ್ಮ ಮುಖದ ಮೇಲಿನ ರಗ್ಗನ್ನು ಸರಿಸಿ, ಬಹಳ ಕಷ್ಟದಿಂದ ಕಣ್ಣುಗಳನ್ನು ತೆರೆದು... ನನ್ನನ್ನೇ ನೋಡುತ್ತ, ಹುಷಾರಿಲ್ಲವೆಂಬಂತೆ ತಲೆಯಾಡಿಸಿದರು. ಅವರ ಹಣೆಯನ್ನು ಮುಟ್ಟಿ ನೋಡಿದೆ. ತುಂಬಾ ಜ್ವರ ಸೀಯುತ್ತಿತ್ತು. ತಕ್ಷಣವೇ ನಾನು "ಏನೂ ಗಾಬರಿಯಾಗಬೇಡಿ... ಧೈರ್ಯವಾಗಿರಿ" ಎಂದು ಹೇಳಿ, ನನ್ನ ಕರಚೌಕವನ್ನು ತಣ್ಣೀರಿನಲ್ಲಿ ಅದ್ದಿ, ಅವರ ಹಣೆಯ ಮೇಲೆ ಒದ್ದೆ ಬಟ್ಟೆಯನ್ನಿಟ್ಟೆನು. ಅನಂತರ ಆಸ್ಪತ್ರೆಯಿಂದ ಔಷಧವನ್ನು ತಂದು ಕೊಟ್ಟೆನು. ಎರಡು ಮೂರು ದಿನಗಳು ಕಳೆದರೂ, ಜ್ವರದ ಪ್ರಮಾಣದಲ್ಲಿ ಏರಿಳಿತ ಕಂಡು ಬರುತ್ತಿತ್ತೇ ಹೊರತು... ಅವರು ಗುಣಮುಖರಾಗಲಿಲ್ಲ. ನಾಲ್ಕನೆಯ ದಿನದಂದು ವೈದ್ಯರ ಬಳಿಗೆ ಅವರನ್ನು ಕರೆದುಕೊಂಡು ಹೋಗಿ ತೋರಿಸಿದೆನು. ಅವರಿಗೆ ಟೈಫಾಯಿಡ್ ಆಗಿರುವುದಾಗಿ ತಿಳಿದು ಬಂತು. ಮತ್ತೆ ಹಲವಾರು ದಿನಗಳ ಕಾಲ... ವೈದ್ಯರ ಸಲಹೆಯಂತೆ ಕಾಲ ಕಾಲಕ್ಕೆ ಸರಿಯಾಗಿ ಔಷಧ ಮತ್ತು ಆಹಾರವನ್ನು ನೀಡುತ್ತ, ಬಹಳ ಎಚ್ಚರಿಕೆಯಿಂದ ಅವರನ್ನು ಉಪಚರಿಸಿದೆ.

ಅವರು ನನ್ನಂತೆಯೇ ನೂರಾರು ಮೈಲಿಗಳ ದೂರದ ಊರಿನಿಂದ ಮಂಗಳೂರಿಗೆ ಬಂದವರಾಗಿದ್ದರಿಂದ, ಅವರ ಮನೆಗೆ ಕಾಯಿಲೆಯ ಸುದ್ದಿಯನ್ನು ತಿಳಿಸಲಿಲ್ಲ. ಕೆಲವೇ ದಿನಗಳಲ್ಲಿ ಅವರು ಸಂಪೂರ್ಣವಾಗಿ ಗುಣಮುಖಗೊಂಡು, ಮತ್ತೆ ತರಗತಿಗೆ ಬರುವಂತಾದ ದಿನದಂದು ಬೆಳಿಗ್ಗೆ... ಇಬ್ಬರೂ ಜೊತೆಯಾಗಿ ಸ್ನಾತಕೋತ್ತರ ಕೇಂದ್ರಕ್ಕೆ ಹೊರಡಲು ಸಿದ್ಧರಾಗಿ... ಇನ್ನೇನು ಕೊಠಡಿಯಿಂದ ಹೊರಡಬೇಕು ಎನ್ನುವಷ್ಟರಲ್ಲಿ.... ಅವರು ನನ್ನ ಮುಂದೆ ಬಂದು ನಿಂತು, ನನ್ನೆರಡು ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು, ಬಿಕ್ಕಿ ಬಿಕ್ಕಿ ಅಳತೊಡಗಿದರು. ಕ್ಷಣ ಕಾಲ ನಾನು ದಿಗ್ಭ್ರಾಂತನಾದೆ. ಅನಂತರ ಅವರನ್ನು ಸಂತೈಸುತ್ತಾ–

"ಯಾಕೆ?... ಏನಾಯ್ತು!... ಯಾತಕ್ಕೆ ಹೀಗೆ ಅಳ್ತಾಯಿದ್ದೀರಿ?... ಏನಾದರೂ ಸುಸ್ತಾಗುತ್ತೆ?... ಸ್ವಲ್ಪ ಸಮಾಧಾನ ಮಾಡ್ಕೊಳ್ಳಿ... ಅಳ್ಬೇಡಿ" ಎಂದೆ. ಅವರು ನನ್ನ ಕೈಗಳನ್ನು ಮತ್ತಷ್ಟು ಬಿಗಿಯಾಗಿ ಹಿಡಿದುಕೊಂಡು–

"ನಿಮ್ಮ ವಿಷಯದಲ್ಲಿ ನಾನು ತುಂಬಾ ಕೆಟ್ಟದ್ದಾಗಿ ನಡೆದುಕೊಂಡಿದ್ದೇನೆ. ನನ್ನನ್ನು ನೀವು ಕ್ಷಮಿಸಬೇಕು" ಎಂದು ಕೇಳಿಕೊಂಡು ಕಣ್ಣೀರು ಕರೆಯತೊಡಗಿದರು. ಯಾವುದೇ ಬಗೆಯ ಭಾವೋದ್ವೇಗಕ್ಕೆ ಅವರು ಮತ್ತೆ ಒಳಗಾಗದಂತೆ ಮಾಡಲೆಂದು–

"ಬನ್ನಿ... ಮಂಚದ ಮೇಲೆ ಕುಳಿತುಕೊಂಡು ಸಮಾಧಾನವಾಗಿ ಮಾತನಾಡೋಣ" ಎಂದು ಹೇಳಿ, ಜೊತೆಯಲ್ಲೇ ಕುಳ್ಳಿರಿಸಿಕೊಂಡೆನು.

ಒಂದೆರಡು ಕ್ಷಣಗಳಲ್ಲಿ... ತಮ್ಮ ಮೊದಲ ಉದ್ವಿಗ್ನತೆಯಿಂದ ಬಿಡುಗಡೆಗೊಂಡ ಅವರು ಈಗ ಅಳುವುದನ್ನು ನಿಲ್ಲಿಸಿ... ಹಿಡಿದಿದ್ದ ನನ್ನ ಕೈಗಳನ್ನು ಬಿಡದೆ... ನಿಧಾನವಾಗಿ ಮಾತನಾಡತೊಡಗಿದರು–

"ನನ್ನ ಅಂತಹ ಕೆಟ್ಟ ವರ್ತನೆಗೆ ಕಾರಣವೇನು ಅಂತ ತಿಳಿಯುವ ಕುತೂಹಲ ನಿಮಗಿಲ್ವೆ?" ಎಂದು ಪ್ರಶ್ನಿಸಿದರು.

"ಇಲ್ಲ... ನಿಮ್ಮಿಂದ ನನಗೇನು ತೊಂದರೇನೇ ಆಗಿಲ್ವಲ್ಲ" ಎಂದೆ.

"ನೀವು ಸುಳ್ಳು ಹೇಳ್ತಾಯಿದ್ದೀರಿ... ನೀವು ಕೇಳ್ದೆಯಿದ್ದರೂ, ನಾನೇ ಹೇಳ್ತೀನಿ ಕೇಳಿ... ನೀವು ನನ್ನ ರೂಮ್‌ಮೇಟ್ ಆಗಿ ಬಂದ ದಿನವೇ, ನಿಮ್ಮ ಜಾತಿ ಯಾವುದು ಅಂತ ಬೇರೆಯವರಿಂದ ತಿಳ್ಕೊಂಡೆ. ನಾನು ಪಿ.ಯು.ಸಿ, ಮತ್ತು ಬಿ.ಎ., ಓದಿದ್ದೆಲ್ಲಾ ಮೈಸೂರಿನಲ್ಲಿ... ಅಲ್ಲಿದ್ದಾಗ ನಿಮ್ಮ ಜಾತಿಯವರ ಬಗ್ಗೆ, ನನ್ನ ಜಾತಿಯ ಸ್ನೇಹಿತರೆಲ್ಲಾ ಬಹಳ ದ್ವೇಷದ ಭಾವನೆಗಳನ್ನು ನನ್ನ ತಲೆಯೊಳಗೆ ತುಂಬಿದ್ದರು. ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ನಿಮ್ಮ ಜಾತಿಯ ಬಗ್ಗೆ ನನಗೆ ತುಂಬಾ ತಿರಸ್ಕಾರ ಮತ್ತು ದ್ವೇಷದ ಭಾವನೆಗಳಿದ್ದವು. ಆದರೆ ಈಗ ಹತ್ತಿರದಿಂದ ನಿಮ್ಮ ನಡೆನುಡಿಗಳನ್ನು ನೋಡಿದ ಮೇಲೆ... ನಾನೆಂಥ ತಪ್ಪು ಭಾವನೆಗಳಿಗೆ ಬಲಿಯಾಗಿದ್ದೆ ಅಂತ... ನನಗೆ ನಾಚಿಕೆಯಿಂದ ತಲೆ ತಗ್ಗಿಸುವಂತಾಗುತ್ತಿದೆ" ಎಂದು ಕುಗ್ಗಿದ ಧ್ವನಿಯಲ್ಲಿ ನುಡಿದರು.

ಅವರ ಹೆಸರಿನ ಮುಂದೆ ಜಾತಿ ಸೂಚಕ ಪದ ಇದ್ದುದರಿಂದ, ನನಗೆ ಅವರ ಜಾತಿ ಯಾವುದೆಂಬುದು ತಾನಾಗಿಯೇ ತಿಳಿದಿತ್ತು. ಅವರ ಮನಸ್ಸಿನ ವೇದನೆಯನ್ನು ಕಡಿಮೆ ಮಾಡಲೆಂಬ ಉದ್ದೇಶದಿಂದ, ಸ್ವಲ್ಪ ದೀರ್ಘವಾಗಿಯೇ ಮಾತನಾಡತೊಡಗಿದೆ–

"ನೋಡಿ... ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಗೆಲ್ಲುವುದಕ್ಕಾಗಿ ಈ ರೀತಿ ಆಯಾಯ ಜಾತಿಯ ಸೀನಿಯರ್ ವಿದ್ಯಾರ್ಥಿಗಳು, ಹೊಸದಾಗಿ ಕಾಲೇಜಿಗೆ ಬರುವ ತಂತಮ್ಮ ಜಾತಿಯ ವಿದ್ಯಾರ್ಥಿಗಳಲ್ಲಿ ವಿಷ ಭಾವನೆಗಳನ್ನು ತುಂಬುತ್ತಾರೆ. ನಾವು ತುಂಬಾ ಎಚ್ಚರಿಕೆಯಿಂದ... ಜಾತಿಯ ವಿಷ ಬೀಜಗಳನ್ನು ಬಿತ್ತುವ ಅಂತಹ ನುಡಿಗಳಿಗೆ ಗಮನ ಕೊಡಬಾರದು. ನಾವು ನಮ್ಮ ಜಾತಿಯವರ ಜೊತೆಯಲ್ಲೇ ವ್ಯವಹರಿಸುವುದಕ್ಕಿಂತ ಹೆಚ್ಚಾಗಿ... ಎಲ್ಲಾ ಜಾತಿ, ಮತ, ಧರ್ಮದ ವ್ಯಕ್ತಿಗಳ ಜೊತೆಯಲ್ಲೇ ಸ್ನೇಹಸಂಬಂಧಗಳನ್ನು ಬೆಳೆಸಿಕೊಂಡರೆ, ಆಗ ಇಂತಹ ತಪ್ಪು ಭಾವನೆಗಳು ತಾವಾಗಿಯೇ ನಿವಾರಣೆಗೊಳ್ಳುತ್ತವೆ ಅನ್ನೋದನ್ನ ಒಂದು ಗ್ರಂಥದಲ್ಲಿ ನಾನು ಓದಿದ್ದೆ. ಅದನ್ನು ಕಾರ್ಯರೂಪಕ್ಕೆ ತಂದ ದಿನದಿಂದ ನನ್ನ ಮನಸ್ಸಿನಲ್ಲಿ ಆವರಿಸಿದ್ದ... ಇಂತಹ ಕೆಟ್ಟ ಭಾವನೆಗಳ ಪ್ರಮಾಣ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿದೆ" ಎಂದು ಹೇಳಿ, ಜಾತಿದ್ವೇಷದ ಭಾವನೆಗಳು ಎಲ್ಲರಲ್ಲೂ ಸರ್ವೇ ಸಾಮಾನ್ಯವಾಗಿರುತ್ತವೆ. ಎಂಬುದನ್ನು ಮನಗಾಣಿಸಲು ಯತ್ನಿಸಿದೆ... ಆದರೆ ಅವರ ಚಡಪಡಿಕೆ ಕಡಿಮೆಯಾಗಲಿಲ್ಲ.

"ನಾನು ಕಾಯಿಲೆ ಮಲಗಿದ್ದಾಗ... ಹಗಲು ರಾತ್ರಿ ಅನ್ನದೇ... ನನ್ನ ಸೇವೆ ಮಾಡಿದ್ದೀರಿ. ನನ್ನ ಒಡ ಹುಟ್ಟಿದ ತಮ್ಮನೂ ಕೂಡ ನಿಮ್ಮಂತೆ ಮಾಡ್ತಿದ್ನೋ... ಇಲ್ಲವೋ ನನಗೆ ಗೊತ್ತಿಲ್ಲ. ನೀವು ನನ್ನನ್ನು ಕ್ಷಮಿಸಿದ್ದೀನಿ ಅಂತ ಹೇಳುವ ತನಕ ನನಗೆ ಸಮಾಧಾನವಿಲ್ಲ. ಅಲ್ಲಿಯ ತನಕ ನಿಮ್ಮ ಕೈಗಳನ್ನು ನಾನು ಬಿಡೊಲ್ಲ" ಎಂದು ಮಗುವಿನಂತೆ ಹಠ ಹಿಡಿದು ಕುಳಿತರು. ನಾನು ನಗುತ್ತಾ–

"ನಮ್ಮ ಜಾತಿಯ ಬಗ್ಗೆ ಈಗ ನಿಮಗೆ ಏನು ಅನ್ನಿಸುತ್ತೆ" ಎಂದೆ.

"ಇನ್ನು ನನ್ನ ಜೀವಮಾನದಲ್ಲಿ ಯಾವುದೇ ವ್ಯಕ್ತಿಯನ್ನು ... ಜಾತಿಯ ಕಾರಣಕ್ಕಾಗಿ ಕಡೆಗಣಿಸಬಾರದು ಅಥವಾ ಗೌರವಿಸಬಾರದು ಎನ್ನುವ ಅರಿವು ನನ್ನಲ್ಲಿ ಮೂಡಿದೆ" ಎಂದು ಅವರು ನುಡಿದಾಗ, ನನ್ನ ಜೀವನದ ಒಳ್ಳೆಯ ಕ್ಷಣಗಳಲ್ಲಿ ಇದು ಒಂದೆಂದು ಭಾವಿಸಿದೆ. ಅವರ ಮನಸ್ಸಿನ ಸಮಾಧಾನಕ್ಕಾಗಿ, ಔಪಚಾರಿಕವಾಗಿ "ಕ್ಷಮಿಸಿದ್ದೇನೆ" ಎಂಬ ನುಡಿಯು ನನ್ನ ಬಾಯಿಂದ ಹೊರ ಬಿದ್ದ ನಂತರವೇ... ಅವರು ನನ್ನ ಕೈಗಳನ್ನು ಬಿಟ್ಟು ನಗು ಮುಖದಿಂದ ಮೇಲಕ್ಕೆ ಎದ್ದರು.

ನನ್ನ ಸ್ನೇಹಿತರೊಬ್ಬರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸುಮಾರು ಮೂವತ್ತು ವರ್ಷಗಳ ಹಿಂದೆ ನಡೆದಿದ್ದ ಈ ಮೇಲ್ಕಂಡ ಘಟನೆಯನ್ನು ... ಮೊನ್ನೆ ನನ್ನೊಡನೆ ಹೇಳಿಕೊಂಡು–

“ನೋಡಿ... ಜಾತಿ, ಮತ, ಧರ್ಮಗಳ ಬಗೆಗಿನ ತಪ್ಪು ತಿಳುವಳಿಕೆ ಇಲ್ಲವೇ ಅಪಪ್ರಚಾರ... ಹೇಗೆ ನಮ್ಮೆಲ್ಲರ ಮನಸ್ಸನ್ನು ಬಗ್ಗಡಗೊಳಿಸಿ... ಪರಸ್ಪರ ಅನುಮಾನ, ತಿರಸ್ಕಾರ ಮತ್ತು ದ್ವೇಷದ ಭಾವನೆಗಳನ್ನು ಕೆರಳಿಸುತ್ತಾ... ನಮ್ಮ ನಿತ್ಯದ ಬದುಕಿನಲ್ಲಿ ನೂರೆಂಟು ಬಗೆಯ ಸಾವು ನೋವುಗಳಿಗೆ ಕಾರಣವಾಗುತ್ತಿವೆ” ಎಂದು ವಿಷಾದವನ್ನು ವ್ಯಕ್ತಪಡಿಸಿದರು. ಅವರು ಹೇಳಿದ ಮಾತುಗಳನ್ನು ಮನನ ಮಾಡಿಕೊಂಡು, ನಾನು ಏನನ್ನಾದರೂ ಪ್ರತಿಕ್ರಿಯಿಸುವುದಕ್ಕೆ ಮೊದಲೇ... ಮತ್ತೆ ಅವರು ತಮ್ಮ ಮಾತನ್ನು ಮುಂದುವರಿಸುತ್ತ–

“ಪ್ರತಿಯೊಂದು ಜಾತಿ, ಮತ, ಧರ್ಮದ ಜನರ ವೇಷಭೂಷಣ, ಆಹಾರ ಸೇವನೆ ಮತ್ತು ಮೈ ಬಣ್ಣವನ್ನು ಕುರಿತಂತೆ ಪ್ರಚಲಿತವಾಗಿರುವ ನೂರಾರು ನುಡಿಗಟ್ಟುಗಳು... ಬಹು ಬಗೆಯ ಕೆಟ್ಟ ಭಾವನೆಗಳನ್ನು ಜನಮನದಲಿ ಆಳವಾಗಿ ಬೇರೂರಿಸಿವೆ. ನಮ್ಮ ಸಮಾಜದ ಎಲ್ಲಾ ಹಂತಗಳಲ್ಲಿರುವ ಜಾತಿವಾದಿಗಳು, ಮತಾಂಧರು ಮತ್ತು ರಾಜಕಾರಣಿಗಳು... ಇಂತಹ ತಪ್ಪು ತಿಳುವಳಿಕೆಯನ್ನೇ ತಮ್ಮ ಮಾತಿನ ಆಯುಧಗಳನ್ನಾಗಿ ಮಾಡಿಕೊಂಡು, ತಮ್ಮ ದುರುದ್ದೇಶ ಸಾಧನೆಗಾಗಿ... ಯಾವಾಗ ಬೇಕಾದರೂ... ಎಲ್ಲಿ ಬೇಕೆಂದರಲ್ಲಿ... ಜನ ಸಮುದಾಯವನ್ನು ಉದ್ರಿಕ್ತಗೊಳಿಸುವುದರಲ್ಲಿ ಸಫಲರಾಗುತ್ತಿದ್ದಾರೆ. ಈ ಬಗೆಯ ಪೂರ್ವಗ್ರಹಗಳನ್ನು ನಮ್ಮ ಜನ ಸಮುದಾಯದ ಮನಸ್ಸಿನಿಂದ ನಿವಾರಿಸುವ ಬಗೆ ಹೇಗೆ? ಎಂದು ಪ್ರಶ್ನಿಸಿದರು.

ಕ್ಷಣಕಾಲ ನಮ್ಮಿಬ್ಬರ ನಡುವೆ ಮೌನ ಆವರಿಸಿತು. ಅನಂತರ ನಾನು–

“ಒಟ್ಟು ಸಮುದಾಯದ ಬಗ್ಗೆ ಚಿಂತಿಸುವುದಕ್ಕೆ ಮೊದಲು... ನಮ್ಮ ನಮ್ಮ ವೈಯಕ್ತಿಕ ನಡೆ ನುಡಿಗಳಲ್ಲಿ ಈ ಬಗೆಯ ತಪ್ಪು ತಿಳುವಳಿಕೆಯನ್ನು ಬಿಟ್ಟುಬಾಳಲು ಪ್ರಯತ್ನಿಸಿದರೆ... ಆಗ ನಾವು ವ್ಯವಹರಿಸುವ ನೆಲೆಗಳಲ್ಲಾದರೂ ಒಂದು ಉತ್ತಮವಾದ ವಾತಾವರಣವನ್ನು ನಿರ್ಮಿಸಲು ಸಾಧ್ಯವಾಗಬಹುದು” ಎಂದಾಗ... ನನ್ನ ಅಭಿಪ್ರಾಯಕ್ಕೆ ಸಮ್ಮತಿಯನ್ನು ಸೂಚಿಸುವಂತೆ ಮುಗುಳ್ನಕ್ಕರು.

⌘

ನಮ್ಮಂಗೆ ಮನುಷ್ಯ ಅಲ್ವೇನ್ರಿ



ಇಂದಿಗೆ ಸರಿಯಾಗಿ ಇಪ್ಪತ್ತೆಂಟು ವರ್ಷಗಳ ಹಿಂದೆ ಮದ್ದೂರಿನ ಅರ್ಜುನಪುರಿ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿದ ಹೊಸದರಲ್ಲಿ ನಾನು ಕಂಡ ಒಂದೆರಡು ಘಟನೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಈ ಕಾಲೇಜು ಕೂಡ ಅದೇ ವರ್ಷ ಹೊಸದಾಗಿ ಪ್ರಾರಂಭಗೊಂಡಿತ್ತು. ಪಿ.ಯು.ಇ. ಕೋರ್ಸಿನ ಮೊದಲನೆಯ ವರ್ಷದ ಕಲಾ ಮತ್ತು ವಿಜ್ಞಾನ ವಿಭಾಗದ ಎರಡು ತರಗತಿಗಳಲ್ಲಿ ನೂರಿಪ್ಪತ್ತೈದು ಮಂದಿ ವಿದ್ಯಾರ್ಥಿಗಳಿದ್ದರು. ಕಾಲೇಜಿನ ಆಡಳಿತ ಸಿಬ್ಬಂದಿಯಲ್ಲಿನ ಒಂದು ವಿಶೇಷವೇನೆಂದರೆ... ಉಪನ್ಯಾಸಕ ವರ್ಗದಲ್ಲಿ ಪ್ರಿನ್ಸಿಪಾಲರನ್ನೂ ಒಳಗೊಂಡಂತೆ ಪ್ರತಿಯೊಂದು ವಿಷಯಗಳಿಗೆ ಒಬ್ಬೊಬ್ಬರೇ ಉಪನ್ಯಾಸಕರಿದ್ದರು. ಕಚೇರಿಯ ನಿರ್ವಹಣೆಗೆ ಪ್ರಥಮ ಮತ್ತು ದ್ವಿತೀಯ ದರ್ಜೆಯ ಒಬ್ಬೊಬ್ಬ ಗುಮಾಸ್ತರು.

ಇಡೀ ಕಾಲೇಜಿಗೆಲ್ಲಾ ಒಬ್ಬನೇ ಜವಾನ. ಪ್ರಿನ್ಸಿಪಾಲರೊಬ್ಬರನ್ನು ಬಿಟ್ಟರೆ. ಉಳಿದವರೆಲ್ಲಾ ಯೌವನದ ಹಂತದಲ್ಲಿದ್ದವರು.

ಅರವತ್ತೆರಡು ವರ್ಷ ವಯಸ್ಸಿನ ಜಿ. ನಾರಾಯಣ ಎಂಬುವರು ಪ್ರಿನ್ಸಿಪಾಲರಾಗಿದ್ದರು. ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮೂವತ್ತೈದು ವರ್ಷಗಳ ಕಾಲ ಕಾರ್ಯ ನಿರ್ವಹಿಸಿ... ನಿವೃತ್ತಿಯ ನಂತರ... ಮೈಸೂರು ನಗರದ ಪ್ರತಿಷ್ಠಿತ ಕಾಲೇಜೊಂದರಲ್ಲಿ ಎರಡು ವರ್ಷಗಳಿಂದ ಪ್ರಿನ್ಸಿಪಾಲರಾಗಿ ದುಡಿಯುತ್ತಿದ್ದ ಇವರನ್ನು ... ತಾಲ್ಲೂಕು ಕೇಂದ್ರದಲ್ಲಿ ಸ್ಥಾಪನೆಗೊಂಡಿದ್ದ ಈ ಕಾಲೇಜಿಗೆ ಉತ್ತಮವಾದ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಅಡಿಪಾಯವನ್ನು ಹಾಕಿಸಬೇಕೆಂಬ ದೂರದೃಷ್ಟಿಯಿಂದ ವಿದ್ಯಾಸಂಸ್ಥೆಯವರು ಕರೆದುಕೊಂಡು ಬಂದಿದ್ದರು. ಲಂಡನ್ನಿನ ಪ್ರಖ್ಯಾತ ವಿಶ್ವವಿದ್ಯಾನಿಲಯವೊಂದರಲ್ಲಿ ಒಂದೆರಡು ವರ್ಷಗಳ ಕಾಲ ಸಂಶೋಧನೆ ಮಾಡಿದ್ದ ಅನುಭವವನ್ನೂ ಇವರು ಹೊಂದಿದ್ದರು.

ಉನ್ನತ ಮಟ್ಟದ ಶೈಕ್ಷಣಿಕ ನೆಲೆಯಿಂದ ಬಂದಿದ್ದ ನಮ್ಮ ಪ್ರಿನ್ಸಿಪಾಲರು... ಅಪಾರವಾದ ತಮ್ಮ ಅನುಭವದ ಹಿನ್ನೆಲೆಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ್ದ ನಮ್ಮೆಲ್ಲರಿಗೂ ಸೂಕ್ತವಾದ ತಿಳುವಳಿಕೆಯನ್ನು ಹೇಳುತ್ತ ಮತ್ತು ಮಾರ್ಗದರ್ಶನವನ್ನು ಮಾಡುತ್ತ... ಕಾಲೇಜನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ರೂಪಿಸತೊಡಗಿದರು.

ಕಾಲೇಜು ಪ್ರಾರಂಭವಾದ ನಾಲ್ಕಾರು ವಾರಗಳ ನಂತರ, ಒಂದು ದಿನ ಮಧ್ಯಾಹ್ನ ಪ್ರಿನ್ಸಿಪಾಲರ ಕೊಠಡಿಗೆ ಹೋಗಿ, ಅವರೊಡನೆ ಮಾತನಾಡುತ್ತಾ ಕುಳಿತಿದ್ದಾಗ, ಅವರ ಟೇಬಲ್ ಮೇಲೆ ಒಂದೆಡೆ, ಹರಿದ ಅಂಚೆ ಕವರ್‌ಗಳ ಹಾಳೆಗಳನ್ನು ಜೋಡಿಸಿಟ್ಟಿರುವುದು ನನ್ನ ಕಣ್ಣಿಗೆ ಬಿತ್ತು. ಕೂಡಲೇ, ನಾನು ಕುತೂಹಲದಿಂದ–

"ಇದ್ಯಾಕೆ ಸಾರ್.... ಈ ಹಾಳೆಗಳು?" ಎಂದು ಕೇಳಿದೆ.

"ನೋಡಿ... ವಿಶ್ವವಿದ್ಯಾನಿಲಯಕ್ಕೆ ... ಕಾಲೇಜು ನಿರ್ದೇಶಕರ ಕಛೇರಿಗೆ........ ಇಲ್ಲವೇ... ಇನ್ನಿತರ ಕಡೆಗಳಿಗೆ ನಮ್ಮ ಕಾಲೇಜಿನಿಂದ ಪತ್ರಗಳನ್ನು ಬರೆಯುವ ಮುನ್ನ... ಪತ್ರಗಳ ವಿಷಯದ ಡ್ರಾಫ್ಟ್ ಅನ್ನು ಹಾಕುವುದಕ್ಕೆ ಈ ಹಾಳೆಗಳನ್ನು ಉಪಯೋಗಿಸಿಕೊಳ್ತೇನೆ. ಇದರಲ್ಲಿ ಬರೆದು ಕೊಟ್ಟಿದ್ದನ್ನು, ಅನಂತರ ಗುಮಾಸ್ತರು ಕಾಲೇಜಿನ ಲೆಟರ್‌ಹೆಡ್‌ನಲ್ಲಿ ಟೈಪ್ ಮಾಡ್ತರೆ. ಡ್ರಾಫ್ಟ್ ಹಾಕುವುದಕ್ಕೆ ಒಳ್ಳೆಯ ಬಿಳಿಹಾಳೆಗಳನ್ನು ವ್ಯರ್ಥ ಮಾಡುವ ಬದಲು... ನಮ್ಮ ಕಛೇರಿಗೆ ಬೇರೆ ಬೇರೆ ಕಡೆಯಿಂದ ಪ್ರತಿ ನಿತ್ಯ ಬರುವ ಅಂಚೆ ಕವರ್‌ಗಳನ್ನು ಈ ರೀತಿ ಉಪಯೋಗಿಸಿಕೊಳ್ಳುವುದರಿಂದ... ತುಂಬಾ ಉಪಯುಕ್ತವಾದ ಕಾಗದವನ್ನು ವ್ಯರ್ಥವಾಗದ ಹಾಗೆ ಬಳಕೆ ಮಾಡಬಹುದು" ಎಂದಾಗ... ಪ್ರಿನ್ಸಿಪಾಲರ ಮಿತವ್ಯಯದ ಯೋಜನೆಯನ್ನು ಕಂಡು ಸಂತೋಷವಾಯಿತು.

ಮತ್ತೊಂದು ದಿನ ಸಂಜೆ ಐದು ಗಂಟೆಯ ವೇಳೆಯಲ್ಲಿ ಪ್ರಿನ್ಸಿಪಾಲರನ್ನು ನೋಡಲೆಂದು, ಅವರ ಕೊಠಡಿಗೆ ಹೋದಾಗ, ಅವರು ಅಲ್ಲಿರಲಿಲ್ಲ. ಅಲ್ಲಿಂದ ಹೊರಕ್ಕೆ ನಾನು ಬರುತ್ತಿದ್ದಂತೆಯೇ, ಕೆಮಿಸ್ಟ್ರಿ ಲ್ಯಾಬ್ ಕಡೆಯಿಂದ ವಿದ್ಯಾರ್ಥಿಗಳು ಹೊರಹೋಗುತ್ತಿರುವುದು ಕಾಣಿಸಿತು. ಪ್ರಥಮ ಪಿ.ಯು.ಸಿ. ವಿಜ್ಞಾನ ವಿಭಾಗದ ಥಿಯರಿ ಮತ್ತು ಲ್ಯಾಬ್ ತರಗತಿಗಳನ್ನು ಪ್ರಿನ್ಸಿಪಾಲರೇ ತೆಗೆದುಕೊಳ್ಳುತ್ತಿದ್ದರು. ಪ್ರಿನ್ಸಿಪಾಲರ ಬರುವಿಕೆಗಾಗಿ ಹತ್ತಾರು ನಿಮಿಷಗಳು ಕಾಲ ಕಾಯುತ್ತಿದ್ದರೂ, ಅವರು ಲ್ಯಾಬ್‌ನಿಂದ ಬರಲಿಲ್ಲ. ಕಛೇರಿಯ ಬಳಿ ಕಾಯುತ್ತ ನಿಲ್ಲುವ ಬದಲು, ಲ್ಯಾಬಿನಲ್ಲೇ ಮಾತನಾಡೋಣವೆಂದು, ಹತ್ತಿರದಲ್ಲೇ ಇದ್ದ ಲ್ಯಾಬ್ ಒಳಕ್ಕೆ ಹೋದೆನು. ಆಗ ಅಲ್ಲಿ ಒಬ್ಬ ವಿದ್ಯಾರ್ಥಿಯೂ ಇರಲಿಲ್ಲ. ಅಲ್ಲಿದ್ದ ನಾಲ್ಕಾರು ಉದ್ದನೆಯ ಟೇಬಲ್‌ಗಳ ಮೇಲೆ ವಿದ್ಯಾರ್ಥಿಗಳು ಇಟ್ಟು ಹೋಗಿದ್ದ ರಾಸಾಯನಿಕ ವಸ್ತುಗಳನ್ನು ಮತ್ತು ದ್ರಾವಣ ತುಂಬಿದ್ದ ಬಾಟಲ್‌ಗಳನ್ನು ರ್‍ಯಾಕ್‌ಗಳಲ್ಲಿ ಮತ್ತೆ ಕ್ರಮವಾಗಿ ಜೋಡಿಸಿಟ್ಟು ಅಗಲವಾದ ಬಟ್ಟೆಯಿಂದ ಟೇಬಲ್‌ಗಳನ್ನು ಒರೆಸಿ... ಶುಚಿ ಮಾಡುವ ಕಾರ್ಯದಲ್ಲಿ ಪ್ರಿನ್ಸಿಪಾಲರು ತಲ್ಲೀನರಾಗಿರುವುದನ್ನು ಕಂಡೆನು.

ಅವರ ಬಳಿಗೆ ಹೋಗಿ–

"ಇದೇನ್ ಸಾರ್... ನೀವು ಟೇಬಲ್‌ಗಳನ್ನು ಕ್ಲೀನ್ ಮಾಡ್ತ ಇದ್ದೀರಿ!" ಎಂದು ಅಚ್ಚರಿಯಿಂದ ಪ್ರಶ್ನಿಸಿದೆ.

ಟೇಬಲ್ ಒಂದನ್ನು ಒರೆಸುತ್ತಲೇ... ನನ್ನ ಕಡೆ ತಲೆಯೆತ್ತಿ ನೋಡಿ–

"ಯಾಕೆ... ನಾನು ಕ್ಲೀನ್ ಮಾಡಬಾರ್ದ?" ಎಂದು ಮರು ಪ್ರಶ್ನಿಸಿದರು.

"ಹಾಗಲ್ಲ ಸಾರ್... ಪ್ರಿನ್ಸಿಪಾಲರಾದ ನೀವು... ಈ ಕೆಲಸ ಮಾಡ್ತ ಇದ್ದೀರಲ್ಲ".

"ಇದು ಕೆಮಿಸ್ಟ್ರಿ ಲ್ಯಾಬ್... ನನ್ನ ಲ್ಯಾಬ್ ಅನ್ನು ಶುಚಿಯಾಗಿಟ್ಟುಕೊಳ್ಳುವುದು... ನನ್ನ ಕರ್ತವ್ಯ ಅಲ್ವೇನ್ರಿ?"

"ಕಾಲೇಜಿನಲ್ಲಿ ಜವಾನ ಇದ್ದಾನಲ್ಲ ಸಾರ್... ಅವನ ಕೈಯಲ್ಲಿ ಕ್ಲೀನ್ ಮಾಡ್ಸಿ ಸಾರ್".

"ಅವನಿಗೆ ಎಲ್ರಿ ಬಿಡುವಿದೆ... ಪ್ರತಿ ದಿನ ಬೆಳಿಗ್ಗೆ ಅವನು ಎಂಟು ಘಂಟೆಗೆ ಕಾಲೇಜಿಗೆ ಬಂದು... ಎಲ್ಲಾ ರೂಮುಗಳ ಕಸ ತೆಗೀಬೇಕು... ವೇಳೆಗೆ ಸರಿಯಾಗಿ ಬೆಲ್ ಹೊಡೀಬೇಕು... ಮೂರು ಲ್ಯಾಬ್‌ಗಳು ನಡೆಯುವಾಗ ಅಲ್ಲಿ ಸಹಾಯಕ ನಾಗಿರಬೇಕು...ಇವುಗಳ ಜೊತೆಗೆ ಕಛೇರಿಯ ಸಣ್ಣ ಪುಟ್ಟ ಕೆಲಸಗಳನ್ನು ಮಾಡಬೇಕು."

"ಅವನು ಎಷ್ಟೇ ಆದರೂ ಜವಾನ ಅಲ್ವೆ ಸಾರ್... ಅದನ್ನೆಲ್ಲಾ ಅವನು ಮಾಡ್ಲೇಬೇಕು."

"ಆದರೆ ಅವನು ನಮ್ಮಂಗೆ ಮನುಷ್ಯ ಅಲ್ವೇನ್ರಿ?... ನನ್ನ ನಿಮ್ಮ ಕೆಲಸಕ್ಕೆ ಪ್ರತಿ ನಿತ್ಯ ಒಂದು ವೇಳಾಪಟ್ಟಿ ನಿಗದಿಯಾಗಿರುವಂತೆ ... ಅವನ ಕೆಲಸಗಳಿಗೂ ಒಂದು ನಿಗದಿತ ವೇಳೆ ಇರಬೇಡ್ವೇನ್ರಿ? ಆದ್ದರಿಂದ ಅವನಿಗೆ ಪ್ರತಿ ದಿನ ಸಾಯಂಕಾಲ ನಾಲ್ಕೂವರೆ ಘಂಟೆಗೆ ಸರಿಯಾಗಿ ಕಾಲೇಜಿನಿಂದ ಮನೆಗೆ ಹೋಗುವುದಕ್ಕೆ ಅನುಮತಿ ಕೊಟ್ಟಿದ್ದೀನಿ... ಅದಿರ್ಲಿ... ಈಗ ನೀವು ಬಂದ ವಿಷಯ ಏನು?" ಎಂದು ಪ್ರಶ್ನಿಸಿ... ಮತ್ತೊಂದು ಟೇಬಲ್ ಅನ್ನು ಒರೆಸುವ ಕಾರ್ಯದಲ್ಲಿ ತೊಡಗಿದರು.

⌘

ನೀನೆಂಥ ವಿದ್ಯಾರ್ಥಿ



ಎಂದಿನಂತೆ ತರಗತಿಗೆ ಹೋದೆ. ಹಾಜರಾತಿಯನ್ನು ತೆಗೆದುಕೊಂಡು ಪಾಠವನ್ನು ಪ್ರಾರಂಭಿಸಿದೆ. ಸುಮಾರು ಹದಿನೈದು ಇಪ್ಪತ್ತು ನಿಮಿಷಗಳ ಕಾಲ ಪಾಠ ಸಾಗಿತ್ತು. ಅಷ್ಟರಲ್ಲಿ ಆ ಪಾಠಕ್ಕೆ ಸಂಬಂಧಿಸಿದ ಕೆಲವು ಮುಖ್ಯಾಂಶಗಳನ್ನು ಬರೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಹೇಳಿ, ನಿಧಾನವಾಗಿ ಕೆಲವು ವಾಕ್ಯಗಳನ್ನು ಹೇಳತೊಡಗಿದೆ. ತಕ್ಷಣ ನನ್ನ ಮುಂದೆ ಕುಳಿತಿದ್ದ ವಿದ್ಯಾರ್ಥಿ ಎದ್ದು ನಿಂತು–

"ಪೆನ್ ಕೊಡಿ ಸಾರ್" ಎಂದ. ನನಗೆ ವಿಪರೀತ ಕೋಪ ಬಂತು. ಆತನನ್ನು ಕುರಿತು–

"ಹೋಪ್‌ಲೆಸ್ ಫೆಲೋ... ಕಾಲೇಜಿನ ವಿದ್ಯಾರ್ಥಿಯಾಗಿ ಪೆನ್ ತರಬೇಕೆಂಬ ಪ್ರಜ್ಞೆ ಬೇಡವೇನಯ್ಯ ನಿಂಗೆ?.... ಇಟ್ಟಾಡಪ್ಪನ ಛತ್ರಕ್ಕೆ ಬಂದಂಗೆ ಬರೀ ಕೈಯಲ್ಲಿ ಬಂದಿದ್ದೀಯ.... ನಾನು ಪೆನ್ ಕೊಡೊಲ್ಲ.. ಕುಂತ್ಕೊ ಸುಮ್ನೆ".

ಆ ಹುಡುಗ ನಿಂತೇ ಇದ್ದ. ಮೃದುವಾದ ಧ್ವನಿಯಲ್ಲಿ ಮತ್ತೆ ಕೇಳಿದ–

"ಸಾರ್, ಪೆನ್ ಕೊಡಿ ಸಾರ್". ನನಗೆ ಬಹಳ ರೇಗಿತು. ಪೆನ್ನಿಗಾಗಿ ಆತ ನನ್ನನ್ನೇ ಕಾಡುತ್ತಿರುವುದನ್ನು ನೋಡಿ ಬೇಸರವೂ ಆಯಿತು.

"ಪೆನ್ ತರದೆ ಬಂದಿರೂ ನಿನಗ್ಯಾಕಯ್ಯಾ ನೋಟ್ಸ್ ಬೇಕು?.... ಪೆನ್ ಇಲ್ದೆ ಕಾಲೇಜಿಗೆ ಬಂದಿರೋ.... ನೀನೆಂಥ ವಿದ್ಯಾರ್ಥಿ? ...ನೀನೆಷ್ಟು ಕೇಳ್ಕೊಂಡ್ರೂ, ನಾನು ಪೆನ್ ಕೊಡೊಲ್ಲ. ಸುಮ್ನೆ ಕುಂತ್ಕೊಳ್ತಿಯೋ... ಇಲ್ಲ... ಹೊರಗಡೆ ಕಳಿಸಲೋ" ಎಂದು ಅಬ್ಬರಿಸಿದೆ.

ಆ ವಿದ್ಯಾರ್ಥಿ ನಿಂತೇ ಇದ್ದ. ಮತ್ತೆ ಮೊದಲಿನ ಮೃದುವಾದ ಧ್ವನಿಯಲ್ಲೇ ಆತ ನುಡಿದ.

"ಸಾರ್.... ನಿಮ್ಮ ಜೇಬಿನಲ್ಲಿರೋದು ನನ್ನ ಪೆನ್ನು ಸಾರ್."

ತಕ್ಷಣ ನನ್ನ ಜೇಬಿನ ಕಡೆ ನೋಡಿದೆ. ಪೆನ್ನನ್ನು ಜೇಬಿನಿಂದ ಹೊರಕ್ಕೆ ತೆಗೆದೆ... ಅದು ನನ್ನದಲ್ಲ; ಆ ಹುಡುಗನದು. ತರಗತಿಗೆ ಅಂದು ನಾನು ಪೆನ್ನನ್ನು ತಂದಿರಲಿಲ್ಲ. ಅಟೆಂಡೆನ್ಸ್ ಹಾಕುವುದಕ್ಕಾಗಿ ಮುಂದಿನ ಡೆಸ್ಕಿನಲ್ಲಿ ಕುಳಿತಿದ್ದ ಆ ವಿದ್ಯಾರ್ಥಿಯಿಂದ ಅವನ ಪೆನ್ನನ್ನು ಪಡೆದು.... ಆದಷ್ಟು ಬೇಗ ಹಾಜರಾತಿಯನ್ನು ಹಾಕಿ ಮುಗಿಸಿ, ಪಾಠವನ್ನು ಮಾಡಬೇಕೆನ್ನುವ ಆತುರದಲ್ಲಿ ಪೆನ್ನನ್ನು ಅವನಿಗೆ ಹಿಂತಿರುಗಿಸುವುದನ್ನು ಮರೆತು.... ನನ್ನ ಜೇಬಿಗೆ ಇಳಿಬಿಟ್ಟಿದ್ದೆ. ಪೆನ್ನನ್ನು ವಿದ್ಯಾರ್ಥಿಗೆ ಹಿಂದಿರುಗಿ ಕೊಡುತ್ತಾ,

"ದಯವಿಟ್ಟು ಕ್ಷಮಿಸಯ್ಯ" ಎಂದೆ.

ನನಗೆ ಗೊತ್ತಿಲ್ಲದಂತೆ ನನ್ನ ಧ್ವನಿ ಕಂಪಿಸುತ್ತಿತ್ತು... ಬೆವರ ಹನಿಗಳು ನನ್ನ ಹಣೆಯಲ್ಲಿ ಮೂಡಿದ್ದವು.

⌘

ಶಿಷ್ಯನ ಕಾಣಿಕೆ



ಒಂದು ಭಾನುವಾರ ಸಂಜೆ... ನನ್ನನ್ನು ನೋಡಲೆಂದು ಮನೆಗೆ ಬಂದ ಯುವಕನೊಬ್ಬನನ್ನು ಮುಂದಿನ ಕೊಠಡಿಯಲ್ಲಿ ಕುಳ್ಳಿರಿಸಿ, ಬಂದ ಉದ್ದೇಶವೇನೆಂದು ಕೇಳಿದೆ. ಆತ... ತನ್ನ ಕೈಚೀಲದಿಂದ ಒಂದು ನೋಟ್ ಬುಕ್ಕನ್ನು ಹೊರ ತೆಗೆಯುತ್ತಾ-

"ನಾನೊಂದು ನಾಟಕ ಬರೆದಿದ್ದೇನೆ... ಅದನ್ನ ನೀವು ಓದಿ ಅಭಿಪ್ರಾಯ ತಿಳಿಸ್ಬೇಕು ಸಾರ್" ಎಂದ.

"ಯಾವ ವಿಷಯ ಕುರಿತು ಬರೆದಿದ್ದೀರಿ... ನಾಟಕದ ಹೆಸರೇನು?"

"ಪ್ರೇಮ ಜ್ಯೋತಿ ಅಂತ ಸಾರ್".

"ಓಹೋ... ಯುವಕ ಯುವತಿಯರ ಪ್ರಣಯ ಪ್ರೇಮವನ್ನು ಕುರಿತು ಬರೆದಿದ್ದೀರಾ" ಎಂದು ಉದ್ಗಾರವೆಳೆದೆ.

"ಹೌದು ಸಾರ್" ಎಂದು ಹೇಳಿ, ನೋಟ್ ಬುಕ್ಕನ್ನು ನನ್ನ ಹಸ್ತ ನೀಡಿದನು. ಅದರ ಒಳಪುಟಗಳನ್ನು ನಾನು ತಿರುವಿ ನೋಡಿದಾಗ... ಹಸ್ತ ಪ್ರತಿಯು ಸುಮಾರು ಒಂದು ನೂರು ಪುಟಗಳಷ್ಟಿತ್ತು.

"ಇನ್ನೊಂದು ಹದಿನೈದು ದಿನ ಬಿಟ್ಕೊಂಡು ಬನ್ನಿ... ಅಷ್ಟರಲ್ಲಿ ಓದಿ... ನನ್ನ ಅಭಿಪ್ರಾಯ ತಿಳಿಸ್ತೇನೆ" ಎಂದೆ.

"ಹಾಗೇ ಆಗ್ಲಿ ಸಾರ್" ಎಂದು ಹೇಳಿ, ಆತ ಎದ್ದು ಹೋಗುತ್ತಿರುವಷ್ಟರಲ್ಲಿ, ಒಳಗಿನಿಂದ ನನ್ನ ಹೆಂಡತಿಯು ಇಬ್ಬರಿಗೂ ಕಾಫಿಯನ್ನು ತಂದು ಕೊಟ್ಟಳು. ಕಾಫಿಯನ್ನು ಕುಡಿಯುತ್ತ ಆತನನ್ನು ...ಒಂದೆರಡು ಕ್ಷಣಗಳ ಕಾಲ ಸೂಕ್ಷ್ಮವಾಗಿ ಅವಲೋಕಿಸಿದೆನು. ಆತ ಸುಮಾರು ಹದಿನೆಂಟು ಹತ್ತೊಂಬತ್ತರ ವಯೋಮಾನದವನು. ಅವನು ತೊಟ್ಟಿದ್ದ ಷರ್ಟು ಹಳೆಯದಾಗಿ, ಭುಜದ ಕಡೆ ಸ್ವಲ್ಪ ಹರಿದು, ಮತ್ತೆ ಹೊಲಿದಿರುವ ಗುರುತು ಎದ್ದು ಕಾಣುತ್ತಿತ್ತು; ಪ್ಯಾಂಟು ಕೂಡಾ ಬಹಳ ಶಿಥಿಲವಾಗಿತ್ತು.

"ಯಾವ ಕ್ಲಾಸಿನಲ್ಲಿದ್ದೀರಿ ನೀವು?" ಎಂದು ಪ್ರಶ್ನಿಸಿದೆ.

"ಈಗ ನಾನು ಕಾಲೇಜ್ನಲ್ಲಿ ಓದುತ್ತಿಲ್ಲ ಸಾರ್. ಪಿ.ಯು.ಸಿ. ಫೆಯ್ಲಾಗಿ ಊರ್ನಲ್ಲೇ ಇದ್ದೀನಿ".

"ಮತ್ತೆ ಯಾಕೆ ಪರೀಕ್ಷೆ ಕಟ್ಟಲಿಲ್ಲ?"

"ಇಂಗ್ಲಿಷ್ ಒಂದನ್ನು ಬಿಟ್ಟು... ಉಳಿದವೆಲ್ಲಾ ಆಗಿವೆ ಸಾರ್...ಇಂಗ್ಲಿಷನ್ನು ನಾಲ್ಕು ಸಾರಿ ಕಟ್ಟಿದರೂ ಪಾಸಾಗಲಿಲ್ಲ ಸಾರ್".

ಅವನ ಅನುತ್ತೀರ್ಣ ಫಲಿತಾಂಶವನ್ನು ಕೇಳಿ, ಅನುಕಂಪವನ್ನು ಸೂಚಿಸುವಂತೆ ನಾನು ಲೊಚಗುಟ್ಟಿದೆ. ಅಷ್ಟರಲ್ಲಿ ಕಾಫಿಯನ್ನು ಕುಡಿದು ಮುಗಿಸಿದ್ದ ಆತ "ಇನ್ನು ಹದಿನೈದು ದಿನಗಳಲ್ಲಿ ಮತ್ತೆ ಬಂದು ಕಾಣುವುದಾಗಿ" ತಿಳಿಸಿ, ಹಿಂತಿರುಗಿದ.

ಈಗ ನನ್ನ ಕೈಯಲ್ಲಿನ ನಾಟಕದ ಹಸ್ತಪ್ರತಿಗಿಂತ ಹೆಚ್ಚಾಗಿ... ಅದರ ಕರ್ತೃವಿನ ವಿದ್ಯಾಭ್ಯಾಸ ಜೀವನ ಮುರಿದು ಬಿದ್ದಿರುವುದರ ಕಡೆಗೆ... ನನ್ನ ಮನಸ್ಸು ಚಿಂತಿಸತೊಡಗಿತು. ಇವನ ಹಾಗೆ... ಇಂಗ್ಲಿಷ್ ಭಾಷೆಯೊಂದರಲ್ಲಿ ತೇರ್ಗಡೆಯಾಗದೆ, ಶಾಲಾ ಕಾಲೇಜುಗಳಿಂದ ಮಧ್ಯದಲ್ಲೇ ಹೊರಬಿದ್ದಿರುವ ವಿದ್ಯಾರ್ಥಿಗಳ ಸಂಖ್ಯೆ ನಮ್ಮಲ್ಲಿ ಲೆಕ್ಕವಿಲ್ಲದಷ್ಟಿವೆ. ಯಾವುದೇ ವ್ಯಕ್ತಿಗಾದರೂ ತನ್ನ ಸುತ್ತಮುತ್ತಣ ಪರಿಸರದಲ್ಲಿ ಕೇಳಿ ಬರದ ಯಾವುದೇ

ಭಾಷೆಯನ್ನಾಗಲಿ ಕಲಿತು... ಅದನ್ನು ಆಡುವ ಮತ್ತು ಬರೆಯುವ ದಿಶೆಯಲ್ಲಿ ಪರಿಣತಿ ಪಡೆಯುವುದು ಸುಲಭ ಸಾಧ್ಯವಲ್ಲ... ಪರಿಸರದಲ್ಲಿ ಬಳಕೆಯಲ್ಲಿಲ್ಲದ ಅನ್ಯಭಾಷಾ ಕಲಿಕೆಯಲ್ಲಿ ಯಶಸ್ಸನ್ನು ಪಡೆದು ಮುಂದೆ ಹೋಗುವವರಿಗಿಂತಲೂ ... ವಿಫಲಗೊಂಡು ಹಿಂದೆ ಬೀಳುವವರೇ ಹೆಚ್ಚು ಮಂದಿ.

ಗ್ರಾಮೀಣ ಪ್ರದೇಶಗಳಲ್ಲಿ ಹುಟ್ಟಿ ಬೆಳೆಯುವ ವಿದ್ಯಾರ್ಥಿಗಳಿಗೆ ಇಂಗ್ಲಿಶ್ ಭಾಷೆಯನ್ನು ಕ್ರಮಬದ್ಧವಾಗಿ ಕಲಿಸುವ ಯಾವುದೇ ವ್ಯವಸ್ಥೆಯಿಲ್ಲ ಮತ್ತು ಕಲಿಯುವ ಪರಿಸರವೂ ಇಲ್ಲ. ಆದುದರಿಂದಲೇ ತಾಯ್ನುಡಿಯಾದ ಕನ್ನಡದಲ್ಲಿ ನೂರಕ್ಕೆ ತೊಂಬತ್ತು ಅಂಕಗಳನ್ನು ಗಳಿಸುವ ಎಷ್ಟೋ ಮಂದಿ ಗ್ರಾಮೀಣ ವಿದ್ಯಾರ್ಥಿಗಳು... ಇಂಗ್ಲೀಷಿನಲ್ಲಿ ಕೇವಲ ಒಂಬತ್ತು ಅಂಕಗಳನ್ನು ಗಳಿಸಲಾಗದಷ್ಟು ಹೀನ ಸ್ಥಿತಿಯಲ್ಲಿದ್ದಾರೆ.

ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು, ಕನ್ನಡ ಮಾಧ್ಯಮದಲ್ಲಿ ಉಪನ್ಯಾಸಗಳನ್ನು ಕೇಳುವ, ಪುಸ್ತಕಗಳನ್ನು ಓದಿ ಗ್ರಹಿಸಿಕೊಳ್ಳುವ ಮತ್ತು ತಾವು ತಿಳಿದುಕೊಂಡ ವಿಚಾರಗಳನ್ನು ಕನ್ನಡದಲ್ಲಿ ಬರೆಯುವ ಅವಕಾಶವಿರುವಂಥ ಪರೀಕ್ಷೆಗಳಲ್ಲಿ ಮೊದಲನೆಯ ಅಟೆಮ್ಟ್‌ನಲ್ಲಿಯೇ... ಪ್ರಥಮ ದರ್ಜೆಯ ಅಂಕಗಳನ್ನು ಪಡೆಯುವಷ್ಟು ಬುದ್ಧಿ ಶಕ್ತಿಯುಳ್ಳ ನಮ್ಮ ಹಳ್ಳಿಗಾಡಿನ ಬಹಳಷ್ಟು ವಿದ್ಯಾರ್ಥಿಗಳು ಇಂಗ್ಲಿಶನ್ನು ಎಷ್ಟು ಸಾರಿ ಕಟ್ಟಿದರೂ ಪಾಸು ಮಾಡಲಾಗದೆ ವಿವಿಧ ಹಂತಗಳ ಪರೀಕ್ಷೆಗಳಲ್ಲಿ ಕುಸಿದು ಹೋಗುತ್ತಿದ್ದಾರೆ. ಹೀಗೆ ಹಲವಾರು ನಿಮಿಷಗಳ ಕಾಲ... ನಮ್ಮ ಗ್ರಾಮೀಣ ವಿದ್ಯಾರ್ಥಿಗಳ ಶಿಕ್ಷಣದ ಹಾದಿಯಲ್ಲಿ ತೊಡಕಾಗಿರುವ ಇಂಗ್ಲಿಶಿನ ಬಗ್ಗೆ ಚಿಂತಿಸುತ್ತಿದ್ದು... ಮತ್ತೆ ಹಸ್ತಪ್ರತಿಯನ್ನು ತೆರೆದು, ಅಂದೇ ಆ ನಾಟಕವನ್ನು ಓದಿ ಮುಗಿಸಿದೆ.

ಸುಮಾರು ಹದಿನೈದು ದಿನಗಳ ನಂತರ, ಆತ ಮತ್ತೆ ಮನೆಗೆ ಬಂದಾಗ, ನಾಟಕದ ಹಸ್ತ ಪ್ರತಿಯನ್ನು ಹಿಂತಿರುಗಿಸುತ್ತಾ–

"ನೀವು ಬರೆದಿರುವ ನಾಟಕ... ಸಂಪೂರ್ಣವಾಗಿ ಸಿನಿಮಾ ಶೈಲಿಯಲ್ಲಿದೆ. ನೀವು ಚಿತ್ರಿಸಿರುವ ಪ್ರಣಯ ಪ್ರೇಮದ ಸನ್ನಿವೇಶಗಳೆಲ್ಲವೂ ... ಈಗಾಗಲೇ ನೂರಾರು ಚಲನಚಿತ್ರಗಳಲ್ಲಿ ಬಂದಿವೆ, ಸಂಭಾಷಣೆಗಳು ಕೂಡ ಅಲ್ಲಿಯ ಪ್ರಭಾವಕ್ಕೆ ಒಳಗಾಗಿವೆ" ಎಂದಾಗ... ಆತನ ಮುಖದಲ್ಲಿ ನಿರಾಶೆಯ ಭಾವ ಎದ್ದು ಕಂಡಿತು. ಆತನಲ್ಲಿ ಬರವಣಿಗೆಯ ಬಗ್ಗೆ ಮತ್ತೆ ಆತ್ಮವಿಶ್ವಾಸವನ್ನು ಮೂಡಿಸಲೆಂದು–

ನೀವು ಇಂತಹ ನಾಟಕಗಳನ್ನು ಬರೆಯುವ ಬದಲು... ಹಳ್ಳಿಯಲ್ಲಿ ನೀವು ಕಂಡ ದೃಶ್ಯಗಳ... ಪಡೆದ ಅನುಭವಗಳ ಹಿನ್ನೆಲೆಯಲ್ಲಿ... ನಿಮ್ಮ ಮನಸ್ಸನ್ನು ಕಲಕಿದಂತಹ

ವಿಷಯಗಳನ್ನು ಆಯ್ಕೆ ಮಾಡಿಕೊಂಡು, ನಾಟಕಗಳನ್ನು ಬರೆಯಲು ಪ್ರಯತ್ನಿಸಿ" ಎಂದು ಸಾಕಷ್ಟು ಸುದೀರ್ಘವಾಗಿ ಸಲಹೆಯನ್ನು ನೀಡಿದೆ. ಒಂದೆರಡು ಕ್ಷಣಗಳ ಕಾಲ ಆತ... ತನ್ನ ಹಸ್ತ ಪ್ರತಿಯನ್ನೇ ನೋಡುತ್ತ, ಸುಮ್ಮನೆ ಕುಳಿತಿದ್ದ. ಮತ್ತೆ ನಾನೇ ಮಾತುಗಳನ್ನು ಪ್ರಾರಂಭಿಸಿ–

"ಊರಿನಲ್ಲಿ ಈಗೇನ್ ಮಾಡ್ಕೊಂಡು ಇದ್ದೀರಿ?" ಎಂದು ಪ್ರಶ್ನಿಸಿದೆ.


"ನಮ್ಮ ತಂದೆಯವರದು ಮುಕ್ಕಾಲು ಎಕರೆ ಗದ್ದೆ ಇದೆ. ಅದನ್ನ ವ್ಯವಸಾಯ ಮಾಡ್ಕೊಂಡು ಇದ್ದೀನಿ ಸಾರ್" ಎಂದು ಉತ್ತರಿಸಿ, ಹಸ್ತ ಪ್ರತಿಯನ್ನು ತನ್ನ ಕೈಚೀಲದೊಳಕ್ಕೆ ಇಟ್ಟುಕೊಂಡು, ಮತ್ತೆ ಅದೇ ಚೀಲದೊಳಗಿಂದ ಹಣ್ಣುಗಳನ್ನು ಹೊರ ತೆಗೆದು–

"ನಮ್ಮೂರ ಹೊಲಮಾಳದಲ್ಲಿ ಒಂದು ಬ್ಯಾಲದ ಹಣ್ಣಿನ ಮರ ಇದೆ ಸಾರ್. ಅದರ ಹಣ್ಣು ತುಂಬಾ ರುಚಿಯಾಗಿದೆ. ನಿಮಗೆ ಕೊಡಬೇಕು ಅಂತ ಆಸೆಯಾಯ್ತು. ಅದಕ್ಕೆ ಚೆನ್ನಾಗಿ ಬಲಿತ ಕಾಯಿಗಳನ್ನು ಕಿತ್ತು... ಅಡೆ ಹಾಕಿದ್ದೆ ಸಾರ್... ಈಗ ಇವು ಚೆನ್ನಾಗಿ ಹಣ್ಣಾಗಿವೆ... ತಕೊಳಿ ಸಾರ್" ಎಂದು ಹೇಳುತ್ತಾ... ಎರಡು ಹಣ್ಣುಗಳನ್ನು ನನ್ನ ಕೈಯಲ್ಲಿ ಇಟ್ಟುದ್ದಲ್ಲದೇ... ಇನ್ನು ಐದಾರು ಹಣ್ಣುಗಳನ್ನು ಚೀಲದಿಂದ ಹೊರ ತೆಗೆದು... ಅಲ್ಲಿದ್ದ ಒಂದು ಸ್ಟೂಲಿನ ಮೇಲಿಟ್ಟು ... ಕೈಮುಗಿದು ಹೊರಟ.

ಬರಿಗಾಲಲ್ಲಿ ಊರಿಗೆ ಹಿಂತಿರುಗುತ್ತಿದ್ದ ಶಿಷ್ಯನನ್ನೇ ಕೆಲವು ಕ್ಷಣ ಗಮನಿಸುತ್ತಿದ್ದು... ಅನಂತರ ನನ್ನ ಕೈಗಳಲ್ಲಿ ಗಮಗಮಿಸುತ್ತಿದ್ದ ಹಣ್ಣುಗಳನ್ನು ನೋಡುತ್ತಿದ್ದಂತೆಯೇ... ಒಂದು ಕ್ಷಣ... ನಾನಾ ಬಗೆಯ ಭಾವಗಳ ಒತ್ತಡಕ್ಕೆ ಒಳಗಾಗಿ... ನನ್ನ ಕಣ್ಣುಗಳು ತುಂಬಿ ಬಂದವು.

⌘

ಇದು ತಪ್ಪಾ ಸಾರ್



ಬೆಂಗಳೂರಿಗೆ ಹೋಗಲೆಂದು ಒಂದು ದಿನ ಮದ್ದೂರಿನ ಬಸ್ ನಿಲ್ದಾಣದಲ್ಲಿ ನಿಂತಿದ್ದೆನು. ಆಗ ಅಲ್ಲಿಗೆ ಬಂದ ವಿದ್ಯಾರ್ಥಿ ಮಿತ್ರರೊಬ್ಬರು–

"ನಮಸ್ಕಾರ ಸಾರ್... ಚೆನ್ನಾಗಿದ್ದೀರ..." ಎಂದು ವಿಚಾರಿಸಿಕೊಂಡರು.

"ನಮಸ್ಕಾರ ... ಬನ್ನಿ ... ನೀವು ಚೆನ್ನಾಗಿದ್ದೀರಾ... ಈಗ ಎಲ್ಲಿದ್ದೀರಿ?" ಎಂದೆ.

ಕಳೆದ ಎಂಟು ಹತ್ತು ವರ್ಷಗಳ ಹಿಂದೆ ನಮ್ಮ ಕಾಲೇಜಿನ ಅತ್ಯುತ್ತಮ ಚರ್ಚಾಪಟುಗಳಲ್ಲಿ ಒಬ್ಬರಾಗಿದ್ದ ಇವರು... ಅಂತರ ಕಾಲೇಜಿನ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪಡೆದಿದ್ದ ಪ್ರಥಮ ಬಹುಮಾನಗಳಿಗೆ ಲೆಕ್ಕವೇ ಇರಲಿಲ್ಲ. ಕಾಳಮುದ್ದನದೊಡ್ಡಿಯ ಭಾರತಿ ಕಾಲೇಜಿನಲ್ಲಿ ಪದವಿಯನ್ನು ಪಡೆದು, ಅನಂತರ

ನಗರದಲ್ಲಿ ಸ್ನಾತ್ತಕೋತ್ತರ ಪದವಿಯನ್ನು ಗಳಿಸಿ, ಈಗ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವುದು. ಈ ಮೊದಲೇ ನನಗೆ ತಿಳಿದಿತ್ತು.

"ಈಗ ನಾನು ಮಂಗಳೂರಿನಲ್ಲಿದ್ದೇನೆ ಸಾರ್. ಈ ರಜೆಯಲ್ಲಿ ಒಂದು ಸಾರಿ ನಿಮ್ಮನ್ನು ಭೇಟಿ ಮಾಡ್ಬೇಕು ಅನ್ಕೊಂಡಿದ್ದೆ ಸಾರ್."

"ಯಾಕೆ... ಏನು ವಿಷಯ?"

"ಸ್ವಲ್ಪ ಮಾತಾಡ್ಬೇಕಿತ್ತು ಸಾರ್... ಈಗ ನೀವು ಬೆಂಗಳೂರಿಗೆ ಹೊರಟಿದ್ದೀರಿ ಅಂತ ಕಾಣ್ಸುತ್ತೆ ಸಾರ್".

"ಹೌದು... ಬೆಂಗಳೂರಿಗೆ ಹೋಗ್ಬೇಕಾಗಿದೆ, ಆದರೆ ಅಂಥ ಅರ್ಜೆಂಟೇನಿಲ್ಲ. ಒಂದು ಅರ್ಧ ಗಂಟೆ ತಡವಾಗಿ ಹೋದ್ರು ನಡೆಯುತ್ತೆ... ಬನ್ನಿ ಇಲ್ಲೇ... ಅದೇನ್ ಮಾತಾಡೋಣ" ಎಂದು ಹೇಳಿ... ರಸ್ತೆಯ ಮಗ್ಗುಲಿಂದ ಸ್ವಲ್ಪ ದೂರ ಸರಿದು ನಿಂತು ಕೊಂಡೆನು. ಈಗ ಅವರು ವಿಷಯವನ್ನು ಪ್ರಸ್ತಾಪಿಸತೊಡಗಿದರು.

"ನನ್ನ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟ ಒಂದು ವಿಷಯವನ್ನು ಹೇಳಿಕೊಂಡು... ಅದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಯಬೇಕಿತ್ತು ಸಾರ್."

"ಅದೇನ್ ಹೇಳಿ"

"ನಾನು ಮೊದಲು ಒಂದೆರಡು ವರ್ಷ ಪಾರ್ಟ್ ಟೈಮ್ ಲೆಕ್ಚರರ್ ಆಗಿದ್ದೆ ಸಾರ್. ಆಮೇಲೆ ಪುಲ್ ಟೈಮ್ ಲೆಕ್ಚರರ್ ಪೋಸ್ಟ್ ಸಿಕ್ತು. ನನ್ನ ಕೆಲಸ ಖಾಯಂ ಆಗೋದುಕ್ಕೆ ಐವತ್ತು ಸಾವಿರ ರೂಪಾಯಿ ಖರ್ಚಾಯ್ತು. ಆ ಟೈಮ್ನಲ್ಲಿ ದುಡ್ಡನ್ನ ಖರ್ಚು ಮಾಡ್ದೆ ಹೋಗಿದ್ರೆ... ಕೆಲಸ ಸಿಕ್ತಿರಲಿಲ್ಲ. ಅದಕ್ಕೆ ಅನಿವಾರ್ಯವಾಗಿ ಲಂಚ ಕೊಟ್ಟು ಕೆಲಸ ತಕೊಂಡೆ ಸಾರ್."

"ನೀವೇ ಅದೃಷ್ಟವಂತರು ... ಆಗ ಕೆಲವರು ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳನ್ನು ಮೊದಲೇ ಕೊಟ್ಟಿದ್ರು... ಕೆಲಸ ಸಿಗಲಿಲ್ವಂತೆ... ನಿಜವೇನು?"

"ಹೌದು ಸಾರ್... ನನ್ನದು ಒಳ್ಳೆ ಮೆರಿಟ್ ಇದ್ದುದರಿಂದ ... ಕಡಿಮೆ ದುಡ್ಡಿನಲ್ಲೇ ಆಯ್ತು ಸಾರ್... ಈಗ ನನ್ನನ್ನು ಇನ್ನೊಂದು ಸಮಸ್ಯೆ ಕಾಡ್ತಾಯಿದೆ ಸಾರ್."

"ಏನು... ವರ್ಗಾವಣೆಗೆ ಸಂಬಂಧಪಟ್ಟಿದ್ದೆ?"

"ಅದಲ್ಲ ಸಾರ್... ನಾನು ಕಳೆದ ವರ್ಷ ಮದುವೆಯಾದೆ. ಆಗ ಹೆಣ್ಣಿನ ಕಡೆಯವರಿಂದ ಐವತ್ತು ಸಾವಿರ ಈಸ್ಕೊಂಡು... ನಾನು ಮಾಡಿದ್ದ ಸಾಲವನ್ನು ತೀರಿಸ್ಕೊಂಡೆ ಸಾರ್... ಈ ರೀತಿ ಮಾಡಿದ್ದು ತಪ್ಪಾ ಸಾರ್?" ಎಂದು ಪ್ರಶ್ನಿಸಿ... ಉತ್ತರಕ್ಕಾಗಿ ಕಾತರಿಸಿದರು.

ಈ ಹಿಂದೆ ಇವರು ನಮ್ಮ ಕಾಲೇಜಿನ ಚರ್ಚಾಗೋಷ್ಠಿಗಳಲ್ಲಿ... ಎಲ್ಲಾ ಬಗೆಯ ಭ್ರಷ್ಟಾಚಾರವನ್ನು ಖಂಡಿಸುತ್ತಾ... ವರದಕ್ಷಿಣೆಯ ಪಿಡುಗನ್ನು ವಿರೋಧಿಸುತ್ತಾ... ಆಡುತ್ತಿದ್ದ ಕ್ರಾಂತಿಕಾರಕವಾದ ಮಾತುಗಳು ನೆನಪಿಗೆ ಬಂದವು. ಅಂದಿನ ಮಾತುಗಳ ಮತ್ತು ಇಂದಿನ ಕ್ರಿಯೆಯ ನಡುವಣ ಅಂತರವನ್ನು ಕುರಿತು ಚಿಂತಿಸುತ್ತಾ... ಕ್ಷಣ ಕಾಲ ಸುಮ್ಮನಾದೆ.

"ಇದ್ಯಾಕ್ ಸಾರ್ ಸುಮ್ಮನಾಗ್ಬುಟ್ರಿ... ನಿಮ್ಮ ಅಭಿಪ್ರಾಯವನ್ನು ದಯವಿಟ್ಟು ತಿಳಿಸಿ ಸಾರ್" ಎಂದು ಒತ್ತಾಯಿಸಿದರು.

"ನೋಡಿ... ಮನುಷ್ಯರು ಮಾಡುವ ಕಾರ್ಯಗಳೆಲ್ಲವೂ ಎರಡು ನೆಲೆಗಳಲ್ಲಿ ವಿಶ್ಲೇಷಣೆಗೆ ಒಳಗಾಗ್ತವೆ. ಒಂದು... ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ; ಮತ್ತೊಂದು... ಸಮುದಾಯದ ಸಾಮಾಜಿಕ ನೆಲೆಯಲ್ಲಿ. ಆಗ ನೀವು ಲಂಚ ಕೊಡದೇ ಸುಮ್ಮನಾಗಿದ್ರೆ... ಕೆಲಸವೇ ಸಿಕ್ತಿರಲಿಲ್ಲ... ಸಾಲ ತೀರಿಸ್ದೇದ್ರೆ... ನೀವು ಬಹಳಷ್ಟು ವರ್ಷಗಳ ಕಾಲ ಹಣಕಾಸಿನ ತೊಂದರೆಗೆ ಗುರಿಯಾಗ್ತಿದ್ರಿ. ಆದ್ದರಿಂದ ನಿಮ್ಮ ನೆಲೆಯಿಂದ ನೋಡುವಾಗ ... ನೀವು ಲಂಚ ಕೊಟ್ಟಿದ್ದಾಗಲಿ ಮತ್ತು ವರದಕ್ಷಿಣೆ ಪಡೆದಿದ್ದಾಗಲಿ ತಪ್ಪಲ್ಲ... ಆದರೆ ಸಮಾಜದ ದೃಷ್ಟಿಯಲ್ಲಿ ಇವೆರಡೂ ತಪ್ಪೆ."

"ಹಣ ಕೊಟ್ಟು... ಕೆಲಸ ಪಡೆಯುವಂಥ ಭ್ರಷ್ಟಾಚಾರ ನಮ್ಮ ಸಮಾಜದಲ್ಲಿ ಇರುವುದರಿಂದಲ್ಲವೇ ಸಾರ್... ನಾನು ಸಾಲ ಮಾಡಿ ಲಂಚ ಕೊಟ್ಟಿದ್ದು."

"ಹಾಗಾದ್ರೆ... ಒಬ್ಬ ಕಳ್ಳ, ದರೋಡೆಕೋರ, ಲಂಚಕೋರ ಮತ್ತು ಪ್ರತಿಯೊಬ್ಬ ಭ್ರಷ್ಟಾಚಾರಿಯು ಕೂಡ... ತನ್ನ ಕೃತ್ಯಗಳಿಗೆ... ಸಮಾಜದಲ್ಲಿನ ಒಂದಲ್ಲ ಒಂದು ಬಗೆಯ ದೋಷಗಳನ್ನೇ ಎತ್ತಿ ಹಿಡಿಯುತ್ತಾನೆ... ಆಗ ಅವರನ್ನೂ ನಾವು ಒಪ್ಪಿಕೊಳ್ಳಬೇಕಲ್ಲವೇ?"

"ಇದೇನ್ ಸಾರ್... ಹೀಗೆ ಹೇಳ್ತಾ ಇದ್ದೀರಿ!"

"ನೋಡಿ... ನನ್ನ ಮಾತುಗಳ ಸ್ಪಷ್ಟತೆಗಾಗಿ ನಿಮಗೆ... ನನ್ನದೇ ಒಂದು ಉದಾಹರಣೆಯನ್ನು ಕೊಡ್ತೀನಿ. ನಾನು ಕೆಲಸ ಮಾಡ್ತ ಇರುವ ವಿದ್ಯಾಸಂಸ್ಥೆಯಲ್ಲಿ ಒಬ್ಬ ಜಾಡಮಾಲಿ ಇದ್ದಾನೆ. ಅವನ ತಿಂಗಳ ವೇತನ ಕೇವಲ ಆರು ನೂರು ರೂಪಾಯಿ. ಅವನಿಗಿಂತ ಇಪ್ಪತ್ತೈದು ಪಟ್ಟು ಹೆಚ್ಚಾಗಿ ವೇತನವನ್ನು ಪಡೆಯುತ್ತಿರುವ ನಾನು... ಕಾಲೇಜಿಗೆ ಹಾಜರಾಗದೆ, ತರಗತಿಗಳನ್ನು ಬಹಿಷ್ಕರಿಸಿ, ನನ್ನ ಸಂಬಳದ ಹೆಚ್ಚಳಕ್ಕಾಗಿ ಮುಷ್ಕರ ಮಾಡಿದ್ದು... ನಿಮಗೆ ಗೊತ್ತಿದೆ. ಆಗ ನಾನು ನನಗಿಂತ ಹೆಚ್ಚಾಗಿ ವೇತನ ಪಡೆಯುತ್ತಿರುವವರ ಕಡೆಗೆ ಬೆರಳು ತೋರಿಸುತ್ತಾ... ನನ್ನ ಬೇಡಿಕೆಗಳೆಲ್ಲವನ್ನೂ

ಸಮರ್ಥಿಸಿಕೊಂಡೆ. ಆದರೆ ನನಗಿಂತ ಕಡಿಮೆ ಆದಾಯವುಳ್ಳ ಕೋಟಿಗಟ್ಟಲೆ ಬಡವರಾದ ಶ್ರಮಜೀವಿಗಳ ಬಗ್ಗೆ... ನಾನು ಒಂದು ಕ್ಷಣವಾದರೂ ಆಲೋಚನೆ ಮಾಡಿದ್ದೀನಾ?... ಸದಾ ಕಾಲ ದುಡಿಯುತ್ತಿದ್ದರೂ ಅವರ ಜೀವನ ಮಟ್ಟ ಯಾಕೆ ಉತ್ತಮವಾಗಲಿಲ್ಲ ಅಂತ ಕಳವಳಪಟ್ಟಿದ್ದೀನಾ?"

"ಅವರ ಬಗ್ಗೆ ಚಿಂತಿಸಬೇಕಾದವರು ನೀವು ನಾವಲ್ಲ ಸಾರ್... ಅವರೇ ಸಂಘಟಿತರಾಗಿ ಹೋರಾಟ ಮಾಡ್ಬೇಕು ಸಾರ್".

"ಏನ್ರಿ ಹೋರಾಟ ಮಾಡ್ತರೆ?... ದೇಶದ ಸಂಪತ್ತಿನಲ್ಲಿ ಬಹು ದೊಡ್ಡ ಪಾಲನ್ನು ಕಾನೂನುಬದ್ಧವಾಗಿಯೇ ಗೋರಿ ಗುಡ್ಡೆ ಹಾಕಿಕೊಳ್ಳುತ್ತಿರುವ ರಾಜಕಾರಣಿಗಳ, ಕೈಗಾರಿಕೋದ್ಯಮಿಗಳ, ವ್ಯಾಪಾರಸ್ಥರ ಮತ್ತು ಸರ್ಕಾರಿ ನೌಕರರ ರಕ್ಷಣೆಗೆ ನ್ಯಾಯಾಂಗ ಮತ್ತು ಪೋಲಿಸ್ ಬಲಗಳೆಲ್ಲವೂ ಇರುವಾಗ ...ದುಡಿಯುವ ಶ್ರಮಜೀವಿಗಳಾದ ಬಡವರ ಹೋರಾಟಕ್ಕೆ ಹೇಗೆ ತಾನೆ ಜಯ ಸಿಗುತ್ತೆ?"

"ಸಾರ್... ನನ್ನನ್ನು ಕಾಡುತ್ತಿರುವ ಸಮಸ್ಯೆಗೂ... ನೀವು ಹೇಳುತ್ತಿರುವ ವಿಚಾರಗಳಿಗೂ... ಏನ್ ಸಾರ್ ಸಂಬಂಧ?"


"ಸಂಬಂಧ ಇರೋದು ಅಕ್ಷರವಂತರಾಗಿರುವ ನಮ್ಮ ಮನೋಧರ್ಮ ಮತ್ತು ವಾದದ ಸರಣಿಯಲ್ಲಿ... ನಾನು ಹೇಗೆ ಇನ್ನೂ ಹೆಚ್ಚಿನ ಸಂಬಳವನ್ನು ಸಮರ್ಥಿಸಿ ಕೊಳ್ಳುತ್ತೇನೆಯೋ ಹಾಗೆಯೇ ನೀವು ಕೂಡ ಲಂಚ ಕೊಟ್ಟಿದ್ದನ್ನ ಮತ್ತು ವರದಕ್ಷಿಣೆ ತಕೊಂಡಿದ್ದನ್ನ ಸಮರ್ಥಿಸಿಕೊಳ್ತೀರಲ್ಲವೇ?"

"ಹೌದು ಸಾರ್" ಎಂದರು.

"ಅದನ್ನೇ ನಾನು ಹೇಳ್ತಾ ಇರೋದು... ನಾವು ತರ್ಕಬದ್ದವಾಗಿ ಆಡುವ ಮಾತುಗಳೆಲ್ಲವೂ... ನಮ್ಮ ಕ್ರಿಯೆಗಳನ್ನು ಸಮರ್ಥಿಸಿಕೊಳ್ಳುವ ಸಾಧನಗಳಾಗಿವೆಯೇ ಹೊರತು... ಸತ್ಯವನ್ನು ತಿಳಿಯುವ ಅಥವಾ ತಿಳಿಸುವ ಸಾಧನಗಳಾಗಿಲ್ಲ" ಎಂದಾಗ... ಅವರು ಮೌನದಿಂದ ತಲೆಯಾಡಿಸಿದರು. ಅದು ನನ್ನ ಅಭಿಪ್ರಾಯಕ್ಕೆ ಸೂಚಿಸಿದ ಸಮ್ಮತಿಯೋ ಅಥವಾ ವಿರೋಧವೋ ಎಂಬುದು ನನಗೆ ಸ್ಪಷ್ಟವಾಗಲಿಲ್ಲ.

⌘

ಯಾರ್ ಕೇಳ್ತಾರೆ ಸಾರ್



ಇಂದಿಗೆ ಸುಮಾರು ಹದಿನೈದು ವರ್ಷಗಳ ಹಿಂದೆ ನಡೆದ ಘಟನೆಯಿದು. ಒಂದು ದಿನ ಕಾಲೇಜಿನ ಅಧ್ಯಾಪಕರ ಕೊಠಡಿಯಲ್ಲಿ ಓದುತ್ತ ಕುಳಿತಿದ್ದಾಗ ಸುಮಾರು ಮೂವತ್ತು ಮೂವತ್ತೈದು ವರ್ಷ ವಯಸ್ಸಿನ ಇಬ್ಬರು ಅಪರಿಚಿತ ಗಂಡಸರು ನನ್ನನ್ನು ಕಾಣಲೆಂದು ಬಂದರು. ಅವರ ಹೆಸರು ಮತ್ತು ಊರನ್ನು ಕೇಳಿ ತಿಳಿದ ನಂತರ, ಅವರು ಬಂದ ಉದ್ದೇಶವನ್ನು ವಿಚಾರಿಸಿದೆ.

"ಮುಂದಿನ ಭಾನುವಾರ ಮಂಡ್ಯದ ರೈತ ಸಭಾಂಗಣದಲ್ಲಿ ನನ್ನ ತಮ್ಮನ ಮದುವೆ ಇದೆ ಸಾರ್. ಅದಕ್ಕೆ ನೀವು ಬರ್ಬೇಕು."

“ಬಿಡುವಾಗಿದ್ರೆ ಬರ್ತೀನಿ.”

“ಬರುವುದು ಮಾತ್ರವಲ್ಲ ಸಾರ್... ನೀವೇ ನಿಂತ್ಕೊಂಡು ಮದುವೆ ಮಾಡಿಸ್ಬೇಕು.”

ಈಗ ನಾನು ಗಾಬರಿಗೊಂಡೆ. ಇದುವರೆಗೂ... ಅಲ್ಲಿ ಇಲ್ಲಿ ಶಾಲಾ ಕಾಲೇಜುಗಳಿಗೆ ಭಾಷಣಕ್ಕೆಂದು ಹೋಗುತ್ತಿದ್ದ ನನಗೆ, ಇದು ಹೊಸ ಬಗೆಯ ಆಹ್ವಾನವಾಗಿತ್ತು. ಮದುವೆಯಂಥ ಒಂದು ಸಾಂಸ್ಕೃತಿಕ ಆಚರಣೆಯಲ್ಲಿ ಮುಂದಾಳಾಗಿ ನಿಲ್ಲುವುದಕ್ಕೆ ನನ್ನ ಮನಸ್ಸು ಸಿದ್ಧವಾಗಿರಲಿಲ್ಲ.

“ನಾನು ಬರುವುದಕ್ಕೆ ಆಗೊಲ್ಲ, ನೀವು ಬೇರೆ ಯಾರನ್ನಾದರೂ ಕರೆಯಿರಿ.”

“ಇಲ್ಲ ಅನ್ಬೇಡಿ ಸಾರ್.... ನೀವು ಬರ್ಲೇಬೇಕು” ಎಂದು ಇಬ್ಬರೂ ಒತ್ತಾಯ ಮಾಡತೊಡಗಿದರು. ಅವರ ಒತ್ತಾಯದಿಂದ ಮತ್ತಷ್ಟು ಗೊಂದಲಕ್ಕೆ ಒಳಗಾದ ನಾನು.. ಈಗ ನನ್ನ ಮನಸ್ಸಿನ ತುಮುಲವನ್ನು ಅವರ ಮುಂದೆ ಬಹಿರಂಗ ಪಡಿಸಿದೆ.

“ನೋಡಿ ಎಲ್ಲರಂತೆ ನಾನು ಕೂಡ ಸಂಪ್ರದಾಯಬದ್ಧನಾಗಿ ಬ್ರಾಹ್ಮಣ ಪುರೋಹಿತರ ನೇತೃತ್ವದಲ್ಲಿ ಹೆಣ್ಣಿನ ಕಡೆಯವರ ಖರ್ಚಿನಲ್ಲಿ ಛತ್ರವೊಂದರಲ್ಲಿ ಮದುವೆಯಾದವನು. ಇದುವರೆಗೂ ನಮ್ಮ ಕುಟುಂಬದಲ್ಲಿ ಯಾರೊಬ್ಬರ ಮದುವೆಯೂ ಸರಳವಾಗಿ ನಡೆದಿಲ್ಲ. ಹೀಗಿರುವಾಗ ನನ್ನಂಥವ್ನು ಅಂಥ ಕಡೆ ಮುಂದಾಳಾಗಿ ನಿಲ್ಲಬಾರದು” ಎಂದೆ.

“ಇದ್ಯಾಕೆ ಸಾರ್, ಹಿಂಗೆ ಹಿಂಜರಿತೀರಿ! ನೀವು ಸರಳವಾಗಿ ಮದುವೆ ಆಗ್ದೇದ್ರೆ ಏನಾಯ್ತು? ಈಗಿನ ಯುವಕರು ಮೌಢ್ಯದ ಸಂಪ್ರದಾಯಗಳನ್ನು ಬಿಟ್ಟು ದುಂದು ವೆಚ್ಚ ಮಾಡದೆ ಸರಳವಾಗಿ ಮದುವೆ ಆಗ್ತಾ ಇರೋದಕ್ಕೆ, ಹಿರಿಯೋರಾಗಿ ನೀವು ಉತ್ತೇಜನ ಕೊಟ್ಟಂತೆ ಆಗುತ್ತೆ. ದಯವಿಟ್ಟು ಬಂದು ನಿಂತ್ಕೊಂಡು ಮದುವೆ ಮಾಡ್ಸಿ ಸಾರ್.”

“ಇಲ್ಲ ಖಂಡಿತ ನಾನು ಬರೊಲ್ಲ. ಇದಕ್ಕೆ ನನ್ನ ಮನಸ್ಸು ಒಪ್ತೊಲ್ಲ” ಎಂದು ನಿರಾಕರಿಸುತ್ತ ಒಂದು ಸಲಹೆಯನ್ನು ನೀಡಿದೆ.

“ಈಗಾಗ್ಲೆ ಸರಳವಾಗಿ ಮದುವೆಯಾಗಿರುವವರು ಬೇಕಾದಷ್ಟು ಮಂದಿ ಇದ್ದಾರೆ. ಅವರಲ್ಲಿ ಒಬ್ಬರನ್ನು ಮುಂದೆ ಇಟ್ಕೊಂಡು ನಿಮ್ಮ ತಮ್ಮನ ಮದುವೆ ಮಾಡಿಸಿ.”

“ನೀವು ಹೇಳ್ದಂಗೆ ಸರಳವಾಗಿ ಮದುವೆಯಾದವರು...... ಬೇಕಾದಷ್ಟು ಜನ ಅವ್ರೆ ಸಾರ್. ಆದರೆ ಅವರಿಗೆ ಸಭೆಯಲ್ಲಿ ನಿಂತು ನಾಲ್ಕು ಜನದ ಮುಂದೆ ಚೆನ್ನಾಗಿ ಮಾತನಾಡುವುದಕ್ಕೆ ಬರೊಲ್ಲ.”

"ಮದುವೆಯ ಸಮಾರಂಭದಲ್ಲಿ ಮಾತುಗಳ ಅಗತ್ಯವೇನು?... ಆಚರಣೆ ಮುಖ್ಯವಲ್ಲವೇ?"

"ಸರಳ ಮದುವೆಗಳ ಬಗ್ಗೆ ಹೆಚ್ಚು ಪ್ರಚಾರವಾಗ್ಬೇಕು ಅನ್ನೋದು ನಮ್ಮ ಆಸೆ ಸಾರ್. ಇವತ್ತಿನ ಸಂದರ್ಭದಲ್ಲಿ ಅದರ ಅಗತ್ಯವನ್ನು ಕುರಿತು ಸ್ವಲ್ಪ ಚೆನ್ನಾಗಿ ಮಾತನಾಡುವವರು ಬೇಕು ಅದಕ್ಕೆ ನಿಮ್ಮ ಹತ್ತಿರಕ್ಕೆ ಬಂದೊ".

"ನಿಮ್ಮ ಆಸೆಯೇನೊ ಒಳ್ಳೆಯದೆ.... ಆದರೆ ನಮ್ಮ ವೈಯಕ್ತಿಕ ಜೀವನದಲ್ಲಿ ನಾವು ಯಾವುದನ್ನು ಆಚರಣೆಗೆ ತಂದಿಲ್ಲವೊ... ಅದನ್ನು ಸಾರ್ವಜನಿಕ ವೇದಿಕೆಯಲ್ಲಿ ನಿಂತ್ಕೊಂಡು ಸಮಾಜದಲ್ಲಿ ಎಲ್ಲರಿಗೂ ಇಂಥ ಆದರ್ಶಗಳನ್ನು ಪಾಲಿಸುವುದು ಒಳ್ಳೆಯದು ಅಂತ ಭಾಷಣ ಮಾಡಬಾರದು. ಅಷ್ಟಾದರೂ ನಮಗೆ ನಾಚಿಕೆ ಇರಬೇಕು."

"ನೀವು ಹೇಳೂದು ಸರಿ ಸಾರ್. ಆದರೆ ಈಗ ಎಲ್ಲರೂ ಮಾಡ್ತ ಇರೋದು ಇದನ್ನೆ ಅಲ್ವ ಸಾರ್!... ಮನೇಲಿ ಮಾಡೋದು ಒಂದು... ವೇದಿಕೆಯಲ್ಲಿ ಮಾತನಾಡೋದೆ ಮತ್ತೊಂದು!.... ಈ ಸತ್ಯ ನಮ್ಮ ಜನಕ್ಕೂ ಚೆನ್ನಾಗಿ ಗೊತ್ತು ಸಾರ್" ಎಂದು ಒಬ್ಬರು ಹೇಳಿ ಮುಗಿಸುತ್ತಿದ್ದಂತೆಯೇ ಮತ್ತೊಬ್ಬರು–


"ಇಷ್ಟಕ್ಕೂ ಮಿಗಿಲಾಗಿ... ನೀವು ಸರಳವಾಗಿ ಮದುವೆ ಆಗಿದ್ದೀರಾ? ನಿಮ್ಮ ಮನೆಯಲ್ಲಿ ಯಾರಿಗಾದ್ರೂ ಮಾಡಿದ್ದೀರಾ?... ಮುಂದೆ ಇದೇ ರೀತಿಯಲ್ಲಿ ಸರಳವಾಗಿ ನಿಮ್ಮ ಮಕ್ಕಳಿಗೆ ಮಾಡ್ತೀರಾ? ಅಂತ... ನಿಮ್ಮನ್ನ ಅಲ್ಲಿ ಯಾರ್ ಕೇಳ್ತಾರೆ ಸಾರ್?"

ಅವರಿಬ್ಬರೂ ಮುಗ್ಧತನದಿಂದಲೋ ಅಥವಾ ವಿಚಾರವಂತಿಕೆಯಿಂದಲೋ ನೇರವಾಗಿ ಆಡಿದ ಮಾತುಗಳಲ್ಲಿ ಒಂದು ಸತ್ಯ ಸ್ಪಷ್ಟವಾಗಿ ನನಗೆ ಕಂಡಿತು. ಸಾರ್ವಜನಿಕ ವೇದಿಕೆಗಳಲ್ಲಿ ಅತ್ಯಾಕರ್ಷಕವಾಗಿ ಹತ್ತಾರು ಬಗೆಯ ಆದರ್ಶಗಳ ಮತ್ತು ಸಮಾಜ ಸುಧಾರಣೆಯ ಮಾತುಗಳನ್ನು ಆಡಿದ ಭಾಷಣಕಾರರನ್ನು ಯಾರೊಬ್ಬರೂ ಸಭೆಯಲ್ಲೇ ಪ್ರಶ್ನಿಸುವುದಿಲ್ಲ... ಒಂದು ವೇಳೆ ಪ್ರಶ್ನಿಸುವಂತಿದ್ದರೆ... ಆಗ ಆಡುವ ಮಾತುಗಳ ಪ್ರಮಾಣ ಕಡಿಮೆಯಾಗಿ, ಆಡಿದ ಮಾತುಗಳು ಭಾಷಣಕಾರರ ಬದುಕಿನ ಆಚರಣೆಗೆ ಹತ್ತಿರವಾಗಿರುತ್ತಿದ್ದವು.

ಪಟ್ಟು ಹಿಡಿದು ಕುಳಿತ ಅವರಿಬ್ಬರ ಒತ್ತಾಯಕ್ಕೆ ಮಣಿದು... ಮದುವೆಗೆ ಹಾಜರಾಗಿ .... ನನ್ನ ಅನರ್ಹತೆಯನ್ನು ಮೊದಲು ಸಭೆಗೆ ತಿಳಿಸಿ... ಅನಂತರ ಸರಳ ಮದುವೆಗಳ ಅಗತ್ಯದ ಬಗ್ಗೆ ಕುವೆಂಪು ಅವರ ವಿಚಾರಗಳನ್ನು ವಿವರಿಸಿದೆ.

⌘

ಪೈರು ಸತ್ತೋಗಿರ್ತವೆ



ಇಂದಿಗೆ ಏಳೆಂಟು ತಿಂಗಳುಗಳ ಹಿಂದೆ ... ಕಾಲೇಜಿನ ಕೆಲಸವನ್ನು ಮುಗಿಸಿಕೊಂಡು ಕಾಳಮುದ್ದನದೊಡ್ಡಿಯಿಂದ ಮಂಡ್ಯಕ್ಕೆ ಒಂದು ದಿನ ಸಾಯಂಕಾಲ ಹಿಂತಿರುಗುತ್ತಿದ್ದಾಗ ಬಸ್ಸಿನಲ್ಲಿ ನಡೆದ ಘಟನೆಯಿದು. ನನಗೆ ಚೆನ್ನಾಗಿ ಪರಿಚಿತರಾಗಿದ್ದ ರೈತರೊಬ್ಬರು... ನನ್ನ ಪಕ್ಕದಲ್ಲಿದ್ದ ಖಾಲಿ ಸೀಟಿನಲ್ಲಿ ಕುಳಿತುಕೊಳ್ಳುತ್ತಿದಂತೆಯೇ... ನನ್ನನ್ನು ಕಂಡು ಬಹಳ ಅಚ್ಚರಿಯಿಂದ–

"ಓಹೋ!... ಏನ್ ಸ್ವಾಮಿ... ದೊಡ್ಡಿಗೆ ಬಂದ್ಬುಟ್ಟಿದ್ದೀರಿ... ಈಗ ಕಾಲೇಜು ನಡೀತಾ ಇದ್ದದೊ?" ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಯಿಂದ ನಾನು ಸ್ವಲ್ಪ ಕಸಿವಿಸಿಗೊಂಡೆ. ಆದರೆ ವಯಸ್ಸಿನಲ್ಲಿ ನನಗಿಂತ ಹಿರಿಯರಾಗಿದ್ದ ಅವರ ಮುಂದೆ, ನನ್ನ ಅಸಮಾಧಾನವನ್ನು ತೋರಿಸಿಕೊಳ್ಳದೇ, ಶಾಂತ ಚಿತ್ತನಾಗಿಯೇ–

"ಹೂ ಕಣ್ ಬನ್ನಿ... ಇವತ್ತಿನಿಂದ ಮತ್ತೆ ಕಾಲೇಜು ಶುರುವಾಗಿದೆ" ಎಂದು ಉತ್ತರಿಸಿದೆ. ಬಸ್ಸು ಮುಂದೆ ಸಾಗಿದಂತೆಲ್ಲಾ... ನನ್ನೊಡನೆ ಅವರು ಮಾತನ್ನು ಮುಂದುವರಿಸಿದರು.

"ಕಾಲೇಜಿಗೆ ... ನೀವು ಮೇಷ್ಟ್ರುಗಳು...ಒಬ್ಬರೂ ಬತ್ತನೆ ಇರಲಿಲ್ಲವಂತೆ... ಕಾಲೇಜು ನಡೆದು... ಹತ್ತತ್ರ ಒಂದು ತಿಂಗಳೇ ಆಗೋಯ್ತಂತಲ್ಲ ಸ್ವಾಮಿ." ಎಂದು ನುಡಿದು, ಕಾಲೇಜಿನ ಅಧ್ಯಾಪಕರ ಸಮಸ್ಯೆಯನ್ನು ತಿಳಿಯುವ ಕುತೂಹಲದಿಂದ ನನ್ನತ್ತ ನೋಡತೊಡಗಿದರು.

ಯು.ಜಿ.ಸಿ. ವೇತನ ಶ್ರೇಣಿಯನ್ನು ಕೂಡಲೇ ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಆಗ್ರಹ ಪಡಿಸಲೆಂದು... ಅಖಿಲ ಭಾರತ ಕಾಲೇಜು ಅಧ್ಯಾಪಕರ ಸಂಘಗಳ ಮಹಾ ಒಕ್ಕೂಟದ ಕರೆಯ ಮೇರೆಗೆ... ಇಡೀ ದೇಶದ ಉದ್ದಗಲದಲ್ಲಿ ಕಾಲೇಜು ಅಧ್ಯಾಪಕರೆಲ್ಲರೂ ಇಪ್ಪತ್ತಾರು ದಿನಗಳ ಕಾಲ ತರಗತಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದೆವು. ನಮ್ಮ ಮುಷ್ಕರದ ಆಗುಹೋಗಿನ ಬಗ್ಗೆ, ಅವರೊಡನೆ ವಿವರವಾಗಿ ಮಾತನಾಡಲು ಇಚ್ಛಿಸದೆ–

"ಪೇಪರ್‌ಗಳಲ್ಲಿ ಕಾಲೇಜು ಅಧ್ಯಾಪಕರ ಮುಷ್ಕರದ ಬಗ್ಗೆ ನೀವೇ ಓದಿ ತಿಳ್ಕೊಂಡಿರಬೇಕಲ್ಲ?" ಎಂದೆ.

"ಚೆನ್ನಾಗಿ ಹೇಳುದ್ರಿ ಸ್ವಾಮಿ... ನಾವು ಸಣ್ ಹೈಕಳಾಗಿದ್ದಾಗ ನಮಗ್ಯಾರು ನಾಕು ಅಕ್ಷರ ಕಲಿಸ್ತೀವಿ ಅಂತ ಮುಂದೆ ಬಂದಿದ್ದೋರು?" ಎಂದು ಹೇಳುತ್ತ... ನಿಟ್ಟುಸಿರನ್ನು ಬಿಟ್ಟರು.

"ಮತ್ತೆ... ನಿಮಗೆ ಹೇಗೆ ಗೊತ್ತಾಯ್ತು. ಒಂದು ತಿಂಗಳಿಂದ ಕಾಲೇಜು ನಡೀತಾಯಿಲ್ಲ ಅಂತ?"

"ಒಬ್ಬ ಮೊಮ್ಮಗನ್ನ ನಿಮ್ಮ ಕಾಲೇಜ್ನಲ್ಲಿ ಈ ವರ್ಷ ಪಿ.ಯು.ಸಿ. ಗೆ ಸೇರಿಸಿದ್ದೀನಿ. ಮೊದಮೊದಲು ಎರಡು ದಿನ ನಗನಗ್ತಾ ಕಾಲೇಜಿಗೆ ಹೋಗ್ ಬತ್ತಿದ್ದೋನ್... ಆಮೇಲೆ ಮಂಕು ಹಿಡಿದಂಗೆ ಆಗ್ಹೋದ... ಆಗ ನಾನು... ಯಾಕಪ್ಪಾ ಅಂತ ಕೇಳ್ದೆ... ಸಂಬಳ ಹೆಚ್ಚು ಮಾಡೋ ತನಕ... ನಮ್ಮ ಮೇಷ್ಟ್ರುಗಳು ಕಾಲೇಜಿಗೆ ಬರಲ್ಲರಂತೆ ಅಂದ... ಈಗೇನ್ ಸ್ವಾಮಿ... ಸರ್ಕಾರದೋರು ಸಂಬಳ ಹೆಚ್ಚಾಗಿ ಕೊಟ್ರೆ?"

"ಇನ್ನೂ ಕೊಡಲಿಲ್ಲ... ಮುಂದಕ್ಕೆ ಕೊಡ್ತೀವಿ ಅಂತ ಭರವಸೆ ಕೊಟ್ಟವ್ರೆ... ಅದನ್ನ ನಂಬ್ಕೊಂಡು... ಈಗ ನಾವು ಮುಷ್ಕರ ನಿಲ್ಲಿಸಿದ್ದೀವಿ... ಕಾಲೇಜು ಇವತ್ತಿನಿಂದ ಮತ್ತೆ ನಡೀತಾಯಿದೆ".

"ಹಂಗಾದ್ರೆ ಎಲ್ಲರಿಗೂ ಒಳ್ಳೆದಾಯ್ತು ಬುಡಿ ಸ್ವಾಮಿ... ಇವತ್ತೆಲ್ಲೊ ನನ್ನ ಮೊಮ್ಮಗ ಸಿಗಲಿಲ್ಲ... ಸಿಕ್ಕಿದ್ರೆ ಹೇಳಿರೋನು" ಎಂದು ಒಂದು ಬಗೆಯ ಸಮಾಧಾನದಿಂದ ನುಡಿದರು.

"ಒಂದು ತಿಂಗಳಿಂದ ಪಾಠ ಪ್ರವಚನ ನಡೀಲಿಲ್ಲ ಅಂತ ನೀವೇನೂ ಯೋಚ್ನೆ ಮಾಡ್ಬೇಡಿ... ಮೇಷ್ಟ್ರುಗಳು.... ನಾವೆಲ್ಲಾ ಸ್ಪೆಷಲ್ ಕ್ಲಾಸ್ ತಕೊಂಡು... ಪರೀಕ್ಷೆ ಟೈಮಿಗೆ ಸರಿಯಾಗಿ ಎಲ್ಲಾ ಪಾಠಗಳನ್ನು ಮುಗಿಸಿಕೊಡ್ತೀವಿ" ಎಂದು ಭರವಸೆಯ ಮಾತುಗಳನ್ನಾಡಿದೆ. ಅನಂತರ ಮಂಡ್ಯ ತಲುಪುವ ತನಕ ಲೋಕಾಭಿರಾಮವಾಗಿ ನಮ್ಮ ಮಾತುಕತೆ ಮುಂದುವರಿಯಿತು.

ಮಂಡ್ಯ ನಗರದ ರೈತ ಸಭಾಂಗಣದ ಮುಂದೆ ಬಸ್ಸು ನಿಲ್ಲುತ್ತಿದ್ದಂತೆಯೇ... ಎಡಬದಿಯಲ್ಲಿ... ಲೋಕೋಪಯೋಗಿ ಇಲಾಖಾ ಕಛೇರಿಯ ಆವರಣದಲ್ಲಿ ಹಾಕಿದ್ದ ದೊಡ್ಡ ಪೆಂಡಾಲಿನಲಿ ನೂರಾರು ಮಂದಿ ಇಂಜಿನಿಯರ್‌ಗಳು ಬಡ್ತಿ ನಿಯಮಾವಳಿಗಳ ಬದಲಾವಣೆಗಾಗಿ ಮುಷ್ಕರ ಹೂಡಿ ಕುಳಿತಿರುವುದು... ಬಸ್ಸಿನಿಂದ ಇಳಿಯುತ್ತಿದ್ದ ಪ್ರಯಾಣಿಕರೆಲ್ಲರ ಕಣ್ಣಿಗೆ ಎದ್ದು ಕಾಣುತ್ತಿತ್ತು. ನನ್ನೊಡನೆ ಇಳಿದ ಅವರು ಪುಟ್‌ಪಾತ್‌ನ ಒಂದು ಬದಿಯಲ್ಲಿ ನಿಂತು–

"ಇದೇನ್ ಸ್ವಾಮಿ... ಇಂಜಿನಿಯರ್‌ಗಳು ಸಂಬಳ ಹೆಚ್ಚಿಗೆ ಮಾಡ್ಲಿ ಅಂತ... ನಿಮ್ಮಂಗೆ ಮುಷ್ಕರ ಹೂಡಿದ್ದರೆ?" ಎಂದು ಕೇಳಿದರು.

"ಸಂಬಳ ಹೆಚ್ಚು ಮಾಡಿ ಅಂತಲ್ಲ... ಬಡ್ತಿ ನಿಯಮಗಳನ್ನು ತಿದ್ದುಪಡಿ ಮಾಡಿ, ಎಲ್ಲರಿಗೂ ನ್ಯಾಯ ದೊರಕಿಸಿ ಕೊಡಿ ಅಂತ ಕೇಳ್ತಾವ್ರೆ. ಇಂಜಿನಿಯರುಗಳು ತಮ್ಮ ಕೆಲಸ ಬಹಿಷ್ಕರಿಸಿ... ಹಿಂಗೆ ಕುಂತ್ಕೊಂಡು ಒಂದು ತಿಂಗಳು ಮೇಲಾಯ್ತು" ಎಂದು ವಿವರಿಸಿದೆ.

"ನಮ್ಮ ರೈತರಿಗೆ ನೂರೆಂಟು ತರ ಕಷ್ಟ ಅನ್ಕೊಂಡಿದ್ದೆ... ಸರ್ಕಾರಿ ಸಂಬಳದಾರರಿಗೂ ಬೇಕಾದಷ್ಟು ಕಷ್ಟ ಅವೆ... ಏನ್ ಮಾಡೀರಿ... ಆನೆ ಕಷ್ಟ ಆನೆಗೆ ದೊಡ್ಡದು... ಇರುವೆ ಕಷ್ಟ ಇರುವೆಗೆ ದೊಡ್ಡದು. ಸ್ವಾಮಿ... ಒಸಿ ಪ್ಯಾಟೇಗೆ ಹೋಗ್ಬೇಕಾಗದೆ... ನಾನಿನ್ನು ಬತ್ತೀನಿ" ಎಂದು ಹೇಳಿ ತಮ್ಮ ಬಂಧುವೊಬ್ಬರೊಡನೆ ಪೇಟೆ ಬೀದಿಯತ್ತ ನಡೆದರು.

ಇತ್ತ ಮನೆಯ ಕಡೆಗೆ ಹೊರಟಿದ್ದ ನಾನು... ಮರುಕ್ಷಣದಲ್ಲೇ ಒಂದೆರಡು ಸಾಮಾನುಗಳನ್ನು ತರಬೇಕಾಗಿರುವುದನ್ನು ನೆನಪಿಸಿಕೊಂಡು... ಈಗ ಪೇಟೆಯ ಕಡೆಗೆ ಹೊರಟೆ. ಬಸ್ಸಿನಲ್ಲಿ ನನ್ನೊಡನೆಯೇ ಬಂದಿದ್ದ ಅವರಿಬ್ಬರೂ... ನನ್ನ ಮುಂದೆಯೇ ಮಾತನಾಡುತ್ತಾ ನಡೆಯುತ್ತಿದ್ದರು. ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಹಿಂಬಾಲಿಸಿದೆ.

ರೈತರ ಜೊತೆಯಲ್ಲಿದ್ದ ವ್ಯಕ್ತಿಯು–

"ಅಣ್ಣೋ...ಒಂದು ಮಾತು" ಎಂದ.

"ಏನಪ್ಪ ಅದು?"

"ಅಲ್ಲಾ... ಈ ಮೇಷ್ಟ್ರುಗಳು... ಇಂಜಿನಿಯರ್‌ಗಳೂ ತಾವು ಮಾಡಬೇಕಾಗಿರುವ ಕೆಲಸ ಕಾರ್ಯ ಬುಟ್ಬುಟ್ಟು... ಒಂದೊಂದು ತಿಂಗಳು ಸುಮ್ನೆ ಕುಂತ್ಬುಟ್ಟವ್ರಲ್ಲ... ಇವರಂಗೆಯೇ ದೇಶದಲ್ಲಿರೋ ರೈತಾಪಿ ಜನವೆಲ್ಲಾ ಬಿತ್ತನೆ ಕಾಲದಲ್ಲೋ... ಇಲ್ಲ... ಕುಯ್ಲು ಸಮಯದಲ್ಲೋ...ಒಂದು ತಿಂಗಳು ಹೊಲಗದ್ದೆ ತಕೆ ಹೋಗ್ದೆ... ಅಟ್ಟೀ ತಾವೆ ಕುಂತ್ಬುಟ್ರೆ ಹೆಂಗೆ?"

"ದೇಶ ಉಳದದೇನಪ್ಪ... ತಿನ್ನೂ ಅನ್ನವೆಲ್ಲಾ ಚಿನ್ನ ಆಗ್ಹೋಯ್ತದೆ."

"ಅಲ್ಲ ಕನಣ್ಣ... ಆ ವಯ್ಯ... ಬಸ್ನಲ್ಲಿ ನಿನ್ ಜೊತೇಲಿ ಮಾತಾಡ್ಕೊಂಡು ಬಂದ್ನಲ್ಲ ಮೇಷ್ಟ್ರು... ಒಂದು ತಿಂಗಳಿನಲ್ಲಿ ಮಾಡ್ದೇ... ಉಳ್ಕೊಂಡಿರೂ ಪಾಠವ... ಪೆಸಲ್ಲಾಗಿ ಮಾಡಿ ಮುಗಿಸ್ತೀವಿ ಅಂತಾನಲ್ಲ... ನಾವು ಹಂಗೆಯೇ ...ನಮ್ಮ ತಿಟ್ಟಿನಲ್ಲಿರೂ ಕಲ್ ಗದ್ದೇಲಿ ಬತ್ತದ ನಾಟಿ ಮಾಡ್ಬುಟ್ಟು ಬಂದು... ಒಂದು ತಿಂಗಳಾದ ಮೇಲೆ... ಗದ್ದೇ ತಕೆ ಹೋಗಿ... ಒಂದೇ ದಪ ದಡಸಾಗಿ ನೀರ್ ಹಾಯ್ಸಿಬುಟ್ರೆ.... ಪೈರು ಕತೆ ಏನಣ್ಣ?"

"ನಾವು ರೈತರು... ಇವರಂಗೆ ಆಡೂಕಾದದೇನಪ್ಪ? ... ತಿಂಗಳು ಬುಟ್ಕೊಂಡು ಹೋದ್ರೆ.. ಅಲ್ಲೇನಿದ್ದದು... ಪೈರೆಲ್ಲಾ ಸತ್ತೋಗಿರ್ತವೆ!" ಎಂದು ವಿಷಾದದ ನಗೆ ಬೀರುತ್ತ ಮುಂದೆ ನಡೆದರು.

⌘

ನಡೆ... ನುಡಿಗಳ... ಅಂತರ



ಶನಿವಾರದಂದು ಬೆಳಗಿನ ತರಗತಿಯೊಂದರಲ್ಲಿ ಹನ್ನೆರಡನೆಯ ಶತಮಾನದ ಶ್ರೇಷ್ಠ ವಚನಕಾರರಲ್ಲಿ ಒಬ್ಬರಾದ ಬಸವಣ್ಣನವರ ಈ ಕೆಳಕಂಡ ವಚನವನ್ನು ಕುರಿತು ವ್ಯಾಖ್ಯಾನ ಮಾಡುವ ಮುನ್ನ... ವಚನವನ್ನು ಭಾವಪೂರ್ಣವಾಗಿ ಓದತೊಡಗಿದೆ–

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ವಿದ್ಯಾರ್ಥಿಗಳು ಮನವಿಟ್ಟು ಆಲಿಸುತ್ತಿದ್ದರು. ನಾನು ತನ್ಮಯನಾಗಿ ವಚನದ ವಿಶ್ಲೇಷಣೆಯನ್ನು ಮಾಡತೊಡಗಿದೆನು.

"ನೋಡಿ... ಈ ವಚನದಲ್ಲಿ ಬಸವಣ್ಣನವರು ಅತ್ಯಂತ ಉದಾತ್ತವಾದ ಜೀವನ ತತ್ವವೊಂದನ್ನು ನಿರೂಪಿಸುತ್ತಿದ್ದಾರೆ. ಈ ಜಗತ್ತಿನಲ್ಲಿ ಧರ್ಮ ನೆಲೆಗೊಳ್ಳಬೇಕಾದರೆ... ದಯೆ, ಕರುಣೆ, ಅನುಕಂಪ ಅನ್ನೋದು ಎಲ್ಲಾ ಮಾನವರ ಅಂತರಂಗದಲ್ಲೂ ಮಿಡೀತಾಯಿರ್ಬೇಕು. ಯಾವುದೇ ಒಬ್ಬ ವ್ಯಕ್ತಿ... ಮತ್ತೊಂದು ಜೀವಿಯನ್ನು ತನ್ನಂತೆಯೇ ಭಾವಿಸಿ... ಕರುಣೆಯಿಂದ ಕಾಣ್ಬೇಕೆ ವಿನಹ... ಕ್ರೌರ್ಯದಿಂದಲ್ಲ. ಈ ವಚನದಿಂದ ನಾವು ತಿಳಿಯಬೇಕಾದುದ್ದು ಬಹಳವಿದೆ. ಧರ್ಮದ ಪಥದಲ್ಲಿ ನಡೆಯಬೇಕಾದರೆ... ಮೊಟ್ಟಮೊದಲು ನಾವು ದಯಾಶೀಲರಾಗಿ ವರ್ತಿಸುವುದನ್ನು ಕಲಿಬೇಕು. ಮತ್ತೊಂದು ಜೀವಿಯನ್ನು... ಅಂದರೆ... ಅದು ಪ್ರಾಣಿಯೇ ಆಗಿರ್ಲಿ ಅಥವಾ ಒಬ್ಬ ಮನುಷ್ಯನೇ ಆಗಿರ್ಲಿ... ಕಿಂಚಿತ್ತು ಹಿಂಸೆಗೆ ಗುರಿ ಮಾಡಬಾರದು. ಯಾವುದೇ ಕಾರಣದಿಂದಲೂ ... ಅಂದರೆ... ಸ್ವಾರ್ಥ, ದ್ವೇಷ, ಅಸೂಯೆ ಅಥವಾ ಭೀತಿ ಭಾವಗಳಿಗೆ ನಾವು ವಶರಾಗಿ... ಅನ್ಯ ಜೀವಿಗಳನ್ನು ಕೊಲ್ಲಬಾರದು.

ದಯೆಯೆಂಬುದೇ ಧರ್ಮದ ಅಡಿಪಾಯವಾಗಬೇಕು. ಪರಿಶುದ್ಧವಾದ ಮನಸ್ಸಿನ ಕರುಣೆಯಿಲ್ಲದೆ... ನಾವು ಯಾವ ಕಾರ್ಯವನ್ನು ಮಾಡಿದರೂ... ಏನೂ ಸಾರ್ಥಕವಿಲ್ಲ. ಕೂಡಲಸಂಗಯ್ಯ ಮೆಚ್ಚುವಂತೆ ... ಅಂದರೆ... ನಮ್ಮ ಸುತ್ತಮುತ್ತಣ ಸಹಜೀವಿಗಳೆಲ್ಲರ ಬದುಕಿಗೆ ಒಳ್ಳೆಯದಾಗುವಂತೆ... ನಾವು ಬಾಳಬೇಕಾದರೆ... ಕರುಣೆ ಅನ್ನೋದು ನಮ್ಮ ವ್ಯಕ್ತಿತ್ವದಲ್ಲಿ ಪ್ರಧಾನವಾದ ಭಾವವಾಗಿ ನೆಲೆಸಿರಬೇಕು" ಎಂದು ವ್ಯಾಖ್ಯಾನಿಸಿ... ತರಗತಿಯನ್ನು ಒಮ್ಮೆ ಅವಲೋಕಿಸುತ್ತಾ–

"ಅರ್ಥವಾಯ್ತೇನ್ರಿ" ಎಂದು ವಿದ್ಯಾರ್ಥಿಗಳನ್ನು ಕೇಳಿದೆ.

"ಚೆನ್ನಾಗಿ ಅರ್ಥವಾಯ್ತು ಸಾರ್" ಎಂದು ಒಂದಿಬ್ಬರು ಬಾಯ್ಬಿಟ್ಟು ಹೇಳಿದರೆ... ಉಳಿದವರು ಅದನ್ನು ಅನುಮೋದಿಸುವಂತೆ ತಲೆಯಾಡಿಸಿದರು.

"ಬರೀ ಅರ್ಥ ಮಾಡ್ಕೊಂಡ್ರೆ... ಏನೂ ಪ್ರಯೋಜನವಿಲ್ಲ. ಬಸವಣ್ಣನವರ ಆಶಯವನ್ನು ನಮ್ಮ ಬದುಕಿನ ಅಚರಣೆಯಲ್ಲಿ ಸಾಧ್ಯವಾದಷ್ಟು ಅಳವಡಿಸಿಕೊಂಡು... ನಮ್ಮ ನಡೆನುಡಿಗಳನ್ನು ಉತ್ತಮವಾದ ರೀತಿಯಲ್ಲಿ ರೂಪಿಸಿಕೊಳ್ಳಬೇಕು" ಎಂದು ಉಪದೇಶಿಸಿದೆ. ಇನ್ನೊಂದೆರಡು ವಚನಗಳನ್ನು ಓದಿ... ವ್ಯಾಖ್ಯಾನ ಮಾಡಿ, ತರಗತಿಯಿಂದ ಹೊರಬಂದ ನಂತರವೂ ... ಬಸವಣ್ಣನವರ ಮೇಲ್ಕಂಡ ವಚನದಲ್ಲಿನ ಭಾವ... ನನ್ನ ಮನಸ್ಸನ್ನು ಬಹಳ ಹೊತ್ತು ಆವರಿಸಿತ್ತು. ಮಾರನೆಯ ದಿನ ಭಾನುವಾರ ಬೆಳಿಗ್ಗೆ,

ಎಂದಿನಂತೆ ಮಾಂಸವನ್ನು ತರಲೆಂದು ಹೊರಟಾಗ, ನನ್ನ ಹೆಂಡತಿಯು ಬ್ಯಾಗನ್ನು ಕೈಗೆ ಕೊಡುತ್ತಾ–

"ಹೋದ ವಾರ ತಂದಂಗೆ... ಬಲಿಕೆ ಮಾಂಸವನ್ನು ತರಬೇಡಿ... ಬೇಯಿಸಿ... ಬೇಯಿಸಿ ಸಾಕಾಗಿ ಹೋಗುತ್ತೆ. ಮಕ್ಕಳಿಗೆ ತಣ ಕಂಡ್ರೆ ಬಹಳ ಇಷ್ಟ. ತಣಬೆರಕೆಯಾಗಿ... ಸ್ವಲ್ಪ ಎಳಸಾಗಿರುವ ಮಾಂಸವನ್ನು ನೋಡ್ತನ್ನಿ" ಎಂದು ಆದೇಶ ನೀಡಿದಳು.

ಮಾಂಸದ ಅಂಗಡಿಗಳ ಬಳಿಗೆ ಬರುತ್ತಿದ್ದಂತೆಯೇ... ಕತ್ತರಿಸಿ ಜೋಡಿಸಿಟ್ಟಿದ್ದ ಆಡು ಕುರಿಗಳ ತಲೆಗಳ ಸಾಲು... ಚರ್ಮವನ್ನು ಸುಲಿದು, ನೇತು ಹಾಕಿದ್ದ ಮಾಂಶದ ಮುದ್ದೆಗಳು... ಕಣ್ಣಿಗೆ ಜಿದ್ದವು. ಅಂಗಡಿಯೊಂದರ ಮುಂದೆ ನಿಂತು ನೋಡತೊಡಗಿದೆ. ಅಲ್ಲಿ ನೇತು ಹಾಕಿದ್ದ ಮೂರ್ನಾಕು ಮರಿಗಳಲ್ಲಿ... ಒಂದರಲ್ಲಾದರೂ ಮೂರ್ಕಾಸಿನ ಚರಬಿ ನನ್ನ ಕಣ್ಣಿಗೆ ಕಾಣಲಿಲ್ಲ.

ಅಂಗಡಿಯ ಮಾಲೀಕ ಬಹಳ ಉತ್ಸಾಹದಿಂದ, ಒಂದೆರಡು ಮರಿಗಳ ತೊಡೆ ಭಾಗವನ್ನು ನನ್ನತ್ತ ತಿರುಗಿಸಿ ತೋರಿಸುತ್ತಾ–

"ಯಾವುದೂ ಕೊಡ್ಲಿ ಸಾರ್... ಆಡಂದೂ ಬೇಕು... ಕುರೀದೂ ಬೇಕು" ಎಂದ.

"ಏನಯ್ಯಾ... ಇವತ್ತು ಭಾನುವಾರ ಅಂತ ಗೊತ್ತಿದ್ರೂ... ಒಂದಾದರೂ ಒಳ್ಳೆ ಮರಿ ಕುಯ್ದಿಲ್ಲ" ಎಂದು ಅಸಮಾಧಾನವನ್ನು ವ್ಯಕ್ತಪಡಿಸಿದೆ.

"ಇದಕ್ಕಿಂತ ಒಳ್ಳೆ ಮರಿ ಇನ್ಯಾವ್ದು ಸಾರ್!" ಎಂದು ಉದ್ಗಾರವೆಳೆದ.

"ಒಂದರಲ್ಲಾದ್ರು, ಚರಬೀನೆ ಇಲ್ಲ... ತಣವಿಲ್ಲದ ಮಾಂಸ ಇದಾವುದಯ್ಯಾ" ಎನ್ನುತ್ತಾ... ಪಕ್ಕದ ಅಂಗಡಿಯತ್ತ ಹೊರಳಿ ನೋಡಿದೆ. ಅಲ್ಲಿ ನೇತು ಹಾಕಿದ್ದ ಮರಿಗಳಲ್ಲಿ... ಒಂದೆರಡರಲ್ಲಿ ತಣ ಬೆರೆತ ಬಾಡನ್ನು ಕಂಡು... ಅರಳಿದ ಮುಖದಿಂದ ಅತ್ತ ನಡೆದೆ.

ಮಾಂಸದೊಡನೆ ಮನೆಗೆ ಹಿಂತಿರುಗಿ ಬರುವಾಗ... ನೆನ್ನೆ ತರಗತಿಯಲ್ಲಿ ಓದಿ, ಅರ್ಥ ಮಾಡಿಕೊಂಡು, ವ್ಯಾಖ್ಯಾನಿಸಿದ್ದ "ದಯವಿಲ್ಲದ ಧರ್ಮವದೇವುದಯ್ಯಾ?" ಎಂಬ ನುಡಿಗಳು ಮತ್ತು ಇಂದು ಮಾಂಸದ ಅಂಗಡಿಯಲ್ಲಿ "ತಣವಿಲ್ಲದ ಮಾಂಸ ಇದಾವುದಯ್ಯಾ" ಎಂದು ಆಡಿದ್ದ ನುಡಿಗಳು... ನನ್ನ ಮನದೊಳಗೆ ತೀವ್ರವಾಗಿ ಪರಸ್ಪರ ಎಡತಾಕತೊಡಗಿದವು.

ಸಾಮಾಜಿಕ ಮನುಷ್ಯರಾದ ನಾವು ಪಡೆಯುವ ಅರಿವು... ಆಡುವ ಮಾತು.. ಮಾಡುವ ಕ್ರಿಯೆಗಳ ನಡುವಣ ಅಗಾಧವಾದ ಅಂತರಕ್ಕೆ ... ನನ್ನ ನಡೆನುಡಿಗಳೇ ಸಾಕ್ಷಿಯಾಗಿದ್ದವು. ಜಗತ್ತಿನ ಅತ್ಯುತ್ತಮವಾದ ಸಾಹಿತ್ಯ ಕೃತಿಗಳನ್ನು ಓದಿ ಪಡೆಯುವ

ಅಕ್ಷರ ಜ್ಞಾನವಾಗಲಿ ಅಥವಾ ನಮ್ಮ ಕಣ್ಣ ಮುಂದಿನ ಪ್ರಪಂಚದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದರ ಮೂಲಕ ಗಳಿಸುವ ಲೋಕ ಜ್ಞಾನವಾಗಲಿ... ಕೇವಲ ಸುಂದರವಾದ ಮಾತುಗಳ ಅಭಿವ್ಯಕ್ತಿಗೆ ಮತ್ತು ಆಕರ್ಷಕವಾದ ಬರವಣಿಗೆಯ ನಿರೂಪಣೆಗೆ ಮಾತ್ರ ಸೀಮಿತವಾಗಿದೆಯೇ ಹೊರತು... ನನ್ನಂಥ ಬಹುತೇಕ ಮಂದಿಯ ನಿತ್ಯ ಜೀವನದ ಕ್ರಿಯೆಗಳಲ್ಲಿ ಅವು ಕಂಡು ಬರುವುದಿಲ್ಲ.

ಸಾಮಾಜಿಕ ಮನುಷ್ಯನ ಎಲ್ಲಾ ಬಗೆಯ ನಡೆನುಡಿಗಳಲ್ಲಿನ ಈ ಅಂತರವನ್ನು ... ವ್ಯಕ್ತಿಗತ ನೆಲೆಯಲ್ಲಿ ಮತ್ತು ಸಾಮಾಜಿಕ ನೆಲೆಯಲ್ಲಿ ಒರೆಹಚ್ಚಿ ನೋಡಿರುವ ಬಸವಣ್ಣನವರು–

ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ

ಎಂದು ತಮ್ಮನ್ನು ತಾವು ವಿಮರ್ಶೆಯನ್ನು ಮಾಡಿಕೊಳ್ಳುವುದರ ಮೂಲಕವೇ... ಲೋಕ ವಿಮರ್ಶೆಯನ್ನೂ ಮಾಡಿದ್ದಾರೆ.

⌘

ನಂಗೆ ಭಾಷೆ ಕೊಡ್ತೀರಾ



ಮೈಸೂರಿನಲ್ಲಿರುವ ಒಂದು ಕಛೇರಿಗೆ, ನನ್ನ ಮನೆಯ ಸಾಲಕ್ಕೆ ಸಂಬಂಧಪಟ್ಟ ದಾಖಲಾತಿ ಪತ್ರಗಳನ್ನು ಕೊಡಬೇಕಾಗಿತ್ತು. ಅಂದು ಮೈಸೂರನ್ನು ತಲುಪಿದಾಗ ಸಂಜೆ ಐದು ಗಂಟೆಯಾಗಿತ್ತು. ಬಸ್ ನಿಲ್ದಾಣದಿಂದ ಕೇವಲ ಒಂದು ಕಿ.ಮೀ. ಅಂತರದೊಳಗಿದ್ದ ಆ ಕಛೇರಿಗೆ ನಡೆದುಕೊಂಡು ಹೋದರೆ, ಕಛೇರಿಯ ವೇಳೆ ಮುಗಿದು ಹೋದೀತೆಂಬ ಭೀತಿಯಿಂದ, ರಸ್ತೆಯಂಚಿನಲ್ಲಿ ನಿಂತಿದ್ದ ಆಟೋದಲ್ಲಿ ಹತ್ತಿ ಕುಳಿತು, ಡ್ರೈವರನಿಗೆ ನಾನು ಹೋಗಬೇಕಾಗಿದ್ದ ಕಛೇರಿಯ ಹೆಸರನ್ನು ಹೇಳಿ "ಸ್ವಲ್ಪ ಬೇಗ ಹೋಗಪ್ಪ" ಎಂದೆ.

ಆತ ಸ್ಟಾರ್ಟರ್‌ಗೆ ಕೈ ಹಾಕುತ್ತಿದ್ದಂತೆಯೇ... "ಹತ್ತು ರೂಪಾಯಿ ಆಗುತ್ತೆ ಸಾರ್" ಎಂದ. "ಯಾಕಯ್ಯಾ ಹತ್ತು ರೂಪಾಯಿ?... ಇಲ್ಲಿಂದ ಸರಿಯಾಗಿ ಒಂದು ಕಿಲೊ ಮೀಟರ್ ಕೂಡ ಆಗಲ್ಲ... ಮಿನಿಮಮ್ ಛಾರ್ಜು ಐದು ರೂಪಾಯಿ ಅಲ್ವೇನಯ್ಯ?"

ನಾಲ್ಕೈದು ವರ್ಷಗಳ ಹಿಂದೆ ನಡೆದ ಘಟನೆಯಿದು. ಆಗ ಮಿನಿಮಮ್ ಛಾರ್ಜು ನಾಲ್ಕು ರೂಪಾಯಿ, ಅರವತ್ತು ಪೈಸೆ. ಸಾಮಾನ್ಯವಾಗಿ ಐದು ರೂಪಾಯಿಯನ್ನು ಡ್ರೈವರ್ ಕೈಗೆ ಕೊಟ್ಟರೆ... ಆತ ಚಿಲ್ಲರೆ ಕೊಡುತ್ತಿರಲಿಲ್ಲ; ಗಿರಾಕಿಯೂ ಕೇಳುತ್ತಿರಲಿಲ್ಲ. ಸ್ಟಾರ್ಟರ್ ಮೇಲಿನ ಕೈಯನ್ನು ತೆಗೆದ ಡ್ರೈವರ್ "ಬರೋಕಾಗೊಲ್ಲ ಸಾರ್" ಎಂದ. ನನಗೆ ವೇಳೆಯ ಪ್ರಶ್ನೆ ಮುಖ್ಯವಾಗಿದ್ದುದರಿಂದ "ಆಗ್ಲಿ ನಡೀಯಪ್ಪ...... ಬೇಗ ಸ್ಟಾರ್ಟ್ ಮಾಡು" ಎಂದೆ. ಆಟೋ 'ಬರ್' ಎಂದು ಶಬ್ದ ಮಾಡುತ್ತ ಹೊರಟಿತು. ಡ್ರೈವರ್ ಜೊತೆ ನಾನು ವಾಗ್ವಾದಕ್ಕೆ ತೊಡಗಿದೆ.

"ಏನಯ್ಯ... ಧರ್ಮ ಕರ್ಮ ಅನ್ನೋದು ಸ್ವಲ್ಪನಾದ್ರೂ ಬೇಡವೇನಯ್ಯ? ಒಂದಕ್ಕೆ ಡಬ್ಬಲ್ ಕೇಳ್ತಾ ಇದ್ದೀಯಲ್ಲ... ಇದು ನ್ಯಾಯವೇನಯ್ಯ?"

"ನ್ಯಾಯ ಕಟ್ಕೊಂಡು ನಾನೇನ್ ಮಾಡ್ಲಿ. ನಂಗೆ ದುಡ್ಡು ಬೇಕಾಗಿದೆ. ಸಂಪಾದ್ನೆ ಮಾಡ್ತೀನಿ."

"ಸಂಪಾದ್ನೆ ಮಾಡೂಕು ಒಂದು ಲೆಕ್ಕಾಚಾರ ಬೇಡ್ವೇನಯ್ಯ?"

"ನೋಡ್ರಿ... ಈಗ ದಸರಾ ನಡೀತಾಯಿದೆ. ಈ ಟೈಮ್ನಲ್ಲಿ, ನಾಲ್ಕಾಸು ಹೆಚ್ಚಾಗಿ ಸಂಪಾದ್ನೆ ಮಾಡ್ಕೊಂಡ್ರೆ... ಏನ್ರಿ ತಪ್ಪು?"

"ಮೀಟರ್ ಅಂತ ಇರೋದು ಯಾಕಯ್ಯ? ಇಷ್ಟು ಕಿಲೋ ಮೀಟರ್ಗೆ ...... ಇಷ್ಟು ಛಾರ್ಜು ಅಂತ ಸರ್ಕಾರದವರು ಗೊತ್ತು ಮಾಡಿರೋದು ಯಾಕೆ?"

ನನ್ನ ಮಾತುಗಳನ್ನು ಕೇಳುತ್ತಿದ್ದಂತೆಯೇ, ಡ್ರೈವರ್ ವಿಚಿತ್ರವಾಗಿ ನಗತೊಡಗಿದ. ಆಟೋ ಮುಂದೆ ಮುಂದೆ ಸಾಗುತ್ತಿತ್ತು.

"ಸರ್ಕಾರ ಕಾನೂನು ಮಾಡಿರೂವಂಗೆ... ಎಲ್ಲಾ ಕಡೆ ಕಾರ್ಯಗಳು ನಡೀತಾ ಇದೆಯೇನ್ರಿ?"

ಅವನ ಪ್ರಶ್ನೆಗೆ ಉತ್ತರ ಕೊಡಲು ಸ್ವಲ್ಪ ತಡವಾಯಿತು.

"ಯಾಕ್ರಿ ಸುಮ್ಮನಾಗ್ಬುಟ್ರಿ... ರ್ರೀ... ಸ್ವಾಮಿ... ಇವತ್ತು ಇಲ್ಲಿ ನನ್ನನ್ನು ಹಿಂಗೆ ಕೇಳ್ತಾಯಿದ್ದೀರಲ್ಲ. ಹಂಗೆ ನಿಮ್ಮ ಜೀವಮಾನದಲ್ಲಿ ಎಷ್ಟು ಜನರನ್ನ ಕೇಳಿದ್ದೀರಿ?... ನಿಮ್ಮ ಕಾಗದ ಪತ್ರ ಎಲ್ಲಾ ಸರಿಯಾಗಿದ್ರೂ... ಕೆಲಸ ಮಾಡಿಕೊಡುವಾಗ, ಇದುವರೆಗೂ ನಿಮ್ಮಿಂದ ಎಲ್ಲೂ... ಯಾರೂ... ಅನ್ಯಾಯವಾಗಿ ದುಡ್ಡನ್ನ ಕಿತ್ತೇ ಇಲ್ಲವೋ?"

"ನಿಂದೊಳ್ಳೆ ವಿತಂಡವಾದ ಕಣಯ್ಯ! ಅಲ್ಲೆಲ್ಲೋ ...ಯಾರೋ ಲಂಚ ಹೊಡೀತಾವ್ರೆ ಅಂತ ...... ನೀನು, ಇಲ್ಲಿ ಹಿಂಗೆ ಕಿತ್ಕೊಂಡು ತಿನ್ನೀಯ" ಎಂದು ರೇಗಿದೆ.

“ಇಲ್ಲಿ... ನನ್ನ ಜಗ್ಗಿಸಿ ಕೇಳ್ತಿರೂವಂಗೆ... ಯಾವತ್ತಾದ್ರೂ ಆಫೀಸರ್‌ಗಳನ್ನ ರಾಜಕೀಯದೋರನ್ನ ...ನಿಮಗೆ ಮೇಲ್ಪಟ್ಟವರನ್ನ ನೀವು ಕೇಳಿದ್ದೀರಾ?”

ಈಗ ಅವನ ಮಾತುಗಳನ್ನ ಸುಮ್ಮನೆ ಕೇಳತೊಡಗಿದೆ.

“ಯಾಕ್ ಸುಮ್ಮನಾಗ್ಬುಟ್ರಿ... ಅಲ್ಲೆಲ್ಲಾ ಕೇಳೂಕೆ ನಿಮಗೆ ಬಾಯ್ ಬರೂದಿಲ್ಲ... ಯಾಕಂದ್ರೆ ಅವರೆಲ್ಲಾ ದೊಡ್ಡೋರ್ ನೋಡಿ. ಅದಕ್ಕೆ ... ಅಲ್ಲಾದ್ರೆ ಅವರು ಕೇಳ್ದಷ್ಟು ದುಡ್ಡು ಕೊಟ್ಬುಟ್ಟು... ಕೈ ಮುಕ್ಕೊಂಡು ಬರ್ತೀರಿ. ಇಲ್ಲಾದ್ರೆ ನಮ್ಮಂಥ ಸಣ್ಣೋರ್ ಮುಂದೆ... ನ್ಯಾಯ ಅನ್ಯಾಯ ಹೇಳೋಕೆ ಬರ್ತೀರಿ.”

ಡ್ರೈವರನ ವಾದಕ್ಕೆ ಸಮರ್ಥವಾದ ಉತ್ತರವನ್ನು ಕೊಡಲಾಗದೆ–


“ಹಾಗಾದ್ರೆ, ನಿನ್ನ ಕೇಳುದ್ದೆ ತಪ್ಪು ಅಂತೀಯ?”

“ತಪ್ಪೇನಲ್ಲ ಕೇಳಿ ...ನೋಡ್ರಿ, ಈಗಲೂ ಹೇಳ್ತಾಯಿದ್ದೀನಿ... ಇನ್ನು ಮುಂದೆ ಯಾರಾದ್ರೂ ನಿಮ್ಮ ದುಡ್ಡನ್ನ ಅನ್ಯಾಯದಲ್ಲಿ ಸುಲಿಗೆ ಮಾಡೂಕೆ ಬಂದಾಗ... ಇವತ್ತು ನನ್ನನ್ನು ಕೇಳ್ದಂಗೆ ಅವರನ್ನೂ ಕೇಳ್ತೀರಾ?... ಕೇಳ್ತೀನಿ ಅಂತ ನಂಗೆ ಭಾಷೆ ಕೊಡೋದಾದ್ರೆ.... ಮಿನಿಮಮ್ ಛಾರ್ಜನ್ನೆ ಕೊಡಿ... ಸಾಕು”ಅಂದ.

ಅಷ್ಟರಲ್ಲಿ ಕಚೇರಿಯ ಹತ್ತಿರ ಆಟೋ ಬಂದು ನಿಂತಿತು. ಆಟೋ ಡ್ರೈವರನಿಗೆ ಭಾಷೆಯನ್ನು ಕೊಡುವಷ್ಟು ಆತ್ಮವಿಶ್ವಾಸವಿಲ್ಲದ ನಾನು... ಹತ್ತು ರೂ. ನೋಟನ್ನು ನೀಡಿ, ಕೆಳಕ್ಕಿಳಿದೆ.

⌘

ನಿಂಗೆಲ್ಲೊ ಸುಮಾನ ಕಣಪ್ಪ



ಇಂದಿಗೆ ಸರಿಸುಮಾರು ಏಳೆಂಟು ವರ್ಷಗಳ ಹಿಂದೆ ನಡೆದ ಘಟನೆಯಿದು. ತಿಂಗಳಿನ ಮೊದಲನೆಯ ವಾರದಲ್ಲಿ ಒಂದು ದಿನ ಸಂಬಳದ ಹಣವನ್ನು ಪಡೆಯಲೆಂದು ಕಾಳಮುದ್ದನದೊಡ್ಡಿಯಲ್ಲಿರುವ ರಾಷ್ಟ್ರೀಯ ಬ್ಯಾಂಕಿಗೆ ಹೋದೆನು. ಅಲ್ಲಿ ತುಂಬಾ ಜನರಿದ್ದರು. ಅವರಲ್ಲಿ ರೈತರೇ ಹೆಚ್ಚಾಗಿದ್ದರು.

ಬ್ಯಾಂಕಿನಲ್ಲಿ ಚೆಕ್ ಬರೆದು ಕೊಟ್ಟು, ಟೋಕನ್ ಪಡೆದು, ಹಣಕ್ಕಾಗಿ ಕಾಯುತ್ತ ಕುಳಿತಿದ್ದಾಗ, ನನ್ನ ಪಕ್ಕದಲ್ಲಿದ್ದ ರೈತರೊಬ್ಬರನ್ನು ಕುರಿತು–

"ಇವತ್ತೇನು ಇಷ್ಟೊಂದು ಜನ ರೈತರು ಬ್ಯಾಂಕಿಗೆ ಬಂದವ್ರಲ್ಲ" ಎಂದು ಪ್ರಶ್ನಿಸಿದೆನು.

"ಬೆಳೆ ಸಾಲ ಕೊಡ್ತಾವ್ರೆ ಕಣಪ್ಪ... ಅದ ತಕೋಕೆ ಬಂದವ್ರೆ".

"ನೀವು ...ಸಾಲ ತಕೋಕೆ ಬಂದಿದ್ದೀರಾ?"

"ಹೂ ಕಣಪ್ಪ" ಎಂದು ಉತ್ತರಿಸಿದ ಅವರು, ಹಣ ಕೊಡುವ ಕೌಂಟರಿನ ಕಡೆಗೆ ಒಂದು ಬಗೆಯ ಆತಂಕದಿಂದ ನೋಡತೊಡಗಿದರು.

ಈಗ ನಾನು ಅಲ್ಲಿ ಜಮಾಯಿಸಿದ್ದ ರೈತರ ಉಡುಗೆ ತೊಡುಗೆಗಳನ್ನು ಗಮನಿಸತೊಡಗಿದೆ. ಅವರಲ್ಲಿ ಬಹಳಷ್ಟು ಮಂದಿ ಅಂಗಿ ಚಡ್ಡಿಯನ್ನು ಧರಿಸಿದ್ದರು. ಇನ್ನು ಕೆಲವರು ಉಟ್ಟಿದ್ದ ಪಂಚೆಗಳು ಸಾಕಷ್ಟು ಕೊಳೆಯಾಗಿದ್ದವು. ಅವರಲ್ಲಿ ಸುಮಾರು ಅರ್ಧದಷ್ಟು ಮಂದಿ ಕಾಲಿಗೆ ಚಪ್ಪಲಿಯನ್ನೇ ಹಾಕಿರಲಿಲ್ಲ... ಹೊಲ ಗದ್ದೆಗಳಲ್ಲಿ ದುಡಿಯುವ ನಮ್ಮ ರೈತರು ಎಷ್ಟೇ ಸಂಪಾದಿಸಿದರೂ... ತಮ್ಮ ದೈನಂದಿನ ಉಡುಗೆ ತೊಡುಗೆಗಳ ಬಗ್ಗೆ ಅಷ್ಟಾಗಿ ಗಮನ ಕೊಡದಿರುವುದರ ಬಗ್ಗೆ ...ನಾನು ಅನೇಕ ಸಾರಿ ಆಲೋಚಿಸಿದ್ದೆನು. ಆದ್ದರಿಂದ ಈಗ ಮತ್ತಷ್ಟು ಸೂಕ್ಷ್ಮವಾಗಿ ನನ್ನ ಪಕ್ಕದಲ್ಲಿ ಕುಳಿತಿದ್ದ ರೈತರನ್ನು ಗಮನಿಸಿದೆ. ಸುಮಾರು ಐವತ್ತು ಐವತ್ತೈದು ವರ್ಷ ವಯಸ್ಸಿನ ಅವರ ದೇಹ ಕಟ್ಟುಮಸ್ತಾಗಿತ್ತು. ಉದ್ದನೆಯ ಚಡ್ಡಿಯ ಕೆಳಭಾಗದ ಕಣ ಕಾಲಿನ ಖಂಡದಲ್ಲಿನ ನರಗಳು ಎದ್ದು ಕಾಣುತ್ತಿದ್ದವು. ಬರಿಗಾಲಲ್ಲೇ ಬ್ಯಾಂಕಿಗೆ ಬಂದಿದ್ದ ಅವರ ಆರ್ಥಿಕ ಸ್ಥಿತಿ ಗತಿಗಳನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ,

"ಯಾವೂರ್ನೋರು ನೀವು?"

"ಕರಡಕೆರೆ ಕಣಪ್ಪ."

"ಎಷ್ಟು ಎಕರೆ ಜಮೀನಿದೆ?"

"ಒಂದು ಮೂರು ಎಕರೆ ಅದೆ."

ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರೂ, ಅವರ ದೃಷ್ಟಿ ಮಾತ್ರ ಆಗಾಗ್ಗೆ ಕೌಂಟರಿನ ಕಡೆಗೆ ಹಾಯುತ್ತಿತ್ತು.

"ಬೆಳೆ ಏನೇನು ಒಡ್ಡಿದ್ದೀರಿ?"

"ಎರಡು ಎಕರೇಲಿ ಕಬ್ಬು ...ಒಂದು ಎಕರೇಲಿ ಬತ್ತ ಅದೆ ಕಣಪ್ಪ."

"ನೀವೇನೂ ಬೇಜಾರ್ ಮಾಡ್ಕೊಳ್ಳದೇ ಇದ್ರೆ ...ಒಂದು ಮಾತು."

ಎಂದು ಅರ್ಧಕ್ಕೆ ನಿಲ್ಲಿಸಿದೆ. ಇದುವರೆಗೂ ಕಾಟಾಚಾರಕ್ಕೆಂದು ನನ್ನೊಡನೆ ಮಾತನಾಡುತ್ತಿದ್ದವರು, ಈಗ–

"ಇವನ್ಯಾರೊ ನಂಗೆ ಒಕ್ಕರಿಸಿದನಲ್ಲ!" ಎಂಬಂತೆ ದೃಷ್ಟಿ ಬೀರಿ–

"ಅದೇನ್ ಹೇಳಪ್ಪ?" ಎಂದರು.

"ನೀವು ...ಮೂರು ಎಕರೆ ಜಮೀನ್ದಾರರಾಗಿ ...ಕಾಲಿಗೆ ಒಂದು ಜೊತೆ ಚಪ್ಪಲಿಯಿಲ್ಲದೇ ...ಬರಿಗಾಲಲ್ಲಿ ಬ್ಯಾಂಕಿಗೆ ಬಂದಿದ್ದೀರಲ್ಲ ಯಾಕೆ?"

"ನಿಂಗೆಲ್ಲೊ ಸುಮಾನ ಕಣಪ್ಪ ....ಅದಕ್ಕೆ ಹಿಂಗೆಲ್ಲಾ ಕೇಳ್ತಾ ಇದ್ದೀಯೇ!"

ಅವರ ಮಾತಿನಿಂದ ಕ್ಷಣಕಾಲ ತಬ್ಬಿಬ್ಬಾಗಿ ಸುಮ್ಮನಾದ ನನ್ನನ್ನೇ ಈಗ ದಿಟ್ಟಿಸಿ ನೋಡುತ್ತ–

"ಮೊಗ ...ನೀನು ಏನ್ ಕೆಲಸದಲ್ಲಿ ಇದ್ದೀಯಪ್ಪ?"

"ಇಲ್ಲೇ ...ಕಾಲೇಜ್ನಲ್ಲಿ ಮೇಷ್ಟ್ರಾಗಿದ್ದೀನಿ."

"ತಿಂಗಳ-ತಿಂಗಳ ಸಂಬಳ ಎಷ್ಟು ಬಂದದಪ್ಪ?"

"ಎಂಟು ಸಾವಿರ ಬತ್ತದೆ."

"ಹಿಂಗಂತೀನಿ ಅಂತ ಏನು ತಿಳ್ಕೊ ಬ್ಯಾಡ ಕಣಪ್ಪ... ಯಾವ ಮಳೆ ಹುಯ್ಯಲಿ ಹುಯ್ದೆ ಹೋಗ್ಲಿ; ನಾಲೇಲಿ ನೀರು ಬರ್ಲಿ... ಬರ್ದೆ ಹೋಗಲಿ ...ನಿನಗೆ ಬರೊ ಸಂಬಳ ಬಂದ್ಬುಡ್ತದೆ... ನಮ್ಮ ರೈತರ್ಗೆ ಎಲ್ಲಪ್ಪ ಹಂಗೆ ಬಂದದು? ನಾವು ದುಡ್ಡಿನ ಮೊಕ ಕಾಣೂದೆ ವರ್ಷಕ್ಕೆ ಒಂದು ದಪವೋ ...ಎರಡು ದಪವೋ! ಅದೂ ಯಾವಾಗ... ಮಳೆ ಚೆನ್ನಾಗಿ ನಡೆಸಿಕೊಟ್ಟು ಬೆಳೆ ಕೈಗೆ ಹತ್ತುದ್ರೆ ...ಇಲ್ದೇದ್ರೆ ಆಗ್ಲೂ ಇಲ್ಲ."


"ಹಂಗಂತ ಒಂದು ಜೊತೆ ಚಪ್ಪಲಿ ಹಾಕೊಂಡು ತಿರುಗಾಡುವಷ್ಟು ನಮ್ಮ ರೈತರ ಹತ್ತಿರ ದುಡ್ಡಿಲ್ಲವೇ?"

"ಇದು ದುಡ್ಡಿನ ಪ್ರಶ್ನೆಯಲ್ಲ ಕಣಪ್ಪ ...ನಿಂಗೆ ರೈತರ ಹೊಡ್ತಾಬು ಗೊತ್ತಿಲ್ಲ... ಅದಕ್ಕೆ ಹೀಂಗಂತಿದ್ದೀಯೆ! ನೋಡಪ್ಪ ಇವತ್ತು ಇಲ್ಲಿಗೆ ಬರೂಕೆ ಮುಂಚೆ ನಾನು ಗದ್ದೆ ತಾವು ಐದು ಗಂಡಾಳು ಕಟ್ಕೊಂಡು ಗೆಯ್ತಿದ್ದೋನು.... ಹೊಂಗ್ಲೋ ಅಂತ ಇಲ್ಲಿಗೆ ಬಂದಿವ್ನಿ ....ಇಲ್ಲಿಗೆ ಬಂದಿದ್ರೂ ನನ್ನ ಗ್ಯಾನವೆಲ್ಲಾ ಅಲ್ಲೇ ಅದೆ. ಈಗ ದುಡ್ಡನ್ನು ತಕೊಂಡು ತಿರ್ಗ ಗದ್ದೇತಕ್ಕೆ ಓಡ್ಬೇಕು ...ಅದೂ ಅಲ್ಲದೇ ಭೂಮ್ತಾಯಿ ಜೊತೇಲಿ ದುಡಿಯುವ ರೈತಾಪಿ ಜನ ನಾವು.... ನಿಮ್ಮಂಗೆ ಎಲ್ಲಾ ಕಡೆಗೂ ಜೋಡು ಮೆಟ್ಕೊಂಡು ತಿರುಗಾಡೂಕೆ ಎಲ್ಲಾದದಪ್ಪ?"

ಬರಿಗಾಲಲ್ಲೆ ದುಡಿದು ದೇಶಕ್ಕೆ ಅನ್ನ ಕೊಡುತ್ತಿರುವ ರೈತನ ಬೆನ್ನಿಗೆ ಭಾರವಾಗಿರುವ ನಾನು ಮರು ಮಾತನಾಡದೆ, ಕೌಂಟರಿನತ್ತ ನೋಡತೊಡಗಿದೆನು.

⌘

ನೀನ್ ಒಬ್ಬನೇನಾ ಕಂಡಿರೋನು



ಮೈಸೂರು ನಗರದಲ್ಲಿರುವ ಕಛೇರಿಯೊಂದಕ್ಕೆ ಮೊನ್ನೆ ಬೆಳಗ್ಗೆ ಹನ್ನೊಂದು ಘಂಟೆಯ ಸಮಯದಲ್ಲಿ ಒಂದು ಕಾರ್ಯಾರ್ಥವಾಗಿ ಹೋದೆನು. ಅಲ್ಲಿನ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿ, ಮನೆಯ ಸಾಲಕ್ಕೆ ಸಂಬಂಧಿಸಿದ ಮಾಹಿತಿಯೊಂದನ್ನು ಪಡೆಯಬೇಕಾಗಿತ್ತು. ದಡ ದಡನೆ ಮೆಟ್ಟಿಲುಗಳನ್ನೇರಿ ಮಹಡಿಯನ್ನು ಪ್ರವೇಶಿಸುತ್ತಿದ್ದಂತೆಯೇ, ಪ್ರವೇಶ ದ್ವಾರದಲ್ಲಿ ನಿಂತಿದ್ದ ಅಟೆಂಡರ್ ಒಬ್ಬನು, ನನ್ನನ್ನು ಒಳಹೋಗದಂತೆ ತಡೆದನು.

ಇಂತಹವರನ್ನು ...ಇಂತಹ ಕಾರ್ಯಕ್ಕಾಗಿ ನಾನು ನೋಡಬೇಕಾಗಿದೆ ಎಂದು ಅವನಿಗೆ ಹೇಳಿದಾಗ–

"ಸಾರ್... ಇಷ್ಟೊತ್ತಿನಲ್ಲಿ ಯಾರನ್ನು ನೋಡೂದಕ್ಕು ಒಳಕ್ಕೆ ಬಿಡೋದಿಲ್ಲ... ಏನಿದ್ದರೂ, ಮಧ್ಯಾಹ್ನ ಮೂರು ಗಂಟೆಯ ಮೇಲೆ ಬನ್ನಿ ಸಾರ್" ಎಂದನು.

ಕಳೆದ ಐದಾರು ವರ್ಷಗಳಿಂದ ಇದೇ ಕಛೇರಿಗೆ, ನಾನಾ ಕಾರ್ಯಗಳಿಗಾಗಿ ಬರುತ್ತಿದ್ದ ನನಗೆ ಇದು ಹೊಸ ವಿಚಾರವಾಗಿತ್ತು. ಮೊದಲು ಯಾವ ಸಮಯದಲ್ಲಾದರೂ ಈ ಕಛೇರಿಗೆ ಬಂದು, ಯಾರನ್ನು ಬೇಕಾದರೂ ನೋಡಬಹುದಾಗಿತ್ತು.

"ಥುತ್ತೆರಿ ...ಇದೇನ್ ಇಂಥ ಎಡವಟ್ಟಾಯ್ತಲ್ಲ ಇವತ್ತು!" ಎಂದು ಮನದೊಳಗೆ ಅಂದುಕೊಳ್ಳುತ್ತಿದ್ದಂತೆಯೇ, ಅಲ್ಲಿನ ಗೋಡೆಯ ಮೇಲೆ ನೇತು ಹಾಕಿದ್ದ ಸೂಚನಾ ಫಲಕವೊಂದು ಕಣ್ಣಿಗೆ ಬಿತ್ತು–

'ಸಾರ್ವಜನಿಕರ ಸಂದರ್ಶನದ ವೇಳೆಯನ್ನು ಮಧ್ಯಾಹ್ನ ಮೂರು ಗಂಟೆಯಿಂದ ಐದು ಗಂಟೆಯವರೆಗೆ ಗೊತ್ತುಪಡಿಸಲಾಗಿದೆ. ಸಾರ್ವಜನಿಕರು ಈ ವೇಳೆಯಲ್ಲಿ ಮಾತ್ರ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡುವುದು. ಕಛೇರಿಯ ಕಾರ್ಯಗಳು ಸುಗಮವಾಗಿ ನಡೆಯುವುದಕ್ಕೆ ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.'

"ಯಾವಾಗಿನಿಂದ ಈ ನಿಯಮ ಜಾರಿಗೆ ಬಂದಿದೆಯಪ್ಪ?" ಎಂದು ಪ್ರಶ್ನಿಸಿದೆ.

"ಆಗ್ಲೆ ಆರು ತಿಂಗಳಾಯ್ತು ಸಾರ್ ...ಈಗ ಬಂದಿರುವ ಆಫೀಸರ್ ತುಂಬಾ ಸ್ಟ್ರಿಕ್ಟು ಸಾರ್... ಮೊದಲು ಕಛೇರಿಯ ಬಾಗಿಲು ತೆಗೀತಿದ್ದಂಗೆ ಜನ ತುಂಬ್ಕೊಂಡು ...ಒಂದು ಕೆಲಸನೂ ನ್ಯಾಯವಾಗಿ ಆಯ್ತಿರಲಿಲ್ಲ ...ಅದಕ್ಕೆ ಹೀಗೆ ಮಾಡವ್ರೆ" ಎಂದು ಅವನು ವಿವರಿಸುತ್ತಿದ್ದಂತೆಯೇ... ಅಲ್ಲಿಗೆ ಮೂವರು ಯುವಕರು ಬಹಳ ಆತುರಾತುರವಾಗಿ ಬಂದರು. ಸೀದಾ ಒಳ ನುಗ್ಗುತ್ತಿದ್ದ ಅವರನ್ನು ಅಟೆಂಡರ್ ತಡೆದು, ಪ್ರವೇಶಕ್ಕೆ ವಿಧಿಸಿರುವ ನಿಯಮವನ್ನು ಸಂಕ್ಷಿಪ್ತವಾಗಿ ಹೇಳಿ, ಸೂಚನಾ ಫಲಕದ ಕಡೆಗೆ ಅವರ ಗಮನ ಹರಿಯುವಂತೆ ಮಾಡಿದ. ಆದರೆ ...ತುಂಬಾ ತುರ್ತಿನಲ್ಲಿದ್ದಂತೆ ಕಂಡು ಬರುತ್ತಿದ್ದ ಅವರು, ಒಬ್ಬರಾದ ನಂತರ ಮತ್ತೊಬ್ಬರು, ಅಟೆಂಡರ್ ಜೊತೆ ಮಾತನಾಡತೊಡಗಿದರು.

"ನೋಡಪ್ಪ ...ನಾವು ಬಹಳ ದೂರದಿಂದ ಬಂದಿದ್ದೀವಿ. ಇಂಥ ಗುಮಾಸ್ತರನ್ನು ಈಗ್ಲೇ ನೋಡಬೇಕಾಗಿದೆ. ಅವರೇ ನಮ್ಮನ್ನ ...ಇವತ್ತು ಬನ್ನಿ ಅಂತ ಹೇಳಿದ್ದರು... ಒಂದೈದು ನಿಮಿಷದಲ್ಲಿ ಅವರನ್ನು ನೋಡ್ಕೊಂಡು ಬಂದ್ಬುಡ್ತೀವಿ" ಎಂದು ಒಬ್ಬ ಹೇಳುತ್ತಿದ್ದಂತೆಯೇ, ಮತ್ತಿಬ್ಬರು ಒಳ ಪ್ರವೇಶಿಸಲು ಅಡಿಗಳನ್ನಿಟ್ಟರು. ಆದರೆ ಅವರನ್ನು ತಡೆದು ನಿಲ್ಲಿಸಿದ ಅಟೆಂಡರ್–

"ಇಲ್ಲ ಸಾರ್... ಇಷ್ಟೊತ್ತಿನಲ್ಲಿ ಯಾರನ್ನೂ ...ಯಾವುದೇ ಕಾರಣಕ್ಕೂ ...ಒಳಕ್ಕೆ ಬಿಡೊಲ್ಲ ಸಾರ್."

"ನಮ್ಮಲ್ಲಿ ಒಬ್ಬರನ್ನಾದರೂ ಒಳಕ್ಕೆ ಬಿಡಪ್ಪ" ಎಂದು ವಿನಂತಿಸಿಕೊಂಡರು.

"ಆಗೊಲ್ಲ ಸಾರ್."

"ಹಾಗಾದ್ರೆ ಒಂದು ರೀತಿ ಮಾಡಪ್ಪ... ನೀವೇ ಒಳಕ್ಕೆ ಹೋಗಿ, ನಿಮ್ಮನ್ನು ಕಾಣುವುದಕ್ಕೆ ಶಶಿಧರ ಅನ್ನುವವರು ಕೋಲಾರದಿಂದ ಬಂದಿದ್ದಾರೆ ಅಂತ ಹೇಳಿ, ಅವರನ್ನೇ ಇಲ್ಲಿಗೆ ಬರುವುದಕ್ಕೆ ತಿಳಿಸ್ತೀರಾ?"

"ಆ ರೀತಿ ಯಾವುದೇ ಗುಮಾಸ್ತರನ್ನು ನಾನು ಹೋಗಿ ಕರೆಯಬಾರದು ಸಾರ್. ಹಂಗೇನಾದ್ರೂ ಮಾಡೂದು ಸಾಹೇಬರಿಗೆ ಗೊತ್ತಾದ್ರೆ ...ನನ್ನ ಮೇಲೆ ಕ್ರಮ ತೆಕೊಳ್ತರೆ.... ನೀವು ಮಧ್ಯಾಹ್ನ ಮೂರು ಘಂಟೆಯ ಮೇಲೆ ಬರ್ರೋಗಿ ಸಾರ್" ಎಂದು ಹೇಳಿ, ಅವರ ಎಲ್ಲಾ ಬೇಡಿಕೆಗಳನ್ನು ನಿರಾಕರಿಸಿದ.

ಎಷ್ಟೇ ಕಾಡಿ ಬೇಡಿದರೂ ಒಳಕ್ಕೆ ಬಿಡದ ಅಟೆಂಡರನ ಬಗ್ಗೆ, ಈಗ ಅವರೆಲ್ಲರಿಗೂ ತೀವ್ರವಾದ ಕೋಪ ಉಕ್ಕೇರಿತು.

"ಏನಯ್ಯ ನೀನು?... ನಮ್ಮನ್ನೂ ಒಳಕ್ಕೆ ಬಿಡೊಲ್ಲ... ಅವರನ್ನು ಇಲ್ಲಿಗೆ ಕರೆಯೊಲ್ಲ!"

"ನಿಯಮ ಹಾಗಿದೆ ಸಾರ್ ...ಅಲ್ಲಿ ಬರೆದು ಹಾಕಿರೋದನ್ನ ತಿರುಗ ಇನ್ನೊಂದು ಸತಿ... ನೀವೇ ಓದಿ ನೋಡಿ ಸಾರ್."

"ಓಹೋಹೋ... ನೀನೊಬ್ಬನೇನಾ ನಿಯಮ ಕಂಡಿರೋನು!" ಎಂದು ಒಬ್ಬ ಯುವಕ ಅಬ್ಬರಿಸಿದರೆ, ಮತ್ತೊಬ್ಬ ಯುವಕ–

"ನಿಯಮಗಳನ್ನೆ ತಲೆ ಮೇಲೆ ಹೊತ್ತುಕೊಂಡಿರುವ ದೊಡ್ಡ ಆಫೀಸರ್ ಇವನು" ಎಂದು ಅಣಕವಾಡಿದ.

"ರ್ರೀ ...ನೀವು ಬಾಯಿಗೆ ಬಂದಂಗೆ ಏನೇನೋ ಮಾತನಾಡಬೇಡ್ರಿ" ಎಂದು ಅಟೆಂಡರ್ ತಿರುಗಿ ಬಿದ್ದ... ಕೆಲವು ಕ್ಷಣಗಳ ಕಾಲ ಅವರ ನಡುವೆ ಮಾತಿನ ಚಕಮಕಿ ನಡೆಯತೊಡಗಿತು.

ಇದೆಲ್ಲವನ್ನು ಮೌನದಿಂದ ನೋಡುತ್ತಿದ್ದ ನಾನು ...ಒಂದು ವೇಳೆ ವಾಗ್ವಾದದಲ್ಲಿ ಅಟೆಂಡರ್ ಮೆತ್ತಗಾದರೆ, ಒಳನುಗ್ಗಲು ನನಗೂ ಅವಕಾಶ ಸಿಗುವುದೇನೋ....ಎಂಬ ಆಸೆಯಿಂದ ಕಾಯುತ್ತಿದ್ದೆ. ಆದರೆ ಅಟೆಂಡರ್ ಕಛೇರಿಯ ನಿಯಮಕ್ಕೆ ಬದ್ಧನಾಗಿದ್ದ.


ಈತ ಏನೇ ಮಾಡಿದರೂ ಬಗ್ಗುದಿಲ್ಲವೆಂಬುದು ಸ್ಪಷ್ಟವಾಗುತ್ತಿದ್ದಂತೆಯೇ, ಮೂವರು ಯುವಕರು ಬಂದಿದ್ದಷ್ಟೇ ವೇಗದಲ್ಲಿ ತುಂಬಾ ಬೇಸರದಿಂದ ಹಿಂತಿರುಗಿದರು.

ಈಗ ನಾನು ನಿಧಾನವಾಗಿ ...ಒಂದೊಂದೆ ಮೆಟ್ಟಿಲುಗಳನ್ನು ಇಳಿದು ...ಕೆಳಕ್ಕೆ ಬರುತ್ತಾ ...ನನ್ನ ಮತ್ತು ನನ್ನಂತೆ, ಅಲ್ಲಿಗೆ ಬಂದಿದ್ದ ಯುವಕರ ಮನೋಭಾವ ಮತ್ತು ವರ್ತನೆಯ ಬಗ್ಗೆ ಆಲೋಚಿಸತೊಡಗಿದೆನು.

ಅಟೆಂಡರ್ ಜೊತೆ ಮಾತನಾಡಿದ ನಾವೆಲ್ಲರೂ ಅಕ್ಷರವಂತರಾಗಿದ್ದೆವು. ಕಛೇರಿಯ ಆಡಳಿತ ನಿರ್ವಹಣೆಗೆ ಸಂಬಂಧಿಸಿದ ನಿಯಮವನ್ನು ಅಟೆಂಡರನ ಮುಖಾಂತರ ಕೇಳಿದ್ದಲ್ಲದೇ... ಸೂಚನಾ ಫಲಕದಲ್ಲಿ ಓದಿ ತಿಳಿದುಕೊಂಡರೂ... ಅದರಂತೆ ನಡೆಯದೆ ನಿಯಮ ಪಾಲಕನನ್ನೆ ವಿರೋಧಿಸಿದೆವು. ನಮ್ಮೆಲ್ಲರಿಗೂ ಈ ಸಂದರ್ಭದಲ್ಲಿ, ನಮ್ಮ ನಮ್ಮ ವೈಯಕ್ತಿಕ ಕಾರ್ಯ ಮುಖ್ಯವಾಗಿತ್ತೇ ಹೊರತು ...ಸಾರ್ವಜನಿಕ ನಿಯಾಮವಳಿ ಮುಖ್ಯವೆನಿಸಲಿಲ್ಲ. ಅತಿ ಸಾಮಾನ್ಯವಾದ ನಿಯಮವೊಂದನ್ನು ಕಟ್ಟು ನಿಟ್ಟಾಗಿ ಜಾರಿಗೆ ತಂದ ಒಬ್ಬ ಅಟೆಂಡರ್... ಇಷ್ಟೊಂದು ಪ್ರತಿಭಟನೆಯನ್ನು ಎದುರಿಸುತ್ತಾ ನಾನಾ ಬಗೆಯ ತಿರಸ್ಕಾರಕ್ಕೆ ಗುರಿಯಾಗುತ್ತಿರಬೇಕಾದರೆ ...ಇನ್ನು ಈ ದೇಶದಲ್ಲಿ ಸಾರ್ವಜನಿಕ ಹಿತಾಸಕ್ತಿಯ ನಿಯಮಗಳನ್ನು ಕಾರ್ಯರೂಪಕ್ಕೆ ತರಲು ಯತ್ನಿಸುವ ಕರ್ತವ್ಯನಿಷ್ಠರಾದ ಪ್ರಾಮಾಣಿಕ ವ್ಯಕ್ತಿಗಳು ...ಯಾವ ಯಾವ ಬಗೆಯ ದುರಂತಗಳಿಗೆ ಬಲಿಯಾಗುತ್ತಿದ್ದಾರೆಯೋ... ಯಾರು ತಾನೇ ಬಲ್ಲರು!

⌘

ಹೆಂಗೊ ತುಂಬಿಸ್ಬುಡಿ ಸಾರ್



ಈಗ ನನಗೆ ಐವತ್ಮೂರು ವರ್ಷ ವಯಸ್ಸು. ಸುಮಾರು ಆರೇಳು ವರ್ಷಗಳ ಹಿಂದೆ ಬಸ್ಸಿನಲ್ಲಿ ಸಹ ಪ್ರಯಾಣಿಕರೊಬ್ಬರು "ನಿಮ್ಮ ರಿಟೈರ್‌ಮೆಂಟ್ ಯಾವಾಗ ಸಾರ್" ಎಂದು ಪ್ರಶ್ನಿಸಿದರು. ಅವರ ಪ್ರಶ್ನೆ ನನ್ನನ್ನು ಬಹಳ ಕಂಗೆಡಿಸಿತು. ಮನೆಗೆ ಬಂದ ಕೂಡಲೇ, ನಿಲುಗನ್ನಡಿಯ ಮುಂದೆ ನಿಂತು.... ನನ್ನ ದೇಹದ ಸ್ಥಿತಿಯನ್ನು ನೋಡಿಕೊಳ್ಳತೊಡಗಿದೆ. ಅಷ್ಟರಲ್ಲಿ ಅಲ್ಲಿಗೆ ಬಂದ ನನ್ನ ಹೆಂಡತಿ "ಇದ್ಯಾಕ್ ಹಿಂಗೆ ಕನ್ನಡಿ ನೋಡ್ಕೊಳ್ತ ಇದ್ದೀರಿ! .... ಏನ್ ವಿಶೇಷ?" ಎಂದಳು.

"ಅಲ್ಲ ಕಣೆ... ಇವತ್ತು ಬಸ್ನಲ್ಲಿ ಅವರ್ಯಾರೊ ಒಬ್ಬರು... ನಿಮ್ಮ ರಿಟೈರ್‌ಮೆಂಟ್ ಯಾವಾಗ ಅಂತ ಕೇಳ್ತಾರಲ್ಲ.... ಅಷ್ಟೊಂದು ವಯಸ್ಸಾದವನಂತೆ ಕಾಣಿಸ್ತೀನೇನೆ?"

"ಯಾರ್ರೀ ಅವರು?"

"ಅದ್ಯಾರೊ ಗೊತ್ತಿಲ್ಲ....ಸ್ವಲ್ಪ ಮುಖ ಪರಿಚಯ ಅಷ್ಟೆ."

"ಅವರ್ಗೆಲ್ಲೊ ಕಣ್ಣಿನ ದೃಷ್ಟಿ ಸರಿಯಿಲ್ಲ.... ನೋಡೋಕೆ ನೀವು.... ಒಳ್ಳೆ ಮೂವತ್ತು ಮೂವತ್ತೈದು ವರ್ಷದವರಂಗೆ ಕಾಣಿಸ್ತೀರಿ" ಎಂದಳು. ಅವಳ ಮಾತುಗಳನ್ನು ಕೇಳಿ, ನಾನು ಇನ್ನಷ್ಟು ಗಾಬರಿಗೊಂಡೆ. ಏಕೆಂದರೆ ನನ್ನ ಹೆಂಡತಿಗೆ ದೃಷ್ಟಿ ದೋಷವಿದೆ ಎಂಬುದು ಸ್ಪಷ್ಟವಾದಂತಾಗಿತ್ತು.

ಇತ್ತೀಚೆಗೆ ನನ್ನ ತಲೆಯ ಕೂದಲಲ್ಲಿ ಮುಕ್ಕಾಲು ಭಾಗ ಬೆಳ್ಳಗಾಗಿರುವುದರಿಂದ ಮತ್ತು ಕಾಲ ಧರ್ಮಕ್ಕೆ ತಕ್ಕಂತೆ ಮುಖದಲ್ಲಿ ಉಂಟಾಗುತ್ತಿರುವ ಬದಲಾವಣೆಗಳಿಂದ.... ನಿವೃತ್ತಿಯ ಕಡೆಗೆ ಸಾಗುತ್ತಿರುವುದು ಎದ್ದು ಕಾಣುತ್ತದೆ. ಬಸ್ಸು ರೈಲುಗಳಲ್ಲಿ ಸಂಚರಿಸುವಾಗ ಮತ್ತು ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ಭೇಟಿಯಾಗುವ ಪರಿಚಿತರು, ಲೋಕಾಭಿರಾಮವಾಗಿ ಅದು ಇದು ಮಾತನಾಡುತ್ತಾ, ಮಾತಿನ ಮಧ್ಯದಲ್ಲಿ "ಇನ್ನೆಷ್ಟು ವರ್ಷ ಸರ್ವೀಸ್ ಇದೆ?" ಎಂದು ಕೇಳುತ್ತಾರೆ. "ಇನ್ನೈದು ವರ್ಷಗಳಿವೆ" ಎಂದು ನಾನು ಉತ್ತರಿಸಿದಾಗ.... ಅವರಲ್ಲಿ ಕೆಲವರಿಂದ ಬರುವ ಪ್ರತಿಕ್ರಿಯೆಗಳು ಅತ್ಯಂತ ವಿಚಿತ್ರ ರೀತಿಯಲ್ಲಿರುತ್ತವೆ.

"ಇನ್ನೂ ಐದು ವರ್ಷ ಇದೆಯಾ!" ಎಂದು ಅಚ್ಚರಿಯನ್ನು ವ್ಯಕ್ತಪಡಿಸುತ್ತಾ.... ನಾನು ಈಗಾಗಲೇ ನಿವೃತ್ತಿಗೊಂಡು ಮನೆಯಲ್ಲಿರಬೇಕಾಗಿತ್ತು.... ಎನ್ನುವಂತೆ ನನ್ನತ್ತ ನೋಡುತ್ತಾರೆ.

"ಅಷ್ಟೇನಾ ಇರೋದು?... ಹೋಗ್ಲಿ ಬಿಡಿ... ಹೆಂಗಿದ್ರೂ ಕೇಂದ್ರದೋರು ಈಗ ಅರವತ್ತು ವರ್ಷಕ್ಕೆ ಏರಿಸವ್ರೆ, ಅದನ್ನೇ ರಾಜ್ಯದೋರು ಜಾರಿಗೆ ತಂದ್ರೆ.. ಸರ್ವೀಸ್ನಲ್ಲಿ ಇದ್ಕೊಂಡೇ ಇನ್ನೊಂದೆರಡು ವರ್ಷ ಹೆಂಗೊ ಕಾಲ ತಳ್ಳಬಹುದು" ಎಂದು ಸಹಾನುಭೂತಿಯನ್ನು ಕೆಲವರು ವ್ಯಕ್ತಪಡಿಸುತ್ತಾರೆ.

"ಇನ್ನೂ ಐದು ವರ್ಷ ಇದೆಯಾ?... ಅಷ್ಟೊತ್ತಿಗೆ ಪೇ ಸ್ಕೇಲ್‌ಗಳು ಸಾಕಷ್ಟು ರಿವೈಸ್ ಆಗಿ... ನಿಮ್ಮ ಪೆನ್‌ಷನ್‌ಗೆ ಅನುಕೂಲವಾಗುತ್ತೆ... ಹೆಂಗೊ ಕಾಲ ನೂಕ್ಬಿಡಿ

ಸಾರ್" ಎಂದು ಹೇಳುತ್ತಾ... ಹೆಚ್ಚಾಗಿ ಬರಲಿರುವ ವೇತನ ಶ್ರೇಣಿಗಾಗಿ ಉಳಿದ ಅವಧಿಯನ್ನು ಹೇಗೆ ಕಳೆಯಬೇಕೆಂಬ ಸೂಚನೆಯನ್ನು ಮತ್ತೆ ಕೆಲವರು ನೀಡುತ್ತಾರೆ.

ಸರ್ಕಾರಿ ನೌಕರರು ತಮ್ಮ ಕಾರ್ಯಕ್ಷೇತ್ರದ ನೆಲೆಗಳಲ್ಲಿ ತಾವು ಪಡೆಯುತ್ತಿರುವ ಸಂಬಳಕ್ಕೆ ಎಷ್ಟರ ಮಟ್ಟಿಗೆ ಅರ್ಹರಾಗಿ ದುಡಿಯುತ್ತಿದ್ದಾರೆ? ....ಅವರಿಂದ ಸಮಾಜಕ್ಕೆ ಒಳ್ಳೆಯದಾಗುತ್ತಿದೆಯೇ ಅಥವಾ ಕೆಡುಕಾಗುತ್ತಿದೆಯೇ? ....ಅವರು ಪ್ರಾಮಾಣಿಕವಾಗಿ ದುಡಿಯುವಾಗ... ಎದುರಿಸುವ ಸವಾಲುಗಳೇನು?... ಮಾಡುವ ಉತ್ತಮ ಕಾರ್ಯಗಳು ಯಾವುವು?... ಎಂಬುದರ ಆಧಾರದ ಮೇಲೆ ನೌಕರರ ಜೀವನದ ಸಾಧನೆಗಳು ನಿರ್ಧಾರವಾಗುವುದಿಲ್ಲ. ಆದುದರಿಂದಲೇ ಬಹುತೇಕ ಮಂದಿಯ ದೃಷ್ಟಿಯಲ್ಲಿ-

"ಸರ್ಕಾರಿ ಕೆಲಸವೆಂಬುದು ದಿನಗಳನ್ನು ಕಳೆಯುವ... ನೂಕುವ ಅಥವಾ ತುಂಬಿಸುವ ಕ್ರಿಯೆಯಾಗಿ" ಕಂಡು ಬರುತ್ತಿದೆ.

ಮೊನ್ನೆ ಭೇಟಿಯಾದ ಪರಿಚಿತರೊಬ್ಬರು ಪ್ರತಿಕ್ರಿಯಿಸಿದ ರೀತಿಯಂತೂ ತುಂಬಾ ಆಘಾತಕಾರಿಯಾಗಿತ್ತು. ಮಾಮೂಲಿ ಪ್ರಶ್ನೆಯಾಗಿ ನನ್ನ ಉಳಿದಿರುವ ಸರ್ವೀಸಿನ ಅವಧಿಯನ್ನು ಕೇಳಿ ತಿಳಿದುಕೊಂಡ ನಂತರ-

"ಇದುವರೆಗೆ ಒಟ್ಟು... ಎಷ್ಟು ವರ್ಷ ಸರ್ವೀಸ್ ಆಗಿದೆ ಸಾರ್?" ಎಂದು ಪ್ರಶ್ನಿಸಿದರು.

"ಇಪ್ಪತ್ತೇಳು ವರ್ಷವಾಯ್ತು"

"ಓ... ಬಿಡಿ ಸಾರ್... ಇಪ್ಪತ್ತೇಳು ವರ್ಷಗಳೇ ಕಳೆದು ಹೋಗಿರುವಾಗ, ಇನ್ನೈದು ವರ್ಷ ಯಾವ ಮಹಾ?... ಹೆಂಗೊ ತುಂಬಿಸ್ಬುಡಿ ಸಾರ್".

⌘

ಮುದುಕರೇ ಮುಂದೆ ಬನ್ನಿ



ಶೈಕ್ಷಣಿಕ ವರ್ಷ ಪ್ರಾರಂಭಗೊಂಡ ಜುಲೈ ತಿಂಗಳಿನಲ್ಲಿ, ನಗರದ ಒಂದು ಪ್ರತಿಷ್ಠಿತ ಕಾಲೇಜಿನಲ್ಲಿ ಒಂದು ಮಧ್ಯಾಹ್ನ ನಾಲ್ಕು ಗಂಟೆಯ ವೇಳೆಯಲ್ಲಿ ಪ್ರಿನ್ಸಿಪಾಲರಿಗೆ ಸ್ವಲ್ಪ ಬಿಡುವು ದೊರಕಿತ್ತು. ನಾಲ್ಕು ಮಂದಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಆಗ ತಾನೆ ಪರಿಹರಿಸಿ, ಅವರನ್ನು ಅತ್ತ ಕಳುಹಿಸಿ, ಇತ್ತ ಒಂದು ಫೈಲನ್ನು ನೋಡುವುದರಲ್ಲಿ ಪ್ರಿನ್ಸಿಪಾಲರು ಮಗ್ನರಾಗಿದ್ದರು. ಆಗ ಒಳಕ್ಕೆ ಬಂದ ಅಟೆಂಡರ್–

"ಸಾರ್, ಪ್ರೊಫೆಸರ್ ರಾಮಚಂದ್ರಯ್ಯ ಅನ್ನುವವರು ತಮ್ಮನ್ನು ಕಾಣಬೇಕಂತೆ ಸಾರ್" ಎಂದ.

"ಕಳುಹಿಸಪ್ಪ..... ಒಳಕ್ಕೆ" ಎಂದು ಪ್ರಿನ್ಸಿಪಾಲರು ಅನುಮತಿಸಿದರು.

ಕರ್ನಾಟಕದ ವಿವಿಧ ಕಾಲೇಜುಗಳಲ್ಲಿ ಮೂವತ್ನಾಲ್ಕು ವರ್ಷಗಳ ಕಾಲ ಸರ್ವೀಸ್‌ನಲ್ಲಿದ್ದು, ಕಳೆದ ವರ್ಷ ನಿವೃತ್ತರಾಗಿದ್ದ ಫಿಲಾಸಫಿ ಪ್ರೊಫೆಸರ್ ರಾಮಚಂದ್ರಯ್ಯನವರು ಪ್ರಿನ್ಸಿಪಾಲರ ಕೊಠಡಿಯೊಳಕ್ಕೆ ಬರುತ್ತಾ "ನಮಸ್ಕಾರ ಸಾರ್" ಎಂದರು.

"ನಮಸ್ಕಾರ... ಬನ್ನಿ... ಚೆನ್ನಾಗಿದ್ದೀರ ರಾಮಚಂದ್ರಯ್ಯ?"

"ರಿಟೈರ್ಡ್ ಆಗಿರೋರ ಚಂದ... ಏನ್ ಕೇಳ್ತೀರಿ ಸಾರ್!" ಎಂದು ದೇಶಾವರಿ ನಗೆ ಬೀರುತ್ತ, ಪ್ರಿನ್ಸಿಪಾಲರ ಮುಂದಿನ ಖುರ್ಚಿಯಲ್ಲಿ ಕುಳಿತುಕೊಂಡರು.

"ಯಾಕೆ... ಬಿ.ಪಿ ಇದೆಯಾ?"

"ಬಿ.ಪಿ ಜೊತೆಗೆ ಶುಗರ್ ಕೂಡಾ ಇದೆ ಸಾರ್. ವಯಸ್ಸಾದಂತೆ ಇವೆಲ್ಲಾ ಇದ್ದದ್ದೆ... ಬಂದದ್ದನ್ನೆಲ್ಲಾ ಅನುಭವಿಸುತ್ತಾ ಹೇಗೋ ಕಾಲ ನೂಕ್ಬೇಕಲ್ಲ!" ತತ್ವಜ್ಞಾನಿಯಾಗಿಯೇ ಉತ್ತರಿಸಿದರು.

"ಏನ್ ಬಂದ್ರಿ?... ಯಾರನ್ನಾದ್ರೂ ಕಾಲೇಜಿಗೆ ಸೇರಿಸ್ಬೇಕಾಗಿತ್ತ?"

"ಇಲ್ಲಾ ಸಾರ್... ನನ್ನ ಇಬ್ಬರು ಮಕ್ಕಳ ಎಜುಕೇಶನ್ ಮುಗಿದು ಅವರು ಗೌರ್ನಮೆಂಟ್ ಸರ್ವೀಸ್ನಲ್ಲಿದ್ದಾರೆ... ಮಗ ಅಸಿಸ್ಟೆಂಟ್ ಕಮೀಷನರ್.... ಮಗಳು ಲೆಕ್ಚರರ್ ಆಗಿದ್ದಾಳೆ.. ಇಬ್ಬರಿಗೂ ಮದುವೇನೂ ಆಗಿದೆ."

ಪ್ರಿನ್ಸಿಪಾಲರು ತುಂಬಾ ಸಂತೋಷದಿಂದ–

"ಮಕ್ಕಳ ಭವಿಷ್ಯವನ್ನು ತುಂಬಾ ಚೆನ್ನಾಗಿ ರೂಪಿಸಿದ್ದೀರಿ. ಇನ್ನೇನು ಎಲ್ಲಾ ಜವಾಬ್ದಾರಿಯನ್ನು ಕಳ್ಕೊಂಡು ಆರಾಮವಾಗಿದ್ದೀರಿ" ಎಂದರು.

"ಆರಾಮವಾಗಿ ಇರೋದೆ ಈಗ ಒಂದು ಸಮಸ್ಯೆಯಾಗಿದೆ ಸಾರ್... ಕೆಲಸವಿಲ್ಲದೆ. ದಿನಗಳನ್ನು ಕಳೆಯುವುದೇ ಕಷ್ಟವಾಗಿದೆ... ಮೊನ್ನೆ ಯಾರೋ ಹೇಳುದ್ರು.. ಕಾಲೇಜುಗಳಲ್ಲಿ ಹೊಸದಾಗಿ ಕ್ರಿಯೇಟ್ ಆಗುವ ಕಾರ್ಯಭಾರಕ್ಕೆ ನಿವೃತ್ತ ಪ್ರಾಧ್ಯಾಪಕರನ್ನೇ ತೆಗೆದುಕೊಳ್ಳಬೇಕು ಅಂತ ಕಾಲೇಜು ಶಿಕ್ಷಣ ಇಲಾಖೆಯಿಂದ ಆದೇಶ ಬಂದಿದೆಯಂತೆ... ನಿಜವಾ ಸಾರ್".

"ಹೌದು, ಕಳೆದ ತಿಂಗಳು ಆ ರೀತಿ ಆರ್ಡರ್ ಬಂದಿದೆ."

"ಫಿಲಾಸಫಿ ಡಿಪಾರ್ಟ್‌ಮೆಂಟಿನಲ್ಲಿ ಪೋಸ್ಟ್ ಏನಾದ್ರೂ ಖಾಲಿ ಇದೆಯಾ

ಸಾರ್?" ಎಂದು ರಾಮಚಂದ್ರಯ್ಯರವರು ಕೇಳುತ್ತಿರುವಷ್ಟರಲ್ಲಿ ಮತ್ತೆ ಒಳಕ್ಕೆ ಬಂದ ಅಟೆಂಡರ್–

"ಮಹೇಶ್ ಅನ್ನುವವರು ತಮ್ಮನ್ನು ನೋಡಬೇಕಂತೆ ಸಾರ್" ಎಂದು ಪ್ರಿನ್ಸಿಪಾಲರಿಗೆ ತಿಳಿಸಿದ.

"ಒಳಕ್ಕೆ ಕಳುಹಿಸು ಅವರನ್ನ" ಎಂದು ಪ್ರಿನ್ಸಿಪಾಲರು ಹೇಳುತ್ತಿದ್ದಂತೆಯೇ, ಕ್ಷಣ ಮಾತ್ರದಲ್ಲಿ ಅಟೆಂಡರ್ ಹೊರಕ್ಕೆ ಹೋದ. ಮರುಕ್ಷಣದಲ್ಲೇ ಒಬ್ಬ ಯುವಕ ಒಳಕ್ಕೆ ಬಂದ... ತಮ್ಮ ಕಡೆಗೆ ಬರುತ್ತಿರುವ ವ್ಯಕ್ತಿಯನ್ನು ಪ್ರಿನ್ಸಿಪಾಲರು ಸೂಕ್ಷ್ಮವಾಗಿ ಗಮನಿಸಿದರು... ಸುಮಾರು ಇಪ್ಪತ್ನಾಲ್ಕು ಇಪ್ಪತ್ತೈದು ವರ್ಷದ ತರುಣ, ಆರೋಗ್ಯಪೂರ್ಣವಾದ ದೃಢಕಾಯವನ್ನು ಹೊಂದಿದ್ದ. ಅವನ ಮುಖದಲ್ಲಿ ಉತ್ಸಾಹದ ಕಳೆ ಕಂಗೊಳಿಸುತ್ತಿತ್ತು.

"ನಮಸ್ಕಾರ ಸಾರ್... ನನ್ನ ಹೆಸರು ಮಹೇಶ್ ಅಂತ".

"ನಮಸ್ಕಾರ ಬನ್ನಿ ಕುಂತ್ಕೊಳ್ಳಿ" ಎಂದು ಪಿನ್ಸಿಪಾಲರು ಹೇಳಿದ ನಂತರ ರಾಮಚಂದ್ರಯ್ಯನವರ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಮಹೇಶ್ ಕುಳಿತುಕೊಂಡ.

"ಏನ್ ಬಂದ್ರಿ?" ಎಂದು ಪ್ರಿನ್ಸಿಪಾಲರು ಕೇಳಿದರು.

"ಸಾರ್... ನಾನು ಫಿಲಾಸಫಿ ಎಂ.ಎ., ನಲ್ಲಿ ಫಸ್ಟ್ ರ್‍ಯಾಂಕ್ ಬಂದಿದ್ದೇನೆ. ... ನಾಲ್ಕು ಗೋಲ್ಡ್ ಮೆಡಲ್‌ಗಳು ಬಂದಿವೆ ಸಾರ್... ಎನ್.ಇ.ಟಿ.ನಲ್ಲೂ ತೇರ್ಗಡೆ ಯಾಗಿದ್ದೇನೆ."

"ವೆರಿ ಗುಡ್... ನಿಮ್ಮದು ತುಂಬಾ ಒಳ್ಳೆಯ ಸಾಧನೆ... ಈಗ ನನ್ನಿಂದ ಏನಾಗ್ಬೇಕು?"

"ನಿಮ್ಮ ಕಾಲೇಜಿನ ಫಿಲಾಸಫಿ ಡಿಪಾರ್ಟ್‌ಮೆಂಟಿನಲ್ಲಿ ಒಂದು ಪೋಸ್ಟ್ ಖಾಲಿ ಇದೆ ಅಂತ ತಿಳಿದು ಬಂತು... ನನಗೆ ಒಂದು ಅವಕಾಶ ಕೊಟ್ಟರೆ... ಬಹಳ ಉಪಕಾರವಾಗುತ್ತೆ ಸಾರ್".

"ಫಿಲಾಸಫಿ ಡಿಪಾರ್ಟಮೆಂಟಿನಲ್ಲಿ ಒಂದು ಪೋಸ್ಟ್ ಖಾಲಿ ಇದೆ. ಆದರೆ..." ಎಂದು ಮಾತನ್ನು ಅರ್ಧಕ್ಕೆ ನಿಲ್ಲಿಸಿ... ತಮ್ಮ ಮುಂದಿದ್ದ ಒಂದು ಫೈಲನ್ನು ಬಿಡಿಸಿ ತೆಗೆದು ... ಅದರಲ್ಲಿದ್ದ ಸರ್ಕಾರಿ ಆದೇಶದ ಒಂದು ಪ್ರತಿಯನ್ನು ಮಹೇಶನಿಗೆ ತೋರಿಸುತ್ತಾ "ಇದನ್ನು ಸ್ವಲ್ಪ ಓದಿ" ಎಂದರು. ಮಹೇಶ್ ಸಂಕೋಚದಿಂದ ಹಿಂಜರಿಯುತ್ತಾ "ಪರವಾಗಿಲ್ಲ ಸಾರ್... ಅದೇನು ಅಂತ ನೀವೇ ಹೇಳಿ ಸಾರ್ ಎಂದು ನುಡಿದ. 'ಇಲ್ಲ ...ಇಲ್ಲ ಖುದ್ದಾಗಿ ಇದನ್ನು ನೀವೇ ಓದಬೇಕು. ಏಕೆಂದರೆ ನಾನು ಹೇಳಿದರೆ ನಿಮ್ಮಂಥ ಯುವಕರಿಗೆ ನಂಬಿಕೆ ಬರಲ್ಲ. ಈಗಾಗ್ಲೆ ಎಷ್ಟೊ ಮಂದಿ ತಪ್ಪು ತಿಳ್ಕೊಂಡು ನನ್ನನ್ನು ಬಯ್ಕೊಂಡು ಹೋಗಿದ್ದಾರೆ. ಆದ್ದರಿಂದ ಇದನ್ನ ನಿಮ್ಮ ಕೈಗೆ ಕೊಡ್ತಾ ಇದ್ದೀನಿ.

ಸ್ವಲ್ಪ ಗಟ್ಟಿಯಾಗಿಯೇ ಓದಿ... ರೆಡ್ ಇಂಕಿನಲ್ಲಿ ಅಂಡರ್‌ಲೈನ್ ಮಾಡಿರುವ ಸಾಲುಗಳನ್ನಾದರೂ ಓದಿ" ಎಂದು ಒತ್ತಾಯ ಮಾಡಿದರು.

ಈಗ ಮಹೇಶ್ ಆ ಸಾಲುಗಳನ್ನು ಗಟ್ಟಿಯಾಗಿ ಓದತೊಡಗಿದ "ಯಾವುದೇ ವಿಭಾಗದಲ್ಲಿ ಹೆಚ್ಚುವರಿಯಾಗುವ ಕಾರ್ಯಭಾರ ನಿರ್ವಹಣೆಗೆ, ನಿವೃತ್ತ ಪ್ರಾಧ್ಯಾಪಕರನ್ನೇ ತಾತ್ಕಾಲಿಕವಾಗಿ ನೇಮಿಸಿಕೊಳ್ಳತಕ್ಕದ್ದು. ಯಾವುದೇ ಕಾರಣದಿಂದಲೂ ಸ್ನಾತ್ತಕೋತ್ತರ ಪದವೀಧರ ಯುವಕ ಯುವತಿಯರನ್ನು ನೇಮಕ ಮಾಡಿಕೊಳ್ಳಬಾರದು. ಈ ಆದೇಶವನ್ನು ಉಲ್ಲಂಘಿಸಿದ ಪ್ರಿನ್ಸಿಪಾಲರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ."

"ಯಾಕೆ ಸಾರ್ ...ಈ ರೀತಿ ಆದೇಶ ನೀಡಿದ್ದಾರೆ?" ಎಂಬ ಮಹೇಶನ ಪ್ರಶ್ನೆಗೆ... ಪ್ರಿನ್ಸಿಪಾಲರು ವಿಷಾದದ ನಗೆ ಬೀರುತ್ತಾ "ನಿಮ್ಮಂಥ ಯುವಕರನ್ನು ಒಂದು ಸಾರಿ ಕೆಲಸಕ್ಕೆ ನೇಮಿಸಿಕೊಂಡ್ರೆ ಮತ್ತೆ ಸುಲಭದಲ್ಲಿ ತೆಗೆಯುವುದಕ್ಕೆ ಆಗುವುದಿಲ್ಲ. ...ನೀವು ಕೋರ್ಟಿಗೆ ಹೋಗಿ 'ಸ್ಟೇ ಆರ್ಡರ್' ತಂದು "ನಮ್ಮನ್ನೇ ಖಾಯಂ ಮಾಡಿ" ಅಂತ ಹೋರಾಟ ಪ್ರಾರಂಭಿಸ್ತೀರಿ. ಅದಕ್ಕೆ ಯುವಕರ ಬದಲು, ರಿಟೈರ್ಡ್ ಆಗಿರುವವರನ್ನು ನೇಮಕ ಮಾಡಿಕೊಂಡ್ರೆ, ಮುಂದಕ್ಕೆ ಯಾವುದೇ ರೀತಿಯ ಸಮಸ್ಯೆಗಳು ಬರುವುದಿಲ್ಲ... ಸರ್ಕಾರಕ್ಕೆ ಆರ್ಥಿಕವಾಗಿ ಹೊರೆ ಬೀಳುವುದಿಲ್ಲ." ಎಂದರು.

ಸರ್ಕಾರಿ ಆದೇಶವನ್ನು ಓದಿ, ಜೊತೆಗೆ ಪ್ರಿನ್ಸಿಪಾಲರ ವ್ಯಾಖ್ಯಾನವನ್ನು ಕೇಳಿದ ನಂತರ... ಮಹೇಶ್ ದಿಗ್ಭ್ರಾಂತನಾಗಿ ಕುಳಿತಿದ್ದ. ಪ್ರಿನ್ಸಿಪಾಲರ ಕೊಠಡಿಯಲ್ಲಿ ಒಂದೆರಡು ಕ್ಷಣ ಮೌನ ಆವರಿಸಿತು. ಅನಂತರ ಪ್ರಿನ್ಸಿಪಾಲರು ರಾಮಚಂದ್ರಯ್ಯನವರನ್ನು ಕುರಿತು–

"ನಾಳೆಯಿಂದ ನೀವು ಡ್ಯೂಟಿಗೆ ಬರುವುದಕ್ಕೆ ಆಗುತ್ತದೆಯೇ?" ಎಂದು ಪ್ರಶ್ನಿಸಿದರು.

"ಬರ್ತೀನಿ... ಸಾರ್".


"ತರಗತಿಗಳು ಈಗಾಗಲೇ ಪ್ರಾರಂಭವಾಗಿವೆ. ನಾಳೆ ಬೆಳಿಗ್ಗೆಯಿಂದಲೇ ಕ್ಲಾಸ್ ತೆಗೆದುಕೊಳ್ಳಿ" ಎಂದು ಪ್ರಿನ್ಸಿಪಾಲರು ಆದೇಶ ನೀಡಿದರು.

"ತುಂಬಾ ಥ್ಯಾಂಕ್ಸ್ ಸಾರ್" ಎಂದು ಹೇಳಿ... ಅತ್ತ ರಾಮಚಂದ್ರಯ್ಯನವರು ಹೊರ ನಡೆಯುತ್ತಿದ್ದಂತೆಯೇ... ಇತ್ತ ಮಂಕಾಗಿ ಕುಳಿತಿದ್ದ ಮಹೇಶನನ್ನು ನೋಡುತ್ತ ಪ್ರಿನ್ಸಿಪಾಲರು ನುಡಿದರು_

"ಸಾರಿ ಯಂಗ್ ಮ್ಯಾನ್... ನಿಮ್ಮಲ್ಲಿರುವ ಒಂದೇ ಒಂದು ಅನರ್ಹತೆ ಎಂದರೆ ನೀವು ರಿಟೈರ್ಡ್ ಪರ್ಸನ್ ಆಗ್ದೇ ಇರೋದು!"

⌘

ಬೋರ್‌ವೆಲ್ ಹಾಲು



ಒಂದು ಶನಿವಾರ ಬೆಳಿಗ್ಗೆ ಏಳೂವರೆ ಗಂಟೆಯ ವೇಳೆಯಲ್ಲಿ ಮಂಡ್ಯ ನಗರದ ಬೀದಿಯೊಂದರಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ನನ್ನ ಸಮೀಪದಲ್ಲೆ ಸುಮಾರು ಎಂಟು ವರ್ಷ ವಯಸ್ಸಿನ ಮೂವರು ಗಂಡು ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಅವರಲ್ಲಿ ಒಬ್ಬ ಹುಡುಗ "ಲೋ... ಅಲ್ನೋಡೋ..." ಎಂದು ಜೋರಾಗಿ ಕಿರುಚಿದ. ಧ್ವನಿ ಮಾಡಿದ ಹುಡುಗನ ಕಡೆಗೆ ಮೊದಲು ನೋಡಿ, ಅನಂತರ ಆ ಹುಡುಗರೆಲ್ಲರ ದಿಟ್ಟಿ ಹರಿದಿದ್ದ ಕಡೆಗೆ ನೋಡಿದೆ.

ಬೀದಿಯ ಬದಿಯಲ್ಲಿದ್ದ ಬೋರ್‌ವೆಲ್‌ನಿಂದ, ಹಾಲಿನ ಎರಡು ಡಬ್ಬಗಳಿಗೆ ಹಾಲು ಮಾರುವ ವ್ಯಕ್ತಿಯೊಬ್ಬ ನೀರನ್ನು ಒತ್ತುತ್ತಿದ್ದ. ಹಳ್ಳಿಯಿಂದ ಸಂಗ್ರಹಿಸಿ ತಂದಿದ್ದ

ಅರ್ಧ ಅಥವಾ ಮುಕ್ಕಾಲು ಪ್ರಮಾಣದ ಹಾಲಿಗೆ ಬೋರ್‌ವೆಲ್ ನೀರು ಬೆರೆತು, ಕ್ಷಣ ಮಾತ್ರದಲ್ಲಿ ಡಬ್ಬಗಳು ತುಂಬಿ ತುಳುಕತೊಡಗಿದವು.

ಹಾಲು ಮಾರುವ ವ್ಯಕ್ತಿಯ ಬಳಿಗೆ ಬಂದ ಹುಡುಗ... ಮತ್ತಷ್ಟು ಎತ್ತರದ ಧ್ವನಿಯಲ್ಲಿ "ರ್ರೀ.....ಬೋರ್‌ವೆಲ್ ನೀರ್ ತುಂಬಿ, ದಿನಾ ನಮಗೆ ಹಾಲು ಕೊಡ್ತೀರಾ?.... ಬನ್ನಿ ಮನೆಗೆ....ಅಮ್ಮನಿಗೆ ಹೇಳ್ತೀನಿ.... ಇದು ಬೋರ್‌ವೆಲ್ ಹಾಲು ಅಂತ" ಎಂದಾಗ, ಹಾಲಿನವನು ಯಾವ ಪ್ರತಿಕ್ರಿಯೆಯನ್ನು ಮಾಡಲಿಲ್ಲ. ಹುಡುಗರು ಮುಂದೆ ನಡೆದರು.

ಹಾಲಿಗೆ ನೀರನ್ನು ಬೆರೆಸುವ ಕ್ರಿಯೆಯನ್ನು ಕಂಡು, ಆ ಹುಡುಗನ ಮುಗ್ಧ ಮನಸ್ಸು ಪಟ್ಟ ಆಶ್ಚರ್ಯ ಮತ್ತು ಅನುಭವಿಸಿದ ಆಘಾತ.... ಕ್ಷಣ ಕಾಲ ನನ್ನನ್ನು ಚಿಂತನೆಗೆ ಗುರಿ ಮಾಡಿತು. ಈ ಹಿಂದೆ ನಡೆದಿದ್ದ, ಇದೇ ಬಗೆಯ ಘಟನೆಯೊಂದು ನೆನಪಿಗೆ ಬಂತು. ನನ್ನ ಸ್ನೇಹಿತರೊಬ್ಬರ ಮನೆಯ ಮುಂದುಗಡೆಯಿದ್ದ ಬೋರ್‌ವೆಲ್ಲಿನಿಂದ ಸಾರ್ವಜನಿಕವಾಗಿ ಎಲ್ಲರ ಮುಂದೆಯೆ ತನ್ನ ಹಾಲಿನ ಡಬ್ಬಗಳಿಗೆ ನೀರನ್ನು ತುಂಬಿ, ಅನಂತರ ಮನೆಗೆ ಹಾಲನ್ನು ನೀಡಿದಾಗ, ಹಾಲಿನವನಿಗೂ ಮತ್ತು ನನ್ನ ಸ್ನೇಹಿತರಿಗೂ ನಡೆದಿದ್ದ ಸಂಭಾಷಣೆ–


"ಏನಪ್ಪ! ನಮ್ ಕಣ್ ಮುಂದೇನೆ ಈ ರೀತಿ ಬೋರ್‌ವೆಲ್ ನೀರ್ ತುಂಬಿ ನಮಗೆ ಹಾಲು ಕೊಡ್ತಿಯಲ್ಲ. ಸರಿಯೇನಯ್ಯ ಇದು?"

"ಇದರಲ್ಲಿ ತಪ್ಪೇನು ಸಾರ್? ಹಳ್ಳಿಯಿಂದ ಕೊಂಡ್ಕೊಂಡು ತಂದ ಹಾಲ್ನ... ಹಂಗಂಗೇ ನಿಮಗೆ ಕೊಟ್ಟುಬುಟ್ರೆ... ನಂಗೇನೂ ಗಿಟ್ಟೋದಿಲ್ಲ. ಇದರಲ್ಲಿ ಮೂರ್ಕಾಸು ಅಂತ ಸಂಪಾದ್ನೆ ಮಾಡಿ, ನಾನು ಜೀವನ ಮಾಡಬಾರದೆ ಸಾರ್?... ಅಲ್ಲೆಲ್ಲೋ ... ನಿಮ್ಮ ಕಣ್ಣಿಗೆ ಮರೆಯಾಗಿ ಹೆಬ್ಬಳ್ಳದ ಕೊಳಕು ನೀರ್ನ... ಹಾಲಿಗೆ ತುಂಬ್ಕೊಂಡು ಬರುವ ಬದಲು, ಶುದ್ಧವಾದ ಬೋರ್‌ವೆಲ್ ನೀರನ್ನು ಬೆರೆಸಿಕೊಡ್ತೀನಿ. ಇದಕ್ಕೆ ನೀವು ಸಂತೋಷಪಡ್ಬೇಕು ಸಾರ್" ಎಂದಾಗ, ನನ್ನ ಸ್ನೇಹಿತರು ಸುಮ್ಮನಾಗಿದ್ದರು.

ಹಾಲಿಗೆ ನೀರನ್ನು ಬೆರೆಸುವ ಕ್ರಿಯೆಯನ್ನು ಇಂದು ಕಂಡ ಆ ಪುಟ್ಟ ಹುಡುಗನು... ಇಷ್ಟೊಂದು ಆಘಾತಗೊಂಡಿರುವಾಗ, ಮುಂದೆ ಬೆಳೆದು ದೊಡ್ಡವನಾಗುತ್ತಾ... ಕೋಟಿಗಟ್ಟಲೆ ಸಹ ಮಾನವರ ಹಾಲಿನಂತಹ ಬದುಕಿಗೆ ಜಾತಿ, ಮತ, ಧರ್ಮ, ದೇವರು ಮತ್ತು ರಾಜಕೀಯದ ಹೆಸರಿನಲ್ಲಿ ವಿಷವನ್ನೆರೆಯುವ ಕ್ರಿಯೆಗಳನ್ನು ಕಾಣುವಾಗ ಮತ್ತು ಅಂತಹ ಕ್ರಿಯೆಗಳನ್ನು ಸಮರ್ಥಿಸಿಕೊಳ್ಳುವ ಜನಗಳ ಅದ್ಭುತವಾದ ಮಾತುಗಳನ್ನು ಕೇಳುವಾಗ... ಮತ್ತಷ್ಟು ಆಘಾತಕ್ಕೆ ಒಳಗಾಗಬಹುದೆಂಬುದನ್ನು ಊಹಿಸಿಕೊಳ್ಳುತ್ತಾ, ಮುಂದೆ ನಡೆದೆ.

⌘

ಸಾವು... ಸಂತಾಪ... ಸಂತೋಷ



ನಮ್ಮ ವಿದ್ಯಾರ್ಥಿನಿಲಯದಲ್ಲಿ ಒಂದು ಮಜಭೂತಾದ ವಿಲಾಯ್ತಿ ಹೋರಿಯಿತ್ತು. ಅದರ ದೈಹಿಕ ಆಕಾರ ಮತ್ತು ನಡೆಯುವ ಠೀವಿ... ನೋಡುವವರ ಕಣ್ಮನಗಳನ್ನು ಸೆಳೆಯುವಂತಿತ್ತು. ಸುತ್ತಮುತ್ತಣ ಹಳ್ಳಿಗಳ ನೂರಾರು ಮಂದಿ ರೈತರು, ಉತ್ತಮ ತಳಿಯ ಈ ಹೋರಿಯಿಂದ ತಮ್ಮ ಹಸುಗಳಿಗೆ 'ಹೋರಿ ಬಿಡಿಸಿ' ಕೊಳ್ಳುತ್ತಿದ್ದರು. ಇದರಿಂದ ವಿದ್ಯಾರ್ಥಿನಿಲಯಕ್ಕೆ ನಿರಂತರವಾಗಿ ಆದಾಯ ಬರುತ್ತಿತ್ತು. ಈ ಹೋರಿಯ ಆಕಾರಕ್ಕೆ ಸರಿ ಹೊಂದುವಂತೆ ಒಂಟೆತ್ತಿನ ಗಾಡಿಯನ್ನು ಮಾಡಿಸಲಾಗಿದ್ದು, ಗಾಡಿಗೆ ಎಷ್ಟೇ ಭರ್ತಿ ತುಂಬಿದರೂ, ಅದನ್ನು ಹೋರಿಯು ಅನಾಯಾಸವಾಗಿ ಎಳೆದು ತರುತ್ತಿತ್ತು.

ಹೀಗೆ ನಮ್ಮ ವಿದ್ಯಾರ್ಥಿನಿಲಯದ ಆವರಣದಲ್ಲಿ ಹೋರಿಯು ಬಹು ಆಕರ್ಷಕ ಮತ್ತು ಉಪಯುಕ್ತ ಜೀವಿಯಾಗಿತ್ತು.

ಏನಾಯಿತೋ... ಏನು ಕಥೆಯೋ.... ಇದ್ದಕ್ಕಿದ್ದಂತೆ ಒಂದು ದಿನ ಹೋರಿಯು 'ಹರುಷ ತಪ್ಪಿ' ಕಾಯಿಲೆಯಿಂದ ನರಳತೊಡಗಿತು. ಪಶು ವೈದ್ಯರಿಂದ ಸಕಾಲದಲ್ಲಿ ಉತ್ತಮ ಚಿಕಿತ್ಸೆ ನೀಡಿಸಿದರೂ, ಹೋರಿಯು ಚೇತರಿಸಿಕೊಳ್ಳಲಿಲ್ಲ. ಮೂರೇ ದಿನಗಳಲ್ಲಿ ಅದರ ಸ್ಥಿತಿ ಚಿಂತಾಜನಕವಾಯಿತು. ನೆಲದ ಮೇಲೆ ತಲೆಯಿಟ್ಟು.... ನಾಲ್ಕು ಕಾಲುಗಳನ್ನು ಚಾಚಿ.... ಮೂಕವಾಗಿ ನರಳುತ್ತಾ ಮಲಗಿದ್ದ ಹೋರಿಯ ಕಣ್ಣುಗಳಲ್ಲಿ ಹನಿ ಹನಿಯಾಗಿ ಉರುಳುತ್ತಿದ್ದ ಕಣ್ಣೀರು, ನಮ್ಮೆಲ್ಲರ ಮನಸ್ಸಿಗೆ ತೀವ್ರವಾದ ಸಂಕಟವನ್ನುಂಟುಮಾಡಿತು. ಕೆಲವೇ ದಿನಗಳ ಹಿಂದೆ ಮತ್ತ ಮದಗಜದಂತೆ ಕಂಗೊಳಿಸುತ್ತಿದ್ದ ಹೋರಿಯು, ಇಂದು ಕಂಗಲಾಗಿ ನೆಲದ ಮೇಲೆ ಒರಗಿರುವುದನ್ನು ಕಂಡಾಗ.... ಜೀವಿಗಳ ಬಾಳಿನ ಕ್ಷಣಿಕತೆಯ ಬಗ್ಗೆ ಬೆಚ್ಚಿ ಬೀಳುವಂತಹ ಅನುಭವವಾಯಿತು. ನಾಲ್ಕನೆಯ ದಿನ ಹೋರಿ ಸಾವನ್ನಪ್ಪಿತು. ವಿದ್ಯಾರ್ಥಿನಿಲಯದಲ್ಲಿದ್ದ ನಾವೆಲ್ಲಾ ಅದರ ಸಾವಿಗಾಗಿ ಕಣ್ಣೀರು ಕರೆದೆವು. ನಮ್ಮ ವಿದ್ಯಾರ್ಥಿನಿಲಯದ ಆವರಣದಲ್ಲೇ ಅದನ್ನು ಮಣ್ಣು ಮಾಡಿದೆವು.

ಹೋರಿಯ ಸಾವು ಸಂಭವಿಸಿದ ಎರಡು ತಿಂಗಳ ನಂತರ 'ಹಾಸ್ಟೆಲ್ ಡೇ' ಆಚರಣೆಯು ಬಂತು. 'ಮರಿ ಊಟ'ಕ್ಕೆಂದು ಒಂದು ದೊಡ್ಡ ಟಗರನ್ನು ಪಕ್ಕದ ಹಳ್ಳಿಯಿಂದ ಕೊಂಡು ತರಲಾಗಿತ್ತು. ಅಂದು ಅದನ್ನು ಕೊಯ್ದು.... ಅದರ ಚರ್ಮವನ್ನು ಸುಲಿದು... ದೇಹದ ಭಾಗಗಳನ್ನು ತುಂಡು ತುಂಡು ಮಾಡಿ, ಗುಡ್ಡೆ ಹಾಕುತ್ತಿರುವುದನ್ನು ಕಂಡ ನಮ್ಮ ಕಣ್ಣುಗಳು ಸಂತೋಷದಿಂದ ಹಿಗ್ಗಿಹೋದವು. 'ಹಾಸ್ಟೆಲ್ ಡೇ' ಕಳೆದ ನಂತರವೂ, ಅನೇಕ ದಿನಗಳ ಕಾಲ, ಮಾಂಸದೂಟದ ರುಚಿಯನ್ನು ಹಾಡಿ ಹೊಗಳುತ್ತಿದ್ದೆವು.

ಹೋರಿ ಮತ್ತು ಟಗರಿನ ಸಾವಿನ ಸಂದರ್ಭದಲ್ಲಿ ನಾವು ಪ್ರತಿಕ್ರಿಯಿಸಿದ ರೀತಿ, ಅನಂತರದ ದಿನಗಳಲ್ಲಿ ನನ್ನನ್ನು ಬಹಳವಾಗಿ ಕಾಡತೊಡಗಿತು. ಒಂದು ಜೀವಿಯ ಸಾವಿಗಾಗಿ ಸಂಕಟಪಟ್ಟು... ಮತ್ತೊಂದು ಜೀವಿಯ ಸಾವಿನಿಂದ ಸಂತೋಷಪಟ್ಟ... ಈ ಬಗೆಯ ದ್ವಂದ್ವ ಭಾವನೆಗಳಿಗೆ ಕಾರಣಗಳನ್ನು ಕುರಿತು ಚಿಂತಿಸಿದಾಗ.... "ಯಾವುದೇ ಪ್ರಾಣಿಯಿಂದ ಅಥವಾ ವ್ಯಕ್ತಿಯಿಂದ ನಾವು ಪಡೆಯುವ ಲಾಭ ಅಥವಾ ನಷ್ಟಗಳಿಗೆ ಅನುಗುಣವಾಗಿ ನಮ್ಮಲ್ಲಿ ಭಾವನೆಗಳು ಮೂಡಿ ಬರುತ್ತವೆ" ಎಂಬ ಸತ್ಯದ ಅರಿವಾಯಿತು. ಒಂದು ವೇಳೆ ಹೋರಿಯ ಮಾಂಸವನ್ನು ನಾವು ತಿನ್ನುವಂತಿದ್ದರೆ... ದು:ಖಿಸುವ ಬದಲು ಸಂತೋಷಪಡುತ್ತಿದ್ದೆವು.

⌘

ಕ್ಷೀಣಿಸುತ್ತಿರುವ ಧ್ವನಿ



ಎರಡು ವರ್ಷಗಳ ಹಿಂದೆ ಒಂದು ದಿನ ರಾತ್ರಿ ಎಂಟು ಗಂಟೆಯ ಸಮಯದಲ್ಲಿ ಕಾಳಮುದ್ದನದೊಡ್ಡಿಯಲ್ಲಿರುವ ಟೆಲಿಫೋನ್ ಬೂತಿಗೆ ಹೋದೆನು. ಅತ್ಯಂತ ತುರ್ತಾದ ವಿಷಯವೊಂದನ್ನು ಬೆಂಗಳೂರಿನಲ್ಲಿದ್ದ ಸ್ನೇಹಿತರೊಬ್ಬರಿಗೆ ತಿಳಿಸಬೇಕಾಗಿತ್ತು. ಬೂತಿನ ಬಳಿಗೆ ಹೋಗುತ್ತಿದ್ದಂತೆಯೇ... ಎದುರು ಭಾಗದ ಕಟ್ಟಡದ ಸ್ಪೀಕರ್‌ನಿಂದ ಎತ್ತರದ ಧ್ವನಿಯಲ್ಲಿ ಭಜನೆಯು ಹೊರಹೊಮ್ಮುತ್ತಾ... ಕಿವಿಗಳ ಮೇಲೆ ಅಪ್ಪಳಿಸತೊಡಗಿತು.

ಹತ್ತಾರು ಮಂದಿ ಭಕ್ತಾದಿಗಳು ಕಟ್ಟಡದೊಳಗಿನ ಕೊಠಡಿಯೊಂದರಲ್ಲಿ ಕುಳಿತುಕೊಂಡು... ತಮ್ಮ ಇಷ್ಟ ದೈವವನ್ನು ಕುರಿತು ತಾರಕ ಧ್ವನಿಯಲ್ಲಿ ಭಜಿಸುತ್ತಿದ್ದರು. ಕೊಠಡಿಯೊಳಗಿನ ತಮ್ಮ ದೈವದ ಪ್ರಾರ್ಥನೆಯು ಹೊರಗಡೆಯ ಜನರ ಕಿವಿಗೆ

ಜಿದ್ದು... ಅವರೆಲ್ಲರೂ ದೈವಕೃಪೆಗೆ ಪಾತ್ರರಾಗಲೆಂಬ ಉದ್ದೇಶದಿಂದಲೋ ಅಥವಾ ತಮ್ಮ ದೈವ ಭಕ್ತಿಯ ತೀವ್ರವಾದ ತುಡಿತವು ಇತರರಿಗೂ ತಿಳಿಯಲೆಂದೋ... ಭಜನೆಯ ಪ್ರಸಾರಕ್ಕಾಗಿ ನಾಲ್ಕು ದಿಕ್ಕಿನ ಕಡೆಗೂ ಲೌಡ್ ಸ್ಪೀಕರ್ ಅನ್ನು ಅಳವಡಿಸಿದ್ದರು.

ಬೂತಿನ ಬಳಿ ನನ್ನಂತೆಯೇ ನಾಲ್ಕಾರು ಮಂದಿ ಪೋನ್ ಮಾಡಲೆಂದು ಬಂದಿದ್ದರು. ಅವರಲ್ಲಿ ಈಗಾಗಲೇ ಕೆಲವು ಕ್ಷಣಗಳ ಹಿಂದೆ ಪೋನ್ ಮಾಡಿದ್ದ ಒಬ್ಬರು ತುಂಬಾ ಅಸಮಾಧಾನದಿಂದ ಚಡಪಡಿಸುತ್ತಾ "ದೂರದ ಊರಿನಿಂದ ಮಾತನಾಡಿದ ತಮ್ಮ ಮಗನ ಮಾತುಗಳನ್ನು ಸರಿಯಾಗಿ ಕೇಳಿಸಿಕೊಳ್ಳಲಾಗಲಿಲ್ಲ... ತಾವು ಹೇಳಬೇಕಾಗಿದ್ದ ವಿಷಯವನ್ನು ಅವನಿಗೆ ಸ್ಪಷ್ಟವಾಗಿ ತಿಳಿಸಲಾಗಲಿಲ್ಲ... ಪೋನ್ ಮಾಡುತ್ತಿದ್ದಾಗ ಅಲೆ ಅಲೆಯಾಗಿ ಬಂದು ಅಪ್ಪಳಿಸುತ್ತಿದ್ದ ಭಜನೆಯ ದೊಡ್ಡ ಧ್ವನಿಯಿಂದ... ಪೋನಿನಲ್ಲಿ ಸರಿಯಾಗಿ ಮಾತನಾಡಲಿಲ್ಲವೆಂದು"... ಅಲ್ಲಿದ್ದವರ ಮುಂದೆ ಹೇಳಿಕೊಂಡರು. ಈ ಟೆಲಿಪೋನ್ ಬೂತಿನಲ್ಲಿ ಪ್ರತ್ಯೇಕವಾದ ಕ್ಯಾಬಿನ್ ಇರಲಿಲ್ಲ. ಈಗ ಇನ್ನುಳಿದವರು ಪೋನ್ ಮಾಡಲು ಹಿಂಜರಿದು, ಏನು ಮಾಡಬೇಕೆಂದು ತೋಚದೆ ಒದ್ದಾಡತೊಡಗಿದರು. ನಾನು ಬೂತಿನ ಒಡೆಯರನ್ನು ಕುರಿತು–

"ಭಜನೆ ಮಾಡ್ತ ಇರೋರು ಯಾರು?" ಎಂದು ಪ್ರಶ್ನಿಸಿದೆ.

"ದೇವರು ಮಾಡೋಕೆ ಹೋಗುವಂತ ಭಕ್ತರು ಸಾರ್."

"ಹಿಂಗೆ ಎಷ್ಟು ಹೊತ್ತಿನವರೆಗೆ ಮಾಡ್ತರೆ?"

"ರಾತ್ರಿ ಹತ್ತು ಗಂಟೆಯ ತನಕ ಮಾಡ್ತಿರ್ತರೆ ಸಾರ್."

"ನೀವು ಅಲ್ಲಿಗೆ ಹೋಗಿ ...ಇಲ್ಲಿ ಹತ್ತಾರು ಮಂದಿಗೆ ಆಯ್ತಾ ಇರುವ ತೊಂದರೆಯನ್ನು ತಿಳಿಸಿ... ಸ್ಪೀಕರಿನ ಧ್ವನಿಯನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳುವಂತೆ ಅವರಿಗೆ ತಿಳಿಸಬಾರ್ದ?"

"ಪ್ರಾರಂಭದಲ್ಲೇ ಹೋಗಿ ಅವರನ್ನ ಕೇಳ್ಕೊಂಡೆ... ಆದರೆ ನಮ್ಮ ಮಾತನ್ನ ಕಿವಿ ಮೇಲೆ ಹಾಕೊಳಲ್ಲ ಸಾರ್."

'ಹಿಂಗಾದ್ರೆ ನಿಮ್ಮ ಬಿಸ್‌ನೆಸ್ ಹಾಳಾಗುದಿಲ್ವೆ?"

"ಏನ್ ಮಾಡ್ತೀರಿ ಸಾರ್? ... ದೇವರ ಹೆಸರಿನಲ್ಲಿ ಭಜನೆ ಮಾಡ್ತಾವ್ರೆ... ಅವರನ್ನ ಈಗ ವಿರೋಧಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಸಾರ್".

ಅಂದು ಪೋನ್ ಮಾಡಲಾಗದೆ, ಮನೆಗೆ ಹಿಂತಿರುಗಿದೆ.

ಕಳೆದ ವಾರ ಮಂಡ್ಯ ನಗರದ ಬಡಾವಣೆಯೊಂದರಲ್ಲಿ ವಾರದ ಮೊದಲ ಎರಡು ದಿನಗಳ ಕಾಲ ಹಿಂದೂಗಳ ದೇವರ ಪೂಜೆಗಾಗಿ ಒಂದು ರಸ್ತೆಯಲ್ಲಿನ ಸಂಚಾರ ಸ್ಥಗಿತಗೊಂಡಿದ್ದರೆ... ಮತ್ತೊಂದು ರಸ್ತೆಯಲ್ಲಿ ಮುಸಲ್ಮಾನರ ದೇವರ ಆರಾಧನೆಗೆಂದು ಇನ್ನೆರಡು ದಿನ ಸಂಚಾರ ಬಂದ್ ಆಗಿತ್ತು. ದೈವ ಭಕ್ತರು ಅತ್ಯಂತ ಉತ್ಸಾಹದಿಂದ ರಸ್ತೆಗೆ ಅಡ್ಡಲಾಗಿ ದಿಂಡುಗಲ್ಲುಗಳನ್ನಿಟ್ಟು... ಬೊಂಬುಗಳನ್ನು ನೆಟ್ಟು ... ಹಗ್ಗವನ್ನು ಜಿಗಿದು... ರಸ್ತೆಯಲ್ಲಿನ ಸಂಚಾರವನ್ನು ತಡೆಹಿಡಿದಿದ್ದರು . ಇದರಿಂದ ಅಲ್ಲಿ ಪ್ರತಿನಿತ್ಯ ಓಡಾಡುತ್ತಿದ್ದ ನೂರಾರು ಜನರಿಗೆ ತೊಂದರೆಯುಂಟಾಯಿತು. ಆದರೆ ಯಾವೊಬ್ಬ ನಾಗರಿಕನಾಗಲಿ... ಅಲ್ಲಿದ್ದ ದೈವ ಭಕ್ತರನ್ನು ಕುರಿತು "ಯಾಕೆ ಹೀಗೆ ಮಾಡುತ್ತಿದ್ದೀರಿ" ಎಂದು ಪ್ರಶ್ನಿಸಿ... ಉಳಿಯುವಂತಿರಲಿಲ್ಲ!


ಪ್ರಾರ್ಥನೆಯ ರೂಪದಲ್ಲಿ ಮನುಷ್ಯನ ಮನಸ್ಸಿನಲ್ಲಿ ಇರಬೇಕಾಗಿದ್ದ ದೇವರು ಮತ್ತು ಆಚರಣೆಯ ರೂಪದಲ್ಲಿ ಮನೆ, ಮಸೀದಿ ಮತ್ತು ಚರ್ಚುಗಳಲ್ಲಿ ನಡೆಯಬೇಕಾಗಿದ್ದ ಧಾರ್ಮಿಕ ಕ್ರಿಯೆಗಳು ... ಅಲ್ಲಿನ ಆವರಣವನ್ನು ದಾಟಿಕೊಂಡು, ಬೀದಿಗೆ ಬರುತ್ತಿದ್ದಂತೆಯೇ ... ಪರಿಶುದ್ಧವಾದ ಭಕ್ತಿಭಾವಕ್ಕೆ ಬದಲಾಗಿ... ಅವು ಒಂದು ಗುಂಪಿನ ಅಥವಾ ಒಂದು ಜಾತಿಯ ಅಥವಾ ಒಂದು ಧರ್ಮದವರ ಸಾಮಾಜಿಕ ಶಕ್ತಿಯ ಸಂಕೇತವಾಗುತ್ತವೆ. ಆಯಾಯ ವರ್ಗಕ್ಕೆ ಸೇರಿದ ವ್ಯಕ್ತಿಗಳು... ತಮ್ಮ ಯಾವುದೇ ಬಗೆಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ... ದೇವರು ಮತ್ತು ಧರ್ಮಗಳ ಆರಾಧನೆಯು ಅವರಿಗೆ ಒಂದು ದೊಡ್ಡ ಲೈಸೆನ್ಸ್ ಆಗುತ್ತದೆ. ಇದನ್ನು ನಮ್ಮ ದೇಶದ ಯಾವುದೇ ಕಾನೂನು ಕೂಡ ಪ್ರಶ್ನಿಸುವಂತಿಲ್ಲ. ಯಾಕೆಂದರೆ ಎಲ್ಲವೂ ನಡೆಯುತ್ತಿರುವುದು ದೇವರು ಮತ್ತು ಧರ್ಮದ ಹೆಸರಿನಲ್ಲಿ!

ದೇವರನ್ನು ಅತ್ಯಂತ ವೈಭವದಿಂದ ಹೊತ್ತು ಮೆರೆಸುವ ಮತ್ತು ಧಾರ್ಮಿಕ ಆಚರಣೆಗಳನ್ನು ನೋಡುವವರ ಕಣ್ಣು ಕುಕ್ಕುವಂತಹ ರೀತಿಯಲ್ಲಿ ಆಡಂಬರದಿಂದ ಆಚರಿಸುವ ಭಕ್ತರಲ್ಲಿ... ಬಹು ಹೆಚ್ಚಿನ ಮಂದಿಗೆ ಮನುಷ್ಯರ ಬಗೆ ತುಂಬಾ ಅಸಡ್ಡೆಯಿಸರುತ್ತದೆ.

ಸಹ ಮಾನವರ ಆಗುಹೋಗುಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಿ... ಎಲ್ಲರೊಡನೆ ಪ್ರೀತಿ, ಕರುಣೆ ಮತ್ತು ಗೌರವದಿಂದ ನಡೆದುಕೊಳ್ಳಬೇಕೆಂಬ ಸಾಮಾಜಿಕ ಪ್ರಜ್ಞೆಯಿಂದ ಕೂಡಿದ ಸಾಮರಸ್ಯದ ಸಹಬಾಳ್ವೆಯ ಧ್ವನಿಯು... ಜಾತಿ, ಮತ, ಧರ್ಮ ಮತ್ತು ದೇವರುಗಳನ್ನು ಮೆರೆಸುತ್ತಿರುವ ಭಕ್ತರ ಅಬ್ಬರದ ಧ್ವನಿಯ ಮುಂದೆ ದಿನೇ ದಿನೇ ಕ್ಷೀಣಿಸತೊಡಗಿದೆ.

⌘

ಆಟ ಒಂದೇ... ಆದರೆ ನೋಟ



ಭಾರತ ಮತ್ತು ಶ್ರೀಲಂಕಾದ ನಡುವೆ ಮೊನ್ನೆ ನಡೆದ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಸಚಿನ್ ತೆಂಡೂಲ್ಕರ್ ಮತ್ತು ಶ್ರೀಲಂಕಾದ ಅರವಿಂದ ಡಿಸಿಲ್ವ ಅಮೋಘವಾಗಿ ಆಡಿ ಸೆಂಚುರಿಗಳನ್ನು ಹೊಡೆದರು. ಇವರಿಬ್ಬರ ಆಟವನ್ನು ನೋಡುತ್ತಿದ್ದಾಗ... ನಾನು ಮತ್ತು ನನ್ನ ಗೆಳೆಯರು ವ್ಯಕ್ತಪಡಿಸಿದ ವಿವಿಧ ಬಗೆಯ ಪ್ರತಿಕ್ರಿಯೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

I

ಆಟದ ಮೈದಾನಕ್ಕೆ ಬ್ಯಾಟನ್ನು ಹಿಡಿದುಕೊಂಡು ತೆಂಡೂಲ್ಕರ್ ಬರುತ್ತಿದ್ದಂತೆಯೇ "ಇವತ್ತು ಏನ್ ಮಾಡನೋ ಕಾಣನಲ್ಲಪ್ಪ!... ಷಾರ್ಜಾದಲ್ಲಿ ಹೊಡೆದಂಗೆ ಇಲ್ಲೂ ಸೆಂಚುರಿ ಬಾರಿಸಿದರೆ ನೋಡಪ್ಪ... ನಮಗೆ ಕಪ್ ಗ್ಯಾರಂಟಿ" ಎಂಬ ಭವಿಷ್ಯವಾಣಿ.

ತೆಂಡೂಲ್ಕರ್ ತಾನು ಎದುರಿಸಿದ ಮೊದಲನೆಯ ಓವರ್‌ನಲ್ಲೇ ಅನೇಕ ಬೌಂಡರಿಗಳನ್ನು ಬಾರಿಸತೊಡಗಿದಾಗ–

"ಅಬ್ಬಾ, ಎಂತಹ ಹೊಡೆತಗಳಯ್ಯ! ಫೀಲ್ಡರುಗಳು ಬಾಲ್ ಹಿಡಿಯೋದಿರ್‍ಲಿ. ಅದನ್ನು ಟಚ್ ಮಾಡುವುದಕ್ಕೂ ಆಗುತ್ತಿಲ್ಲ" ಎಂಬ ಮೆಚ್ಚುಗೆ.

ಮತ್ತೊಮ್ಮೆ ಸಚಿನ್ ಹೊಡೆದ ಬಾಲು, ಬೌಂಡರಿಯೊಳಗೆ ಮೇಲಕ್ಕೆ ಹಾರಿದಾಗ... ಅದೆಲ್ಲಿ ಕ್ಯಾಚ್ ಆಗುವುದೋ ಎಂಬ ಭೀತಿ... ಮೇಲಕ್ಕೆ ನೆಗೆದ ಆ ಚೆಂಡು ಫೀಲ್ಡರುಗಳು ಇಲ್ಲದ ಜಾಗದಲ್ಲಿ ಬಿದ್ದು ಗೆರೆಯನ್ನು ದಾಟಿದಾಗ –

"ನೋಡ್ದೇನಯ್ಯ... ಹೆಂಗೆ... 'ನೋ ಮ್ಯಾನ್ಸ್ ಲ್ಯಾಂಡ್' ಕಡೆ ಬಾಲನ್ನು ಹೊಡೀತಾನೆ! ...ಎಂಥ ಅದ್ಭುತವಾದ ಬುದ್ಧಿವಂತಿಕೆ ಆಟ!" ಎಂಬ ಶಹಬಾಸ್‌ಗಿರಿ.

ಒಮ್ಮೊಮ್ಮೆ ತೆಂಡೂಲ್ಕರ್ ಸಿಕ್ಸರ್ ಎತ್ತಿದಾಗ...... ನಾವು ಎದ್ದು ಕುಣಿದಾಡುತ್ತಾ... ಚಪ್ಪಾಳೆ ತಟ್ಟುತ್ತಾ...... ಪಕ್ಕದಲ್ಲಿರುವ ಸ್ನೇಹಿತರ ಬೆನ್ನಿನ ಮೇಲೆ ಗುದ್ದಿ ಸಂತೋಷವನ್ನು ವ್ಯಕ್ತಪಡಿಸುವ ಚಪಲ.

ಮಗದೊಮ್ಮೆ ತೆಂಡೂಲ್ಕರ್ ಬೌಂಡರಿಗೆರೆಯೊಳಗೆ ಅತಿ ಮೇಲಕ್ಕೆ ಹೊಡೆದ ಬಾಲನ್ನು, ಲಂಕೆಯ ಫೀಲ್ಡರ್ ಹಿಡಿಯಲೆತ್ನಿಸುತ್ತಿದ್ದಾಗ... "ಅಯ್ಯೋ, ಅದೆಲ್ಲಿ ಆತನ ಹಸ್ತಗಳಲ್ಲಿ ಸಿಕ್ಕಿಕೊಳ್ಳುವುದೋ" ಎಂಬ ಆತಂಕ... ಫೀಲ್ಡರನು ಆ ಚೆಂಡನ್ನು ಹಿಡಿಯಲಾಗದೆ ನೆಲಕ್ಕೆ ಚೆಲ್ಲಿದಾಗ ಅಪಾರವಾದ ಖುಷಿ.

2

ಶ್ರೀಲಂಕಾದ ಬ್ಯಾಟಿಂಗ್ ಪ್ರಾರಂಭಗೊಂಡು ಸನತ್ ಜಯಸೂರ್ಯ ಬೇಗ ಔಟಾಗಿ... ಬ್ಯಾಟ್ ಮಾಡಲು ಬಂದ ಅರವಿಂದ ಡಿಸಿಲ್ವ ತಾನು ಎದುರಿಸಿದ ಮೊದಲ ಓವರ್‌ನಲ್ಲೆ ಪಟಪಟನೆ ಬೌಂಡರಿಗಳನ್ನು ಬಾರಿಸ ತೊಡಗಿದಾಗ;

"ಥೂ... ಎಂಥ ಹೋಪ್‌ಲೆಸ್ ಬೌಲಿಂಗಯ್ಯ ನಮ್ಮದು... ಈ ರೀತಿ ಸಿಕ್ಕಾಬಟ್ಟೆ ಹೊಡಿಯೂವಂಗೆ ಬಾಲ್‌ಗಳನ್ನು ಯಾರಾದ್ರೂ ಹಾಕ್ತಾರೇನಯ್ಯ?" ಎಂದು ಒಬ್ಬರು ನಿಂದಿಸಿದರೆ.... ಮತ್ತೊಬ್ಬರು "ಅಲ್ನೋಡಯ್ಯ... ನಮ್ಮ ಫೀಲ್ಡರ್‌ಗಳಲ್ಲಿ ಒಬ್ಬರಾದ್ರೂ ಸರಿಯಾಗಿ ಬಾಲ್ ಹಿಡೀತ ಇದ್ದರ ನೋಡು ... ಬಾಲು ಬೌಂಡರಿಗೆ ಹೊಯ್ತಿದ್ರೆ... ಅದರ ಹಿಂದೆ ಓಡ್ತರೋ ಹೊರ್ತು... ಜಾಂಟಿ ರೋಡ್ಸ್ ತರ ಅಡ್ಡಲಾಗಿ ಬಿದ್ದು ತಡಿಯೋದೆ ಇಲ್ಲ" ಎಂಬ ವ್ಯಥೆ.

ಮತ್ತೊಮ್ಮೆ ಅರವಿಂದ ಡಿಸಿಲ್ವ ಹೊಡೆದ ಬಾಲು... ಬೌಂಡರಿ ಒಳಗೆ ಮೇಲಕ್ಕೆ ನೆಗೆದು... ಫೀಲ್ಡರ್‌ಗಳು ಇಲ್ಲದ ಜಾಗದಲ್ಲಿ ಬಿದ್ದಾಗ... ನಮ್ಮ ಕ್ಯಾಪ್ಟನ್ ಎಂಥಾವನಯ್ಯ?...

ಫೀಲ್ಡರ್‌ಗಳನ್ನ ಎಲ್ಲೆಲ್ಲೋ ನಿಲ್ಸವ್ನೆ... ಕ್ಯಾಚ್ ಬರುವ ಇಂಥ ಕಡೆಗಳಲ್ಲಿ ನಿಲ್ಲಿಸಬಾರ್ದೇನು?... ಮ್ಯಾಚ್ ಗೆಲ್ಲಬೇಕು ಅನ್ನೋ ಗುರಿನೇ ಇಲ್ಲ ಕಣಯ್ಯಾ... ಈ ಅಜರುದ್ದೀನ್‌ಗೆ" ಎಂಬ ಆರೋಪ.

ಡಿಸಿಲ್ವ ಒಮ್ಮೊಮ್ಮೆ ಸಿಕ್ಸರ್ ಎತ್ತಿದಾಗ... ಆಕಾಶದೆತ್ತರಕ್ಕೆ ಹಾರಿ... ಬೌಂಡರಿಯ ಗೆರೆಯಿಂದ ಹೊರ ಬೀಳುತ್ತಿರುವ ಆ ಚೆಂಡಿನ ಗತಿಯನ್ನು ನೋಡ ನೋಡುತ್ತಿದ್ದಂತೆಯೇ ... ನಮ್ಮ ಮೈಯೆಲ್ಲಾ ತಣ್ಣಗಾದ ಅನುಭವ.

"ಅಯ್ಯೋ, ಹೆಂಗೆ ಹೊಡೀತಾವ್ನಲ್ಲ" ಎಂಬ ಆರ್ತನಾದ ಮನದೊಳಗೆ ಅನುರಣಿಸತೊಡಗಿ, ತೀವ್ರವಾದ ಮೌನ ಆವರಿಸಿತು.

ಮಗದೊಮ್ಮೆ ಅರವಿಂದ ಡಿಸಿಲ್ವ ಬೌಂಡರಿಯ ಒಳಗೆ... ಮೇಲಕ್ಕೆ ಹೊಡೆದ ಬಾಲನ್ನು ನಮ್ಮ ಫೀಲ್ಡರ್ ಹಿಡಿಯಲೆತ್ನಿಸುವಾಗ... "ಅದು ಎಲ್ಲಿ ಕೈಯಿಂದ ಜಾರಿ ಬೀಳುವುದೋ" ಎಂಬ ಆತಂಕ. ನಮ್ಮ ಫೀಲ್ಡರ್ ಆ ಕ್ಯಾಚನ್ನು ಹಿಡಿದಾಗ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು, ನೆಮ್ಮದಿಯಿಂದ ಚಪ್ಪಾಳೆ ತಟ್ಟಿದೆವು.

3

ಸಚಿನ್ ತೆಂಡೂಲ್ಕರ್ ಮತ್ತು ಅರವಿಂದ ಡಿಸಿಲ್ವರ ಕಲಾತ್ಮಕವಾದ ಮತ್ತು ಆಕ್ರಮಣಶೀಲ ಕ್ರಿಕೆಟ್ ಆಟದ ಬಗ್ಗೆ ನಮ್ಮಿಂದ ಅಭಿವ್ಯಕ್ತಗೊಂಡ ಇಬ್ಬಗೆಯ ಪ್ರತಿಕ್ರಿಯೆಗಳಿಗೆ ಕಾರಣವೇನೆಂದರೆ... ನಾವು ಭಾರತೀಯರಾಗಿರುವುದು. ಒಂದು ವೇಳೆ ನಾವು ಶ್ರೀಲಂಕಾದವರಾಗಿದ್ದರೆ... ಆಗ ತೆಂಡೂಲ್ಕರ್ ಆಟದ ವೈಖರಿಯನ್ನು ನೋಡುತ್ತಾ ಅಸಹನೆಯಿಂದ ಒದ್ದಾಡುತ್ತಿದ್ದೆವು.

ಇಂತಹ ಸಂದರ್ಭದಲ್ಲಿ ಆಧುನಿಕ ಚಿಂತಕ ಜಿಡ್ಡು ಕೃಷ್ಣಮೂರ್ತಿ ಅವರು ಹೇಳಿರುವ "ರಾಷ್ಟ್ರೀಯತೆ ಎಂಬ ಪರಿಕಲ್ಪನೆಯು ಮನುಕುಲದ ಸಹಬಾಳ್ವೆಗೆ ಒಂದು ಶಾಪವಾಗಿದೆ" ಎಂಬ ಮಾತು ನೆನಪಾಗುತ್ತದೆ.


ಈ ಪರಿಕಲ್ಪನೆಯು ಮಾನವ ಸಮುದಾಯಗಳನ್ನು... ಒಂದೊಂದು ಸೀಮಿತವಾದ ಭೌಗೋಳಿಕ ಎಲ್ಲೆಗಳ ಒಳಗೆ ಬಂಧಿಸುವುದರ ಜೊತೆಗೆ... ಮಾನಸಿಕವಾಗಿ ಪ್ರತ್ಯೇಕತಾ ಭಾವನೆಯನ್ನು ಮೂಡಿಸಿ... ತನ್ನವರನ್ನು ತೀವ್ರವಾಗಿ ಮೋಹಿಸುವ, ಹೊರಗಿನವರನ್ನು ಭಯಂಕರವಾಗಿ ದ್ವೇಷಿಸುವ ಅಥವಾ ತಿರಸ್ಕರಿಸುವ ಭಾವನೆಗಳನ್ನು ಕೆರಳಿಸುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಈಗ ಫ್ರಾನ್ಸಿನಲ್ಲಿ ನಡೆಯುತ್ತಿರುವ ವಿಶ್ವಮಟ್ಟದ ಫುಟ್‌ಬಾಲ್ ಪಂದ್ಯಗಳಲ್ಲಿ ತಮ್ಮ ತಮ್ಮ ಪಂಗಡಗಳು ಗೆದ್ದಾಗ ಅಥವಾ ಸೋತಾಗ

ಆಯಾಯ ದೇಶಗಳ ಜನ ಸಮೂಹದಲ್ಲಿ ಸ್ಫೋಟಿಸುತ್ತಿರುವ ಉದ್ರಿಕ್ತ ಭಾವನೆಗಳು ಮತ್ತು ಹಿಂಸಾಚಾರಗಳು... ರಾಷ್ಟ್ರೀಯತೆಯ ಭಾವನೆಯಿಂದ ಉಂಟಾಗಿರುವ ತಳಮಳಕ್ಕೆ ಮತ್ತು ವಿಕೃತವಾದ ನಡೆನುಡಿಗಳಿಗೆ ಸಾಕ್ಷಿಯಾಗಿವೆ... ಆಟದ ಶ್ರೇಷ್ಠತೆಗಿಂತ, ಜನರಿಗೆ ತಮ್ಮ ದೇಶದ ತಂಡಕ್ಕೆ ಲಭಿಸುವ ಗೆಲುವು ಮುಖ್ಯವಾಗಿದೆ.

'ರಾಷ್ಟ್ರೀಯತೆ' ಎಂಬ ಪರಿಕಲ್ಪನೆಯೇ... ಮನುಕುಲದ ಭೀಕರ ಸಾವು ನೋವುಗಳಿಗೆ ಎಡೆಕೊಡುವ ಯುದ್ಧಗಳಿಗೆ ಎಂದಿನಿಂದಲೂ ಕಾರಣವಾಗಿದೆ... ಇದರ ಜೊತೆಗೆ ವಿಶ್ವದ ಉದ್ದಗಲಕ್ಕೂ ಹರಡಿಕೊಂಡಿರುವ ಮಾನವ ಸಮುದಾಯಗಳಲ್ಲಿ ಅಸ್ತಿತ್ವದಲ್ಲಿರುವ ನೂರೆಂಟು ಬಗೆಯ ಜಾತಿ, ಮತ, ಧರ್ಮಗಳು ಮನುಷ್ಯರನ್ನು ಮತ್ತಷ್ಟು ಕ್ರೂರಿಗಳನ್ನಾಗಿ ಮಾಡಿವೆ. ತನ್ನವರಲ್ಲದ ವ್ಯಕ್ತಿಗಳ ಯಾವುದೇ ವಿಧವಾದ ಸದ್ಗುಣಗಳನ್ನು ಮತ್ತು ಉತ್ತಮ ಸಾಧನೆಗಳನ್ನು ಸಹನೆಯಿಂದ ನೋಡದ... ಹಾಗೂ ಪ್ರೀತಿಯಿಂದ ಮೆಚ್ಚದ ಸಿನಿಕತನವನ್ನು ನಮ್ಮೆಲ್ಲರ ಮನದಲ್ಲೂ ಆಳವಾಗಿ ಬೇರೂರಿಸಿವೆ.

⌘

ಹಲಗೂರ್ ಎಕ್ಸ್‌ಪ್ರೆಸ್



ಹಲಗೂರಿನಿಂದ ಮಂಡ್ಯ ನಗರಕ್ಕೆ ಇರುವ ಅಂತರ.... ಸುಮಾರು ನಲವತ್ತು ಕಿ.ಮೀ.... ಇಷ್ಟು ದೂರವನ್ನು ಕ್ರಮಿಸಲು.... ಈ ಬಸ್ಸು ತೆಗೆದುಕೊಳ್ಳುವ ಅವಧಿ ಎರಡರಿಂದ ಎರಡೂವರೆ ಗಂಟೆ. ದಾರಿಯ ಉದ್ದಕ್ಕೂ ನೂರಾರು ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾ.... ಇಳಿಸುತ್ತಾ.... ಸುಮಾರು ಐವತ್ತಕ್ಕಿಂತ ಹೆಚ್ಚಿನ ತಾಣಗಳಲ್ಲಿ ನಿಂತು... ನಿಂತು.... ಸಂಚರಿಸುವ ಹಲಗೂರಿನ ಈ ಬಸ್ಸಿಗೆ 'ಎಕ್ಸ್‌ಪ್ರೆಸ್'ಅಂತ ಹೆಸರಿಟ್ಟಿರುವ ಬಸ್ ಮಾಲೀಕರು ನಿಜಕ್ಕೂ ಬಹು ದೊಡ್ಡ ಆಶಾವಾದಿಯೇ ಆಗಿರಬೇಕು. ಕಾಳಮುದ್ದನ ದೊಡ್ಡಿಯ ಸುತ್ತಮುತ್ತಣ ಜನಮನದಲ್ಲಿ ಹಲಗೂರ್ ಎಕ್ಸ್‌ಪ್ರೆಸ್ ಒಂದು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ.

ಹಲಗೂರು ಮತ್ತು ಕಾಳಮುದ್ದನ ದೊಡ್ಡಿಯ ನಡುವಣ ರಸ್ತೆಯನ್ನು... ಈಗಲೂ 'ಕತ್ತೆ ಮಾರ್ಗ' ಎಂದೇ ಇಲ್ಲಿಯ ಜನ ಕರೆಯುತ್ತಾರೆ. ಬಹಳಷ್ಟು ವರ್ಷಗಳ ಹಿಂದೆ ಈ ಮಾರ್ಗದಲ್ಲಿ ಕತ್ತೆಗಳ ಬೆನ್ನಿನ ಮೇಲೆ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು

ಸಂಚರಿಸುತ್ತಿದ್ದುದರಿಂದ ಈ ಹೆಸರು ಬಂದಿದೆ. ಈ ಮಾರ್ಗದಿಂದ ಕಾಳಮುದ್ದನ ದೊಡ್ಡಿಗೆ ಬರುವ ರೈತಾಪಿ ಜನಗಳ ಮತ್ತು ವಿದ್ಯಾರ್ಥಿಗಳ ಪಾಲಿಗೆ ಹಲಗೂರ್ ಎಕ್ಸ್‌ಪ್ರೆಸ್... ಮರಳು ಗಾಡಿನಲ್ಲಿ ಒಂಟೆಯಿದ್ದಂತೆ. ಕತ್ತೆ ಮಾರ್ಗದಿಂದ ಪ್ರಯಾಣಿಕರನ್ನು ತುಂಬಿಕೊಂಡು ಕಾಳಮುದ್ದನ ದೊಡ್ಡಿಯೊಳಕ್ಕೆ ಬರುತ್ತಿರುವ ಅಥವಾ ಕಾಳಮುದ್ದನ ದೊಡ್ಡಿಯಿಂದ ಹಲಗೂರಿನ ಕಡೆಗೆ ಹೋಗುತ್ತಿರುವ ಈ ಬಸ್ಸನ್ನು ಒಮ್ಮೆ ನೋಡಿದರೆ ಸಾಕು... ದಿನೇ ದಿನೇ ಸ್ಫೋಟಗೊಳ್ಳುತ್ತಿರುವ ಜನಸಂಖ್ಯಾ ಪ್ರಮಾಣ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ಈ ಬಸ್ಸು ಎಷ್ಟೊಂದು ಭರ್ತಿಯಾಗಿರುತ್ತದೆ ಎಂದರೆ.... ಬಸ್ಸು ಮುಂದಕ್ಕೆ ಸಾಗಲು ಅಗತ್ಯವಾದ ಆರು ಚಕ್ರಗಳನ್ನು ಬಿಟ್ಟು, ಉಳಿದೆಲ್ಲಾ ಕಡೆ.... ಬಸ್ಸಿನ ಒಳಗೆ ಮೇಲೆ, ಅಕ್ಕ ಪಕ್ಕ, ಹಿಂದೆ ಮುಂದೆ ಜನ ತುಂಬಿರುತ್ತಾರೆ. ನನ್ನ ಸ್ನೇಹಿತರು ಈ ಬಸ್ಸಿನ ಬಗ್ಗೆ ಹೇಳುವ ಜೋಕುಗಳು ತುಂಬಾ ಚೆನ್ನಾಗಿವೆ.

"ಹಲಗೂರ್ ಎಕ್ಸ್‌ಪ್ರೆಸ್‌ನಲ್ಲಿ.... ಯಾರು ಸೀಟನ್ನು ಹಿಡಿಯುತ್ತಾರೋ ಅವರು ಒಲಂಪಿಂಕ್ ಚಾಂಪಿಯನ್ನರಿಗೆ ಸಮ".

"ಹಲಗೂರ್ ಎಕ್ಸ್‌ಪ್ರೆಸ್‌ನ ಒಳಗೆ ಸೀಟಿನಲ್ಲಿ ಕುಳಿತಿರುವ ಪ್ರಯಾಣಿಕರು ಒಂದು ಕ್ಷಣ ಮೈಮರೆತು ಕಿಟಕಿಯಿಂದ ಹೊರಕ್ಕೆ ಕೈಯನ್ನು ಚಾಚಿದರೆ.... ಅದಕ್ಕೂ ನಾಲ್ಕಾರು ಮಂದಿ ಪ್ರಯಾಣಿಕರು ನೇತು ಹಾಕಿಕೊಳ್ಳುತ್ತಾರೆ."

"ಒಳಗಡೆ ಎಷ್ಟು ರಷ್ ಆಗಿರುತ್ತದೆ ಎಂದರೆ.... ಎಷ್ಟೋ ವೇಳೆ.... ನಮ್ಮ ಕೈ ಕಾಲುಗಳು ಎಲ್ಲಿವೆ ಎಂದು.... ನಮಗೆ ತಿಳಿದಿರುವುದಿಲ್ಲ. ಕಂಡಕ್ಟರ್ ದುಡ್ಡು ಕೇಳಿದಾಗ, ಹಣವನ್ನು ತೆಗೆದುಕೊಡಲೆಂದು ನಮ್ಮ ಜೇಬಿಗೆ ಕೈ ಹಾಕಿದರೆ.... ಅದು ಯಾರದೋ ಜೇಬಿಗೆ ಹೋಗುವ ಸಂಭವವೂ ಇರುತ್ತದೆ."

ಇಂತಹ ಹಲಗೂರ್ ಎಕ್ಸ್‌ಪ್ರೆಸ್ ಬಸ್ಸಿನಲ್ಲಿ, ಮೊನ್ನೆ ಕಾಳಮುದ್ದನ ದೊಡ್ಡಿಯಿಂದ ಮಂಡ್ಯಕ್ಕೆ ಬರುತ್ತಿದ್ದೆ. ಯಥಾ ಪ್ರಕಾರ ಸ್ಟ್ಯಾಂಡಿಂಗ್ ಸೀಟಿನಲ್ಲಿ ಜನಗಳ ಮಧ್ಯೆ ನೇತಾಡುತ್ತಾ ನಿಂತಿದ್ದ ನನ್ನ ದೃಷ್ಟಿಗೆ... ಡ್ರೈವರ್‌ನ ಹಿಂಭಾಗದಲ್ಲಿ ನೇತು ಹಾಕಿದ್ದ ಒಂದು ಪೋಟೋ ಕಂಡಿತು. ಬೆಳ್ಳಿಯ ಲೇಪನದಿಂದ ಮಾಡಿದ ಲಕ್ಷ್ಮೀ... ಮಸೀದಿ ಮತ್ತು ಯೇಸು ಕ್ರಿಸ್ತನ ಚಿತ್ರಗಳನ್ನು ಒಳಗೊಂಡ ಪೋಟೋ ಅದಾಗಿತ್ತು. ಅದನ್ನು ನೋಡ ನೋಡುತ್ತಿದ್ದಂತೆಯೇ ನಾನು ರೋಮಾಂಚಿತನಾದೆ.

"ಒಂದೇ ಫೋಟೋ ಫ್ರೇಮಿನೊಳಗೆ ಮೂರು ಧರ್ಮದ ಸಂಕೇತಗಳು; ಮೂರು ಧರ್ಮಗಳ ಆರಾಧನೆಗೆ ಒಂದೇ ಹೂವಿನ ಹಾರ."

ತಕ್ಷಣ ನನ್ನ ಹಿಂದೆ ನಿಂತಿದ್ದ ಸಹ ಪ್ರಯಾಣಿಕರೊಬ್ಬರಿಗೆ ಅದನ್ನು ತೋರಿಸುತ್ತಾ–

"ಅಲ್ನೋಡಿ ....ಎಷ್ಟು ಒಳ್ಳೆಯ ಫೋಟೋ ಹಾಕಿದ್ದಾರೆ" ಎಂದೆ. ಅವರು ಅದನ್ನು ಕ್ಷಣ ಕಾಲ ನೋಡಿದ ನಂತರ, ವ್ಯಂಗ್ಯದ ನಗೆಯನ್ನು ಬೀರುತ್ತಾ....

"ಸಾರ್.... ಇದು ಹಲಗೂರಿನ ಮುಸಲ್ಮಾನರ ಬಸ್ಸು. ಆದ್ದರಿಂದ ಹಂಗೆ ಮೂರನ್ನೂ ಹಾಕಿಕೊಂಡವ್ರೆ. ಯಾಕಂದ್ರೆ, ಯಾವತ್ತಾದ್ರೂ ಹಿಂದೂ ಮುಸಲ್ಮಾನ್ ಗಲಾಟೆ ಆದ್ರೆ, ತಮ್ಮ ಬಸ್ಸಿಗೆ ಹಿಂದೂಗಳಿಂದ ಯಾವ ಹಾನಿಯು ಆಗ್ದೇ ಇರ್ಲಿ ಅಂತ.... ಇದು ಬಸ್ಸಿನ ರಕ್ಷಣೆಗೋಸ್ಕರ ಹಾಕಿಕೊಂಡಿರೋದು ಸಾರ್" ಎಂದರು.

"ಅದರಲ್ಲೇನ್ ತಪ್ಪು?.... ನಾನು ನೀವೆಲ್ಲಾ ದೇವರನ್ನು ಪೂಜಿಸೋದು ನಂನಮ್ಮ ರಕ್ಷಣೆಗಾಗಿಯೇ ಅಲ್ವೆ?... ಅಂತಾದ್ದರಲ್ಲಿ ಈ ಬಸ್ಸಿನವರು ಮೂರು ಧರ್ಮಗಳ ಚಿತ್ರಗಳನ್ನು ಒಂದೆಡೆ ಸೇರಿಸಿ, ಒಂದೇ ಹಾರ ಹಾಕಿರೋದು.... ಮೆಚ್ಚುವಂಥ ಕಾರ್ಯವಲ್ಲವೇ?"


"ನಿಜಕ್ಕೂ... ದೊಡ್ಡತನವೇ ಸಾರ್" ಎಂದು ಮುಗುಳ್ನಗುತ್ತಾ ಒಪ್ಪಿಕೊಂಡರು.

ಮತ್ತೆ ಚಿತ್ರ ಪಟದತ್ತ ನೋಡತೊಡಗಿದೆ–

"ಒಂದೇ ಧರ್ಮದ ದೇವರನ್ನು ಆರಾಧಿಸುತ್ತಾ.... ಅನ್ಯರೊಡನೆ ಬಡಿದಾಡಿ ಸಾಯುವುದಕ್ಕಿಂತ... ನಾನಾ ಧರ್ಮಗಳ ದೇವರುಗಳನ್ನು ಗೌರವಿಸುತ್ತಾ... ಎಲ್ಲರೊಡನೆ ಜೊತೆಗೂಡಿ ನೆಮ್ಮದಿಯಿಂದ ಬಾಳುವುದು ಲೇಸಲ್ಲವೇ" ಎಂಬ ಭಾವನೆಯು ನನ್ನ ಮನವನ್ನು ಆವರಿಸಿತು.

⌘

ಬಾಡ್ಬೇಕು...ಸಾ



ವಿದ್ಯಾರ್ಥಿಗಳಾದ ನಮ್ಮೆಲ್ಲರಿಗೂ ಕನ್ನಡ ಮೇಷ್ಟ್ರು ಮಹದೇವಪ್ಪನವರನ್ನು ಕಂಡರೆ ಬಹಳ ಸಂತೋಷವಾಗುತ್ತಿತ್ತು. ಅವರು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದ ನಳ ಚರಿತ್ರೆಯ ಕಾವ್ಯಭಾಗಗಳು... ಸರ್ವಜ್ಞನ ವಚನಗಳು... ಇಂದಿಗೂ ನಮ್ಮ ಕಿವಿಯಲ್ಲಿ ಮೊರೆಯುತ್ತಿವೆ.. ಅವರು ನಮ್ಮ ತರಗತಿಯೊಳಕ್ಕೆ ಬರುತ್ತಿದ್ದಂತೆಯೇ... ನಮ್ಮೆಲ್ಲರ ಮುಖ ಹೂವಿನಂತೆ ಅರಳುತ್ತಿತ್ತು.

ಒಂದು ದಿನ ಮಧ್ಯಾಹ್ನ ಮಹದೇವಪ್ಪನವರ ತರಗತಿಯಿತ್ತು. ಏಕೋ... ಏನೋ ... ಅಂದು ವೇಳೆಯಾದ್ರೂ ಅವರು ಬರಲಿಲ್ಲ. ಅವರನ್ನು ಕಾದು, ಕಾದು ಸುಸ್ತಾದ ನಾವೆಲ್ಲರೂ, ಬಾಲಚೇಷ್ಟೆಗೆ ತಕ್ಕಂತೆ ಮಾತನಾಡುತ್ತ... ಕಿರುಚಾಡುತ್ತ ಗದ್ದಲದಲ್ಲಿ ತೊಡಗಿದ್ದೆವು.

ಇದ್ದಕ್ಕಿದ್ದಂತೆಯೇ ಅನಿರೀಕ್ಷಿತವಾಗಿ ತರಗತಿಯ ಒಳಕ್ಕೆ ನಮ್ಮ ಹೆಡ್ ಮಾಸ್ಟರ್ ಬಂದರು. ಕೈಯಲ್ಲಿ ಉದ್ದನೆಯ ಬೆತ್ತವನ್ನು ಹಿಡಿದು ಮುಖ ಗಂಟಿಕ್ಕಿಕೊಂಡು ಒಳ ಬಂದ ಹೆಡ್ ಮಾಸ್ಟರನ್ನು ನೋಡಿದ ಕ್ಷಣದಲ್ಲೇ ...ಗರಬಡಿದಂತಾಗಿ ನಾವೆಲ್ಲಾ ಮೂಕರಾಗಿ ಎದ್ದು ನಿಂತೆವು. ನಮ್ಮೆಲ್ಲರನ್ನು ಕ್ಷಣಗಳ ಕಾಲ ದುರುಗುಟ್ಟಿಕೊಂಡು ನೋಡುತ್ತಿದ್ದು... "ಹು... ಕುಕ್ರು ಬಡೀರಿ" ಎಂದು ಅಬ್ಬರಿಸಿದರು. ಮತ್ತೆ ಅಲ್ಪ ಸ್ವಲ್ಪ ಸದ್ದಿನೊಡನೆ ಎಲ್ಲರೂ ಕುಳಿತುಕೊಂಡೆವು.

ಈಗ ತರಗತಿ ಮೌನವಾಗಿತ್ತು. ನಾವೆಲ್ಲಾ ಒಳಗೊಳಗೆ ನಡುಗುತ್ತಿದ್ದೆವು. ಮೊದಲೊಂದು ದಿನ ಹೀಗೆ ನಾವು ಗಲಾಟೆ ಮಾಡುತ್ತಿದ್ದಾಗ, ಬಿರುಗಾಳಿಯಂತೆ ಒಳಕ್ಕೆ ನುಗ್ಗಿ ಬಂದಿದ್ದ ಹೆಡ್ ಮಾಸ್ಟರ್ ನಮ್ಮೆಲ್ಲರಿಗೂ ಕಪಾಲ್‌ದೀರ್ಗ ಮತ್ತು ದಿಮ್‌ದೀರ್ಗ ನೀಡಿದ್ದರು. (ಕಪಾಲ್‌ದೀರ್ಗ=ಹಸ್ತದಿಂದ ಕಪಾಲಕ್ಕೆ ಬಾರಿಸುವುದು; ದಿಮ್‌ದೀರ್ಗ=ಮುಷ್ಟಿಯಿಂದ ಬೆನ್ನಿನ ಮೇಲೆ ಗುದ್ದುವುದು.)

ಅಂದು ಬರಿಗೈಯಲ್ಲಿ ಬಂದಿದ್ದವರು, ಇಂದು ಬೆತ್ತ ಹಿಡಿದು ಬಂದಿದ್ದರು. ಇಂದು ಎಂಥೆಂಥ ಏಟುಗಳನ್ನು... ಎಲ್ಲೆಲ್ಲಿ ತಿನ್ನಬೇಕಾಗುತ್ತದೆಯೋ....... ಎಂದು ಬೆವರತೊಡಗಿದೆವು.

ನಮ್ಮೆಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಹೆಡ್ ಮಾಸ್ಟರ್ ಕೆಲವೇ ಕ್ಷಣಗಳಲ್ಲೇ ತುಂಬಾ ಶಾಂತಚಿತ್ತರಾಗಿ ಕುಳಿತುಕೊಂಡು –

"ನೋಡ್ರಯ್ಯ ಇವತ್ತು ಮಹದೇವಪ್ಪನವರು ರಜೆ ಹಾಕಿದ್ದಾರೆ. ಅದಕ್ಕೆ ನಾನು ನಿಮ್ಮ ಕ್ಲಾಸಿಗೆ ಬಂದೆ. ನಿಮ್ಮ ಕ್ಲಾಸಿನಲ್ಲಿ ತುಂಬಾ ಚೆನ್ನಾಗಿ ಜನಪದ ಗೀತೆಗಳನ್ನು ಹಾಡುವಂತಹ ಹುಡುಗರು ಇದ್ದೀರಂತೆ... ಯಾರ್‍ಯಾರಿಗೆ ಚೆನ್ನಾಗಿ ಹಾಡುವುದಕ್ಕೆ ಬರುತ್ತದೋ ಅವರೆಲ್ಲಾ ಈಗ ಹಾಡಿ... ಇಲ್ಲಿ ಚೆನ್ನಾಗಿ ಹಾಡುವ ಒಂದಿಬ್ಬರಿಗೆ ಮುಂದಿನವಾರ ನಡೆಯುವ 'ಯೂನಿಯನ್ ಡೇ' ಸಮಾರಂಭದಲ್ಲಿ ಹಾಡುವುದಕ್ಕೆ ಅವಕಾಶ ಕೊಡ್ತೀನಿ" ಎಂದರು. ಹೆಡ್ ಮಾಸ್ಟರ್ ಅವರ ಮೃದುವಾದ ಮಾತುಗಳನ್ನು ಕೇಳುತ್ತಿದ್ದಂತೆಯೇ, ಅರ್ಧ ಭಯ ಹೊರಟುಹೋಯಿತು.

ನಾಲ್ಕಾರು ಹುಡುಗರು ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿರುವುದನ್ನು ಕೇಳುತ್ತಾ... ಕೇಳುತ್ತಾ ಹೆಡ್‌ಮಾಸ್ಟರ್ ಸಂತೋಷಚಿತ್ತದಿಂದ ತಲೆ ತೂಗಲಾರಂಭಿಸಿದರು. ಈಗ ನಾವೆಲ್ಲಾ ಬಹಳ ಉಲ್ಲಾಸ ಭರಿತರಾಗಿದ್ದೆವು. ಹುಡುಗರ ಹಾಡುಗಾರಿಕೆ ಮುಗಿದ ನಂತರ, ನಮ್ಮನ್ನು ಉದ್ದೇಶಿಸಿ "ಯೂನಿಯನ್ ಡೇ ಸಮಾರಂಭಕ್ಕೆ ನಿಮ್ಮ ತಂದೆ

ತಾಯಿಯರನ್ನು ಕರೆದುಕೊಂಡು ಬನ್ನಿ, ನೀವೆಲ್ಲಾ ಆವತ್ತು ಬಹಳ ಶಿಸ್ತಿನಿಂದ ನಡೆದುಕೊಳ್ಳಬೇಕು" ಎಂದು ತಿಳುವಳಿಕೆ ಹೇಳತೊಡಗಿದರು. ತರಗತಿಯಲ್ಲಿ ಕಂಡುಬಂದ ಇಂತಹ ಸುಮಧುರ ವಾತಾವರಣದಲ್ಲಿ ಸ್ವಲ್ಪ ಮೈಮರೆತ ಒಬ್ಬ ಹುಡುಗ... "ಈ ಸಾರಿ ಯೂನಿಯನ್ ಡೇಗೆ ಏನ್ ತಿಂಡಿ ಮಾಡಿಸ್ತಿರ ಸಾರ್?"... ಎಂದು ನೇರವಾಗಿ ಕೇಳಿಬಿಟ್ಟ!... ತಕ್ಷಣವೇ ಹೆಡ್ ಮಾಸ್ಟರ್ ಮುಖದಲ್ಲಿ ಸಿಟ್ಟಿನ ಚಂಕಿ ಕ್ಷಣಕಾಲ ಉರಿಯಿತು. ಆದರೆ ಮರುಕ್ಷಣದಲ್ಲೆ ಶಾಂತ ಚಿತ್ತರಾಗಿ "ಏನ್ ತಿಂಡಿ ಬೇಕು ಅಂತ ನೀನೇ ಹೇಳು... ಅದನ್ನೇ ಮಾಡ್ಸೋಣ" ಎಂದರು. ಆ ಹುಡುಗ ಈ ಪ್ರಶ್ನೆಗೆ ಉತ್ತರಿಸಲು ಹಿಂಜರಿದು, ತಲೆ ಬಗ್ಗಿಸಿ ಸುಮ್ಮನಾದ, ಈಗ ಹೆಡ್ ಮಾಸ್ಟರ್ ಇಡೀ ತರಗತಿಯನ್ನು ಉದ್ದೇಶಿಸಿ "ನಿಮಗೇನು ಬೇಕು ಹೇಳಿ... ಎಷ್ಟೇ ಆದರು ನೀವು ಎಸ್.ಎಸ್.ಎಲ್.ಸಿ., ಹುಡುಗರಲ್ವೇ.... ನಮ್ಮ ಹೈಸ್ಕೂಲಿನಲ್ಲಿ ನಿಮಗೆ ಇದೆ ಕೊನೆ ವರ್ಷ, ನಿಮ್ಮ ಆಸೆ ಪೂರೈಸೋಣ... ಏನು ಬೇಕು ಹೇಳಿ" ಎಂದರು.

ಎಂಟನೆಯ ತರಗತಿಯಲ್ಲಿದ್ದಾಗ ತರಕಾರಿ ಬಾತ್ ಮತ್ತು ಮೊಸರನ್ನ ತಿಂದಿದ್ದೆವು. ಕಳೆದ ವರ್ಷ ಕೇಸರಿಬಾತ್ ಮತ್ತು ಕಾರಾಬಾತ್ ತಿಂದು ಕುಣಿದಾಡಿದ್ದೆವು. ಈ ಸಲ ತುಂಬಾ ರುಚಿಕರವಾದುದನ್ನು ಕೇಳಿ ತಿನ್ನಬೇಕೆಂಬ ಆಸೆ ನಮ್ಮಲ್ಲಿ ಚಿಗುರಿತು. ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಮತ್ತೊಬ್ಬ ಹುಡುಗ ಅತ್ಯಂತ ಮೆಲು ಧ್ವನಿಯಲ್ಲಿ "ಬಾಡು... ಸಾ" ಎಂದ. ಗ್ರಾಮೀಣ ಮಕ್ಕಳಾದ ನಮಗೆ ಬಾಡಿನೂಟವೆಂದರೆ ಪಂಚಪ್ರಾಣ. ನಮ್ಮಲ್ಲಿ ಒಬ್ಬ ಹುಡುಗನ ಬಾಯಿಂದ 'ಬಾಡು' ಎಂಬ ಪದ ಬಂದದ್ದನ್ನು ಕೇಳಿ, ನಮ್ಮೆಲ್ಲರಿಗೂ ರೋಮಾಂಚನವಾಯಿತು. ಆ ಹುಡುಗ ಹೇಳಿದ್ದು ಹೆಡ್ ಮಾಸ್ಟರಿಗೆ ಸರಿಯಾಗಿ ಕೇಳಿಸಲಿಲ್ಲವೆಂದು ಕಾಣುತ್ತದೆ.... ಮತ್ತೊಮ್ಮೆ "ಏನು ಬೇಕು ಅಂತ ಗಟ್ಟಿಯಾಗಿ ಹೇಳು" ಎಂದರು.

ಆ ಹುಡುಗ ಸ್ವಲ್ಪ ಗಟ್ಟಿಯಾದ ಧ್ವನಿಯಲ್ಲಿ "ಬಾಡ್ಬೇಕು... ಸಾ" ಎಂದ. ಈಗ ಹೆಡ್ ಮಾಸ್ಟರಿಗೆ ಸ್ಪಷ್ಟವಾಗಿ ಕೇಳಿಸಿತು. ಆದರೆ ಅವರು ಮತ್ತೊಮ್ಮೆ.... "ನೀನು ಹೇಳಿದ್ದು ಸರಿಯಾಗಿ ಕೇಳುಸ್ತಾಯಿಲ್ಲ.... ಅದೇನು ಬೇಕು ಅಂತ ಜೋರಾಗಿ ಹೇಳು" ಎಂದರು. ಈ ವೇಳೆಗಾಗಲೇ ಹೆಡ್ ಮಾಸ್ಟರ್ ಅವರ ನಗೆ ಮುಖದ ಮೃದು ಮಾತುಗಳಿಂದ ಸಂಪೂರ್ಣವಾಗಿ ಭಯವನ್ನು ತೊರೆದು.... ಮೈಮರೆತಿದ್ದ ನಾವೆಲ್ಲಾ ಜೊತೆಗೂಡಿ.... "ಬಾಡ್ಬೇಕು... ಸಾ" ಎಂದು ಒಕ್ಕೊರಳಿನಿಂದ ಜೋರಾಗಿ ಅರಚಿದೆವು. ಹೆಡ್ ಮಾಸ್ಟರ್ ತಲೆದೂಗುತ್ತಾ.... "ನಿಮಗೆಲ್ಲಾ ಬಾಡು ಬೇಕೇನ್ರಪ್ಪ" ಎಂದರು.

ತರಗತಿಯ ಮಾಳಿಗೆಯೇ ಎದ್ದು ಹೋಗುವಂತೆ.... "ಹೂ ಕಣ್ ಸಾ" ಎಂದೆವು. ಅಷ್ಟರಲ್ಲಿ ತರಗತಿಯ ಗಂಟೆ ಹೊಡೆಯಿತು. "ಮುಂದಿನ ತರಗತಿ ಯಾರದು?" ಎಂದರು. "ಪಿ.ಟಿ.ಕ್ಲಾಸ್" ಎಂದು ಉತ್ಸಾಹದಿಂದ ಉತ್ತರಿಸಿದೆವು. ಹೆಡ್ ಮಾಸ್ಟರ್ ಮತ್ತೆ ಗಂಭೀರವದನರಾಗಿ ತರಗತಿಯಿಂದ ಹೊರ ನಡೆದರು. ಮಾರ್ಚಿ ತಿಂಗಳಿನ ಬೇಸಿಗೆಯ ಮಧ್ಯಾಹ್ನ ಮೂರೂವರೆ ಗಂಟೆಯ ಆ ಸುಡು ಸುಡು ಬಿಸಿಲಿನಲ್ಲಿ ನಾವೆಲ್ಲಾ ಆಟದ ಮೈದಾನಕ್ಕೆ ಬಂದೆವು ಪಿ.ಟಿ.ಮಾಸ್ಟರ್ ಅವರ ಸಿಳ್ಳೆ ಆಗಲೇ ಕೇಳಿ ಬರುತ್ತಿತ್ತು. ತೀರಾ ಅಚ್ಚರಿಯ ದೃಶ್ಯವೆಂದರೆ... ಅಂದು ಹೆಡ್ ಮಾಸ್ಟರ್ ಅವರು ನಮ್ಮೊಡನೆ ಸೀದಾ ಮೈದಾನಕ್ಕೆ ಬಂದು ನಿಂತು... ಪಿ.ಟಿ.ಮಾಸ್ಟರಿಗೆ ಏನೇನೋ ಸೂಚನೆಗಳನ್ನು ನೀಡುತ್ತಿದ್ದರು.

ಕೆಲವೇ ನಿಮಿಷಗಳಲ್ಲಿ ನಾವು ಎಂದಿನಂತೆ ಪ್ಯಾಂಟ್ ಮತ್ತು ಷರ್ಟುಗಳನ್ನು ತೆಗೆದು.... ನೀಲಿ ನಿಕ್ಕರ್ ಮತ್ತು ಬಿಳಿಯ ನೆಟ್‌ಬನೀನ್ ಯೂನಿಫಾರಂನಲ್ಲಿ ಸಾಲಾಗಿ ನಿಂತೆವು. ಇಷ್ಟು ದಿನ ಪೂರ್ವಕ್ಕೆ ಎದುರಾಗಿ ನಿಲ್ಲಿಸಿ, ವಿವಿಧ ಬಗೆಯ ಕವಾಯತುಗಳನ್ನು ನಮ್ಮಿಂದ ಮಾಡಿಸುತ್ತಿದ್ದ ಪಿ.ಟಿ.ಮಾಸ್ಟರ್ ಇಂದು ನಮ್ಮನ್ನು ಪಶ್ಚಿಮ ದಿಕ್ಕಿನಲ್ಲಿ ಉರಿಯುತ್ತಿರುವ ಸೂರ್ಯನಿಗೆ ಎದುರಾಗಿ ನಿಲ್ಲಿಸಿದರು. ಬಿಸಿಲಿನ ಝಳ ತೀಕ್ಷ್ಣವಾಗಿತ್ತು.

ಈಗ ಪಿ.ಟಿ.ಮಾಸ್ಟರ್ ನಮ್ಮೆಲ್ಲರನ್ನೂ ಕುರಿತು, "ಈಗ ನಿಮ್ಮ ಕಾಲುಗಳ ಸಂದಿನಲ್ಲಿ ಕೈಗಳನ್ನು ತೂರಿಸಿ... ನಿಮ್ಮ ಕಿವಿಗಳೆರಡನ್ನು ಬಿಗಿಯಾಗಿ ಹಿಡಿದುಕೊಂಡು.... ಬಗ್ಗಿ ನಿಲ್ಲಿರಿ" ಎಂದು ಆಜ್ಞಾಪಿಸಿದರು. ಗಾಬರಿಗೊಂಡ ನಾವೆಲ್ಲಾ "ಓೀೀೀ...." ಎಂದು ಅರಚಿದೆವು. ಅಲ್ಲೆ ನಿಂತಿದ್ದ ಹೆಡ್ ಮಾಸ್ಟರ್ ನಮ್ಮನ್ನೆ ತಿಂದು ಹಾಕುವಂತೆ ನೋಡುತ್ತಿದ್ದರು. ಪಿ.ಟಿ.ಮಾಸ್ಟರ್ ಅವರಿಂದ ಸಾಕಷ್ಟು ಎತ್ತರದ ಧ್ವನಿಯಲ್ಲಿ ಮತ್ತೆ ಅದೇ ಆಜ್ಞೆ ಹೊರಟಿತು. ಈಗ ನಮ್ಮಲ್ಲಿ ಕೆಲವರು ಬಗ್ಗ ತೊಡಗಿದರು. ಮತ್ತೆ ಕೆಲವರು ನಿಂತೇ ಇದ್ದರು. ನಿಂತಿರುವವರ ಬೆನ್ನಿನ ಮೇಲೆ ಬೆತ್ತದ ಏಟುಗಳ ಸುರಿಮಳೆಯಾಗ ತೊಡಗಿತು. ಕ್ಷಣ ಮಾತ್ರದಲ್ಲಿ ಎಲ್ಲಾ ವಿದ್ಯಾರ್ಥಿಗಳು ಬಗ್ಗಿ... ಕಿವಿಗಳನ್ನು ಹಿಡಿದು ಕೊಂಡರು. ಈಗ ಪಿ.ಟಿ.ಮಾಸ್ಟರ್ ನಮ್ಮ ಸುತ್ತ... ಸುತ್ತುತ್ತಾ... "ಲೇ... ಯಾರಾದ್ರು ಅತ್ತಗೆ ಇತ್ತಗೆ ವಾಲಾಡುದ್ರೆ... ಕಿವಿಗಳನ್ನು ಹಿಡ್ಕೊಳ್ಳದೇ ಇದ್ರೆ... ಬೆತ್ತದಿಂದ ಬಡಿದು ಎತ್ತಾಕ್ಬುಡ್ತೀನಿ... ಹುಷಾರ್!" ಎಂದು ಕರ್ಕಶವಾಗಿ ಕೂಗುತ್ತಿದ್ದರು.

ಆಗಾಗ್ಗೆ ಅಲ್ಲಲ್ಲಿ ಬೆತ್ತದ ಏಟುಗಳ ಧ್ವನಿ ಕೇಳಿ ಬರುತ್ತಿತ್ತು. ಕೆಲವೇ ಕ್ಷಣಗಳಲ್ಲಿ ಮೈದಾನದಲ್ಲಿ ಮೌನ ಆವರಿಸಿತು. ಕಿವಿ ಹಿಡಿದುಕೊಳ್ಳುವ ಶಿಕ್ಷೆಗೆ ಗುರಿಯಾಗಿ ನಡು


ಬಗ್ಗಿಸಿ... ತಲೆ ತಗ್ಗಿಸಿ... ಬಿಸಿಲಿನಲ್ಲಿ ಬೇಯುತ್ತಿದ್ದ ನಮ್ಮನ್ನು ಕುರಿತು ಈಗ ಹೆಡ್ ಮಾಸ್ಟರ್ ಗರ್ಜಿಸತೊಡಗಿದರು... "ಬಾಡು ಬೇಕೇನ್ರಲಾ... ಬಾಡು!.... ಈಗ ಬಿಸ್ಲು ಬಾಳೆಹಣ್ಣನ್ನು ತಿನ್ಕೊಂಡು ಚೆನ್ನಾಗಿ ಬಾಡಿ."

ನನ್ನ ಸಹೋದ್ಯೋಗಿಯೊಬ್ಬರು ಈ ಮೇಲ್ಕಂಡ ಘಟನೆಯನ್ನು ಮೊನ್ನೆ ನನ್ನೊಡನೆ ಹೇಳಿಕೊಂಡು–

"ನೋಡಿ ಸಾರ್, ಇಂದಿಗೂ 'ಬಾಡು' ಎಂಬ ಪದವನ್ನು ಕೇಳಿದಾಗಲೆಲ್ಲಾ, ನನ್ನ ಬಾಲ್ಯದಲ್ಲಿನ ಈ ಘಟನೆ ನೆನಪಾಗುತ್ತದೆ. ಮುಗ್ಧ ಮನಸ್ಸಿನ ಗ್ರಾಮೀಣ ಮಕ್ಕಳಾಗಿದ್ದ ನಾವು, ಗುರುಗಳ ಕೋಪಕ್ಕೆ ಹೇಗೆ ಗುರಿಯಾಗಿದ್ದೆವು ಎಂಬುದನ್ನು ನೆನೆದುಕೊಂಡು ನಗು ಬರುತ್ತದೆ" ಎಂದರು.

⌘

ನಮಗೇನೆ ಕಷ್ಟ ಸಾರ್



ಕಳೆದ ಜೂನ್ ತಿಂಗಳಿನ ಮೊದಲನೆಯ ವಾರದಲ್ಲಿ ಒಂದು ಕಾರ್ಯಾರ್ಥವಾಗಿ, ಪ್ರತಿನಿತ್ಯ ಮಂಡ್ಯದಿಂದ ಮೈಸೂರಿಗೆ ರೈಲಿನಲ್ಲಿ ಹೋಗಿ ಬರುತ್ತಿದ್ದೆ. ಸಹ ಪ್ರಯಾಣಿಕರ ಜೊತೆಯಲ್ಲಿ ಅದು ಇದು ಲೋಕಾಭಿರಾಮವಾಗಿ ಮಾತನಾಡುವುದರಲ್ಲಿ ಪ್ರಯಾಣದ ಸಮಯ ಕಳೆದು ಹೋಗುತ್ತಿತ್ತು.

ಒಂದು ದಿನ ಸಂಜೆ ಮೈಸೂರಿನಿಂದ ಮಂಡ್ಯದ ಕಡೆಗೆ ರೈಲು ಬರುತ್ತಿತ್ತು. ರೈಲಿನ ಬೋಗಿಯೊಂದರಲ್ಲಿ ವಿವಿಧ ಇಲಾಖೆಗಳಲ್ಲಿ ನೌಕರಿಯಲ್ಲಿರುವ ಹತ್ತು ಮಂದಿ ನಾವು ಎದುರುಬದುರಾಗಿ ಕುಳಿತಿದ್ದೆವು. ಅಂದಿನ ಮಾತುಕತೆಯಲ್ಲಿ ಮಕ್ಕಳಿಗೆ ಕಾನ್ವೆಂಟುಗಳಲ್ಲಿ ಸೀಟು ಪಡೆಯುವ ವಿಚಾರ ಪ್ರಮುಖವಾಗಿ ಪ್ರಸ್ತಾಪವಾಗತೊಡಗಿತು. ಆಗ ನಮ್ಮೆಲ್ಲರ ನಡುವೆ ನಡೆದ ಸಂಭಾಷಣೆಯನ್ನು ಯಥಾವತ್ತಾಗಿ ಇಲ್ಲಿ ದಾಖಲಿಸುತ್ತಿದ್ದೇನೆ.

"ನಿಮಗೆ ಗೊತ್ತೆ ಸಾರ್ ...ಮಂಡ್ಯದಲ್ಲಿ ಈಗ ಯಾವುದೇ ಕಾನ್ವೆಂಟಿನಲ್ಲಿ ಮಕ್ಕಳನ್ನು ಫಸ್ಟ್ ಸ್ಟ್ಯಾಂಡರ್ಡ್‌ಗೆ ಸೇರಿಸಬೇಕಾದರೆ... ಎರಡರಿಂದ ಮೂರು ಸಾವಿರ ಕೊಡಬೇಕು."

"ಅಯ್ಯೋ... ಇಲ್ಲಿ ಎಷ್ಟೋ ಪರವಾಗಿಲ್ಲ ಬಿಡಿ... ಬೆಂಗಳೂರು ಮೈಸೂರಿನಲ್ಲಾದ್ರೆ... ಹತ್ತರಿಂದ ಮೂವತ್ತು ಸಾವಿರ ಕಟ್ಟಬೇಕಂತೆ!"

"ಮಕ್ಕಳು ಹುಟ್ಟುವುದಕ್ಕೆ ಮುಂಚೇನೆ... ಬೆಂಗಳೂರಿನ ಕೆಲವು ಕಾನ್ವೆಂಟುಗಳಲ್ಲಿ ಸೀಟನ್ನ ರಿಸರ್ವ ಮಾಡಿಸ್ತಾರಂತೆ... ನಿಜವ ಸಾರ್?"

"ಅದೇನ್ ನಿಜವೋ... ಸುಳ್ಳೋ... ಗೊತ್ತಿಲ್ಲ. ಆದರೆ ಆ ರೀತಿ ಜನ ಮಾತಾಡಿ ಕೊಳ್ಳುವುದನ್ನು ನಾನು ಕೇಳಿದ್ದೀನಿ."

"ನಮ್ ಕಾಲ್ದಲ್ಲಿ ಪ್ರೈಮರಿಯಿಂದ ಹಿಡಿದು ಮಾಸ್ಟರ್ ಡಿಗ್ರಿಯನ್ನು ಓದಿ ಮುಗಿಸುವ ತನಕ ಆಯ್ತಿದ್ದ ಖರ್ಚು.... ಈಗ ನಮ್ಮ ಮಕ್ಕಳಿಗೆ ಎಸ್.ಎಸ್.ಎಲ್.ಸಿ., ಮಾಡಿಸುವಷ್ಟೊತ್ತಿಗೆ ಆಗೋಗುತ್ತೆ."

"ಈಗಿನ ಕಾನ್ವೆಂಟುಗಳ ತರಾವರಿ ಯೂನಿಫಾರಂ ಡ್ರೆಸ್‌ಗಳು... ಟೈಗಳು... ಎರಡೆರಡು ಜೊತೆ ಷೂಗಳು... ಬ್ಯಾಡ್ಜ್‌ಗಳು... ಮಣಗಟ್ಟಲೆ ಪುಸ್ತಕಗಳು ಅಂತ ಇಪ್ಪತ್ತೆಂಟು ಖರ್ಚು ನೋಡುದ್ರೆ ಗಾಬರಿಯಾಗುತ್ತೆ".

"ಇದೆಲ್ಲಾ ರಗಳೆಯೇ ಬೇಡ ಅಂತ.... ನನ್ನ ಮಗನನ್ನ ಒಂದನೇ ಕ್ಲಾಸಿಗೆ ಸೇರಿಸುವಾಗ, ಗೌರ್ಮೆಂಟ್ ಸ್ಕೂಲಿಗೆ ಹಾಕೋಣ ಅಂತ ಇದ್ದೆ ...ಆದರೆ ನಮ್ಮ ಹೋಮ್ ಮಿನಿಸ್ಟರ್ ಬಿಡ್ತೇಕಲ್ಲ!.... ಎಲ್ಲರೂ ತಮ್ಮ ಮಕ್ಕಳನ್ನ ಒಳ್ಳೊಳ್ಳೆ ಕಾನ್ವೆಂಟುಗಳಿಗೆ ಸೇರಿಸಿದರೆ ...ನೀವು ನಮ್ಮ ಮಗನನ್ನು ಸರ್ಕಾರಿ ಸ್ಕೂಲಿಗೆ ಸೇರಿಸ್ತೀನಿ ಅಂತಿರಾ?... ಮುಂದಕ್ಕೆ ಅವನ ಭವಿಷ್ಯ ಏನಾಗಬೇಕು? ...ಎಲ್ಲಕ್ಕಿಂತ ಹೆಚ್ಚಾಗಿ ಬೇರೆಯವರು ಆಡ್ಕೊಂಡು ನಗ್ತರೆ ಅಷ್ಟೆ... ಅಂತ ನನ್ನ ಹೆಂಡತಿ ತಲೆ ಒಗೆದ್ಬುಟ್ಟಳು".

"ನಿಮ್ಮ ಮನೆಯವರ ಅಭಿಪ್ರಾಯ ಸರಿ ಕಣ್ರಿ. ಮಧ್ಯಮ ವರ್ಗಕ್ಕೆ ಸೇರಿರುವ ನಮಗೆ... ಎಷ್ಟೋ ವಿಷಯಗಳಲ್ಲಿ ಸರೀಕರ ಮುಂದೆ ನಮ್ಮ ಅಂತಸ್ತು ಕಾಪಾಡಿ ಕೊಳ್ಳುವುದೇ ಮುಖ್ಯವಾಗುತ್ತೆ" ಎಂದು ಹೇಳುವುದರ ಮೂಲಕ... ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ... ಜನಸಮುದಾಯದ ಆಸೆ ಆಕಾಂಕ್ಷೆಗಳ ಪ್ರಸ್ತಾಪಕ್ಕೆ... ಒಬ್ಬರು ಪೀಠಿಕೆಯನ್ನು ಹಾಕಿದರು.

ಈಗ ನಮ್ಮ ಮಾತುಕತೆಯ ಜಾಡು ಮತ್ತೊಂದು ದಿಕ್ಕಿನಲ್ಲಿ ಸಾಗತೊಡಗಿತು. "ನೋಡಿ ಸಾರ್, ಹೊಲಗದ್ದೆಗಳಲ್ಲಿ ಕೂಲಿ ನಾಲಿ ಮಾಡ್ಕೊಂಡು ಜೀವನ ಮಾಡ್ತಿರೋರು

.... ಕಲ್ಲೊಡ್ಡರು... ಜಾಡಮಾಲಿಗಳು ಇಂಥಾವರ್ಗೆಲ್ಲಾ ತಮ್ಮ ಮಕ್ಕಳ್ಳನ್ನು ಆ ಕಾನ್ವೆಂಟಿಗೆ ಸೇರಿಸ್ಬೇಕು.... ಈ ಸ್ಕೂಲಿಗೆ ಸೇರಿಸಬಾರ್ದು.... ಅನ್ನುವ ತಾಕಲಾಟ ಇರಲ್ಲ.... ಯಾಕಂದ್ರೆ ಅವರಲ್ಲಿ ಎಷ್ಟೋ ಮಂದಿ ತಮ್ಮ ಮಕ್ಕಳನ್ನು ಪ್ರತಿ ನಿತ್ಯ ದುಡಿಯುವುದಕ್ಕೆ ಜೊತೆಯಲ್ಲೇ ಕರ್ಕೊಂಡು ಹೊಯ್ತರೆ... ಇನ್ನು ಶ್ರೀಮಂತರ ಹತ್ತಿರ ಬೇಕಾದಷ್ಟು ದುಡ್ಡು ಕೊಳೀತಾಯಿರೂದರಿಂದ, ತಮ್ಮ ಮಕ್ಕಳನ್ನು ಯಾವ ಕಾನ್ವೆಂಟಿಗೆ ಸೇರಿಸ್ಬೇಕು ಅನ್ಸುತ್ತೋ ಅಲ್ಲಿಗೆ ಕಾನ್ವೆಂಟಿನವರು ಕೇಳಿದಷ್ಟು ದುಡ್ಡನ್ನ ಬಿಸಾಕಿ, ಸೀಟು ತಕೊಳ್ತರೆ... ಏನಿದ್ರೂ ನಮಗೇನೆ... ಕಷ್ಟ ಸಾರ್."

"ಈಗ ಇಲ್ಲಿರುವ ನಮ್ಮೆಲ್ಲರಿಗೂ ಪ್ರತಿ ತಿಂಗಳು ಎಂಟು ಹತ್ತು ಸಾವಿರ ರೂಪಾಯಿ ಸಂಬಳ ಬರ್ತಾಯಿದ್ರು... ಯಾವುದಕ್ಕೆ ತಾನೆ ಸಾಕಾಗುತ್ತೆ ಹೇಳಿ?"

"ನಮ್ಮ ಮಕ್ಕಳಿಗೆ ಒಂದು ಒಳ್ಳೆಯ ವಿದ್ಯೆ ಕೊಡಿಸಬೇಕು ಅಂದ್ರೆ... ನೋಟಿನ ಕಂತೆಗಳನ್ನೆ ಇಟ್ಕೊಂಡಿರಬೇಕು... ಇನ್ನು ಅಲ್ಲಿ ಇಲ್ಲಿ ಸುಲಭದಲ್ಲಿ ಸಾಲ ಸಿಗುತ್ತೆ ಅಂತ ಒಂದು ಮನೆ ಕಟ್ಟಿಸಿದರೆ... ಮುಗಿದೇ ಹೋಯ್ತು ನಮ್ಮ ಕಥೆ!"

"ನಾವೇ ಸಾರ್... ತಿಂಗಳ ಸಂಬಳದವರು ಎಲ್ಲಾದಕ್ಕೂ ಹೀಗೆ ಒದ್ದಾಡುವುದು... ಅದೇ ನೋಡಿ.... ಭ್ರಷ್ಟ ರಾಜಕಾರಣಿಗಳು... ದೊಡ್ಡ ದೊಡ್ಡ ವ್ಯಾಪಾರಸ್ಥರು... ಒಳ್ಳೆ ಕಮಾಯಿ ಇರುವ ಕಡೆ ಬೇರು ಬಿಟ್ಟಿರುವ ಸರ್ಕಾರಿ ನೌಕರರು ಹತ್ತು ಹದಿನೈದು ಲಕ್ಷ ಖರ್ಚು ಮಾಡಿ... ಬಂಗ್ಲೆ ಮೇಲೆ ಬಂಗ್ಲೆ ಕಟ್ಟಿಸ್ತಾವ್ರೆ."

"ಇನ್ನು ನಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡ್ಬೇಕು ಅಂದ್ರೆ... ಒಂದೊಂದು ಮದುವೆಗೆ ಏನಿಲ್ಲ ಅಂದ್ರು ಎರಡು ಲಕ್ಷ ಬೇಕೆ ಬೇಕು".

"ಇದೇನ್ ಸಾರ್, ಹಿಂಗಂತೀರಿ!... ಅಷ್ಟರಲ್ಲಿ ಆಗೋದಿಲ್ಲ ಬಿಡಿ... ಬರೀ ಛತ್ರಕ್ಕೇನೆ ಇಪ್ಪತ್ತು ಮೂವತ್ತು ಸಾವಿರ ಆಗೋಗುತ್ತೆ... ಇನ್ನೂ ಊಟ, ತಿಂಡಿ, ವರೋಪಚಾರ ಅಂತ ಖರ್ಚು ಒಸೀನೆ ಸಾರ್!... ಒಂದು ವೇಳೆ ನೀವು ಮೊದಲಿನಿಂದಲೂ ಬುದ್ಧಿವಂತರಾಗಿ ಮುಂದಕ್ಕೆ ಮಗಳ ಮದುವೆಗೆ ಅಂತ... ಒಂದು ಹತ್ತು ಹದಿನೈದು ತೊಲ ಚಿನ್ನ ಕೊಂಡು ಇಟ್ಕೊಂಡಿದ್ರೆ.... ಒಳ್ಳೆಯ ಏರಿಯಾದಲ್ಲಿ ಒಂದು ಸೈಟು ತೆಗೆದು ಬುಟ್ಕೊಂಡಿದ್ರೆ... ಈಗ ನೀವು ಹೇಳುವಷ್ಟರಲ್ಲಿ ಹೇಗೂ ಮಾಡಬಹುದು."

"ಈಗಲೇ ಪರಿಸ್ಥಿತಿ ಹೀಗಿರುವಾಗ, ಮುಂದಕ್ಕೆ ನಮ್ಮ ಮಕ್ಕಳ ಕಥೆ ಏನೇನೋ?"

"ಅದಕ್ಕೆ ನಾನು ಹೇಳುವುದು... ಈ ಕಡೆ... ಪೂರ್ತಿ ನಿರ್ಗತಿಕರಾದವರಿಗೆ ಯಾವ ಸಮಸ್ಯೆನೂ ಇಲ್ಲ... ಯಾಕಂದ್ರೆ ಅವರು ತಮ್ಮ ಮಕ್ಕಳಿಗೆ ಯಾವ ವಿದ್ಯೆ ಕೊಡಿಸ್ಬೇಕು?... ಭರ್ಜರಿಯಾಗಿ ಯಾರಿಗೆ ಮದುವೆ ಮಾಡ್ಬೇಕು? ...ಯಾವ ಬಂಗ್ಲೆ

ಕಟ್ಟಿಸ್ಬೇಕು? ...ಹೆಂಗೋ ಆವತ್ತಿನ ಹೊಟ್ಟೆಯ ಪಾಡನ್ನು ಅವತ್ತು ನೀಗಿಸಿಕೊಂಡು ನೆಮ್ಮದಿಯಾಗಿ ಕಾಲ ನೂಕ್ತಾರೆ.... ಇನ್ನು ಆ ಕಡೆ ...ಶ್ರೀಮಂತರಿಗೆ ಯಾವ ಕಷ್ಟನೂ ಇಲ್ಲ. ಕಣ್ಣಿಗೆ ಬೇಕಾದ್ದನ್ನ ತಕೊಂಡು ...ಮಕ್ಕಳಿಗೆ ಒಳ್ಳೆಯ ಸ್ಥಾನಮಾನ ಗಿಟ್ಟಿಸಿಕೊಂಡು... ಮೂರ್ನಾಕು ತಲೆಮಾರು ಕುಂತ್ಕೊಂಡು ತಿಂದ್ರು ಕರಗದಷ್ಟು ಆಸ್ತಿ ಮಾಡ್ಕೊಂಡು ಆರಾಮವಾಗವ್ರೆ.. ಎತ್ತಲಿಂದ ನೋಡುದ್ರು.... ನಮ್ಮದೇ ಸಾರ್ ಎಡಬಿಡಂಗಿ!... ನೀವು ಏನೇ ಅನ್ನಿ ಸಾರ್... ಮಧ್ಯಮ ವರ್ಗದಲ್ಲಿ ಮಾತ್ರ ಹುಟ್ಟಬಾರ್ದು."

ಈಗ ಒಂದೆರಡು ನಿಮಿಷಗಳ ಕಾಲ ಎಲ್ಲರೂ ಮೌನವಾದರು. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮಧ್ಯಮವರ್ಗಕ್ಕೆ ಸೇರಿದ್ದ ನಮ್ಮೆಲ್ಲರ ಆಲೋಚನೆಯ ರೀತಿಯನ್ನು ಕುರಿತು ಕ್ಷಣಕಾಲ ಚಿಂತಿಸತೊಡಗಿದೆ.

ಆಹಾರ ಧಾನ್ಯಗಳನ್ನು ಬೆಳೆಯುವ ...ಕಾರ್ಖಾನೆಗಳನ್ನು, ಅಣೆಕಟ್ಟುಗಳನ್ನು, ಕಟ್ಟಡಗಳನ್ನು ಕಟ್ಟುವ... ರಸ್ತೆಗಳನ್ನು ನಿರ್ಮಿಸುವ.... ಒಟ್ಟಾರೆ, ನಾಡಿಗೆ ಅಗತ್ಯವಾದ ಎಲ್ಲವನ್ನೂ... ಜನಸಮುದಾಯಕ್ಕೆ ನೀಡುತ್ತಿರುವ ಕೋಟೆಗಟ್ಟಲೆ ದೈಹಿಕ ಶ್ರಮಜೀವಿಗಳಾದ ಬಡವರು... ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಉನ್ನತವಾದ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಳ್ಳದಿರುವುದಕ್ಕೆ.... ದೈಹಿಕ ಪರಿಶ್ರಮದ ದುಡಿಮೆಗೆ ಮತ್ತು ಬೌದ್ಧಿಕ ಪರಿಶ್ರಮದ ದುಡಿಮೆಗೆ ದೊರೆಯುತ್ತಿರುವ ಆದಾಯದ ಪ್ರಮಾಣದಲ್ಲಿ.... ಅಗಾಧವಾದ ಅಂತರವಿರುವ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿನ ರೀತಿ ನೀತಿಗಳನ್ನು ವಿಶ್ಲೇಷಣೆ ಮಾಡುವುದರ ಬದಲು... "ಕೆಳವರ್ಗದ ಜನರು ಅಂದಂದಿನ ಹಸಿವನ್ನು ತೃಪ್ತಿಪಡಿಸಿಕೊಳ್ಳುವಷ್ಟರಿಂದಲೇ ನೆಮ್ಮದಿಯಿಂದ ಇದ್ದಾರೆ" ಎಂದು ಭಾವಿಸಿರುವ ....ನಮ್ಮ ಮನೋಧರ್ಮ ಎಷ್ಟರ ಮಟ್ಟಿಗೆ ಸರಿಯಾದುದು ಎಂಬ ಪ್ರಶ್ನೆ ಕಾಡತೊಡಗುತ್ತಿದ್ದಂತೆಯೇ.... ನಿಲ್ದಾಣದೊಳಗೆ ರೈಲು ಬಂದು ನಿಂತಿತು.

⌘

ಔಟ್ ಕೊಟ್ರೆ...



ಮೊನ್ನೆ ಸಾಯಂಕಾಲ ಐದು ಗಂಟೆಯ ಸಮಯದಲ್ಲಿ ಸ್ನೇಹಿತರೊಬ್ಬರನ್ನು ನೋಡಲೆಂದು ಅವರ ಮನೆಯ ಬಳಿಗೆ ಹೋದಾಗ, ಪಕ್ಕದ ಖಾಲಿ ಸೈಟಿನಲ್ಲಿ ಚಿಕ್ಕ ಹುಡುಗರು ಜೋರಾಗಿ ಕೂಗಾಡುತ್ತಿರುವುದು ಕೇಳಿ ಬಂತು. ರಸ್ತೆಯ ಮಗ್ಗುಲಲ್ಲಿ ನಿಂತುಕೊಂಡು... ಅವರ ವರ್ತನೆಗಳನ್ನು ಗಮನಿಸತೊಡಗಿದೆ.

ಕ್ರಿಕೆಟ್ ಆಟದಲ್ಲಿ ತೊಡಗಿದ್ದ ಪೈಕಿ ಒಬ್ಬ ಹುಡುಗನು ಕ್ರಿಕೆಟ್ ಚೆಂಡನ್ನು ತೆಗೆದುಕೊಂಡು ತನ್ನ ಮನೆಯತ್ತ ಓಡುತ್ತಿದ್ದ. ಅವನನ್ನು ಹೋಗಬೇಡವೆಂದು ಅಲ್ಲಿದ್ದವರು ಕೂಗಿಕೊಳ್ಳುತ್ತಿದ್ದರು. ಓಡಿ ಹೋಗುತ್ತಿದ್ದ ಹುಡುಗನು ಈಗ ರಸ್ತೆಯ ಒಂದು ಬದಿಯಲ್ಲಿ ನಿಂತು ...ದೂರದಿಂದಲೇ ಕೂಗಿ ಹೇಳಿದ–

"ನೀವು ಔಟ್ ಕೊಟ್ರೆ... ನಾನು ಆಟಕ್ಕೆ ಬರೊಲ್ಲ."

ಆಟವಾಡುತ್ತಿದ್ದ ಎಡೆಯಿಂದ ಒಬ್ಬ ಹುಡುಗ ಇವನ ಹತ್ತಿರಕ್ಕೆ ಓಡಿ ಬಂದು–

"ಲೇ... ನೀನು ಔಟಾಗಿಲ್ವೇನೋ?... ನೀನ್ ಕೊಟ್ಟ ಕ್ಯಾಚನ್ನ ನಾನೇ ಓಡಿದನಲ್ಲೋ!"

"ನೀನು ಓಡಿದಿದ್ದು ಕ್ಯಾಚೇ ಅಲ್ಲ... ಫಸ್ಟ್ ಪಿಚ್ ಬಿದ್ದ ಮೇಲೆ ಬಾಲ್ ಓಡ್ಕೊಂಡೆ."

"ಏ... ಸುಳ್ ಸುಳ್ಳೆ ಹೇಳಬ್ಯಾಡ... ಗಾಡ್ ಪ್ರಾಮಿಸ್ ಹೇಳು... ನಾನು ಕರೆಕ್ಟಾಗಿ ಕ್ಯಾಚ್ ಓಡಿಲಿಲ್ವ?"

ಅಷ್ಟರಲ್ಲಿ ಅಲ್ಲಿಗೆ ನಾಲ್ಕೈದು ಮಂದಿ ಆಟಗಾರರು ಬಂದು, ಆ ಹುಡುಗನನ್ನು ಸುತ್ತುವರಿದರು. ಈಗ ವಾಗ್ವಾದ ಮತ್ತಷ್ಟು ಜೋರಾಯಿತು.

"ಲೇ... ಈಗ ನೀನೇನು ಆಟಕ್ಕೆ ಬರಲ್ವೇನೊ?"

"ನಾನು ಆಟಕ್ಕೂ ಬರೊಲ್ಲ... ನನ್ನ ಚೆಂಡನ್ನೂ ಕೊಡೊಲ್ಲ."

"ಲೋ... ಯಾಕೊ ಆಟ ನಿಲ್ಲಿಸ್ತೀಯ?... ಬಾರೊ ಸುಮ್ನೆ."

"ತಿರ್ಗ ನಂಗೆ ಬ್ಯಾಟಿಂಗ್ ಕೊಡೋದಾದ್ರೆ ಬರ್ತೀನಿ."

"ಅಂದೆಂಗೊ ಸಾಧ್ಯ? ಒಂದ್ಸತಿ ಕ್ಯಾಚ್ ಕೊಟ್ಟ ಮೆಲೆ. ನೀನು ಔಟಲ್ವೇನೊ?... ಮತ್ತೆ ಹೆಂಗೊ ಬ್ಯಾಟಿಂಗ್ ಕೊಡೋಕಾಗುತ್ತೆ ನಿಂಗೆ?"

"ಅದೇನೊ ಅದೆಲ್ಲಾ ನಂಗೊತ್ತಿಲ್ಲ. ನಾನು ಬ್ಯಾಟ್ ಮಾಡ್ಬೇಕು."

"ಥೂ... ಎಂಥ ಅಂಡಬಂಡಾನೋ ನಿಂದು... ಹೋಗೋ... ಲೋ... ಹೋಗು. ಬನ್ರೊ... ಇಂಥಾವ್ನ ಜೊತೇಲಿ ಆಡುವ ಬದಲು... ಫೀಲ್ಡ್‌ನಲ್ಲಿ ಕುಂತ್ಕೊಂಡು ಏನಾದ್ರು ಮಾತನಾಡೋಣ ಬನ್ರೊ..."

ಚೆಂಡನ್ನು ಓಡಿದಿದ್ದ ಹುಡುಗ, ಈಗ ತನ್ನ ಮನೆಯತ್ತ ನಡೆದ.... ಉಳಿದವರೆಲ್ಲರೂ ಆಟ ನಿಂತು ಹೋದುದಕ್ಕಾಗಿ ನಿರಾಶೆಗೊಂಡು, ಮೊದಲು ಆಟವಾಡುತ್ತಿದ್ದ ಸ್ಥಳದ ಕಡೆಗೆ ನಿಧಾನವಾಗಿ ಹೆಜ್ಜೆಗಳನ್ನಿಡುತ್ತಾ–

"ಇನ್ಮೇಲೆ... ಅವನ ಚೆಂಡು ನಂಬ್ಕೊಂಡು ಆಟಕ್ಕೆ ಬರಬಾರ್ದು ಕಣ್ರೋ! .... ನಾವೆಲ್ಲಾ... ಸ್ವಲ್ಪ ಸ್ವಲ್ಪ ದುಡ್ಡನ್ನ ಹಾಕೊಂಡು ಬಾಲ್ ತಕೊಬೇಕು."

"ಎಂಥವನೋ ಅವನು!... ಚೆಂಡು ಅವನ್ದು ಅಂತ, ಅವನು ಹೇಳ್ದಂಗೆಲ್ಲಾ ಕೇಳ್ಬೇಕ? ...ಇನ್ಯಾವತ್ತೂ ಅವನನ್ನ ನಮ್ ಜೊತೇಲಿ ಆಟಕ್ಕೆ ಸೇರಿಸ್ಕೋಬಾರ್ದು ಕಣ್ರೊ" ಎಂದು ಮಾತನಾಡಿಕೊಳ್ಳುತ್ತಾ, ಒಂದೆಡೆ ನಿಷ್ಕ್ರಿಯರಾಗಿ ಕುಳಿತುಕೊಂಡರು.


ಕ್ರಿಕೆಟ್ ಆಡುವಾಗ ಲಭಿಸುತ್ತಿದ್ದ ಬಹುಬಗೆಯ ಉದ್ವೇಗ, ತಲ್ಲಣ, ರೋಮಾಂಚನ ಮತ್ತು ಆನಂದದ ಕ್ಷಣಗಳು... ಈಗ ಅವರ ಪಾಲಿಗೆ ಇಲ್ಲವಾಗಿದ್ದವು. ಗೆಳೆಯರ ಜೊತೆಗೂಡಿ ಆಡಿ ನಲಿಯದೆ.... ಚೆಂಡನ್ನು ಮನೆಗೆ ಒಯ್ದು ಆ ಹುಡುಗನ ನಕಾರಾತ್ಮಕವಾದ ವರ್ತನೆಯನ್ನು ನೋಡಿದ ನನಗೆ.... ಏಕೋ ....ಏನೋ ....ಆ ಕ್ಷಣದಲ್ಲಿ ಇದ್ದಕ್ಕಿದ್ದಂತೆಯೇ ಸೀತಾರಾಮ ಕೇಸರಿ ಮತ್ತು ಜಯಲಲಿತ– ಇಬ್ಬರೂ ಒಟ್ಟಿಗೆ ನೆನಪಿಗೆ ಬಂದರು.

ಕೇಂದ್ರದಲ್ಲಿ ಅಂದು ಸಂಯುಕ್ತರಂಗದ ಸರ್ಕಾರದ ಪತನಕ್ಕೆ ಕಾರಣರಾಗಿದ್ದ ಸೀತಾರಾಮ ಕೇಸರಿ ಅವರ ಮತ್ತು ಇಂದು ಬಿಜೆಪಿ ಹಾಗೂ ಮಿತ್ರ ಪಕ್ಷಗಳ ಸರ್ಕಾರಕ್ಕೆ ಪ್ರತಿನಿತ್ಯವೂ ಒಂದಲ್ಲ ಒಂದು ನೆಪದಲ್ಲಿ ಚಿಟುಕುಮುಳ್ಳಾಡುಸುತ್ತಿರುವ ಜಯಲಲಿತ ಅವರ ವರ್ತನೆಗಳು... ಈ ಹಠಮಾರಿ ಹುಡುಗನ ವರ್ತನೆಗಿಂತ ಬೇರೆಯಾಗಿ ಕಾಣಲಿಲ್ಲ.

ವೈಯಕ್ತಿಕವಾಗಿ ಉನ್ನತವಾದ ಸ್ಥಾನಮಾನ ಮತ್ತು ಲಾಭಗಳು ನಮಗೆ ದೊರೆಯದೆ ಹೋದಾಗ... ಮಾತಿನ ವರಸೆಯಿಂದ ನಾನಾ ಬಗೆಯ ಕಾರಣಗಳನ್ನು ಮುಂದೊಡ್ಡುತ್ತಾ.... ಎಲ್ಲಾ ಬಗೆಯ ರಚನಾತ್ಮಕವಾದ ಕಾರ್ಯಗಳನ್ನು ಕಡೆಗಣಿಸುವ ಅಥವಾ ನಾಶಮಾಡುವ ಪ್ರವೃತ್ತಿಯು... ನಮ್ಮೆಲ್ಲರಲ್ಲೂ ವಿವಿಧ ಪ್ರಮಾಣದಲ್ಲಿ ನೆಲೆಗೊಂಡಿದೆ. ಆದ್ದರಿಂದಲೇ ವ್ಯಕ್ತಿ ಪ್ರತಿಷ್ಠೆಯೇ ಪ್ರಧಾನವಾಗಿ ಸಮಾಜದ ಬದುಕು ನಾಶವಾಗುತ್ತಿರುವುದನ್ನು ನಮ್ಮ ದೇಶದ ಎಲ್ಲಾ ರಂಗಗಳಲ್ಲೂ ಕಾಣುತ್ತಿದ್ದೇವೆ.

⌘

ಪೊದೆಯೊಳಗಿನ ಗೌರಿ ಗಣೇಶ



ಮಂಡ್ಯ ನಗರದ ವಾಟರ್ ಟ್ಯಾಂಕಿನ ಹಿಂಭಾಗದಲ್ಲಿರುವ ಸ್ನೇಹಿತರೊಬ್ಬರ ಮನೆಗೆ ಹೋಗುತ್ತಿದ್ದಂತೆಯೇ... ಅವರು "ಬನ್ನಿ... ಬನ್ನಿ.... ಈ ಕಡೆ ಬನ್ನಿ" ಎಂದು ಹೇಳುತ್ತಾ... ತಮ್ಮ ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋದರು. ಅಲ್ಲಿ ಒಂದು ರಾಟೆ ಬಾವಿಯಿದೆ. ಬಾವಿಗೆ ಸೇರಿದಂತೆ ಎಂಟು ಅಡಿ ಎತ್ತರದ ಗೋಡೆಯಿದೆ.

"ಈ ರಾಟೆ ಬಾವಿಯ ಚಪ್ಪಡಿಯ ಮೇಲೆ ಹತ್ತಿ ನಿಂತು, ಕಾಂಪೌಂಡಿನ ಹಿಂಭಾಗವನ್ನು ನೋಡಿ" ಎಂದರು.

"ಯಾಕೆ ...ಏನು ವಿಷಯ?"

"ನೀವು ಸುಮ್ಮನೆ ಹತ್ತಿ ನೋಡಿ" ಎಂದು ಒತ್ತಾಯ ಮಾಡಿದರು. ಮನಸ್ಸಿಲ್ಲದ ಮನಸ್ಸಿನಿಂದ ರಾಟೆ ಬಾವಿಯ ಚಪ್ಪಡಿ ಮೇಲೆ ಹತ್ತಿ ನಿಂತು, ಆಚೆ ಕಡೆ ಬಗ್ಗಿ ನೋಡಿದೆ.

ಹಸುರೆಲೆಯ ಕಡ್ಡಿಗಳಿಂದ ಮಾಡಿದ ಒಂದು ಚಿಕ್ಕ ಮಂಟಪದ ಮುಂದೆ ನಾಲ್ಕು ಹುಡುಗರು ಕುಳಿತಿದ್ದರು. ಮಂಟಪದೊಳಗೆ ಗೌರಿ ಗಣೇಶರ ಪುಟ್ಟ ಗೊಂಬೆಗಳಿದ್ದವು. ಬಹುಬಗೆಯ ಹೂವುಗಳಿಂದ ದೇವರ ಪೂಜೆ ನಡೆದಿತ್ತು. ಉರಿಯುತ್ತಿದ್ದ ಗಂಧದ ಕಡ್ಡಿಗಳಿಂದ ಹೊರಬೀಳುತ್ತಿದ್ದ ಪರಿಮಳವು.... ಮಂಟಪದ ಸುತ್ತೆಲ್ಲಾ ತುಂಬಿತ್ತು. ಆ ಹುಡುಗರು ದೇವರನ್ನು ಪೂಜಿಸಲು ಆಯ್ಕೆ ಮಾಡಿಕೊಂಡಿದ್ದ ಸ್ಥಳವನ್ನು ಕಂಡು ನಾನು ಅಚ್ಚರಿಗೊಂಡೆ.

ವಾಟರ್ ಟ್ಯಾಂಕಿನ ರಕ್ಷಣೆಗೆಂದು, ಅದರ ಎಲ್ಲೆಯ ಸುತ್ತ ಕಟ್ಟಿರುವ ಹತ್ತು ಅಡಿ ಎತ್ತರದ ಗೋಡೆ ಮತ್ತು ನನ್ನ ಸ್ನೇಹಿತರ ಮನೆಯ ಹಿಂಭಾಗದ ಕಾಂಪೌಂಡಿನ ಎಂಟು ಅಡಿ ಎತ್ತರದ ಗೋಡೆಯ ನಡುವೆ... ಸುಮಾರು ಮೂರ್‍ನಾಕು ಅಡಿಗಳಷ್ಟು ಖಾಲಿ ಜಾಗವಿದೆ. ಈ ಜಾಗದಲ್ಲಿ ರೋಜವಾರ, ಉಗನಿ ಹಂಬು ಮತ್ತು ನಾನಾ ಬಗೆಯ ಮುಳ್ಳುಗಿಡಗಳ ಪೊದೆ ಹಬ್ಬಿದೆ. ಅಂತಹ ಪೊದೆಯೊಳಗೆ ನುಗ್ಗಿ ಬಂದು.... ನಡುವೆ ಸ್ವಲ್ಪ ಭಾಗವನ್ನು ಸವರಿ... ಮಟ್ಟ ಮಡಿ.... ಇಕ್ಕಟ್ಟಾದ ಎಡೆಯಲ್ಲಿ ಆ ಹುಡುಗರು ಹಸಿರು ಮಂಟಪವನ್ನು ಕಟ್ಟಿ.... ದೇವರನ್ನು ಪೂಜಿಸುತ್ತಿದ್ದರು.

ನಾನು ಬಾವಿ ಕಟ್ಟೆಯ ಮೇಲಿನಿಂದ ಕೆಳಕ್ಕೆ ಇಳಿದು, ನನ್ನ ಸ್ನೇಹಿತರನ್ನು ಕುರಿತು–

"ಬನ್ನಿ, ಹುಡುಗರ ಹತ್ತಿರ ಹೋಗೋಣ.... ಅದ್ಯಾಕೆ ಯಾರ ಕಣ್ಣಿಗೂ ಬೀಳದ ಅಂತಹ ಜಾಗದಲ್ಲಿ ದೇವರನ್ನು ಪೂಜಿಸಿದ್ದಾರೆ ಕೇಳೋಣ" ಎಂದೆ.

ಈಗ ನಾವಿಬ್ಬರೂ ಕುತೂಹಲದಿಂದ ಮನೆಯನ್ನು ಬಳಸಿಕೊಂಡು, ಅಲ್ಲಿಗೆ ಹೋಗಲು ಪ್ರಯತ್ನಿಸಿದೆವು. ಆದರೆ ಎರಡು ಮೂರು ಮನೆಗಳ ಹಿಂಭಾಗದಲ್ಲಿರುವ ಆ ಸಂದಿಯ ಉದ್ದಕ್ಕೂ.... ಸುಲಭವಾಗಿ ಪ್ರವೇಶಿಸಲಾಗದಷ್ಟು ಗಿಡ ಗಂಟೆಗಳು ಬೆಳೆದು ಪೊದೆಯಾಗಿತ್ತು. ನಾವು ಅದರೊಳಗೆ ನುಗ್ಗಿ ಹೋಗುವುದಕ್ಕೆ ಹಿಂಜರಿದು ಮತ್ತೆ ಬಾವಿ ಕಟ್ಟೆಯ ಬಳಿಗೆ ಬಂದೆವು. ನಾನು ಮತ್ತೆ ಬಾವಿ ಕಟ್ಟೆಯ ಚಪ್ಪಡಿಯ ಮೇಲೆ ಹತ್ತಿ ನಿಂತು, ಎತ್ತರದ ಗೋಡೆಗಳ ನಡುವೆ ಬಗ್ಗಿ ನೋಡುತ್ತಾ.... ಆ ಹುಡುಗರೊಡನೆ ಮಾತನಾಡತೊಡಗಿದೆ.

"ಇದ್ಯಾಕ್ರೊ.... ಇಲ್ಲಿ.... ಈ ಸಂದೀಲಿ.... ಪೂಜೆ ಮಾಡ್ತಿದ್ದೀರಿ" ಎಂದು ಪ್ರಶ್ನಿಸಿದೆ. ಅವರಲ್ಲಿ ದೊಡ್ಡವನಾಗಿದ್ದ ಹುಡುಗನು–

"ಇನ್ನೆಲ್ಲೂ ಜಾಗ ಇಲ್ಲ... ಅದಕ್ಕೆ" ಎಂದು ಉತ್ತರಿಸಿದ. ಬಾಪಿಕಟ್ಟೆಯ ಕೆಳಗೆ ನಿಂತಿದ್ದ ನನ್ನ ಸ್ನೇಹಿತರು–

"ಅವರ್‍ಯಾರು ಅಂತ ಕೇಳಿ" ಎಂದು ಸೂಚಿಸಿದರು.

ಈಗ ನಾನು ಅವರ ಹೆಸರುಗಳನ್ನು ಮತ್ತು ಅವರ ವೈಯಕ್ತಿಕ ವಿವರಗಳನ್ನು ಸಂಗ್ರಹಿಸಿದೆ. ಅವರೆಲ್ಲಾ ವಾಟರ್ ಟ್ಯಾಂಕಿಗೆ ಹತ್ತಿರದಲ್ಲಿರುವ ಬಡಾವಣೆಯಲ್ಲಿನ ಸಾಬರ ಹುಡುಗರು. ಆರ್ಥಿಕವಾಗಿ ಮಧ್ಯಮ ಕೆಳವರ್ಗಕ್ಕೆ ಸೇರಿದ್ದ ಅವರಲ್ಲಿ... ಆರೇಳು ವರ್ಷದ ಇಬ್ಬರು ಹುಡುಗರು ಶಾಲೆಗೆ ಹೋಗುತ್ತಿದ್ದರು. ಎಂಟು ವರ್ಷದ ಹುಡುಗನು ಸೈಕಲ್ ಷಾಪಿನಲ್ಲಿಯೂ ಮತ್ತು ಹತ್ತು ವರ್ಷದ ಹುಡುಗನು ಷೋ ರೂಮ್ ಒಂದರಲ್ಲಿಯೂ ಕೆಲಸದಲ್ಲಿದ್ದರು.

ಸಂಪಾದನೆ ಮಾಡುತ್ತಿದ್ದ ಈ ಇಬ್ಬರು ಹುಡುಗರು, ಪ್ರತಿ ತಿಂಗಳು ಅಲ್ಪ ಸ್ವಲ್ಪ ದುಡ್ಡನ್ನು ಮಿಗಿಸಿ, ಈಗ ಐವತ್ತು ಅರವತ್ತು ರೂಪಾಯಿಗಳನ್ನು ಖರ್ಚು ಮಾಡಿ ಗೌರಿ ಗಣೇಶನ ವಿಗ್ರಹಗಳನ್ನು ತಂದು ಇಲ್ಲಿ ಪೂಜಿಸಿದ್ದರು.

"ನೀವ್ಯಾಕ್ರೊ... ಗೌರಿ ಗಣೇಶನ ಪೂಜೆ ಮಾಡ್ತಾ ಇದ್ದೀರಿ?" ಎಂದು ಮುಗುಳ್ನಗುತ್ತ ಪ್ರಶ್ನಿಸಿದ ನನಗೆ, ಆ ಮಕ್ಕಳು ಬಹಳ ಸರಳವಾಗಿ ಉತ್ತರಿಸಿದರು.

"ಪೂಜೆ ಮಾಡ್ಬೇಕು ಅಂತ ಆಸೆಯಾಯ್ತು... ಅದಕ್ಕೆ."

ಅವರ ಮಾತುಗಳನ್ನು ಕೇಳಿ ಕ್ಷಣಕಾಲ ನಾನು ಮೂಕನಾದೆ. ಜಾತಿ, ಮತ, ಧರ್ಮಗಳ ಬಗೆಗೆ ಯಾವುದೇ ವಿಧವಾದ ಭ್ರಮೆಗೆ ಒಳಗಾಗುವುದಕ್ಕೆ ಮೊದಲು ಮಾನವ ಜೀವಿಯು ಹೊಂದಿರುವ ಮುಗ್ಧ ಮನಸ್ಸಿನ ಭಾವನೆಗಳನ್ನು... ಆ ಮಕ್ಕಳ ಉತ್ತರ ಸೂಚಿಸುತ್ತಿತ್ತು. ತಮ್ಮ ಓರಿಗೆಯ ಹಿಂದೂ ಮಕ್ಕಳು ಬಹಿರಂಗವಾಗಿ ಬೀದಿ ಬೀದಿಗಳಲ್ಲಿ ಗೌರಿ ಗಣೇಶರನ್ನು ಮೆರೆಸುತ್ತಾ... ಮನ ಬಂದಂತೆ ಕುಣಿದು, ಕುಪ್ಪಳಿಸಿ ಸಂಭ್ರಮಿಸುತ್ತಿರುವಾಗ.... ಧಾರ್ಮಿಕ ಸಂಪ್ರದಾಯಗಳ ಮಿತಿಯಿಂದಾಗಿ, ಅಂತಹ ಸಂಭ್ರಮದಿಂದ ದೂರವಾಗಿರುವ ಸಾಬರ ಈ ಮಕ್ಕಳು... ಗೋಡೆಗಳ ಮರೆಯಲ್ಲಿ ಗುಟ್ಟಾಗಿ ಗೌರಿ ಗಣೇಶರನ್ನು ಪೂಜಿಸುತ್ತಾ... ಸಂತೋಷವನ್ನು ಪಡೆಯುತ್ತಿರಬಹುದು.

⌘

ತುಂಬಾ ಸಂತೋಷವಾಯ್ತಪ್ಪ



ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರೊಬ್ಬರ ಜೀವನದಲ್ಲಿ ನಡೆದ ಘಟನೆಯಿದು.

ಸುಮಾರು ಮೂವತ್ತೈದು ವರ್ಷಗಳಷ್ಟು ಸುದೀರ್ಘವಾಗಿದ್ದ ತಮ್ಮ ಅಧ್ಯಾಪಕ ವೃತ್ತಿಯಲ್ಲಿ ವಿದ್ಯಾರ್ಥಿಗಳಿಗೆ ಅತ್ಯಂತ ಪ್ರೀತಿ ಮತ್ತು ಶ್ರದ್ಧೆಯಿಂದ ವಿದ್ಯೆಯನ್ನು ಕಲಿಸಿ, ಸಾವಿರಾರು ಮಕ್ಕಳ ವ್ಯಕ್ತಿತ್ವವನ್ನು ಉತ್ತಮವಾಗಿ ರೂಪಿಸಿದ್ದರು. ತಮ್ಮ ಸಂಸಾರದ ನಿರ್ವಹಣೆಗೆ ಬಹು ಸರಳವಾದ ಜೀವನ ಕ್ರಮವನ್ನು ಅಳವಡಿಸಿಕೊಂಡಿದ್ದ ಇವರು, ತಮಗೆ ಬರುತ್ತಿದ್ದ ಸಂಬಳದಲ್ಲಿ ಸಾಧ್ಯವಾದಷ್ಟು ಹಣವನ್ನು ಮಿಗಿಸಿ, ಹಳ್ಳಿಗಾಡಿನಿಂದ ನಗರಕ್ಕೆ ವಿದ್ಯಾಭ್ಯಾಸವನ್ನು ಮಾಡಲೆಂದು ಬರುತ್ತಿದ್ದ ಬಡಮಕ್ಕಳಿಗೆ..... ಅವರ ಜಾತಿ ಮತಗಳನ್ನು ನೋಡದೆ, ತಮ್ಮ ಕೈಲಾದಷ್ಟು ಮಟ್ಟಿಗೆ ಅನ್ನ ಬಟ್ಟೆ ವಸತಿ ಸೌಲಭ್ಯಗಳನ್ನು

ಕಲ್ಪಿಸಿಕೊಟ್ಟಿದ್ದರು. ಹೀಗೆ ತಮ್ಮ ವೃತ್ತಿ ಜೀವನದ ಉದ್ದಕ್ಕೂ ಶ್ರದ್ಧಾಪೂರ್ಣವಾದ ಅಧ್ಯಾಪನ ಮತ್ತು ತ್ಯಾಗಶೀಲವಾದ ನಡೆನುಡಿಗಳಿಂದ ತುಂಬಾ ಉಪಯುಕ್ತವಾದ ಬಾಳನ್ನು ನಡೆಸಿಕೊಂಡು ಬಂದವರಾಗಿದ್ದರು.

ಒಂದು ದಿನ ನಗರದ ಬಡಾವಣೆಯೊಂದರ ರಸ್ತೆಯಲ್ಲಿ ಇವರು ನಡೆದುಕೊಂಡು ಬರುತ್ತಿದ್ದಾಗ, ಇವರ ಮುಂದೆ ಕಾರೊಂದು ಹಾಯ್ದು ಹೋಗಿ, ಹತ್ತಿರದಲ್ಲಿದ್ದ ಭವ್ಯವಾದ ಮನೆಯೊಂದರ ಮುಂದೆ ನಿಂತುಕೊಂಡಿತು. ಕಾರಿನಿಂದ ಕೆಳಕ್ಕಿಳಿದ ಸುಮಾರು ಐವತ್ತು ವರ್ಷ ವಯಸ್ಸಿನ ವ್ಯಕ್ತಿಯು ಇವರನ್ನು ನೋಡಿ ಹತ್ತಿರಕ್ಕೆ ಬಂದು–

"ನಮಸ್ಕಾರ ಸಾರ್ ....ಇದೇನ್ ಸಾರ್, ಈ ಕಡೆ ನಡಕೊಂಡು ಬರ್‍ತಾಯಿದ್ದೀರಿ." ಎಂದು ವಿಚಾರಿಸಿದರು. ಮೇಷ್ಟ್ರು ತಲೆಯೆತ್ತಿ ನೋಡಿದರು... ತಮ್ಮನ್ನು ಮಾತನಾಡಿಸಿದವರ ಗುರುತು ಸಿಗಲಿಲ್ಲ.

"ಯಾರು ಅಂತ ಗೊತ್ತಾಗಲಿಲ್ಲ" ಎಂದರು.

"ನಾನು ಸಾರ್, ನಿಮ್ಮ ಶಿಷ್ಯ... ರಾಮಣ್ಣ ಅಂತ ನನ್ನ ಹೆಸರು... ಹೈಸ್ಕೂಲಿನಲ್ಲಿ ನೀವು ನಮ್ಮ ಗುರುಗಳಾಗಿದ್ರಿ ಸಾರ್" ಎಂದು ತನ್ನನ್ನು ಪರಿಚಯಿಸಿಕೊಂಡ ನಂತರ, ಅಲ್ಲೆ ಭವ್ಯವಾಗಿ ಕಂಗೊಳಿಸುತ್ತಿದ್ದ ಮನೆಯನ್ನು ತೋರಿಸುತ್ತಾ–

"ಸಾರ್... ಇದೇ ನಮ್ಮ ಮನೆ... ಬನ್ನಿ ಸಾರ್ ಒಳಕ್ಕೆ" ಎಂದು ಆಹ್ವಾನಿಸಿ, ಗುರುಗಳನ್ನು ಗೌರವಪೂರ್ವಕವಾಗಿ ತಮ್ಮ ಮನೆಯೊಳಕ್ಕೆ ಕರೆದೊಯ್ದರು.

ಕೊಠಡಿಯೊಂದರಲ್ಲಿ ಗುರುಗಳನ್ನು ಕುಳ್ಳಿರಿಸಿ, ಲಗುಬಗೆಯಿಂದ ಒಳಹೋಗಿ, ತಮ್ಮ ಪತ್ನಿಯನ್ನು ಕರೆತಂದು ಗುರುಗಳಿಗೆ ಪರಿಚಯಿಸಿದರು. ಅವರು ಕೈಮುಗಿದು, ಒಳಹೋಗಿ ಹಣ್ಣು ಮತ್ತು ಹಾಲನ್ನು ತಂದು ಗುರುಗಳ ಮುಂದಿಟ್ಟರು. ಗುರುಗಳು ಹಣ್ಣನ್ನು ತಿಂದು ಹಾಲನ್ನು ಕುಡಿಯುಷ್ಟರಲ್ಲಿ ಶಿಷ್ಯನು... ತಾನು ಓದಿ ಪಡೆದ ಅನೇಕ ಡಿಗ್ರಿಗಳು, ಏರಿದ ವಿವಿಧ ಹುದ್ದೆಗಳು ಮತ್ತು ಅಂದವಾಗಿ ಕಟ್ಟಿಸಿದ್ದ ತನ್ನ ಮನೆಯ ಬಗ್ಗೆ ಹೆಮ್ಮೆಯಿಂದ ಗುರುಗಳೊಡನೆ ಹೇಳಿಕೊಂಡನು. ಶಿಷ್ಯನ ಉಪಚಾರದಿಂದ ಸಂತೃಪ್ತಗೊಂಡ ಗುರುಗಳು, ಇನ್ನೇನು ಹೊರಡಲೆಂದು ಮೇಲಕ್ಕೆ ಎದ್ದಾಗ–

"ಸಾರ್... ಒಂದು ಸಾರಿ ಮನೇನೆಲ್ಲಾ ತೋರಿಸ್ತೀನಿ ...ಬನ್ನಿ ಸಾರ್" ಎಂದು ಹೇಳಿ, ಶಿಷ್ಯನು ಮುನ್ನಡೆದಾಗ ವಿಧಿಯಿಲ್ಲದೆ ಗುರುಗಳು ಅವನನ್ನು ಹಿಂಬಾಲಿಸಿದರು.

"ಇದು ಡೈನಿಂಗ್ ಹಾಲ್ ಸಾರ್ ...ಇದೇ ಕಿಚನ್... ಇದು ದೇವರ ಮನೆ ...ಇದು ಬಾತ್ ರೂಂ..." ಎಂದು ಎಲ್ಲವನ್ನು ಮಾರ್ಗದರ್ಶಿಯಂತೆ ತೋರಿಸಿ ವರ್ಣಿಸುತ್ತಾ ಶಿಷ್ಯನು ನಡೆದಾಗ... ಲಕ್ಷಾಂತರ ರೂಪಾಯಿ ಬೆಲೆಬಾಳುವ

ಪೀಠೋಪಕರಣಗಳು ಮತ್ತು ಅತ್ಯಾಧುನಿಕವಾದ ಸೌಕರ್ಯಗಳಿಂದ ಸಜ್ಜುಗೊಂಡಿದ್ದ ಮನೆಯನ್ನು, ಗುರುಗಳು ನೋಡತೊಡಗಿದರು. ಶಿಷ್ಯನ ರನ್ನಿಂಗ್ ಕಾಮೆಂಟರಿ ಯಾವುದೇ ಅಡೆತಡೆಯಿಲ್ಲದೇ ಮುಂದುವರಿದಿತ್ತು–

"ಇಡೀ ಮನೆಯ ನೆಲಕ್ಕೆ ಹಾಕಿಸಿರುವುದು... ರಾಜಾಸ್ತಾನದಿಂದ ತರಿಸಿದ ಅಮೃತಶಿಲೆ ಸಾರ್... ಕಿಟಕಿ ಬಾಗಿಲುಗಳೆಲ್ಲಾ ಸಂಪೂರ್ಣವಾಗಿ ಟೀಕ್‌ವುಡ್ ಸಾರ್."

ಸ್ವಲ್ಪ ಸಮಯ ಮೇಲೆ ಕೆಳಗೆ ಎಲ್ಲಾ ಸುತ್ತಾಡಿ ಬಂದ ನಂತರ, ಗುರುಗಳು ಶಿಷ್ಯನನ್ನು ಪ್ರಶ್ನಿಸಿದರು–

"ಒಟ್ಟು ಎಷ್ಟು ಚದರ ಇದೆಯಪ್ಪ?"

"ಇಪ್ಪತ್ತೆಂಟು ಚದರ ಇದೆ ಸಾರ್."

"ಈ ಮನೆಯಲ್ಲಿ ಎಷ್ಟು ಜನ ವಾಸವಾಗಿದ್ದೀರಿ?"

ಗುರುಗಳ ಪ್ರಶ್ನೆಗೆ ಶಿಷ್ಯನು ಮುಗುಳ್ನಗುತ್ತ ಉತ್ತರಿಸಿದ–

"ಸದ್ಯಕ್ಕೆ ನಾನು, ನನ್ನ ಹೆಂಡ್ತಿ... ಇಬ್ಬರೇ ಸಾರ್. ನನ್ನ ಮಗಳು ಮದುವೆಯಾಗಿ ಗಂಡನ ಮನೆಯಲ್ಲಿದ್ದಾಳೆ. ಮಗ ಮಂಗಳೂರಿನಲ್ಲಿ ಓದುತ್ತಿದ್ದಾನೆ."

ಗುರುಗಳು ಏನನ್ನೋ ಪ್ರತಿಕ್ರಿಯಿಸುವಷ್ಟರಲ್ಲಿ, ಶಿಷ್ಯನೇ ಮಾತನ್ನು ಮುಂದುವರಿಸಿ–

"ತುಂಬಾ ಒಳ್ಳೆ ಪ್ಲ್ಯಾನ್ ಹಾಕಿಸಿ, ಉತ್ತಮವಾದ ಮೆಟೀರಿಯಲ್ಸ್ ಉಪಯೋಗಿಸಿ, ಬಹಳ ಮಾಡ್ರನ್ ಆಗಿ ಮನೆ ಕಟ್ಟಿಸಿದ್ದೀರಿ... ಇಂಥ ಮನೆ... ಈ ನಗರದಲ್ಲೇ ಬಹಳ ಅಪರೂಪ ಅಂತ ನಮ್ಮ ಮನೆಯನ್ನು ನೋಡ್ದೋರೆಲ್ಲಾ ಹೇಳ್ತರೆ ಸಾರ್ ...ನಿಮಗೇನ್ ಅನ್ನಿಸ್ತು ಸಾರ್?" ಎಂದು ಪ್ರಶ್ನಿಸಿ, ಗುರುಗಳ ಅಭಿಪ್ರಾಯವನ್ನು ತಿಳಿಯಲು ಕಾತರಿಸಿದ.

"ತುಂಬಾ ಸಂತೋಷವಾಯ್ತಪ್ಪ!"

"ಹೌದಾ... ಸಾರ್!"

"ಹೌದಪ್ಪ... ನನ್ನ ಸಂಪಾದನೆಯ ದುಡ್ಡು ಇಂಥ ರೀತಿಯಲ್ಲಿ ದುಂದು ವೆಚ್ಚ ಆಗಲಿಲ್ಲ... ಅಂತ."

⌘

ಬೇರು ಕಳಚಿದ ಬಳ್ಳಿ



ಖಾಸಗಿ ಕಾಲೇಜೊಂದರಲ್ಲಿ ದ್ವಿತೀಯ ದರ್ಜೆ ಗುಮಾಸ್ತರಾಗಿ ನೌಕರಿಗೆ ಸೇರಿದ್ದ ಬೋರಪ್ಪನವರು ಕಾಲದಿಂದ ಕಾಲಕ್ಕೆ ಬಡ್ತಿ ಪಡೆದು, ಈಗ ಕಛೇರಿಯ ಮುಖ್ಯಸ್ಥರಾಗಿದ್ದರು. ಮಂಡ್ಯ ನಗರಕ್ಕೆ ಹತ್ತು ಮೈಲಿ ದೂರದಲ್ಲಿರುವ ಗದ್ದೆ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದು, ಮದುವೆಯಾದ ಮೇಲೆ, ನಗರದಲ್ಲೇ ಸುಮಾರು ಮೂವತ್ತು ವರ್ಷಗಳಿಂದ ವಾಸ್ತವ್ಯ ಹೂಡಿದ್ದರೂ, ತಾವು ಹುಟ್ಟಿ ಬೆಳೆದ ಹಳ್ಳಿಯ ಸಂಪರ್ಕವನ್ನು ಮಾತ್ರ ಕಳೆದುಕೊಂಡಿರಲಿಲ್ಲ. ಪಿತ್ರಾರ್ಜಿತವಾಗಿ ಬಂದಿದ್ದ ಎರಡು ಎಕರೆ ಗದ್ದೆಯನ್ನು... ತಾವೇ ಖುದ್ದಾಗಿ ಸಾಗುವಳಿ ಮಾಡಿಸುತ್ತಿದ್ದರು. ಬೋರಪ್ಪನವರಿಗಿದ್ದ ಭೂಮಿಯ ಮೇಲಣ ಪ್ರೀತಿ... ಅವರ ಹೆಂಡತಿಗಾಗಲಿ ಅಥವಾ ಇದ್ದ ಒಬ್ಬನೇ ಮಗ ಉಮೇಶನಿಗಾಗಲಿ ಇರಲಿಲ್ಲ. ವರ್ಷಕೊಮ್ಮೆ ಬರುವ ಮಾಳಪಕ್ಷದ ದಿನದಂದು ಮಧ್ಯಾಹ್ನ

ಬೋರಪ್ಪನವರೊಡನೆ ಹಳ್ಳಿಗೆ ಬಂದು, ಹಿರಿಯರಿಗೆ ಎಡೆಯನ್ನು ಒಪ್ಪಿಸಿ... ನೆಂಟರಿಷ್ಟರ ಜೊತೆ ಒಂದೆರಡು ತೋರಿಕೆಯ ಮಾತುಗಳನ್ನಾಡಿ... ಊಟೋಪಚಾರ ಮುಗಿಸಿಕೊಂಡು ... ಅಂದೇ ರಾತ್ರಿ ಮಂಡ್ಯ ನಗರಕ್ಕೆ ಹಿಂತಿರುಗುತ್ತಿದ್ದ ಅವರ ಪಾಲಿಗೆ ... ಹಳ್ಳಿಯೆಂಬುದು ಸಂಪ್ರದಾಯದ ಪಾಲನೆಗಾಗಿ ಭೇಟಿ ನೀಡುವ ಸ್ಥಳವಾಗಿತ್ತು.

ನಗರದ ವಾತಾವರಣಕ್ಕೆ ಹೊಂದಿಕೊಂಡಿದ್ದ ಹೆಂಡತಿಗೆ, ತನ್ನ ಗಂಡ ಹಳ್ಳಿಗೆ ಅಲೆದು, ಜಮೀನು ಮಾಡಿಸುತ್ತಿರುವುದು ಸುತಾರಾಂ ಇಷ್ಟವಿರಲಿಲ್ಲ. ಅದರ ಬದಲು ಗದ್ದೆಯನ್ನು ಮಾರಿ, ಈಗ ಇರುವ ಮನೆಯ ಮೇಲೆ ಮಹಡಿಯನ್ನು ಕಟ್ಟಿಸಿದರೆ, ಏನಿಲ್ಲವೆಂದರೂ ತಿಂಗಳಿಗೆ ಎರಡು ಸಾವಿರ ರೂಪಾಯಿ ಬಾಡಿಗೆಯು ಕುಳಿತಲ್ಲಿಯೇ ಬರುತ್ತದೆ ಎಂಬುದು ಅವರ ವಾದವಾಗಿತ್ತು. ಆದರೆ ಪಿತ್ರಾರ್ಜಿತವಾದ ಆಸ್ತಿಯನ್ನು ಕಳೆದುಕೊಂಡರೆ, ತಾವು ಹುಟ್ಟಿ ಬೆಳೆದ ಹಳ್ಳಿಯ ಜನರ ಜೊತೆಗಿನ ಕರುಳು ಬಳ್ಳಿಯ ಸಂಬಂಧವು ಸಂಪೂರ್ಣವಾಗಿ ಕಡಿದು ಹೋಗುವುದೆಂಬ ಕಾರಣದಿಂದ ಬೋರಪ್ಪನವರು ಹೆಂಡತಿಯ ಮಾತಿಗೆ ಕಿವಿಗೊಟ್ಟಿರಲಿಲ್ಲ.

ಇದೀಗ... ಮಗ ಉಮೇಶ ಇಂಜಿನಿಯರಿಂಗ್ ಗ್ರ್ಯಾಜುಯೇಟ್ ಆಗಿ, ಕೆಲಸವಿಲ್ಲದೆ ಒಂದು ವರ್ಷದಿಂದ ಮನೆಯಲ್ಲಿ ಕುಳಿತಾಗ, ಬೋರಪ್ಪನವರು ಒತ್ತಾಯ ಮಾಡಿ, ಮಗನನ್ನು ಆಗಾಗ್ಗೆ ಗದ್ದೆಯ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು. ಒಲ್ಲದ ಮನಸ್ಸಿನಿಂದ ಅಪ್ಪನೊಡನೆ ಸ್ಕೂಟರ್ ಏರಿ ಬರುತ್ತಿದ್ದ ಮಗನ ಮನಸ್ಸಿನಲ್ಲಿ ಭೂಮ್ತಾಯಿಯ ಬಗ್ಗೆ ಪ್ರೀತಿ ಹುಟ್ಟುವಂತೆ ಮಾಡಬೇಕೆಂದು ಬೋರಪ್ಪನವರು ಇನ್ನಿಲ್ಲದ ಸಾಹಸವನ್ನು ಮಾಡುತ್ತಿದ್ದರು. ಮಗನೊಡನೆ ಹಳ್ಳಿಗೆ ಹೋಗಿ ಬರುವಾಗಲೆಲ್ಲಾ ಬೇಸಾಯಕ್ಕೆ ಸಂಬಂಧಪಟ್ಟಂತೆ... ಬಿತ್ತನೆಯ ಬೀಜದಿಂದ ಹಿಡಿದು, ಬೆಳೆ ಕುಯ್ಲಾಗುವ ತನಕ... ರೈತಾಪಿ ಜನ ಮಾಡುವ ಆಚರಣೆಗಳೆಲ್ಲವನ್ನೂ ಅವನಿಗೆ ತಿಳಿಯ ಹೇಳುತ್ತಿದ್ದರು. ಅಪ್ಪನ ಮಾತುಗಳಿಗೆ ಉಮೇಶ ಹೂಗುಟ್ಟುತ್ತಿದ್ದನೇ ಹೊರತು, ಅವನ ಮನಸ್ಸೆಲ್ಲಾ ಬೆಂಗಳೂರು, ಹೈದರಾಬಾದ್, ದೆಹಲಿ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ದೊರೆಯಬಹುದಾಗಿದ್ದ ಕೆಲಸದ ಬಗ್ಗೆ ಹಂಬಲಿಸುತ್ತಿತ್ತು.

ಒಂದು ದಿನ ಮಗನೊಡನೆ ಗದ್ದೆಯ ಬಳಿಗೆ ಬಂದ ಬೋರಪ್ಪನವರು, ಎಂದಿನಂತೆ ಪಂಚೆಯನ್ನು ಕಳೆದಿಟ್ಟು, ಗದ್ದೆಯ ಒಳಕ್ಕೆ ಇಳಿದರು. ಬತ್ತದ ಪೈರು ಚೆನ್ನಾಗಿ ತೆಂಡೆಯೊಡೆದು, ಹಚ್ಚ ಹಸಿರಿನಿಂದ ಕಂಗೊಳಿಸುತ್ತಿತ್ತು. ಪೈರು ಗರ್ಭ ಕಟ್ಟಿ... ಅಲ್ಲಲ್ಲಿ ಹೊಡೆ ಬಿಚ್ಚುತ್ತಿತ್ತು. ಇತ್ತ ಬೋರಪ್ಪನವರು ಪ್ರತಿಯೊಂದು ಪಾತಿಗಳಲ್ಲಿ ಕಂಡು ಬರುತ್ತಿದ್ದ ಸಳ್ಳಿ ಮೊಳೆಗಳನ್ನು ತುಳಿದು... ಪಾತಿಗಳಲ್ಲಿ ನೀರು ನಿಲ್ಲುವಂತೆ ಮಾಡುವುದರಲ್ಲಿ ಮಗ್ನರಾಗಿದ್ದರೆ, ಅತ್ತ ಉಮೇಶನು ಗದ್ದೆ ತೆವರಿಯ ಮೇಲೆ ನಿರ್ಲಿಪ್ತನಾಗಿ ಕೈಕಟ್ಟಿಕೊಂಡು ನಿಂತಿದ್ದ... ಮಗನ

ವರ್ತನೆಯಿಂದ ಬೇಸರಗೊಳ್ಳದ ಬೋರಪ್ಪನವರು ಎಂತಾದರೂ ಮಾಡಿ ವ್ಯವಸಾಯದ ಬಗ್ಗೆ ಮಗನಲ್ಲಿ ಆಸಕ್ತಿ ಕೆರಳುವಂತೆ ಮಾಡಲು, ಆಗಾಗ್ಗೆ ಅದು ಇದು ಮಾತಾಡುತ್ತಿದ್ದರು. ಈಗ ಅಲ್ಲಲ್ಲೇ ಕಂಡು ಬಂದ ಕಳೆಯನ್ನು ಬಗ್ಗಿ ಕೊಂಡು ಕೀಳುತ್ತಿದ್ದವರು... ಅಲ್ಲಿಂದಲೇ ಮಗನನ್ನು ಕುರಿತು–

"ಉಮೇಶ.. ಹೊಡೆ ಬಂದಿದ್ದದೆ ನೋಡು" ಎಂದರು. ಅಪ್ಪನ ಮಾತು ಉಮೇಶನಿಗೆ ಸರಿಯಾಗಿ ಕೇಳಿಸಲಿಲ್ಲ.

"ಏನಪ್ಪ?" ಎಂದ.

"ಹೊಡೆ ಬಂದಿದ್ದದೆ ನೋಡು" ಎಂದು ಮತ್ತೊಮ್ಮೆ ಗಟ್ಟಿಯಾಗಿ ಹೇಳಿದರು. ತಾನು ನಿಂತಿದ್ದ ಕಡೆಯಿಂದ ಗದ್ದೆಯ ಸುತ್ತಲೂ ಒಮ್ಮೆ ಕಣ್ಣಾಡಿಸಿದ ಉಮೇಶನು–

"ಇಲ್ಲ ಕಣಪ್ಪ" ಎಂದು ಉತ್ತರಿಸಿದ.

ಗದ್ದೆಯ ಎಲ್ಲೆಡೆಯಲ್ಲೂ... ಅಲ್ಲಲ್ಲಿ ಪೈರು ಹೊಡೆ ಬಿಚ್ಚಿರುವುದು ಸ್ಪಷ್ಟವಾಗಿ ಎದ್ದುಕಾಣುತ್ತಿದ್ದರೂ ... ಮಗನು ಅದನ್ನು ಗುರುತಿಸಲಿಲ್ಲವೆಂಬ ವ್ಯಥೆಯಿಂದ–

"ಸರಿಯಾಗಿ ನೋಡೋ ..." ಎಂದರು.

ಈಗ ಉಮೇಶನು ಕ್ಷಣಕಾಲ ಗದ್ದೆಯ ಸುತ್ತ... ಬಹು ದೂರದವರೆಗೂ ನೋಡುತ್ತಿದ್ದು–

"ಎಲ್ಲೂ ಕಾಣಿಸ್ತಿಲ್ಲ ಕಣಪ್ಪ... ಇಲ್ಲಿಗ್ಯಾರಪ್ಪ ವಡೆ ತಕೊಂಡು ಬರ್ತರೆ!" ಎಂದು ಅಚ್ಚರಿಯಿಂದ ಪ್ರಶ್ನಿಸಿದ.

"ಏನನ್ನೋ... ನಾನು ಹೇಳಿದ್ದು?"

"ಅದೇ ತಿನ್ನುವ ವಡೆ ಅಲ್ವೇನಪ್ಪ?"

"ಅಯ್ಯೋ... ತಿನ್ನೋ ವಡೆಯಲ್ಲ ಕಣೊ" ಎಂದು ಹೇಳಿ... ಹೊಡೆ ಕಡೆದಿದ್ದ ಪೈರೊಂದನ್ನು ಹಿಡಿದು ತೋರಿಸುತ್ತಾ–

"ಇದನ್ನು ಹೊಡೆ ಅಂತಾರೆ ಕಣಪ್ಪ... ತೆನೆ ಕಟ್ಟಿ... ಕಾಳುಗಟ್ಟಿಯಾಗುವುದಕ್ಕೆ ಮುಂಚೆ... ಪೈರಿನೊಳಗಿಂದ ಮೂಡಿ ಬರುವ ಭಾಗ ಕಣಪ್ಪ ಇದು"ಎಂದು ವಿವರಿಸಿದರು. ಈಗ ಸ್ವಲ್ಪ ಪೆಚ್ಚಾದಂತೆ ಕಂಡು ಬಂದ ಉಮೇಶನು–

"ಇದಕ್ಕೂ ವಡೆ ಅಂತಾರೆ ಅಂತ ನಂಗೇನ್ ಗೊತ್ತು" ಎಂದು ರಾಗವೆಳೆದಾಗ... ಮಗನ ಮಾತನ್ನು ಕೇಳಿ ಬೋರಪ್ಪನವರಿಗೆ ನಗಬೇಕೋ...ಇಲ್ಲ...ಅಳಬೇಕೊ ತಿಳಿಯಲಿಲ್ಲ.

⌘

ಇದು ಊರ್ಜಿತ ಆದದೇನಪ್ಪ



ಇಂದಿಗೆ ಸುಮಾರು ಮೂವತ್ತು ವರ್ಷಗಳ ಹಿಂದೆ, ನನ್ನ ಗೆಳೆಯರೊಬ್ಬರ ವೃತ್ತಿ ಜೀವನದಲ್ಲಿ ನಡೆದ ಘಟನೆಯಿದು.

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದು ಪದವೀಧರರಾಗಿದ್ದ ನನ್ನ ಗೆಳೆಯರಿಗೆ ಕಂದಾಯ ಇಲಾಖೆಯಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಕೆಲಸ ದೊರೆತಾಗ, ಕೇವಲ ಇಪ್ಪತ್ತೊಂದು ವರ್ಷ ವಯಸ್ಸಾಗಿತ್ತು. ಯೌವನಕ್ಕೆ ಸಹಜವಾದ ಉತ್ಸಾಹದಿಂದ ಕೂಡಿದ್ದ ಅವರಿಗೆ ತಮ್ಮ ಪಾಲಿನ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿ, ಒಳ್ಳೆಯ ಹೆಸರನ್ನು ಪಡೆಯಬೇಕೆಂಬ ಆಸೆ ಅಪಾರವಾಗಿತ್ತು. ಆಗ ಕಂದಾಯ ಇಲಾಖೆಯಲ್ಲಿ ವಂಶಪರಂಪರೆಯಿಂದ ಬಂದ ಶಾನುಭೋಗರೇ ಅಧಿಕ ಸಂಖ್ಯೆಯಲ್ಲಿದ್ದರು. ಗ್ರಾಮ ಲೆಕ್ಕಿಗರನ್ನು ಅಲ್ಲಲ್ಲಿ ಹೊಸದಾಗಿ ಸರ್ಕಾರ ನೇಮಿಸಿಕೊಳ್ಳತೊಡಗಿತ್ತು.

ಒಂದು ದಿನ ರೆವಿನ್ಯೂ ಇನ್‌ಸ್ಪೆಕ್ಟರ್ ಅವರು... ಶಾನುಭೋಗರೊಬ್ಬರ ಜೊತೆಗೂಡಿ ಹಳ್ಳಿಯೊಂದಕ್ಕೆ ಹೋಗಿ, ಊರ ಗೌಡರ ದೊಡ್ಡ ಮನೆಯ ಪಡಸಾಲೆಯಲ್ಲಿ ಕುಳಿತುಕೊಂಡರು. ಸ್ವಲ್ಪ ಸಮಯದಲ್ಲೆ ಹತ್ತಾರು ಮಂದಿ ರೈತರು ಅಲ್ಲಿ ಜಮಾಯಿಸಿದರು. ಶಾನುಭೋಗರು ಅಲ್ಲಿದ್ದವರನ್ನು ಕುರಿತು–

"ಇವರು ಕಂದಾಯ ವಸೂಲಿ ಮಾಡಲು ಬಂದಿರುವ ರೆವಿನ್ಯೂ ಇನ್‌ಸ್ಪೆಕ್ಟರಲ್ಲ... ಖಾತೆ ಬದಲಾವಣೆಯನ್ನು ಮಾಡಿಕೊಡಲೆಂದು ಬಂದಿರುವವರು" ಎಂದು ಪರಿಚಯಿಸಿದ ನಂತರ, ಅಲ್ಲಿದ್ದ ರೈತರಲ್ಲಿ ಹಲವು ಮಂದಿ... ಈಗ ಧೈರ್ಯವಾಗಿ ಪಡಸಾಲೆಯನ್ನೇರಿ ಕುಳಿತುಕೊಂಡರು. ರೈತರನ್ನು ಉದ್ದೇಶಿಸಿ ಸಾಕಷ್ಟು ಸುದೀರ್ಘವಾಗಿ ರೆವಿನ್ಯೂ ಇನ್‌ಸ್ಪೆಕ್ಟರ್ ಮಾತನಾಡತೊಡಗಿದರು.

"ನೋಡಿ ...ನಮ್ಮ ರೈತರ ಜಮೀನಿನ ಖಾತೆಗಳಲ್ಲಿ... ಬಹಳಷ್ಟು ಖಾತೆಗಳು... ಇನ್ನೂ ಅವರ ತಾತ, ಮುತ್ತಾತ, ಹೆತ್ತಾತಂದಿರ ಹೆಸರಿನಲ್ಲೇ ಮುಂದುವರಿಯುತ್ತಿವೆ. ಈಗ ಸಾಗುವಳಿ ಮಾಡುತ್ತಿರುವ ರೈತರ ಹೆಸರಿನಲ್ಲಿ ಜಮೀನಿನ ಖಾತೆಗಳು ಇಲ್ಲದಿದ್ದರೆ... ಯಾವುದೇ ಬ್ಯಾಂಕಿನಿಂದ ಸಾಲವನ್ನಾಗಲಿ ಅಥವಾ ಸರ್ಕಾರ ಕೊಡುವ ಇನ್ನಿತರ ಸೌಲಭ್ಯಗಳನ್ನಾಗಲಿ ರೈತರು ಪಡೆಯುವುದಕ್ಕಾಗುವುದಿಲ್ಲ. ಅದೂ ಅಲ್ಲದೆ, ಇನ್ನು ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಭೂಸುಧಾರಣಾ ಕಾಯ್ದೆ ಜಾರಿಗೆ ಬರಲಿದೆ. ಆದ್ದರಿಂದ ನಿಮ್ಮ ಜಮೀನಿನ ಖಾತೆಗಳು ಯಾರ ಹೆಸರಿನಲ್ಲಿದೆ ಎಂಬುದನ್ನು ತಿಳಿದುಕೊಂಡು... ಒಂದು ವೇಳೆ ನಿಮ್ಮ ಹೆಸರಿನಲ್ಲಿ ಇಲ್ದೇದ್ರೆ... ಈಗ್ಲೇ ನಿಂನಿಮ್ಮ ಹೆಸರಿಗೆ ಮಾಡಿಸ್ಕೊಳ್ಳಿ. ಪಿತ್ರಾರ್ಜಿತ ಆಸ್ತಿಯಾಗಿರಲಿ... ಇಲ್ಲವೇ ಕ್ರಯಕ್ಕೆ ತೆಗೆದು ಕೊಂಡಿರುವ ಭೂಮಿಯಾಗಿರ್ಲಿ... ಅವನ್ನೆಲ್ಲಾ ನಿಮ್ಮ ಹೆಸರಿಗೆ ಖಾತೆ ಮಾಡಿ ಕೊಡುವುದಕ್ಕೆ ಅಗತ್ಯವಾದ ಎಲ್ಲಾ ಬಗೆಯ ಅರ್ಜಿ ಫಾರಮ್‌ಗಳು ನಮ್ಮಲ್ಲಿವೆ.

ಇವೆಲ್ಲವನ್ನೂ ರೈತರಿಗೆ ಸರ್ಕಾರ ಉಚಿತವಾಗಿ ಕೊಡುತ್ತೆ. ನಿಮ್ಮಿಂದ ಒಂದು ಕಾಸು ಖರ್ಚಿಲ್ಲದೇ... ಬಹಳ ಸುಲಭವಾಗಿ ಖಾತೆಗಳನ್ನು ದುರಸ್ತು ಮಾಡಿಸಿಕೊಳ್ಳುವುದಕ್ಕೆ... ಈಗ ಒಂದು ಒಳ್ಳೆಯ ಅವಕಾಶ ನಿಮಗೆಲ್ಲಾ ಲಭಿಸಿದೆ. ಈ ಕಾರ್ಯವನ್ನು ಜರೂರಾಗಿ ಮಾಡುವುದಕ್ಕೆಂದೇ ನಮ್ಮನ್ನು ಸರ್ಕಾರ ಹಳ್ಳಿಗಳಿಗೆ ವಿಶೇಷವಾಗಿ ಕಳುಹಿಸಿದೆ" ಎಂದು ಹೇಳಿ ಮುಗಿಸುತ್ತಿದ್ದಂತೆಯೇ... ಒಬ್ಬ ರೈತ... ಶಾನುಭೋಗರ ಮುಂದಕ್ಕೆ ಬಂದು–

"ಅಯ್ನೋರೆ... ನನ್ನ ಜಮೀನಿನ ಖಾತೆ... ನಮ್ಮಯ್ಯನ ಹೆಸರಿನಲ್ಲೆ ಅದೆ ಅಂತ ಹೇಳ್ತಿದ್ರಲ್ಲ... ಈಗ ನನ್ನ ಹೆಸರಿಗೆ ಮಾಡ್ಕೊಡಿ ಬುದ್ಧಿ" ಎಂದು ವಿನಂತಿಸಿಕೊಂಡರು.

"ನಿಮ್ಮ ಹೆಸರೇನು" ಎಂದು ರೆವಿನ್ಯೂ ಇನ್‌ಸ್ಪೆಕ್ಟರ್ ಪ್ರಶ್ನಿಸಿದರು.

"ಓಣಿ ನಿಂಗಯ್ಯ ಅಂತ ಸ್ವಾಮಿ. ನೀವು ಹೇಳ್ದಂಗೆ ನನ್ನ ಜಮೀನಿನ ಖಾತೆ ಸರಿಯಿಲ್ದೆ... ಸಾಲಕ್ಕೆ ಅಂತ ಅಡಮಾನ ಬ್ಯಾಂಕಿಗೂ ... ತಾಲ್ಲೂಕು ಕಛೇರಿಗೂ ತಿರ್ಗಿ ತಿರ್ಗಿ ಸಾಕಾಗೋಗದೆ ಸ್ವಾಮಿ."

ಅಷ್ಟರಲ್ಲಿ ಶಾನುಭೋಗರು ತಮ್ಮಲ್ಲಿದ್ದ ಖಿರ್ದಿ ಪುಸ್ತಕವನ್ನು ತೆಗೆದು ನೋಡುತ್ತಾ–

"ಇವರ ಅಯ್ಯ... ಜವರಯ್ಯನ ಹೆಸರಿನಲ್ಲೆ ಖಾತೆಯಿದೆ... ಇವರ ಅಯ್ಯ... ಇವರ ಅಪ್ಪ... ಇಬ್ಬರೂ ಪೌತಿ ಆಗವ್ರೆ... ಇವರ ಮೂರು ತಲೆಯಲ್ಲೂ... ಒಬ್ಬೊಬ್ಬನೇ ಗಂಡು ಮಗ" ಎಂದು ನಿಂಗಯ್ಯನವರ ವಂಶವೃಕ್ಷವನ್ನೇ ಜಿಡಿಸಿಟ್ಟರು.

"ಹಾಗಾದ್ರೆ... ಇವರಿಗೆ ಸಂಬಂಧಿಸಿದ ಅರ್ಜಿಯನ್ನು ಈಗಲೇ ಇವರಿಂದ ಪಡೆಯೋಣ" ಎಂದು ರೆವಿನ್ಯೂ ಇನ್‌ಸ್ಪೆಕ್ಟರ್ ಶಾನುಭೋಗರಿಗೆ ಸೂಚಿಸಿ, ಒಂದು ಅರ್ಜಿ ಫಾರಂ ಅನ್ನು ಓಣಿ ನಿಂಗಯ್ಯನವರಿಗೆ ನೀಡಿದರು, ಓಣಿ ನಿಂಗಯ್ಯ ಅದನ್ನು ಆ ಕ್ಷಣದಲ್ಲೇ ಶಾನುಭೋಗರ ಹಸ್ತ ನೀಡುತ್ತಾ–

"ಅಯ್ನೋರೆ ... ಎಲ್ಲೆಲ್ಲಿ ಹೆಬ್ಬೆಟ್ಟನ್ನು ಒತ್ತಬೇಕು ಅಂತ ಹೇಳಿ... ಅಲ್ಲೆಲ್ಲಾ ಹಾಕೊಡ್ತೀನಿ. ಬಾಕಿದೆಲ್ಲಾ ನೀವು ಬರ್ಕೊಳಿ ಬುದ್ದಿ... ನಾನೇನ್ ಕಂಡಿದ್ದನು ಹಳ್ಳಿ ಮುಕ್ಕ" ಎಂದು ವಿನಂತಿಸಿಕೊಂಡರು.

ಸ್ವಲ್ಪ ಸಮಯದಲ್ಲೇ ಅರ್ಜಿ ಭರ್ತಿಯಾಗಿ, ಖಾತೆ ಬದಲಾವಣೆಗೆ ಅಗತ್ಯವಾದ ಒಂದು ಮಹಜರ್ ಅನ್ನು ಅಲ್ಲಿದ್ದ ಗ್ರಾಮಸ್ಥರ ರೂಬುರೂಬು ಸಿದ್ಧಪಡಿಸಲಾಯಿತು. ಅಷ್ಟರಲ್ಲಿ ಅಲ್ಲಿದ್ದ ರೈತರಲ್ಲಿ ಕೆಲವರು ತಮಗೆ ಅಗತ್ಯವಿದ್ದ ಅರ್ಜಿ ಫಾರಂಗಳನ್ನು ಪಡೆದುಕೊಂಡರು. ಮತ್ತೆ ಹದಿನೈದು ದಿನಗಳ ನಂತರ ಬರುವುದಾಗಿಯೂ, ಭರ್ತಿ ಮಾಡಿದ ಅರ್ಜಿಗಳನ್ನ ಅಂದು ಕೊಡಬೇಕೆಂದು ಅವರೆಲ್ಲರಿಗೂ ತಿಳಿಸಿ, ಅಲ್ಲಿಂದ ಮುಂದಿನ ಹಳ್ಳಿಗೆ ರೆವಿನ್ಯೂ ಇನ್‌ಸ್ಪೆಕ್ಟರ್ ಶಾನುಭೋಗರೊಡನೆ ತೆರಳಿದರು.

ಹದಿನೈದು ದಿನಗಳ ನಂತರ, ಮತ್ತೆ ಅದೇ ಹಳ್ಳಿಗೆ ಹೋದಾಗ... ಓಣಿ ನಿಂಗಯ್ಯ ಇವರನ್ನೇ ಕಾಯುತ್ತಿದ್ದರು. ಪಡಸಾಲೆಯೊಂದರಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ "ನನ್ನ ಕೆಲಸ ಆಯ್ತೆ ಸ್ವಾಮಿ" ಎಂದರು. "ಆಗಿದೆ ಬನ್ನಿ" ಎಂದು ಹೇಳಿ, ರೆವಿನ್ಯೂ ಇನ್‌ಸ್ಪೆಕ್ಟರ್ ಅವರು ತಮ್ಮ ಕಡತಗಳ ನಡುವೆಯಿಂದ... ಓಣಿ ನಿಂಗಯ್ಯನವರ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿದ್ದ ಆಜ್ಞೆಯ ನಂಬರನ್ನು ಗುರುತು ಹಾಕಿದ್ದ ಚೀಟಿಯೊಂದನ್ನು ಹೊರ ತೆಗೆದು, ಓಣಿ ನಿಂಗಯ್ಯನವರಿಗೆ ನೀಡಿ... ಈ ನಂಬರನ್ನು ನಮೂದಿಸಿ... ತಾಲ್ಲೂಕು ಕಚೇರಿಯಲ್ಲಿ ಅರ್ಜಿಯನ್ನು ಕೊಟ್ಟು, ದಾಖಲೆಗಳನ್ನು ಪಡೆಯಲು ಸೂಚಿಸಿದರು.

ಈಗಿನಂತೆ ಆಗ ಗ್ರಾಮ ಲೆಕ್ಕಿಗರಿಂದಲೇ ಆರ್.ಟಿ.ಸಿ. ಪ್ರತಿಯನ್ನು ಪಡೆಯುವ ಸೌಲಭ್ಯ ಜಾರಿಗೆ ಬಂದಿರಲಿಲ್ಲ. ರೆವಿನ್ಯೂ ಇನ್‌ಸ್ಪೆಕ್ಟರಿಂದ ಚೀಟಿಯನ್ನು ಪಡೆದ ಕೂಡಲೇ, ಓಣಿ ನಿಂಗಯ್ಯನವರು ಶಾನುಭೋಗರೊಡನೆ ಪಿಸುಧ್ವನಿಯಲ್ಲಿ ಏನನ್ನೋ ಮಾತನಾಡಿ... ತಮ್ಮ ಮನೆಯತ್ತ ಸರಸರನೆ ನಡೆದರು. ಅಂದು ಮತ್ತಾವ ರೈತರು ಇನ್ನೂ ಬಂದಿರಲಿಲ್ಲ. ಜಿತ್ತನೆ ಕಾಲವಾದ್ದರಿಂದ, ಬೆಳಗಿನ ಹನ್ನೊಂದು ಗಂಟೆಯ ವೇಳೆಯಲ್ಲಿ ಊರಿನಲ್ಲಿ ಜನರು ಹೆಚ್ಚಾಗಿ ಕಾಣುತ್ತಿರಲಿಲ್ಲ. ಕೆಲವೇ ಕ್ಷಣಗಳಲ್ಲಿ ಹಿಂತಿರುಗಿ ಬಂದ ಓಣಿ ನಿಂಗಯ್ಯ ... ರೆವಿನ್ಯೂ ಇನ್‌ಸ್ಪೆಕ್ಟರನ್ನು ಕುರಿತು–

"ಅಯ್ನೋರೇನೋ ... ನಮ್ಮೋರೆ, ಅವ್ರಿಗೆ ಕೊಡಬೇಕಾದ ಮಸಿ ಕಾಣಿಕೆಯನ್ನು ಆಮೇಲೆ ಕೊಟ್ಕೋತೀನಿ... ನಿಮಗೆ ತಕೊಳಿ ಸ್ವಾಮಿ... ಇಲ್ಲಿ ಮೂವತ್ತು ರೂಪಾಯಿ ಅದೆ" ಎಂದು ಹೇಳುತ್ತಾ ... ಹತ್ತು ರೂ.ಗಳ ಮೂರು ನೋಟುಗಳನ್ನು ಮುಂದಿಟ್ಟರು.

"ನೋಡಿ... ನಿಂಗಯ್ಯನವರೇ... ನನಗೆ ಸರ್ಕಾರದಿಂದ ಪ್ರತಿ ತಿಂಗಳು ಸಂಬಳ ಬರ್‍ತದೆ. ನಿಮ್ಮ ಹತ್ತಿರ ನಾನು ಈ ರೀತಿ ದುಡ್ಡನ್ನ ಈಸ್ಕೊಬಾರ್ದು... ಮೊದಲು ಇದನ್ನು ಎತ್ತಿಟ್ಕೊಳಿ" ಎಂದು ರೆವಿನ್ಯೂ ಇನ್‌ಸ್ಪೆಕ್ಟರ್ ಹಣವನ್ನು ನಿರಾಕರಿಸಿದರು. ಆದರೆ ಹಣವನ್ನು ತೆಗೆದುಕೊಳ್ಳಲೇಬೇಕೆಂದು ಓಣನಿಂಗಯ್ಯ ಮತ್ತೆ ಮತ್ತೆ ಒತ್ತಾಯ ಮಾಡತೊಡಗಿದಾಗ... ರೆವಿನ್ಯೂ ಇನ್‌ಸ್ಪೆಕ್ಟರ್ ಒಮ್ಮೆ ಕಟುವಾಗಿ ರೇಗಿದರು. ಈಗ ಒಲ್ಲದ ಮನಸ್ಸಿನಿಂದ ಓಣಿ ನಿಂಗಯ್ಯ ನೋಟುಗಳನ್ನು ಎತ್ತಿ, ತಮ್ಮ ಜೇಬಿಗೆ ಇಟ್ಟುಕೊಂಡರು. ಅಷ್ಟರಲ್ಲಿ ನಾಲ್ಕಾರು ಮಂದಿ ರೈತರು ಬಂದು, ಅರ್ಜಿ ಫಾರಂಗಳನ್ನು ಶಾನುಭೋಗರಿಂದ ಭರ್ತಿ ಮಾಡಿಸಿಕೊಂಡರು. ಒಂದೆರಡು ಘಂಟೆಗಳ ಕಾಲ ಅಲ್ಲಿಯ ಕೆಲಸವನ್ನು ಮುಗಿಸಿಕೊಂಡು, ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಶಾನುಭೋಗರು ಹಳ್ಳಿಯಿಂದ ಹೊರಟು, ಅಡ್ಡರಸ್ತೆಯ ಬಳಿಗೆ ಬಂದರು. ಶಾನುಭೋಗರು ಅಲ್ಲಿಂದ ತಮ್ಮ ಊರಿಗೆ ಕಾಲ್ನಡಿಗೆಯಲ್ಲಿ ಹೋಗುವ ಮುನ್ನ, ರೆವಿನ್ಯೂ ಇನ್‌ಸ್ಪೆಕ್ಟರನ್ನು ಕುರಿತು–

"ನೀವು ಇನ್ನೂ ಚಿಕ್ಕ ವಯಸ್ಸಿನವರು... ನಿಮಗೊಂದು ಮಾತು ಹೇಳ್ತೀನಿ. ಅನ್ಯಥಾ ಭಾವಿಸಬಾರದು" ಎಂದರು.

"ಅದೇನ್ ಹೇಳಿ... ನೀವು ನನಗಿಂತ ವಯಸ್ಸಿನಲ್ಲಿ ತುಂಬಾ ಹಿರಿಯರು. ನಿಮ್ಮಂಥವರ ಮಾರ್ಗದರ್ಶನ ನನಗೆ ಅಗತ್ಯವಾಗಿದೆ" ಎಂದು ರೆವಿನ್ಯೂ ಇನ್‌ಸ್ಪೆಕ್ಟರ್ ಪ್ರತಿಕ್ರಿಯಿಸಿದರು.

"ರೈತರ ಹತ್ತಿರ ಲಂಚಕ್ಕೆ ಕೈ ಒಡ್ಡಬಾರದು ಎನ್ನುವ ನಿಮ್ಮ ನಿರ್ಧಾರ ಬಹಳ ಒಳ್ಳೆಯದು. ಆದರೆ ನಮ್ಮ ರೈತರು ಎಂಥಾವರು ಅಂದ್ರೆ... ತಮಗೆ ಯಾರಾದರೂ

ಸರ್ಕಾರಿ ಕೆಲಸ ಮಾಡಿಕೊಟ್ಟಾಗ... ಅದು ಸರ್ಕಾರದ ವತಿಯಿಂದ ಆಯ್ತು ಅಂತ ಗೊತ್ತಿದ್ದರೂ... ಕೆಲಸ ಮಾಡಿಕೊಟ್ಟವರ ಋಣ, ನಮಗ್ಯಾಕೆ ಅಂತ... ತಮ್ಮ ಕೈಲಾದಷ್ಟನ್ನು ಹೀಗೆ ಕೊಡ್ತರೆ. ಆದ್ದರಿಂದ ಅವರಾಗಿದ್ದು ಅವರು ಪ್ರೀತಿಯಿಂದ ಕೊಟ್ಟಿದ್ದನ್ನು... ಬೇಡ ಅಂತ ಅನ್ಬೇಡಿ. ಏಕೆಂದರೆ ತಾನಾಗಿ ಬರುವ ಲಕ್ಷ್ಮಿಯನ್ನು ಹಿಂದಕ್ಕೆ ತಳ್ಳಬಾರದು" ಎಂದು ಉಪದೇಶಿಸಿದ ಶಾನುಭೋಗರ ಮಾತಿಗೆ ರೆವಿನ್ಯೂ ಇನ್‌ಸ್ಪೆಕ್ಟರ್ ಪ್ರತಿಯಾಡದೆ... ಮುಗುಳ್ನಕ್ಕು ಸುಮ್ಮನಾದರು.

ಶಾನುಭೋಗರು ಅತ್ತ ಹೋಗುತ್ತಿದ್ದಂತೆಯೇ... ಇತ್ತ ತಾಲ್ಲೂಕು ಕೇಂದ್ರಕ್ಕೆ ಹೋಗುವ ಬಸ್ಸಿಗಾಗಿ ಕಾಯುತ್ತಾ ರೆವಿನ್ಯೂ ಇನ್‌ಸ್ಪೆಕ್ಟರು ಒಬ್ಬರೇ ನಿಂತಿದ್ದಾಗ... ಅಲ್ಲಿಗೆ ಓಣಿ ನಿಂಗಯ್ಯ ಮತ್ತೆ ಬಂದರು. ಅವರ ಮುಖದಲ್ಲಿ ಏನೋ ಒಂದು ಬಗೆಯ ಕಳವಳ ಎದ್ದು ಕಾಣುತ್ತಿತ್ತು. ಬಂದವರೇ... ರೆವಿನ್ಯೂ ಇನ್‌ಸ್ಪೆಕ್ಟರನ್ನು ಉದ್ದೇಶಿಸಿ–

"ನಿಮ್ಮನ್ನ ಒಂದು ಮಾತು ಕೇಳಬೇಕಾಗಿತ್ತು" ಎಂದರು.


"ಅದೇನ್ ಕೇಳೀ" ಎಂದ ಕೂಡಲೇ... ತಮ್ಮ ಚೆಡ್ಡಿ ಜೇಬಿನಿಂದ ಖಾತೆ ಬದಲಾವಣೆ ನಂಬರಿನ ಚೀಟಿಯನ್ನು ಹೊರ ತೆಗೆದು... ರೆವಿನ್ಯೂ ಇನ್‌ಸ್ಪೆಕ್ಟರ್ ಅವರ ಮುಂದೆ ಹಿಡಿದು... ಆತಂಕದ ಧ್ವನಿಯಲ್ಲಿ ಪ್ರಶ್ನಿಸಿದರು–

"ದುಡ್ಡು ಕಾಸು ಮುಟ್ಟದೆ... ಖಾತೆ ಬದಲಾವಣೆ ಮಾಡಿದ್ದೀನಿ ಅಂತಿದ್ದೀರಲ್ಲ... ಇದ ಅಡಮಾನ್ ಬ್ಯಾಂಕಿನೋರು ಒಪ್ತಾರೇನಪ್ಪ?... ಇದು ಎಲ್ಲಾ ಕಡೆ ಊರ್ಜಿತ ಆದದ್ದೇನಪ್ಪ?"

(ಊರ್ಜಿತ=ಸರಿಯಾದ ದಾಖಲೆಯೆಂದು ಮನ್ನಣೆಯನ್ನು ಪಡೆಯುವುದು.)

⌘

ಕಾಡಿದ ಸಮಸ್ಯೆ... ಬಯಸುವ ಉತ್ತರ



ಬೆಳಗಿನಿಂದ ಸಂಜೆಯವರೆಗೆ ನಡೆದ ಸಾಹಿತ್ಯ ಗೋಷ್ಠಿಯೊಂದರಲ್ಲಿ ಸಭಿಕರಾಗಿ ಭಾಗವಹಿಸಿದ್ದ ವ್ಯಕ್ತಿಯೊಬ್ಬರು... ಗೋಷ್ಠಿಯ ಅಂತಿಮ ಘಟ್ಟದಲ್ಲಿ ಎದ್ದು ನಿಂತು ಸಭೆಯಲ್ಲಿದ್ದವರನ್ನು ಉದ್ದೇಶಿಸಿ–

"ನೋಡಿ...ನೀವೆಲ್ಲಾ ನಾನಾ ಬಗೆಯ ಸಾಹಿತ್ಯ ಕೃತಿಗಳನ್ನು ಕುರಿತು ಗಂಟೆಗಟ್ಟಲೆ ಚರ್ಚೆ ಮಾಡ್ತ ಇದ್ದೀರಲ್ಲ... ಇದರಿಂದ ಸಮಾಜಕ್ಕೆ ಯಾವ ರೀತಿ ಪ್ರಯೋಜನವಾಗುತ್ತೆ? ... ದಿನೇ ದಿನೇ ನಮ್ಮ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ... ಎಲ್ಲಾ ಕಡೆ ಹಿಂಸೆ

ತಾಂಡವವಾಡುತ್ತಿದೆ... ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಗಳೆಲ್ಲಾ ಧೂಳೀಪಟವಾಗುತ್ತಿವೆ. ಇಲ್ಲಿ ಸೇರಿರುವ ಬುದ್ಧಿಜೀವಿಗಳಾದ ನೀವು... ಇದಕ್ಕೆಲ್ಲಾ ಏನ್ ಪರಿಹಾರ ಹೇಳ್ತೀರ? ಸಂಪೂರ್ಣವಾಗಿ ನೆಲಕಚ್ಚುತ್ತಿರುವ ಸಮಾಜವನ್ನು ಮತ್ತೆ ಮೇಲಕ್ಕೆತ್ತುವುದಕ್ಕೆ ನೀವು ಏನ್ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ. ಅದರ ಬಗ್ಗೆ ಏನಾದರೂ ಹೇಳಿ" ಎಂದು ಆಶಿಸುತ್ತಾ ತಮ್ಮನ್ನು ಕಾಡುತ್ತಿರುವ ಸಮಸ್ಯೆಗಳನ್ನು ಸಭೆಯ ಮುಂದೆ ತೋಡಿಕೊಂಡರು. ಅವರ ಪ್ರಶ್ನೆಗಳ ಹಿಂದೆ ಇದ್ದ ಸಾಮಾಜಿಕ ಕಳಕಳಿಯನ್ನು ಕಂಡು... ಕ್ಷಣ ಕಾಲ ನಾನು ದಂಗಾಗಿ ಹೋದೆ.

ಚರ್ಚೆ ಮತ್ತೆ ಮುಂದುವರಿದು, ಅವರನ್ನು ಕಾಡುತ್ತಿದ್ದ ಸಮಸ್ಯೆಗಳಿಗೆ ಅನೇಕರು ಬಹುಬಗೆಯ ಪರಿಹಾರಗಳನ್ನು ಸೂಚಿಸಿದರು. ಆದರೆ ಅದರಿಂದ ತೃಪ್ತರಾಗದೆ, ಇಂಥ ಗೋಷ್ಠಿಗಳಿಂದ ಸಮಾಜಕ್ಕೆ ಯಾವೊಂದು ರೀತಿಯಿಂದಲೂ ಪ್ರಯೋಜನ ವಿಲ್ಲವೆಂಬ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಸಭೆಯಿಂದ ಅವರು ನಿರ್ಗಮಿಸಿದರು. ಅತ್ತ ಅವರು ಹೊರ ಹೋಗುತ್ತಿದ್ದಂತೆಯೇ... ಇತ್ತ ಕೆಲವರು ತಮ್ಮ ತಮ್ಮಲ್ಲಿಯೇ ಗೊಣಗತೊಡಗಿದರು.

"ಇವರು ಮೊದಲು ನ್ಯಾಯವಾಗಿದ್ದರಲ್ಲವೇ... ಅನಂತರ ಸಮಾಜ ಚೆನ್ನಾಗಿರೋದು."

"ಈಗಲೂ ಪ್ರತಿ ನಿತ್ಯ ಐನೂರು ಸಾವಿರ ರೂಪಾಯಿ ಕಮಾಯಿ ಇಲ್ದೇ ಮನೆಗೆ ಬರೊಲ್ಲ... ಅಂಥಾದ್ದರಲ್ಲಿ... ಎಂಥ ಆದರ್ಶದ ಮಾತುಗಳನ್ನು ಆಡ್ತನೆ ನೋಡಿ!"

ಆಗ ನಾನು ಅಲ್ಲಿದ್ದವರನ್ನು "ಅವರು ಯಾರು" ಎಂದು ವಿಚಾರಿಸಿದಾಗ... ಸರ್ಕಾರಿ ನೌಕರಿಯಲ್ಲೊಂದರಲ್ಲಿರುವ ಆತ... ಅಕ್ರಮವಾಗಿ ಹಣ ಸಂಪಾದಿಸುತ್ತಾ... ಸಾಕಷ್ಟು ದೊಡ್ಡ ಪ್ರಮಾಣದ ಆಸ್ತಿ ಪಾಸ್ತಿ ಮಾಡಿಕೊಂಡಿರುವುದು ತಿಳಿದು ಬಂತು.

ನಾಲ್ಕು ವರ್ಷಗಳ ಹಿಂದೆ... ನಗರವೊಂದರಲ್ಲಿ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯದಲ್ಲಿ ನಾನು ತೊಡಗಿದ್ದಾಗ, ಕಾಲೇಜಿನ ಅಧ್ಯಾಪಕರೊಬ್ಬರು ನನ್ನೊಡನೆ ಆಡಿದ್ದ... ಸರಿ ಸುಮಾರು ಇದೇ ಬಗೆಯ ಮಾತುಗಳು... ಈಗ ಮತ್ತೆ ನೆನಪಿಗೆ ಬಂದವು.

"ನೋಡಿ ನಾಗರಾಜ್... ಕಾಲೇಜಿನಲ್ಲಿ ಪಾಠ ಮಾಡೋದು... ಇಲ್ಲಿ ಮೌಲ್ಯಮಾಪನ ಮಾಡೋದು... ಇವೆಲ್ಲಾ ಇದ್ದುದ್ದೆ... ನನ್ನ ಪಾಲಿಗೆ ಇವೆಲ್ಲಾ ಅಷ್ಟು ಮುಖ್ಯ ಅನ್ನಿಸುವುದಿಲ್ಲ. ಏಕೆಂದರೆ ಇವನ್ನೆಲ್ಲಾ ಮಾಡುವಂಥ ಅಧ್ಯಾಪಕರು ಬೇಕಾದಷ್ಟು ಮಂದಿ ಇದ್ದಾರೆ... ನನ್ನನ್ನು ಕಾಡುತ್ತಿರುವ ಸಮಸ್ಯೆಗಳೇ ಬೇರೆ ತರ ಇವೆ... ಇವತ್ತು ನಮ್ಮ ಜನ ಎಲ್ಲದರಲ್ಲೂ

ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ನಮ್ಮ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಜಾನಪದ, ಕಲೆಗಳ ಬಗ್ಗೆ ನಮ್ಮ ಜನರಿಗೆ ಅಭಿಮಾನ ಮೂಡುವಂತೆ ಮಾಡಿ... ಅವರನ್ನು ಕ್ರಿಯಾಶೀಲರನ್ನಾಗಿ ಮಾಡುವ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕೊಂಡು... ನಿರಂತರವಾಗಿ ಒಂದಲ್ಲ ಒಂದು ಬಗೆಯ ಕಾರ್ಯಕ್ರಮಗಳನ್ನು ನಡೆಸುತ್ತಿರಬೇಕು ಅನ್ನೋದೆ... ನನಗಿರುವ ದೊಡ್ಡ ಆಸೆ... ಇದಕ್ಕೆ ನೀವೇನ್ ಅಂತೀರಾ?" ಎಂದು ಪ್ರಶ್ನಿಸಿದಾಗ ... ಅಂದು ಯಾವುದೇ ಬಗೆಯಲ್ಲೂ ಪ್ರತಿಕ್ರಿಯಿಸದೆ... ಮುಗುಳ್ನಕ್ಕು ಸುಮ್ಮನಾಗಿದ್ದೆ.

ಇಂದು ಮತ್ತೆ ಈ ಇಬ್ಬರ ಮಾತುಗಳನ್ನ ಮನನ ಮಾಡತೊಡಗಿದಾದ... ನನ್ನ ಮನದಲ್ಲಿ ಉಂಟಾದ ಭಾವನೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಸರ್ಕಾರಿ ನೌಕರಿಯಲ್ಲಿರುವ ಈ ಇಬ್ಬರು ವ್ಯಕ್ತಿಗಳು... ತಮ್ಮ ಪಾಲಿನ ಕಾರ್ಯವನ್ನು ಅತ್ಯಂತ ಪ್ರೀತಿ, ಶ್ರದ್ಧೆ ಮತ್ತು ಪ್ರಾಮಾಣಿಕತನದಿಂದ ಮಾಡುತ್ತಾ... ಜೊತೆ ಜೊತೆಗೆ ಈ ರೀತಿ ಸಮಾಜ ಸುಧಾರಣೆಯ ಮತ್ತು ಸಂಸ್ಕೃತಿಯ ಪುನರುಜ್ಜೀವನದ ಬಗ್ಗೆ ಚಿಂತನೆ ಮಾಡಿ, ಕಾರ್ಯೋನ್ಮುಖರಾಗಿದ್ದರೆ... ಆಗ... ಇವರ ಮಾತು ಮತ್ತು ಕೃತಿಗಳಿಗೆ ಎಷ್ಟೊಂದು ಮಹತ್ವ ಲಭಿಸುತ್ತಿತ್ತು. ಸಮಾಜದ ಒಂದು ಅಂಗವಾಗಿರುವ ಇವರು... ತಮ್ಮನ್ನು ಹೊರತು ಪಡಿಸಿಕೊಂಡು ... ಇನ್ನುಳಿದವರಿಂದ ಉತ್ತಮ ಸಮಾಜವನ್ನು ನಿರ್ಮಿಸಲು ಹೊರಟಿದ್ದಾರೆ.

ಇಂದಿನ ದಿನಗಳಲ್ಲಿ ಸಂಘ ಸಂಸ್ಥೆಗಳ ಮುಂಚೂಣಿಯಲ್ಲಿ ನಿಂತು... ಸಮಾಜ, ಸಂಸ್ಕೃತಿ, ಧರ್ಮ, ಸಾಹಿತ್ಯ, ಜಾನಪದ ಮತ್ತು ಕಲೆಗಳ ಉದ್ಧಾರಕ್ಕಾಗಿ ಕಂಕಣಬದ್ಧರಾಗಿ... ಸಾರ್ವಜನಿಕ ವೇದಿಕೆಗಳಲ್ಲಿ ಆದರ್ಶಪೂರ್ಣವಾದ ಮಾತುಗಳನ್ನ ಸೊಗಸಾಗಿ ಆಡುತ್ತಾ ವಿಜೃಂಭಿಸುತ್ತಿರುವ ವ್ಯಕ್ತಿಗಳಲ್ಲಿ... ಬಹುತೇಕ ಮಂದಿ... ಸಮಾಜಕ್ಕೆ ಅಪಾಯಕಾರಿಗಳಾಗಿಯೊ ಅಥವಾ ಅನುಪಯುಕ್ತ ವ್ಯಕ್ತಿಗಳಾಗಿಯೊ ಬಾಳುತ್ತಿರುವುದನ್ನು ನಾವೆಲ್ಲಾ ಕಾಣುತ್ತಿದ್ದೇವೆ. ಇಂಥವರೆಲ್ಲಾ ಒಂದು ಕ್ಷಣ ಕಾಲ... "ನನ್ನಂತೆಯೇ ಈ ಸಮಾಜದಲ್ಲಿ ಎಲ್ಲರೂ ಇದ್ದರೆ... ನಾನು ಬಯಸುತ್ತಿರುವಂಥ ಆದರ್ಶ ಸಮಾಜ ರೂಪುಗೊಳ್ಳುವುದಕ್ಕೆ ಸಾಧ್ಯವೇ?" ಎಂಬ ಆತ್ಮ ವಿಮರ್ಶೆಯನ್ನು ಮಾಡಿಕೊಂಡರೆ... ಆಗ ಇವರನ್ನು ಕಾಡುತ್ತಿರುವ ಸಮಸ್ಯೆಗಳಿಗೆ... ಬಹಳ ನೇರವಾಗಿಯೇ ಉತ್ತರ ಲಭಿಸುತ್ತದೆ... ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನೆಲೆಯಲ್ಲಿ ಉತ್ತಮವಾಗಿ ಬಾಳತೊಡಗಿದಾದ ಮಾತ್ರ... ಒಂದು ಒಳ್ಳೆಯ ಸಮಾಜ ತಾನಾಗಿಯೇ ನಿರ್ಮಾಣಗೊಳ್ಳುವುದೆಂಬ ಸತ್ಯದ ಅರಿವಾಗುತ್ತದೆ.

⌘

ಗಂಡಭೇರುಂಡ



ಮೊನ್ನೆ ನಡೆದ ಅಖಿಲ ಭಾರತ ಕನ್ನಡ ಸಮ್ಮೇಳನದ ಮೂರನೆಯ ದಿನದ ರಾತ್ರಿ... ಏಳು ಗಂಟೆಯ ಸಮಯದಲ್ಲಿ ಉದ್ದನೆಯ ಸಾಲಿನ ನಡುವೆ ಊಟಕ್ಕಾಗಿ ಕಾಯುತ್ತಾ ನಿಂತಿದ್ದೆ. ಸಮ್ಮೇಳನದ ಅಂಗವಾಗಿ ನೀಡುತ್ತಿದ್ದ ತರಾವರಿ ತಿಂಡಿ ತಿನಿಸುಗಳ ರುಚಿಯನ್ನು ಕಳೆದ ಎರಡು ದಿನಗಳಿಂದ ಸವಿದಿದ್ದ ನನಗೆ ಮುಕ್ತಾಯದ ಈ ಹೊತ್ತಿನ ಊಟದಲ್ಲಿ ಮತ್ತಾವ ಬಗೆಯ ರಸ ಕವಳ ಸಿಗುವುದೋ ಎಂದು ಕಲ್ಪಿಸಿಕೊಳ್ಳುತ್ತಿದಾಗ... ನನ್ನ ಹಿಂದೆ ನಿಂತಿದ್ದ ಮೂರ್ನಾಕು ಮಂದಿ ತರುಣರ ಮಾತುಕತೆ ಸ್ವಾರಸ್ಯಕರವಾಗಿ ಕೇಳಿ ಬರತೊಡಗಿತು. ಅತ್ತ ಕಿವಿಗೊಟ್ಟೆನು...

"ಏನ್ರೀ... ಈ ವೈಭವ... ಅಬ್ಬಬ್ಬಾ!... ಇದುವರೆಗೆ ನಾನು ನಾಲ್ಕೈದು ಸಮ್ಮೇಳನಗಳಿಗೆ ಹೋಗಿದ್ದೇನೆ. ಆದರೆ ಇಂಥ ಅಚ್ಚುಕಟ್ಟಾದ ವ್ಯವಸ್ಥೆಯನ್ನು ನಾನೆಲ್ಲೂ ಕಂಡಿರಲಿಲ್ಲ" ಎಂದು ಒಬ್ಬ ಉದ್ಗಾರವೆಳೆದರೆ... ಮತ್ತೊಬ್ಬ–

“ಸಭಾಂಗಣ ಎಷ್ಟೊಂದು ಭವ್ಯವಾಗಿದೆ. ಮೇಲೆಲ್ಲಾ ಬಣ್ಣ ಬಣ್ಣದ ಬಟ್ಟೆಗಳು... ಕೆಳಗೆಲ್ಲಾ ರೆಡ್ ಕಾರ್ಪೆಟ್‌ಗಳು... ಯಾವ ಕಡೆ ನೋಡಿದರೂ ನೂರಾರು ದೀಪಗಳು... ಸಾವಿರಾರು ಕುರ್ಚಿಗಳು” ಎಂದು ಸಮ್ಮೇಳನದ ಮುಖ್ಯ ಮಂಟಪದಲ್ಲಿ ತಾನು ಕಂಡ ದೃಶ್ಯ ವಿಶೇಷಗಳ ಸೊಬಗನ್ನು ಒಂದೊಂದಾಗಿ ಬಣ್ಣಿಸತೊಡಗಿದ. ಇನ್ನುಳಿದವರು ಮಧ್ಯೆ ಮಧ್ಯೆ ಮಾತನಾಡತೊಡಗಿದರು.

“ಎಂಟ್ರೆನ್ಸ್‌ನಲ್ಲಿದ್ದ ಕೃತಕ ಜಲಪಾತವನ್ನು ನೀವು ನೋಡಲಿಲ್ವ?”

“ನೋಡ್ದೆ ಏನು? ... ಅಲ್ಲೇ ತಾನೆ... ಜನ ಹೆಚ್ಚು ಹೊತ್ತು ನಿಂತ್ಕೊಂಡು... ತಮ್ಮ ಮಕ್ಕಳ ಜೊತೆ ಫೋಟೋಗಳನ್ನು ತೆಗೆಸಿಕೊಳ್ತಿದ್ದುದ್ದು.”

“ಮೆರವಣಿಗೆ ತಾನೇ ಏನ್ರಿ... ಎಷ್ಟೊಂದು ಗ್ರ್ಯಾಂಡಾಗಿತ್ತು! ... ಬೆಂಗಳೂರಿನಿಂದ ಇಲ್ಲಿಯವರೆಗೆ ಸುಮಾರು ಐವತ್ತು ಅರವತ್ತು ಕಿಲೋಮೀಟರ್ ಉದ್ದಕ್ಕೂ ಕಟ್ಟಿದ್ದ ಅರವತ್ತೇಳು ಸ್ವಾಗತದ ಕಮಾನುಗಳು ತುಂಬಾ ಚೆನ್ನಾಗಿದ್ದವು.”

“ಆ ಕಮಾನುಗಳಿಗೆ ಸಾವಿರಾರು ರೂಪಾಯಿ ಆಗಿರ್ಬೇಕು.”

“ಎಂಥ ಸಾವಿರಾರು ರೂಪಾಯಿ... ಏನಿಲ್ಲ ಅಂದ್ರು... ಅವಕ್ಕೆ ಒಂದೆರಡು ಲಕ್ಷ ರೂಪಾಯಿ ಖರ್ಚಾಗಿರುತ್ತೆ.”

“ಮೂರು ದಿನದಿಂದ ಬಂದೋರ್ಗೆಲ್ಲಾ ಊಟ ತಿಂಡಿ ಕೊಟ್ರಲ್ಲ... ನಿಜಕ್ಕೂ... ಇಲ್ಲಿಯವರ ಸಾಹಸ ಮೆಚ್ಚಬೇಕಾದುದ್ದೆ.”

“ಇಡೀ ಸಮ್ಮೇಳನಕ್ಕೆ ಒಟ್ಟು ಎಷ್ಟು ಖರ್ಚಾಗಿರಬಹುದು?”

“ಏನಿಲ್ಲ ಅಂದರೂ... ಒಂದೂ ಒಂದೂವರೆ ಕೋಟಿ ರೂಪಾಯಿ ಖರ್ಚಾಗಿರ ಬಹುದು ಅಂತ ಸಮ್ಮೇಳನಕ್ಕೆ ಬಂದೋರೆಲ್ಲಾ ಮಾತಾಡ್ಕೊಳ್ತರೆ.”

“ಕನ್ನಡ ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲೇ... ಇನ್ನಿಲ್ಲ ಮುನ್ನಿಲ್ಲ ಅನ್ನೋ ರೀತಿ ನಡೀತು ಕಣ್ರಿ” ಎಂದು ಅವರೆಲ್ಲಾ ಕೊಂಡಾಡುತ್ತಿರುವಾಗ... ಅವರ ಹಿಂದೆ ನಿಂತಿದ್ದ ಮಧ್ಯ ವಯಸ್ಸಿನ ವ್ಯಕ್ತಿಯೊಬ್ಬರು... ಈ ಮಾತುಗಳ ಮಧ್ಯೆ ತಲೆ ಹಾಕಿ–

“ಏನಾದರೇನು?... ಇದೆಲ್ಲಾ ಪಾಪದ ದುಡ್ನಲ್ಲಿ ನಡೀತಾಯಿರೊ ಕಾರ್ಯ ಕಣ್ರಪ್ಪ” ಎಂದು ವಿಷಾದದ ಧ್ವನಿಯಿಂದ ನುಡಿದರು.

ಭಿನ್ನಮತದ ನುಡಿಗಳನ್ನು ಕೇಳಿ... ಕ್ಷಣ ಕಾಲ ತಬ್ಬಿಬ್ಬಾದ ಯುವಕರು... ಮರುಕ್ಷಣದಲ್ಲಿ ತಲಾಗಿ ಒಂದೊಂದು ಪ್ರಶ್ನೆಗಳನ್ನು ಎಸೆದರು.

“ಏನ್ರಿ ಹಂಗಂದ್ರೆ”... “ಯಾವುದ್ರಿ ಪಾಪದ ದುಡ್ಡು”... “ನಿಮ್ಮ ಮಾತಿನ ಅರ್ಥವೇನ್ರಿ” ಎಂದು ಗುಡುಗಿದರು. ತರುಣರಂತೆ ಆಗ ಇವರು ಉದ್ವಿಗ್ನರಾಗದೆ...

ತಮ್ಮ ಅಭಿಪ್ರಾಯವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತಾ–

"ನೋಡಿ... ಇಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವುದಕ್ಕೆ ಅಂತ ಸರ್ಕಾರದವರು ಕೊಟ್ಟಿರುವ ದುಡ್ಡು... ಅದರ ಜೊತೆಗೆ ಪ್ರತಿನಿಧಿಗಳಾಗಿ ಬಂದಿರುವ ನಮ್ಮಂಥವರು ಊಟ ವಸತಿಗಾಗಿ ಕಳುಹಿಸಿದ್ದ ದುಡ್ಡನ್ನ ಬಿಟ್ಟರೆ... ಈ ಸಮ್ಮೇಳನದಲ್ಲಿ ಆಗುತ್ತಿರುವ ವೆಚ್ಚದ ಬಹುತೇಕ ಪಾಲಿನ ದುಡ್ಡು... ಎಲ್ಲಿಂದ ಬಂದಿದೆ ಅಂತ ನೀವೇ ಹೇಳಿ?" ಎಂದು ಮರು ಪ್ರಶ್ನಿಸಿದರು.

"ರ್ರೀ... ಎಲ್ಲಿಂದಾದ್ರು ಬಂದಿರ್ಲಿ... ಅದನ್ನ ಕಟ್ಕೊಂಡು ನಮಗೂ ನಿಮಗೂ ಏನ್ರೀ ಆಗ್ಬೇಕು?" ಎಂದು ಒಬ್ಬ ನುಡಿದರೆ... ಮತ್ತೊಬ್ಬ–

"ನಮ್ಮಂಥವರು ... ನಿಮ್ಮಂಥವರು ಸಾವಿರ ಜನ ಸೇರುದ್ರೆ ತಾನೆ... ಇಂಥದೊಂದು ಸಮ್ಮೇಳನ ನಡೆಸುವುದಕ್ಕೆ ಆಗುತ್ತೇನ್ರೀ? ಎಂದು ಸವಾಲನ್ನೆಸೆದ.

"ಯಾರೋ ಪುಣ್ಯಾತ್ಮರು ಒಂದು ಒಳ್ಳೆ ಕೆಲಸ ಮಾಡ್ತಾ ಇದ್ದಾರೆ. ಅದನ್ನ ನೋಡಿ ಸಂತೋಷಪಡುವಂಥ ಮನಸ್ಸಾದರೂ ನಮಗೆ ಇರಬೇಕ್ರಿ" ಎಂದು ಇನ್ನೊಬ್ಬ ವ್ಯಂಗ್ಯವಾಡಿದ.

"ನೀವು ಪ್ರತಿನಿಧಿ ಶುಲ್ಕವಾಗಿ ಕಟ್ಟಿದ್ದ ನೂರು ರೂಪಾಯಿಗೆ ಪ್ರತಿಯಾಗಿ... ಒಂದೊಂದು ಬ್ಯಾಗು, ಬಾಟಲ್, ಕ್ಯಾಲೆಂಡರ್, ಪೆನ್ನು, ಬ್ರಷ್, ಪೇಸ್ಟು ಅಂತ ಏನೆಲ್ಲಾ ಕೊಟ್ಟಿದ್ದಾರೆ. ಇವೆಲ್ಲಕ್ಕೂ ಎಷ್ಟೇ ಕಡಿಮೆ ಅಂದರೂ ಅರವತ್ತು ಎಪ್ಪತ್ತು ರೂಪಾಯಿ ಆಗುತ್ತೆ... ಇನ್ನುಳಿದ ಮೂವತ್ತು ರೂಪಾಯಿಗೆ ಮೂರು ದಿನ ಇಂಥ ಒಳ್ಳೆ ಊಟ ಕೊಡುವುದಕ್ಕೆ ಆಗುತ್ತೇನ್ರಿ... ಅಲ್ಲಿಗೆ... ನೀವು ಕೂಡ ಪಾಪದ ದುಡ್ಡಿನಲ್ಲಿ ಪಾಲುದಾರರು ಆದಂಗೆ ಆಯ್ತಲ್ಲ!" ಎಂದು ತರ್ಕಬದ್ಧವಾಗಿಯೇ ತನ್ನ ಅಭಿಪ್ರಾಯವನ್ನು ಮಗದೊಬ್ಬ ವ್ಯಕ್ತಪಡಿಸಿದ. ಆ ಯುವಕನ ಮಾತಿಗೆ ಮಧ್ಯ ವಯಸ್ಸಿನ ವ್ಯಕ್ತಿ ಸಮ್ಮತಿಸುತ್ತಾ–

"ನಿಮ್ಮ ಮಾತು ನಿಜ... ಈ ಸಮ್ಮೇಳನದ ಅಧ್ಯಕ್ಷರಿಂದ ಹಿಡಿದು ನನ್ನನ್ನೂ ಒಳಗೊಂಡಂತೆ... ಇಲ್ಲಿನ ಫಲಾನುಭವಿಗಳೆಲ್ಲರೂ ಈ ಪಾಪದ ದುಡ್ಡಿನ ಪಾಲುದಾರರಾಗಿದ್ದೇವೆ" ಎನ್ನುತ್ತಿರುವಷ್ಟರಲ್ಲಿ ಊಟಕ್ಕೆ ನಿಂತಿದ್ದ ಸಾಲು ಮುಂದಕ್ಕೆ ಚಲಿಸತೊಡಗಿತು. ಎಲ್ಲರೂ ಆತುರಾತುರವಾಗಿ ಊಟದ ಚಪ್ಪರದೊಳಕ್ಕೆ ಧಾವಿಸಿದೆವು.

ಸಮ್ಮೇಳನದಿಂದ ಊರಿಗೆ ಹಿಂತಿರುಗಿ ಬರುವಾಗ... ದಾರಿಯುದ್ದಕ್ಕೂ ನನ್ನ ಮನಸ್ಸನ್ನು ಮತ್ತೆ ಈ ಮಾತುಗಳೆಲ್ಲವೂ ಬಹುಬಗೆಯಲ್ಲಿ ಕಾಡತೊಡಗಿದವು.

ಇತ್ತೀಚಿನ ವರ್ಷಗಳಲ್ಲಿ ಸಾವಿರಾರು ಜನರನ್ನು ಒಂದೆಡೆಗೆ ಆಕರ್ಷಿಸುತ್ತಿರುವ ವಿವಿಧ ಬಗೆಯ ಸಮ್ಮೇಳನಗಳು ಒಂದೊಂದಾಗಿ ನನ್ನ ಕಣ್ಣ ಮುಂದೆ ಹಾದುಹೋದವು.

ರಾಜಕೀಯ ಪಕ್ಷಗಳು ನಡೆಸುವ ದೊಡ್ಡ ದೊಡ್ಡ ರ್‍ಯಾಲಿಗಳು... ಮಠಾಧಿಪತಿಗಳು ಏರ್ಪಡಿಸುವ ಧಾರ್ಮಿಕ ಸಮ್ಮೇಳನಗಳು... ದೈವಭಕ್ತರು ತಮ್ಮ ಇಷ್ಟ ದೈವಗಳಿಗೆ ಮಾಡುವ ವೈಭವದ ಆರಾಧನೆಗಳು... ಜಾತಿ ಮತಗಳ ಸಂಘಟನೆಗಾಗಿ ನಡೆಯುವ ಬೃಹತ್ ಸಮಾವೇಶಗಳು... ಇವೆಲ್ಲದರ ಹಿಂದೆ ಆಯಾಯ ಜಾತಿ, ಮತ, ಧರ್ಮ ಮತ್ತು ರಾಜಕೀಯ ಪಕ್ಷಗಳಲ್ಲಿರುವ ಅತ್ಯಂತ ಭ್ರಷ್ಟರು ಸಂಗ್ರಹಿಸುವ ಹಣದ ಪಾತ್ರವೇ ಪ್ರಧಾನವಾಗಿರುತ್ತದೆ. ಒಟ್ಟು ಜನ ಸಮುದಾಯದ ಒಳಿತನ್ನು ಕಡೆಗಣಿಸಿ... ನಾನಾ ರೀತಿಯ ಕುಟಿಲೋಪಾಯಗಳಿಂದ ಅಕ್ರಮವಾಗಿ ಸಂಪಾದಿಸುವ ಪಾಪದ ದುಡ್ಡೇ... ಈ ಎಲ್ಲಾ ಬಗೆಯ ಸಭೆ, ಸಮಾರಂಭ, ಸಮ್ಮೇಳನಗಳ ಮೂಲ ಧನವಾಗಿರುತ್ತದೆ.

ಈಗ ನಾವೆಲ್ಲರೂ ಇದಕ್ಕೆ ಎಷ್ಟರ ಮಟ್ಟಿಗೆ ಮಾನಸಿಕವಾಗಿ ಒಗ್ಗಿ ಹೋಗಿದ್ದೇವೆ ಎಂದರೆ... ಯಾವುದೇ ಸಮಾರಂಭಗಳನ್ನು ದೊಡ್ಡದಾಗಿ ನಡೆಸಲು ಯಥೇಚ್ಛವಾಗಿ ದುಡ್ಡು ಬೇಕು. ಆ ದುಡ್ಡು ಯಾವುದಾದರೇನು? ...ಒಟ್ಟಿನಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಿ... ಮಹತ್ತರವಾದುದೇನನ್ನೋ ಸಾಧಿಸಿದಂತೆ ಬೀಗುತ್ತಿದ್ದೇವೆ.

ಈ ರೀತಿ ಆಲೋಚಿಸುತ್ತಿದ್ದಂತೆಯೇ... ನನಗೆ ತಟಕ್ಕನೆ ಪಂಚತಂತ್ರ ಕಾವ್ಯದಲ್ಲಿನ ನೀತಿ ಕಥೆಗಳಲ್ಲಿ ಒಂದಾದ "ಗಂಡಭೇರುಂಡ ಪಕ್ಷಿಯ ಕಥೆ" ನೆನಪಿಗೆ ಬಂತು. ಇದೊಂದು ಕಾಲ್ಪನಿಕ ಪಕ್ಷಿ. ಇದಕ್ಕೆ ಎರಡು ಕಾಲು, ಎರಡು ತಲೆ ಮತ್ತು ಒಂದೇ ದೇಹವಿತ್ತು. ಒಮ್ಮೆ ಒಂದು ತಲೆಯು ತನ್ನ ಕೊಕ್ಕಿನಿಂದ ಅತ್ಯಂತ ರುಚಿಕರವಾದ ಹಣ್ಣೊಂದನ್ನು ಹೆಕ್ಕಿಕೊಂಡು ಅದರ ಸವಿಯನ್ನು ಹಾಡಿ ಹೊಗಳುತ್ತಾ... ಮತ್ತೊಂದು ತಲೆಯು ಎಷ್ಟೇ ಕಾಡಿ ಬೇಡಿದರೂ ಕಿಂಚಿತ್ತನ್ನೂ ನೀಡದೆ, ಅತ್ಯಾನಂದದಿಂದ ತಾನೊಂದೇ ತಿಂದು ಮುಗಿಸಿತು. ಕೆಲ ಸಮಯದ ನಂತರ... ಮತ್ತೊಂದು ತಲೆಯು ತನ್ನ ಕೊಕ್ಕಿನಿಂದ ಅತ್ಯಂತ ಭಯಂಕರವಾದ ವಿಷ ಫಲವೊಂದನ್ನು ಹೆಕ್ಕಿಕೊಂಡು, ತಿನ್ನಲು ತೊಡಗಿದಾಗ... ಇನ್ನೊಂದು ತಲೆಯು ಎಷ್ಟೇ ಎಚ್ಚರಿಕೆಯನ್ನು ನೀಡಿದರೂ ಕೇಳದೇ ...ವಿಷದ ಹಣ್ಣೆಂದು ತಿಳಿದೂ ತಿಳಿದೂ ತಿಂದು ಮುಗಿಸಿತು. ಮರು ಕ್ಷಣಗಳಲ್ಲೇ ಗಂಡಭೇರುಂಡ ಪಕ್ಷಿ ಸಾವನ್ನಪ್ಪಿತ್ತು.

ಈ ಹಕ್ಕಿಗೆ ಉಂಟಾದ ದುರಂತವೇ... ಈಗ ನಮ್ಮ ಸಮಾಜಕ್ಕೆ ಬಂದೊದಗಿದೆ... ಒಂದು ಕೈಯಲ್ಲಿ ನಾವು ಅತ್ಯಂತ ವೈಭವದಿಂದ ರಾಜಕಾರಣ, ಧರ್ಮ, ಸಂಸ್ಕೃತಿ, ಸಾಹಿತ್ಯ, ಜಾನಪದ ಮತ್ತು ಕಲೆಗಳನ್ನು ಮೆರೆಸುತ್ತಿದ್ದೇವೆ. ಮತ್ತೊಂದು ಕೈಯಲ್ಲಿ ಇವೆಲ್ಲದರ ಆಚರಣೆಗೆ ಸಮಾಜದ ಜೀವಸತ್ತ್ವವನ್ನೇ ಹೀರುತ್ತಿರುವ ವಿಷರೂಪಿಯಾದ ಭ್ರಷ್ಟಾಚಾರದ ಹಣವನ್ನೇ ಪ್ರಮುಖವಾಗಿ ಅವಲಂಬಿಸಿದ್ದೇವೆ.

⌘

ಹೊಳೆಕಟ್ಟಿನ ಕಥೆ... ವ್ಯಥೆ



ಹೊಳೆಯ ದಂಡೆಯಲ್ಲಿರುವ ಒಂದು ಊರು. ಇಡೀ ಜಿಲ್ಲೆಯಲ್ಲೆ ಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ದಂಡೆಯ ಮೇಲಿರುವ ಇಲ್ಲಿನ ಪುರಾತನ ದೇಗುಲ ಮತ್ತು ದೇವರ ಬಗ್ಗೆ ಭಕ್ತಾದಿಗಳಿಗೆ ಅಪಾರವಾದ ಭಕ್ತಿ ಮತ್ತು ನಂಬಿಕೆಗಳಿವೆ. ವರ್ಷದ

ಎಲ್ಲಾ ಕಾಲದಲ್ಲೂ ಭಕ್ತರು ಇಲ್ಲಿಗೆ ಬರುತ್ತಾರೆಯಾದರೂ, ಶ್ರಾವಣ ಮಾಸದ ಶನಿವಾರಗಳಂದು ಮತ್ತು ಕಾರ್ತೀಕ ಮಾಸದ ಸೋಮವಾರಗಳಂದು... ನಾಡಿನ ನಾನಾ ಕಡೆಗಳಿಂದ ಸಾವಿರಾರು ಮಂದಿ ಭಕ್ತರು ಇಲ್ಲಿಗೆ ವಿಶೇಷವಾಗಿ ಭೇಟಿ ನೀಡುತ್ತಾರೆ. ಈ ಊರಿನಲ್ಲಿದ್ದ ನನ್ನ ಗೆಳೆಯರನ್ನು ನೋಡುವುದಕ್ಕೆಂದು, ಆಗಾಗ್ಗೆ ನಾನು ಚಿಕ್ಕಂದಿನಿಂದಲೂ ಇಲ್ಲಿಗೆ ಹೋಗಿ ಬರುತ್ತಿದ್ದೇನೆ. ಈ ಊರಿಗೆ ನಾನು ಮೊದಲ ಬಾರಿ ಹೋದಾಗ... ಸುಮಾರು ಹತ್ತು ಹನ್ನೆರಡು ವರ್ಷದ ಬಾಲಕನಾಗಿದ್ದೆ. ಅಂದು ನಾನು ಇಲ್ಲಿ ಕಂಡಿದ್ದ ಪ್ರಕೃತಿಯ ಪರಿಸರದ ಅಂದ ಚೆಂದ ...ನನ್ನ ಮನ ಪಟಲದ ಮೇಲೆ... ಇಂದಿಗೂ ಅಚ್ಚಳಿಯದಂತೆ ನೆಲೆಗೊಂಡಿದೆ.

ಊರು...ಇನ್ನೊಂದು ಫರ್ಲಾಂಗ್ ದೂರವಿರುವಂತೆಯೇ, ಹೊಳೆಯ ತೀರದ ಉದ್ದಕ್ಕೂ ರಸ್ತೆಯ ಒಂದು ಮಗ್ಗುಲಲ್ಲಿ ದಟ್ಟವಾಗಿ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುವ ತೋಪು ಕಣ್ಣಿಗೆ ಬೀಳುತ್ತದೆ. ಅತ್ಯಂತ ಎತ್ತರವಾಗಿ ಬೆಳೆದಿರುವ ನೇರಳೆಯ ಮರಗಳು... ಎಲ್ಲಾ ಕಡೆ ವ್ಯಾಪಕವಾಗಿ ಹಬ್ಬಿರುವ ಹೊಂಗೆ ಮರಗಳು... ತೋಪಿನ ಹಲವು ಕಡೆ ದಾಂಗುಡಿಯಿಟ್ಟು ಆವರಿಸಿರುವ ಸೀಗೆ ಮೆಳೆಗಳು... ಇನ್ನೂ ಹತ್ತಾರು ಬಗೆಯ ಸಣ್ಣಪುಟ್ಟ ದೊಡ್ಡ ಮರಗಿಡಬಳ್ಳಿಗಳಿಂದ ಕಿಕ್ಕಿರಿದು ತುಂಬಿದ್ದ ಈ ತೋಪಿನಲ್ಲಿ ... ಸೂರ್ಯನ ಕಿರಣಗಳು ನೆಲವನ್ನು ತಾಕುತ್ತಿರಲಿಲ್ಲ. ತೋಪಿನ ಪಕ್ಕದಲ್ಲಿ ಸಂಜೆಯ ವೇಳೆ ಸಾಗಿ ಹೋಗುತ್ತಿರುವಾಗ ...ಸಹಸ್ರಾರು ಜೀರುಂಡೆಗಳು ಮೊರೆಯುವ 'ಗುಯ್' ಎಂಬ ನಾದ... ಬೀಸುತ್ತಿರುವ ತಣ್ಣನೆಯ ಗಾಳಿ...ಗಾಳಿಯಲ್ಲಿ ತೇಲಿ ತೇಲಿ ಬರುತ್ತಿರುವ ಬಹು ಬಗೆಯ ಹೂವುಗಳ ಪರಿಮಳ... ನೂರಾರು ಹಕ್ಕಿಗಳ ಕಲರವ... ದಾರಿ ಹೋಕರ ಮೈಮನಗಳಿಗೆ ಅಪೂರ್ವವಾದ ಆನಂದವನ್ನು ನೀಡುತ್ತಿದ್ದವು.

ಈ ತೋಪನ್ನು ಊರಿನವರು 'ಹೊಳೆಕಟ್ಟು' ಎಂದು ಕರೆಯುತ್ತಿದ್ದರು. ಮಳೆಗಾಲದಲ್ಲಿ ಹೊಳೆಯು ಮೈತುಂಬಿಕೊಂಡು ಹುಚ್ಚೆದ್ದು ಹರಿದಾಗ... ಪ್ರವಾಹದ ನೀರು ದಡಗಳನ್ನು ಕೊಚ್ಚಿ ಹಾಕದಂತೆ ತಡೆಗಟ್ಟಿ... ದಂಡೆಯಲ್ಲಿದ್ದ ದೇಗುಲ ಮತ್ತು ಊರಿನ ಮನೆ ಮಠಗಳನ್ನು ರಕ್ಷಿಸುವುದಕ್ಕೆಂದು... ನೂರಾರು ವರ್ಷಗಳ ಹಿಂದಿನಿಂದಲೂ ಹಿರಿಯರು ನೆಟ್ಟು ಬೆಳೆಸಿ ಪೋಷಿಸಿಕೊಂಡು ಬಂದಿದ್ದ ಈ ತೋಪನ್ನು ಊರಿನ ಹಿರಿಯರು ಕಟ್ಟೆಚ್ಚರದಿಂದ ಕಾಯ್ದುಕೊಂಡು ಬಂದಿದ್ದರು.

ತೋಪಿನೊಳಕ್ಕೆ ಮೇಯಲೆಂದು ದನಕರುಗಳನ್ನಾಗಲಿ ಅಥವಾ ಆಡು ಕುರಿಗಳನ್ನಾಗಲಿ ಬಿಡುತ್ತಿರಲಿಲ್ಲ. ಹೊಂಗೆ ಬೀಜ ಮತ್ತು ಸೀಗೆ ಕಾಯಿಯ ಫಸಲು ಅಧಿಕವಾಗಿ ಬಂದ ವರ್ಷಗಳಲ್ಲಿ, ಫಸಲನ್ನು ಹರಾಜು ಹಾಕಿ, ಬಂದ ದುಡ್ಡನ್ನು ಊರೊಟ್ಟಿನ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದರು. ತೀರಾ ಬಡವರು ಸತ್ತಾಗ, ಅವರ

ತಿಥಿಯ ಅಡುಗೆ ಕಾರ್ಯಗಳಿಗೆ ಅಗತ್ಯವಾದ ಸೌದೆಗಾಗಿ, ತೋಪಿನೊಳಗೆ ಮುರಿದು ಬಿದ್ದಿರುವ ರೆಂಬೆ ಕೊಂಬೆಗಳನ್ನು ನೀಡುತ್ತಿದ್ದರು. ತೋಪಿನೊಳಗಿನ ಮರಗಿಡಗಳಿಗೆ ಯಾರಾದರೂ ಹಾನಿ ಮಾಡಿದರೆ, ಯಾವುದೇ ಮುಲಾಜಿಲ್ಲದೆ ತಪ್ಪಿತಸ್ಥರಿಗೆ ದಂಡ ಹಾಕುತ್ತಿದ್ದರು.

ಈ ರೀತಿ ಊರಿನ ಹಿರಿಯರ ಸಾಮಾಜಿಕ ಎಚ್ಚರದ ಫಲವಾಗಿ... ನೂರಾರು ವರ್ಷಗಳಿಂದ ಉಳಿದುಕೊಂಡು ಬಂದಿದ್ದ ಹೊಳೆಕಟ್ಟು... ಇತ್ತೀಚಿನ ಹದಿನೈದು ಇಪ್ಪತ್ತು ವರ್ಷಗಳಲ್ಲಿ ಈ ಊರಿನಲ್ಲಿ ನಡೆದ ವಿದ್ಯಮಾನಗಳಿಂದ ತೀವ್ರತರವಾದ ಗಂಡಾಂತರಕ್ಕೆ ಗುರಿಯಾಗತೊಡಗಿತು.

ಜನಸಂಖ್ಯೆ ಹೆಚ್ಚಾದಂತೆಲ್ಲಾ... ನಾನಾ ಕಡೆಗಳಿಂದ ದೇಗುಲಕ್ಕೆ ಕಾಲ್ನಡಿಗೆಯಲ್ಲಿ, ಸೈಕಲ್‌ಗಳಲ್ಲಿ, ಎತ್ತಿನ ಬಂಡಿಗಳಲ್ಲಿ, ಜಟಕಾಗಾಡಿಗಳಲ್ಲಿ ಮತ್ತು ಮೋಟಾರ್ ವಾಹನಗಳಲ್ಲಿ ದೇವರ ದರ್ಶನಕ್ಕೆಂದು ಬರುವ ಭಕ್ತರ ಸಂಖ್ಯೆಯು ದಿನೇ ದಿನೇ ಅಧಿಕವಾಗತೊಡಗಿತು. ಇದರಿಂದ ಊರೊಳಗಿನ ಒಂದು ಇಕ್ಕಟ್ಟಾದ ಬೀದಿಯಲ್ಲಿ ಸಂಚಾರದ ದಟ್ಟಣೆಯು ಹೆಚ್ಚಾಗಿ, ಬರುವ ಭಕ್ತರಿಗೂ ಮತ್ತು ಆ ಬೀದಿಯಲ್ಲಿನ ಜನರಿಗೂ ಕಿರಿಕಿರಿ ಯಾಗತೊಡಗಿತು. ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡು ಹಿಡಿಯಲೆಂದು ಊರಿನ ಮುಖಂಡರು ಸಭೆ ಸೇರಿದರು. ಭಕ್ತಾದಿಗಳಾಗಲಿ ಅಥವಾ ಭಕ್ತರ ವಾಹನಗಳಾಗಲಿ ಊರಿನ ಒಳಕ್ಕೆ ಬಾರದೇ... ಊರಿನ ಹೊರ ವಲಯದಿಂದಲೇ ನೇರವಾಗಿ ದೇಗುಲಕ್ಕೆ ಬಂದು ಹೋಗುವ ದೊಡ್ಡ ರಸ್ತೆಯನ್ನು ಹೊಸದಾಗಿ ನಿರ್ಮಿಸಲು ಯೋಜಿಸಿದರು. ಈ ರಸ್ತೆಯು ಹೊಳೆಕಟ್ಟಿನ ನಡುವೆಯೇ ಹಾದು ಬರಬೇಕಿತ್ತು. ಹಳೆಯ ತಲೆಮಾರಿನ ಒಂದಿಬ್ಬರು... ಈ ಯೋಜನೆಯನ್ನೇ ಕೈಬಿಡುವಂತೆ ಒತ್ತಾಯಿಸುತ್ತಾ–

"ಯಾರಿಗೆ ಏನೇ ಕಷ್ಟ ಆಗಲಿ... ಹೊಳೆಕಟ್ಟಿಗೆ ಮಾತ್ರ ಕಾಲಿಡುವುದು ಬ್ಯಾಡ... ಅದರೊಳಗೆ ರಸ್ತೆ ಬಂದರೆ... ಕಾಲದಿಂದಲೂ ಮಕ್ಕಳಂಗೆ ಕಾಪಾಡಿಕೊಂಡು ಬಂದಿರುವ ಮರಗಿಡಗಳು ಎಕ್ಕುಟ್ಟೋಯ್ತವೆ... ಅವು ನಮ್ಮೂರಿನ ಉಸಿರಿದ್ದಂಗೆ... ಅವ ಕಳ್ಕೊಂಡ ಮ್ಯಾಲೆ... ನಾವು ಇದ್ದರೂ ಒಂದೆ... ಸತ್ತರೂ ಒಂದೆ" ಎಂದು ವಾದಿಸಿದರು. ಆದರೆ ಹೊಸ ರಸ್ತೆಯ ಅನಿವಾರ್ಯತೆಯ ಬಗ್ಗೆ ಹೊಸ ತಲೆಮಾರಿನ ಮಂದಿ ಪಟ್ಟು ಹಿಡಿದ ಕಾರಣದಿಂದ, ಹಿರಿಯರ ಧ್ವನಿ ಉಡುಗಿ ಹೋಯಿತು.

ಹೊಸ ರಸ್ತೆಯ ನಿರ್ಮಾಣ ಕಾರ್ಯಕ್ಕೆ ಸರ್ಕಾರದ ಮಂಜೂರಾತಿಯು ಲಭಿಸುತ್ತಿದ್ದಂತೆಯೇ... ರಸ್ತೆಯು ಹಾದು ಬರುವಷ್ಟು ಜಾಗದಲ್ಲಿನ ಮರಗಳ ಹರಾಜು

ನಡೆಯಿತು. ಮರದ ರುಚಿ ಕಂಡಿದ್ದ ಮರಗಳ್ಳರು... ಒಂದು ಮರವನ್ನು ಕಡಿಯುವ ಕಡೆ, ಹತ್ತು ಮರಗಳನ್ನು ಕಡಿದರು. ನೋಡನೋಡುತ್ತಿದ್ದಂತೆಯೇ... ನೂರಾರು ಮರಗಿಡಗಳು ನೆಲ ಕಚ್ಚಿದವು. ಹೊಸ ರಸ್ತೆಯ ನಿರ್ಮಾಣ ಕಾರ್ಯ ಮುಗಿಯುವ ವೇಳೆಗೆ ಹೊಳೆಕಟ್ಟಿನ ಅರ್ಧ ಭಾಗ ಹೇಳ ಹೆಸರಿಲ್ಲದಂತಾಯಿತು. ದೇಗುಲಕ್ಕೆ ಬಾರಾಮಾರ್ಗವಾದ ನಂತರ, ಬಂದು ಹೋಗುವ ಭಕ್ತಾದಿಗಳ ಸಂಖ್ಯೆ ಇಮ್ಮಡಿ ಗೊಂಡಿದ್ದನ್ನು ಕಂಡು, ಊರಿನ ಹೊಸ ತಲೆವಾರಿನ ಮುಖಂಡರು ರೋಮಾಂಚಿತರಾದರು. ತಮ್ಮೂರಿನ ದೇವರ ಕೀರ್ತಿ ಪತಾಕೆಯನ್ನು ಮತ್ತಷ್ಟು ಎತ್ತಿ ಹಿಡಿಯುವ ಕನಸುಗಳನ್ನು ಕಾಣತೊಡಗಿದರು.

ಈ ನಡುವೆ ಹೊಳೆಕಟ್ಟಿನ ಬಗ್ಗೆ ಊರಿನ ಹಿರಿಯರಿಗಿದ್ದ ಹಿಡಿತ ಸಡಿಲಗೊಂಡು ...ಅದರೊಳಕ್ಕೆ ಊರಿನವರು ದನಕರುಗಳನ್ನು ಬಿಡಲಾರಂಭಿಸಿದರು... ಕಂಡು ಕಾಣದಂತೆ ಅಲ್ಲಲ್ಲಿ ಮರಗಿಡಗಳನ್ನು ಹಲವರು ಕಡಿಯಲಾರಂಭಿಸಿದರು... ಈ ರೀತಿ ಹೊಳೆಕಟ್ಟು ಹೇಳುವವರಾಗಲಿ ಕೇಳುವವರಾಗಲಿ ಇಲ್ಲದೆ ತಬ್ಬಲಿಯಾಯಿತು. ದೊಡ್ಡ ರಸ್ತೆಯಾದ ಒಂದೆರಡು ವರ್ಷಗಳ ನಂತರ ಮತ್ತೊಮ್ಮೆ ಊರಿನ ಮುಖಂಡರು ಸಭೆ ಸೇರಿ, ಹೊಳೆಕಟ್ಟಿನ ಭವಿಷ್ಯದ ಬಗ್ಗೆ ಚರ್ಚಿಸಿದರು–

"ಯಾಕೋ... ಏನೋ ... ಹೊಳೆಕಟ್ಟನ್ನು ನಾವು ಮೊದಲಿನಂತೆ ಉಳಿಸಿಕೊಳ್ಳುವುದಕ್ಕೆ ಆಗ್ತಾಯಿಲ್ಲ... ಈಗ ಅಲ್ಲಿ ಅಳಿದು ಉಳಿದಿರುವ ಮರಗಳಲ್ಲಿ ನೇರಲೆ... ಮುಳ್ಳಿಮರಗಳೇ ಹೆಚ್ಚಾಗಿವೆ. ಅವೇನು.. ಅಂಥ ಬೆಲೆ ಬಾಳುವ ಮರಗಳಲ್ಲ... ಆದ್ದರಿಂದ ಈಗ ನಾವು ಒಂದು ತರ ಮಾಡೋಣ. ಅವನ್ನೆಲ್ಲಾ ಒಮ್ಮೆಯಾಗಿ ಹರಾಜ್ ಹಾಕ್ಬುಟ್ಟು... ಬಂದ ದುಡ್ಡಿನಲ್ಲಿ ತ್ಯಾಗದ ಸಸಿಗಳನ್ನ... ಒಳ್ಳೆಯ ತೆಂಗಿನ ಸಸಿಗಳನ್ನು ತಂದು ಅಚ್ಚುಕಟ್ಟಾಗಿ ನೆಡಿಸಿ, ಮೊದಲಿಗಿಂತ ಒಂದು ಒಳ್ಳೆಯ ತೋಪು ಬೆಳ್ಸೋಣ" ಎಂದು ಒಬ್ಬರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಆಗ ಹಳೆಯ ತಲೆಮಾರಿಗೆ ಸೇರಿದ ಅಜ್ಜನೊಬ್ಬ ನಡುಗುವ ಧ್ವನಿಯಲ್ಲಿ–

"ಅಲ್ಲ ಕಣ್ರಪ್ಪ... ಹುಚ್ಚು ಹೊಳೆ ನುಗ್ಗಿ ಬಂದಾಗ... ಊರು ಕೊಚ್ಕೊಂಡು ಹೋಗ್ದೆ ಇರ್ಲಿ ಅಂತ... ನಮ್ಮ ಹಿರೀಕರು ಕೊಟ್ಟು ಹೋಗಿರುವ ಹೊಳೆಕಟ್ಟನ್ನು... ಹಿಂಗೆ ಹರಾಜು ಮಾಡೋದು ಸರಿಯೇ... ನೋಡ್ರಪ್ಪ" ಎಂದು ಹೇಳಿದಾಗ... ಒಬ್ಬ ಯುವಕ ನಗುತ್ತಾ –

"ಅಲ್ಲ ಅಜ್ಜ... ಈಗ್ಯಾವ ಹುಚ್ಚು ಹೊಳೆ ಬಂದದು! ...ಅದೆಲ್ಲಾ ನಿಮ್ಮ ಕಾಲಕ್ಕೆ ಮುಗಿದೋಯ್ತು... ಈಗ ಹುಯ್ಯು ಮಳೇಲಿ ಗುಂಚಕ್ಕಿ ಪುಕ್ಕನೂ ಒದ್ದೆಯಾಗೂದಿಲ್ಲ"


ಎಂದು ವ್ಯಂಗ್ಯವಾಡಿದಾಗ... ಅಲ್ಲಿದ್ದ ನಾಲ್ಕಾರು ಮಂದಿ 'ಗೊಳ್' ಎಂದು ನಕ್ಕರು. ಸಭೆಯಲ್ಲಿ ಒಬ್ಬ ದೈವ ಭಕ್ತ ಎದ್ದು ನಿಂತು ಗಂಭೀರವಾದ ಧ್ವನಿಯಲ್ಲಿ ಈಗ ಮಾತನಾಡತೊಡಗಿದ.

"ನೋಡಿ... ಇದ್ದ ಮರಗಿಡಗಳನ್ನೆ ಉಳಿಸಿಕೊಳ್ಳುವುದಕ್ಕೆ ಆಗ್ದೆ ಇರುವ ನಾವು... ಇನ್ನು ಹೊಸದಾಗಿ ಸಸಿ ನೆಟ್ಟು... ತೋಪು ಬೆಳಿಸ್ತೀವಿ ಅನ್ನೋದೆಲ್ಲಾ ಹೊತ್ತೋಗದ ಮಾತು... ಇನ್ನು ಹೊಳೆಕಟ್ಟಿನ ಆಸೆಯ ನಾವೆಲ್ಲಾ ಬುಟ್ಬುಡ್ಮ... ಈಗ ಎಲ್ಲಾ ಪವಿತ್ರ ತೀರ್ಥ ಕ್ಷೇತ್ರಗಳಲ್ಲೂ ದೇವರುಗಳ ಮೈಮೇಲೆ ಚಿನ್ನ ಬೆಳ್ಳಿ ವಜ್ರದ ಆಭರಣಗಳನ್ನು ಮಾಡ್ಸಾಕಿ... ನೋಡೋಕೆ ಎರಡು ಕಣ್ಣು ಸಾಲ್ದಂಗೆ... ಘನವಾಗಿ ಪೂಜೆ ಮಾಡಿಸ್ತಾವ್ರೆ... ಅಂಥಾದ್ರಲ್ಲಿ ಆರ್ಸಿಯಿಂದಲೂ ಇಷ್ಟೊಂದು ಪ್ರಸಿದ್ಧಿಯಾಗಿರುವ ನಮ್ಮೂರ ದೇವರ ಮೈಮೇಲೆ ಮೂರ್ಕಾಸಿನ ಚಿನ್ನದ ಒಡವೆಯಿಲ್ಲ. ಈಗಿರೂ ಹೊಳೆಕಟ್ಟನ್ನ ಹರಾಜು ಹಾಕಿ... ಬಂದ ದುಡ್ನಲ್ಲಿ ನಮ್ಮ ಅಮ್ಮನವರಿಗೆ ಒಂದು ಚಿನ್ನದ ಪದಕ ಮಾಡ್ಸಾಕಿ... ಪುಣ್ಯವನ್ನಾದರೂ ಕಟ್ಕೊಳ್ಳೋಣ" ಎಂದು ಸಲಹೆ ನೀಡಿದ. ಅಲ್ಲಿದ್ದ ಮುಖಂಡರಲ್ಲಿ ಬಹುತೇಕ ಮಂದಿಗೆ ಈ ದೈವ ಭಕ್ತನ ಸಲಹೆ ಮೆಚ್ಚುಗೆಯಾಯಿತು... ಮತ್ತೆ ಹರಾಜು ನಡೆಯಿತು... ಹೊಳೆಕಟ್ಟಿನಲ್ಲಿ ಅಳಿದುಳಿದಿದ್ದ ಮರಗಿಡಗಳು ಬುಡಸಮೇತ ಕಣ್ಮರೆಯಾದವು.

ಅಂದು ಹಚ್ಚ ಹಸಿರಿನ ಸಿರಿಯಿಂದ ಕಂಗೊಳಿಸುತ್ತಾ... ತನ್ನ ಪರಿಸರದಲ್ಲಿದ್ದ ಸಾವಿರಾರು ಮಂದಿ ಮಾನವರಿಗೆ ಮತ್ತು ಅಸಂಖ್ಯಾತ ಹುಳ ಉಪ್ಪಟೆ... ಪ್ರಾಣಿ ಪಕ್ಷಿಗಳಿಗೆ ಜೀವಧಾತುವಾಗಿದ್ದ ಹೊಳೆಕಟ್ಟಿನ ಜಾಗದಲ್ಲಿ... ಇಂದು ಎತ್ತ ನೋಡಿದರೆ ಅತ್ತ... ಪಾರ್ಥೇನಿಯಂ ಗಿಡಗಳು ಎಲ್ಲೆಡೆ ಬೆಳೆದು ನಿಂತಿವೆ.

⌘

ದ್ವಂದ್ವಗಳ ನಡುವೆ



ಮೊನ್ನೆ ನನ್ನ ಸ್ನೇಹಿತರೊಬ್ಬರ ಮನೆಗೆ ಹೋಗಿ, ಲೋಕಾಭಿರಾಮವಾಗಿ ಅದು ಇದು ಮಾತನಾಡುತ್ತ ಕುಳಿತಿದ್ದಾಗ, ಅವರು ತಮ್ಮ ಮೇಜಿನೊಳಗಿಂದ, ಉದ್ದನೆಯ ಹಾಳೆಯೊಂದನ್ನು ಹೊರ ತೆಗೆದು–

"ಇದರಲ್ಲಿ ಒಂದು ಕವನವನ್ನು ಬರೆದಿದ್ದೇನೆ... ಓದಿ... ನಿಮ್ಮ ಅಭಿಪ್ರಾಯವನ್ನು ತಿಳಿಸಿ" ಎನ್ನುತ್ತಾ, ಅದನ್ನು ನನ್ನ ಕೈಗಿತ್ತರು. ಸುಮಾರು ಇಪ್ಪತ್ತು ಇಪ್ಪತ್ತೈದು ಸಾಲುಗಳಷ್ಟಿದ್ದ ಆ ಕವನವನ್ನು ಮೂರ್ನಾಕು ಸಾರಿ ಮನದಲ್ಲಿಯೇ ಮತ್ತೆ ಮತ್ತೆ ಓದಿಕೊಂಡು, ನಂತರ–

"ಎಲ್ಲಿಗೆ ಕಳಿಸ್ತೀರಿ ಇದನ್ನ?" ಎಂದು ಪ್ರಶ್ನಿಸಿದೆ.

"ಮುಂದಿನ ತಿಂಗಳು ನಡೆಯುವ ಕವಿಗೋಷ್ಠಿಯೊಂದರಲ್ಲಿ ಓದಲಿದ್ದೇನೆ... ಹೇಗಿದೆ ಕವನ?" ಎಂದು ಕಾತರದಿಂದ ಮತ್ತೆ ಕೇಳಿದರು. "ಕವನ ಚೆನ್ನಾಗಿದೆ... ಆದರೆ ಇಂತಹ ಕವನವನ್ನು ಬರೆದಿರುವ ನಿಮ್ಮ ಮನೋಧರ್ಮದ ಬಗ್ಗೆ ನನ್ನದೊಂದು ತಕರಾರು" ಎಂದೆ. ಆಗ ಅವರು ಗಹಗಹಿಸಿ ನಗುತ್ತಾ –

"ಅದೇನ್ ನಿಮ್ ತಕರಾರು ಹೇಳಿ" ಎಂದು ಅನುಮತಿಸಿದರು. ನಾವು ಕುಳಿತಿದ್ದ ಕೊಠಡಿಯ ಗೋಡೆಯೊಂದರ ಮೇಲೆ ರಾರಾಜಿಸುತ್ತಿದ್ದ ದೊಡ್ಡ ಫೋಟೋ ಒಂದನ್ನು ಅವರಿಗೆ ಬೆರಳು ಮಾಡಿ ತೋರಿಸುತ್ತಾ–

"ಅಲ್ನೋಡಿ... ಕುವೆಂಪು ಜೊತೆಯಲ್ಲಿ ನೀವು ನಿಂತ್ಕೊಂಡು ಫೋಟೋ ತೆಗಿಸ್ಕೊಂಡಿದ್ದೀರಿ... ಬರೀ ಫೋಟೋ ಮಾತ್ರವಲ್ಲ... ಕುವೆಂಪು ಅವರ ಸಾಹಿತ್ಯ ಕೃತಿಗಳನ್ನ ಓದಿ, ಅವರ ವೈಚಾರಿಕ ನಿಲುವುಗಳನ್ನು ಮೆಚ್ಚಿಕೊಂಡು... ಒಂದು ವಿಮರ್ಶನ ಗ್ರಂಥವನ್ನೂ ಬರೆದಿದ್ದೀರಿ... ಈಗ ಈ ಕವನದಲ್ಲಿ ಮಠಾಧಿಪತಿಗಳ ವ್ಯಕ್ತಿತ್ವವನ್ನು ಅಪೂರ್ವವಾದ ರೀತಿಯಲ್ಲಿ ಗುಣಗಾನ ಮಾಡಿದ್ದೀರಿ... ಇದು ಸರಿಯೇ?" ಎಂದು ಪ್ರಶ್ನಿಸಿದೆ.

"ಇದರಲ್ಲೇನ್ ತಪ್ಪು? ...ಹಾಗಾದರೆ ನಿಮ್ಮ ಪ್ರಕಾರ ಲೇಖಕನಾದವನು ಮಠಗಳನ್ನಾಗಲಿ.. ಇಲ್ಲವೇ... ಮಠಾಧಿಪತಿಗಳನ್ನಾಗಲಿ ಹೊಗಳಿ ಏನನ್ನೂ ಬರೆಯಬಾರದೇ?" ಎಂದು ಸ್ವಲ್ಪ ಉದ್ವಿಗ್ನರಾಗಿ ಕೇಳಿದರು.

"ಬರೆಯಬಹುದು... ಯಾವಾಗ ಅಂದರೆ... ಆ ಲೇಖಕರು ಮಠದ ಆಚಾರ ವಿಚಾರಗಳನ್ನು, ಸಂಪ್ರದಾಯಗಳನ್ನು ಮತ್ತು ಧ್ಯೇಯ ಧೋರಣೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾಗ ಮಾತ್ರ... ಆದರೆ ಈಗ ನೀವೇನಾಗಿದ್ದೀರಿ... ಅತ್ತ... ಕುವೆಂಪು ಅವರು ಪ್ರತಿಪಾದಿಸಿರುವ ಎಲ್ಲಾ ಬಗೆಯ ಜಾತಿ, ಮತ, ಧರ್ಮಗಳಿಂದ ಮುಕ್ತವಾದ ವಿಶ್ವಮಾನವ ಸಂದೇಶವನ್ನು ಒಪ್ಪಿಕೊಳ್ಳುತ್ತೀರಿ... ಇತ್ತ... ಜಾತಿಗಳ ಅಡಿಪಾಯದಲ್ಲಿ ಕಟ್ಟಿರುವ ಮಠಗಳನ್ನು ಮತ್ತು ಜಾತಿಗಳಲ್ಲಿ ಕಾಲೂರಿ ಬೆಳೆದು ನಿಂತಿರುವ ಮಠಾಧಿಪತಿಗಳನ್ನು ಮೆಚ್ಚಿಕೊಳ್ತೀರಿ. ಒಬ್ಬ ಲೇಖಕರಾಗಿ ನಿಮ್ಮ ಇಂತಹ ಇಬ್ಬಗೆಯ ನಿಲುವುಗಳು ಸರಿಯೆ?" ಎಂದು ಪ್ರಶ್ನಿಸಿದಾಗ.. ಅವರು ಕೆರಳಿ ಕೆಂಡವಾಗಿ–

"ಎಲ್ಲೆಲ್ಲಿ ಒಳ್ಳೆಯದು ಇದೆಯೋ... ಅದೆಲ್ಲವನ್ನೂ ಗುರುತಿಸಿ ಸಮಾಜಕ್ಕೆ ತಿಳಿಯುವಂತೆ ಬರೆಯುವುದು ಯಾವುದೇ ಲೇಖಕನ ಕರ್ತವ್ಯ ಅನೋದು ನನ್ನ ನಿಲುವು... ನೋಡಿ... ಹಿಂದಿನಿಂದಲೂ ನಮ್ಮ ಕರ್ನಾಟಕದ ಉದ್ದಗಲದಲ್ಲಿ ಬೇರೆ ಬೇರೆ ಜಾತಿಗಳ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ಸಾಮಾನ್ಯವೇ? ಅನಾಥರ ಮತ್ತು ಅಬಲೆಯರ ಉದ್ಧಾರಕ್ಕಾಗಿ ಹಾಕಿಕೊಂಡಿರುವ ಯೋಜನೆಗಳು ಮತ್ತು ಮಾಡುತ್ತಿರುವ ಸಮಾಜ ಸುಧಾರಣೆಯ ಹತ್ತಾರು ಬಗೆಯ ಕಾರ್ಯಗಳು ನಿಮಗೆ ಮಹತ್ತ್ವಪೂರ್ಣ ಅನ್ನಿಸುವುದಿಲ್ವೆ?" ಎಂದು ಪ್ರಶ್ನಿಸಿ... ತೀಕ್ಷ್ಣ ದೃಷ್ಟಿಯಿಂದ ನನ್ನತ್ತ ನೋಡತೊಡಗಿದರು.

"ನಿಮ್ಮ ಮಾತು ಸ್ವಲ್ಪ ಮಟ್ಟಿಗೆ ನಿಜ... ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ಸಾವಿರಾರು ದಲಿತ ಮತ್ತು ಶೂದ್ರ ಮಕ್ಕಳಿಗೆ ಮೊದಲ ಬಾರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿ... ಅನ್ನವನ್ನು ಹಾಕಿ... ವಿದ್ಯೆಯನ್ನು ಕಲಿಸಿದ ಕೀರ್ತಿಯು ಮಠಗಳಿಗೇ ಸಲ್ಲಬೇಕು. ಆದರೆ ಸುಮಾರು ಮೂವತ್ತು ನಲವತ್ತು ವರ್ಷಗಳ ಹಿಂದೆ ಇದ್ದ ಮಠಗಳ ಸ್ಥಿತಿ ಗತಿಗಳಿಗೂ ಇವತ್ತಿನ ಮಠಗಳ ಸ್ವರೂಪದಲ್ಲೂ ಆಗಿರುವ ಬದಲಾವಣೆಗಳನ್ನು ನೀವು ಗುರುತಿಸಿದ್ದೀರಾ?" ಎಂದು ಪ್ರಶ್ನಿಸಿದೆ.

"ನಾನು ಅಷ್ಟು ಸೂಕ್ಷ್ಮವಾಗಿ ಗಮನಿಸಿಲ್ಲ... ಅದೇನ್ ನೀವೇ ಹೇಳಿ" ಎಂದು ಉದಾಸೀನತೆಯಿಂದ ಪ್ರತಿಕ್ರಿಯಿಸಿದರು.

"ಹಿಂದೆ... ಆಯಾಯ ಜಾತಿಗಳ ಶ್ರಮಜೀವಿಗಳಾದ ಸಾವಿರಾರು ಮಂದಿ ಬೇಸಾಯಗಾರರು ವರ್ಷಕ್ಕೊಮ್ಮೆ ನೀಡುತ್ತಿದ್ದ ಒಂದು ಪಡಿ ಅಕ್ಕಿ... ಒಂದು ಮೊರ ರಾಗಿ, ಒಂದು ಇಬ್ಬಳಿಗೆ ಬತ್ತದ ಸಂಗ್ರಹದಿಂದ ಅನ್ನದಾನಕ್ಕೆ ಅಗತ್ಯವಾದ ದಿನಸಿ ಮಠಗಳಿಗೆ ಬರ್ತಿತ್ತು. ಮಠಗಳಿಗೆ ಬರುತ್ತಿದ್ದ ಭಕ್ತರು ನೀಡಿದ ನಾಲ್ಕಾಣೆ ಎಂಟಾಣೆಗಳ ಅಲ್ಪ ಪ್ರಮಾಣದ ಕಾಣಿಕೆಯಿಂದ ಮಠಗಳ ವ್ಯವಹಾರಗಳು ಬಹಳ ಸರಳವಾಗಿ ನಡೆಯುತ್ತಿದ್ದವು. ಮಠಾಧಿಪತಿಗಳ ಬಳಿ ಯಾವುದೇ ವಿಧವಾದ ವೈಭವದ ವಸ್ತು ವಾಹನಗಳಿರಲಿಲ್ಲ" ಎಂದು ನಾನು ವಿವರಿಸುತ್ತಿದ್ದಾಗ–

"ಈಗ ಮಠಾಧಿಪತಿಗಳು ಕಾಂಟೆಸಾ ಕಾರಿನಲ್ಲಿ ತಿರುಗಾಡ್ತಾರೆ ಅಂತ್ಲೋ ನಿಮ್ಮ ಆಪಾದನೆ" ಎಂದು ವ್ಯಂಗ್ಯವಾಡಿದರು. ಅವರ ವ್ಯಂಗ್ಯದಿಂದ ನಾನು ವಿಚಲಿತನಾಗದೆ, ಮಾತನ್ನು ಮುಂದುವರಿಸಿದೆ–

"ಈಗ ಮಠಗಳು ಏನಾಗುತ್ತಿವೆ ಅನ್ನೋದನ್ನ ನಾವೆಲ್ಲಾ ನೋಡ್ತ ಇದ್ದೀವಿ... ಜಾತಿ, ಮತ, ಧರ್ಮಗಳ ಸಂಘಟನೆ ಮತ್ತು ಸಂಘರ್ಷಗಳಿಗೆ ಎಲ್ಲಾ ಮಠಗಳು ಪ್ರತ್ಯಕ್ಷವಾಗಿಯೇ ಕುಮ್ಮಕ್ಕನ್ನು ಕೊಡ್ತಿವೆ. ಇದರಿಂದ ಜನ ಸಮುದಾಯದ ಮನಸ್ಸಿನಲ್ಲಿ ನಾನಾ ಬಗೆಯ ಸಂಶಯದ ಭಾವನೆಗಳು ಕೆರಳುತ್ತಾ... ತಮ್ಮದಲ್ಲದ ಜಾತಿ, ಮತ, ಧರ್ಮ ಜನಗಳ ಬಗ್ಗೆ... ತೀವ್ರವಾದ ಅಸಹನೆಯ ಮತ್ತು ದ್ವೇಷದ ಕಿಡಿಗಳು ಎಲ್ಲರ ಮನದಲ್ಲೂ ಉರಿಯತೊಡಗಿವೆ... ಹಿಂದೆ ರಾಜ ಮಹಾರಾಜರು ಕಟ್ಟಿಸಿದ್ದ ಕಲ್ಲಿನ ಕೋಟೆಗಳು ಇವತ್ತು ಕುಸಿದಿವೆ. ಆದರೆ ಮಠಾಧಿಪತಿಗಳ ನೇತೃತ್ವದಲ್ಲಿ ಪ್ರತಿಯೊಂದು ಜಾತಿಯವರು ಕಟ್ಟಿಕೊಳ್ಳುತ್ತಿರುವ ಜಾತಿಯೆಂಬ ಕೋಟೆಗಳು ಜನಮನದಲ್ಲಿ ಸುಭದ್ರವಾಗಿ ಮೇಲೇಳುತ್ತಿವೆ... ಈ ಜಾತಿಯೆಂಬ ಕೋಟೆಗಳ ಒಳಗೆ ಆಯಾಯ ಜಾತಿಗೆ ಸೇರಿದ ಭ್ರಷ್ಟರು ಆಶ್ರಯ ಪಡೆದು ಆರಾಮವಾಗಿದ್ದಾರೆ... ಇವತ್ತು ಮಠಗಳು ಶಕ್ತಿ ರಾಜಕಾರಣದ ಕೇಂದ್ರಗಳಾಗಿ ರೂಪುಗೊಳ್ಳುತ್ತಿವೆ... ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು... ಈಗ

ನೀವೇ ಹೇಳಿ ...ಮಠಾಧಿಪತಿಗಳಲ್ಲಿ ಬಹುತೇಕ ಮಂದಿ ಒಂದು ಕೈನಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಾ... ಮತ್ತೊಂದು ಕೈನಿಂದ ಒಟ್ಟು ಜನ ಸಮುದಾಯದ ನೆಮ್ಮದಿಯ ಬದುಕಿಗೆ ಹಾನಿಯನ್ನುಂಟು ಮಾಡುವ ಕಾರ್ಯಗಳನ್ನು ಮಾಡ್ತಿಲ್ಲವೇ?" ಎಂದು ನನ್ನ ಅಭಿಪ್ರಾಯವನ್ನು ಸಾಕಷ್ಟು ಸುದೀರ್ಘವಾಗಿ ಮಂಡಿಸಿದೆ.


ಕೆಲವು ಕ್ಷಣಗಳ ಕಾಲ ನಮ್ಮಿಬ್ಬರ ನಡುವೆ ಮೌನ ನೆಲೆಸಿತು. ಅನಂತರ ಅವರು–

"ನೋಡಿ... ನೀವು ಹೇಳುವ ರೀತಿಯಲ್ಲಿ ಆಲೋಚನೆಯನ್ನು ಮಾಡುವುದಕ್ಕೆ ಹೊರಟರೆ... ಆಗ... ಮನುಷ್ಯರು ಕಟ್ಟಿಕೊಂಡಿರುವ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಶಾಲೆ, ನ್ಯಾಯಾಲಯ, ಭಾಷೆ... ಇವೆಲ್ಲದರಲ್ಲಿಯೂ ಇರುವ ಬಹುಬಗೆಯ ದ್ವಂದ್ವಗಳನ್ನ ನಾವು ಗುರುತಿಸಬೇಕಾಗುತ್ತೆ... ಹಾಗೆ ನೋಡಿದರೆ... ನಮ್ಮೆಲ್ಲರ ಬದುಕು ದ್ವಂದ್ವಗಳ ನಡುವೆಯೇ ನಡೀತಾಯಿದೆ... ಈ ದ್ವಂದ್ವಗಳನ್ನೆಲ್ಲಾ ದಾಟಿ... ನಾನು ಬರೆಯುತ್ತೇನೆ ಅಂದರೆ..... ಅದು ಸಾಧ್ಯವೇ?" ಎಂದು ಮರು ಪ್ರಶ್ನಿಸಿದರು.

"ದ್ವಂದ್ವಗಳನ್ನೆಲ್ಲಾ ಸಂಪೂರ್ಣವಾಗಿ ದಾಟುವುದಕ್ಕೆ ಸಾಧ್ಯವಾಗದೇ ಹೋದರೂ ...ದ್ವಂದ್ವಗಳ ನಡುವೆ ಇರುವ... ಜನ ವಿರೋಧಿ ಅಂಶಗಳನ್ನಾದರೂ ಲೇಖಕರು ಗ್ರಹಿಸಿಕೊಂಡು, ಸಾಮಾಜಿಕ ಸಂಸ್ಥೆಗಳ ಒಳಿತು ಕೆಡುಕಿನ ಮುಖಗಳೆಲ್ಲವನ್ನೂ ಲೇಖನಿಯ ಮೂಲಕ ಸಮಾಜಕ್ಕೆ ಕಾಣಿಸುವಂತೆ ಮಾಡಬೇಕು ಎನ್ನುವುದು ನನ್ನ ಅನಿಸಿಕೆ" ಎಂದಾಗ ...ವಿಷಾದದ ನಗೆಯನ್ನು ನನ್ನತ್ತ ಬೀರುತ್ತಾ... ತಮ್ಮ ಕವನದ ಹಸ್ತಪ್ರತಿಯನ್ನು ನನ್ನಿಂದ ಹಿಂದಕ್ಕೆ ಪಡೆದುಕೊಂಡರು.

⌘

ದೊಂಬನ ಕೊಡುಗೆ



"ಢಂ–ಢಂ–ಢಂ–ಢಂ" ಎಂಬ ದೊಂಬನ ಡೋಲಿನ ನಾದ ಹಳ್ಳಿಗರನ್ನು ಒಂದೆಡೆಗೆ ಸೆಳೆದಿತ್ತು. ಗ್ರಾಮದ ಮುಂದಿನ ಆದಿಲಕ್ಷ್ಮಿ ದೇವಾಲಯದ ಮುಂದೆ ಜಾತ್ರೆಯಂತೆ ಜನಸಮೂಹ ನೆರೆದಿತ್ತು. ಗುಂಪಿನ ನಡುವೆ ಬಗೆ ಬಗೆಯ ಚಮತ್ಕಾರಗಳನ್ನು ತೋರಿಸುತ್ತಿದ್ದ ದೊಂಬನ ಕೈಚಳಕಕ್ಕೆ ಮೆಚ್ಚಿದ ಹಳ್ಳಿಗರ ಹರ್ಷ ಹುಚ್ಚುಹೊಳೆಯಾಗಿತ್ತು. ಗ್ರಾಮದ ಪಟೇಲರಾದಿಯಾಗಿ ಗಂಡಸರು, ಹೆಂಗಸರು, ಮಕ್ಕಳೆಲ್ಲರೂ ಅವನ ಒಂದೊಂದು ಆಟಕ್ಕೂ ಚಪ್ಪಾಳೆ ತಟ್ಟುತ್ತಾ, ಕೇಕೆ ಹಾಕುತ್ತಾ, ಹರ್ಷದ ಹೊನಲಿನಲ್ಲಿ ಮಿಂದೇಳುತ್ತಿದ್ದರು. ಉದ್ವೇಗ, ಉತ್ಸಾಹ, ಆನಂದಗಳ ಸೆಲೆ ಚಿಮ್ಮಿಸುತ್ತಾ ಆಟಗಳನ್ನು ಹೂಡುತ್ತಿದ್ದ ದೊಂಬ, ಗ್ರಾಮದ ಮುಖ್ಯಸ್ಥರಾದ ಪಟೇಲರ ಮುಂದೆ ಬಂದು ನಿಂತು, ಡೋಲು ಬಾರಿಸುತ್ತಿದ್ದ ಹುಡುಗನ ಕಡೆಗೆ ಕಣ್ಸನ್ನೆ ಮಾಡಿದ. ಸನ್ನೆಯರಿತ ಆ ಬಾಲಕ "ನೋಡ್ರಿ, ನೋಡ್ರೀ,

ನೋಡ್ರೀ... ಎಲ್ರೂ ಒಂದ್ ಸತಿ ಚಪ್ಪಾಳೆ ತಟ್ರೀ" ಎಂದು ಕೂಗಿ ಹೇಳಿದ. ಅವನು ಹೇಳಿದ್ದೇ ತಡ ಬಾನೇ ಬಿರಿಯುವಂತೆ ಚಪ್ಪಾಳೆ ನಾದ ಕೇಳಿ ಬಂದಿತು.

ಅವರ ಗದ್ದಲ ನಿಲ್ಲುತ್ತಿದ್ದಂತೆಯೇ ಪಟೇಲರು ಎತ್ತರದ ಧ್ವನಿಯಲ್ಲಿ–

"ಏನ್ಲೇ? ನಿಂಗೇನು ಬೇಕು ಕೇಳ್ಲ? ಭೋ ಪಸಂದಾಗಿ ಮಾಡ್ತೀಯೇ ಕಣ್ಲೇ! ನಾವು ಹುಟ್ಟಿದ್ ತಾವಿಂದ ಇಂಥಾ ಇದ್ಯೆ ನೋಡಿರ್ಲ್ಲೂ ಇಲ್ಲ... ಕೇಳಿರ್ಲ್ಲೂ ಇಲ್ಲ ಕಣ್ಲ" ಎಂದ ಮೆಚ್ಚುಗೆಯನ್ನು ಸೂಚಿಸಿದರು. ಮತ್ತೆ ಚಪ್ಪಾಳೆಯ ಶಬ್ದ ಅನುರಣಿಸಿತು. ಡೋಲಿನವನು "ಸದ್ದು ಸದ್ದು...ಈಗ ಘನಭಾರಿ ಆಟ ಆಯ್ತದೆ ...ಸದ್ದು...ಸದ್ದು" ಎಂದು ಕೂಗುತ್ತಾ ಗುಂಪಿನ ಗುಜುಗುಜು ಶಬ್ದವನ್ನು ಹತೋಟಿಗೆ ತಂದ.

ಪಟೇಲರ ಮಾತಿಗೆ ಮುಗುಳ್ನಗುತ್ತಾ ದೊಂಬ ಉತ್ತರಿಸಿದ. "ನನ್ ಕುಲಕಸಬೇ ಇದಕನ್ ಸ್ವಾಮಿ. ತಾಯಿ ಕಣ್‌ಬುಟ್ಟು ನೋಡ್ತಿರುವತ್ಗೆ ನಾನೊಸಿ ಓಂಗ್ಮಾಡ್ತಾ, ಆಡ್ತಾ ಇವ್ನಿ". ದೊಂಬನ ವಿನಯವನ್ನು ಕಂಡು ಪಟೇಲರಿಗೆ ಬಹಳ ಖುಷಿಯಾಯಿತು. "ಒಪ್ಪಿದೇ ಕಣ್ಲಾ ದೊಂಬ. ಶಹಬ್ಬಾಸ್ ಕಲೆ! ಆಂಕಾರ ಅನ್ನೋದು ರವಷ್ಟಾದ್ರೂ ಇಲ್ವಲ್ಲೇ ನಿನಗೆ. ಅದೇನ್ ಬೇಕು ಕೇಳು ಕೊಡ್ತೀನಿ" ಎಂದು ಒತ್ತಾಯ ಮಾಡಿದರು.

"ಧಣೀರ... ನನ್ನದೊಂದು ಆಸೆ. ಈಗ ತೋರ್ಸಿದ್ದೆಲ್ಲಾ ನಮ್ಮ ಅಜ್ಜದೀರ್ ಕಾಲದಿಂದ ಮಾಡ್ತಿದ್ದ ಆಟ. ನಾನೇ ಕಲ್ತಿದ್ದು ಒಂದು ಆಟ ಅದಕನ್ ಸ್ವಾಮಿ. ಅದ ಮಾಡಿ ತೋರಿಸ್ತೀನಿ. ಅದ್ ನೋಡಿ ಸಂತೋಷಪಟ್ಟು... ನೀವೊಬ್ರೆ ಅಲ್ಲ... ಊರೋರೆಲ್ಲಾ ನಂಗೆ ಭೋಮಾನ ಕೊಡ್ಬೇಕು ಬುದ್ಧಿ". ಆಟ ನಿಂತಿದ್ದರಿಂದ ಜನರ ಮಾತುಕತೆ ಜೋರಾಗಿತ್ತು. ದೊಂಬನು ಹತ್ತಿರದಲ್ಲೇ ನಿಂತು ಮಾತಾಡುತ್ತಿದ್ದರೂ ಪಟೇಲರಿಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ. "ಎಕ್ಕುಟ್ಟೋದವ, ಸ್ವಲ್ಪ ಸುಮ್ನಿರ್ರೋ" ಎಂದು ದೊಂಬನ ಡೋಲಿನ ನಾದಕ್ಕಿಂತಲೂ ಗಟ್ಟಿಯಾಗಿ ಪಟೇಲರು ಆರ್ಭಟಿಸಿದರು. ಪಟೇಲರ ಸದ್ದು ಸ್ವಲ್ಪ ಕೆಲಸ ಮಾಡಿತು. ಆಟದ ಕುತೂಹಲ ಈಗ ಮಾತಿನ ಕಡೆಗೆ ತಿರುಗಿತು. ಎಲ್ಲರೂ ಆ ಕಡೆ ಗಮನ ಕೊಟ್ಟರು.

"ಅದೇನ್ ನಿನ್ನ ಮಾತು ಹೇಳ್ಲೋ" ಎಂದರು ಪಟೇಲರು. "ಏನಿಲ್ಲಾ ಕಣ್ರಪ್ಪಾ. ಈಗ ನಾನೊಂದು ಹೊಸ ಆಟ ಮಾಡ್ತೀನಿ. ಅದ್ ನೋಡಿ, ನೀವೆಲ್ಲಾ ದೊಡ್ಡ ಬೋಮಾನ ಕೊಡ್ಬೇಕು ಬುದ್ಧಿ".

"ಕೇಳ್ಲೇ, ಏನ್ ಬೇಕೋ ಅದ".

"ನೀವೊಬ್ರೆ ಕೊಟ್ರೆ ಆಗಲ್ತು ಬುದ್ಧಿ. ಊರೋರೆಲ್ಲಾ ಸೇರಿ ಕೊಡ್ಬೇಕು".

"ಏನ್ ಕೊಡ್ಬೇಕು ಅಂತ ಸರಿಯಾಗಿ ಒದರ್ಲೇ" ಎಂದು ಪಟೇಲರು ಸ್ವಲ್ಪ ಖಾರವಾದ ಧ್ವನಿಯಲ್ಲಿ ಹೇಳಿದರು. ಅವರಿಗೆ ಸ್ವಲ್ಪ ಕಿರಿಕಿರಿಯಾಗಿತ್ತು. ತನ್ನೊಬ್ಬನ ಕೈಲಾಗದೆ, ತನ್ನ ಸಿರಿಗೆ ಸವಾಲಾಗುವಂತೆ ಊರೋರೆಲ್ಲಾ ಸೇರಿ ಕೊಡುವಂತಹುದು ಏನಿರಬಹುದೆಂದು ಬಗೆ ಬಗೆಯಾಗಿ ಆಲೋಚಿಸುತ್ತಿದ್ದರು.

"ಸ್ವಾಮಿ, ಹೊತ್ತಾಯ್ತಾದೆ. ಹೊತ್ತು ಮುಳುಗೋದ್ರೊಳಗಾಗಿ ಎಲ್ಲಾ ಮುಗಿದೋಗ್ಲಿ. ನೋಡಿ ಬುದ್ಧಿ. ನೀವು ಊರ ಧಣಿ. ಊರಿನ ಪರವಾಗಿ ನೀವು ಭಾಷೆ ಕೊಡಿ ಬುದ್ಧಿ".

"ಏನಂತಾ ಭಾಷೆ ಕೊಡನ್ಲಾ? ಅದೇನ್ ನಿನ್ ಒಗಟ ಬಿಡ್ಸಿ ಹೇಳೋ".

ಸೇರಿದ್ದ ಜನ ಪಟೇಲ ಮತ್ತು ದೊಂಬನ ಸಂಭಾಷಣೆಯಲ್ಲಿ ಮಗ್ನರಾಗಿದ್ದರು. ಊರಿನ ಹುಲಿ ಪಟೇಲರು ಮಾತನಾಡುತ್ತಿರುವಾಗ ಮಧ್ಯೆ ಬಾಯಿ ಹಾಕುವ ಧೈರ್ಯ ಯಾರಿಗೂ ಇರಲಿಲ್ಲ. ದೊಂಬ ಮಾತು ಮುಂದುವರಿಸಿದ.

"ನೋಡಿ ಧಣೇರ, ನಾನೀಗ ಊರ ಮುಂದಿನ ಈ ಬಯಲಲ್ಲಿ ರೆಕ್ಕೆ ಕಟ್ಕೊಂಡು ಹಕ್ಕಿಯಂಗೆ ಹಾರ್ತೀನಿ. ಹಾರಿದಷ್ಟು ಭೂಮ್ತಾಯಿ ನನ್ನೋಳು ಅಂತ ಬುಟ್ ಬುಡ್ತೀರಾ?"

"ಏನ್ಲೇ ನೀ ಕೇಳೋದು?"

"ಅದೇಕನ್ ಸ್ವಾಮಿ. ನಾ ಹಾರಿದಷ್ಟು ಜಾಗ ನನ್ನದೂ ಅಂದೆ."

"ತಡೀಲಾ ಒಸಿಯಾ. ಊರ ಜನ ಕೇಳ್ತೀನಿ" ಎಂದು ಪಟೇಲರು ನೆರೆದಿದ್ದ ಮಂದಿಯ ಕಡೆಗೆ ತಿರುಗಿ–

"ಕೇಳಿಸ್ತೇನ್ರೋ ಇವ ಹೇಳಿದ್ದು. ಇವ ಹಾರ್ತಾನಂತೆ. ನಾವು ಊರೋರೆಲ್ಲಾ ಅಷ್ಟು ನೆಲವಾ ಅವನ್ಗೇ ಬುಟ್ ಬುಡಬೇಕಂತೆ! ಏನ್ರಲಾ ಇದ್ಕೆ ಹೇಳ್ಕಾ" ಎಂದರು.

"ಹ! ಹಾ! ಹಾ!!...." ಎಂದು ಉದ್ಗಾರವೆಳೆಯಿತು ಜನಸ್ತೋಮ. ಎಲ್ಲರೂ ತಲಾಗಿ ಒಂದೊಂದು ಮಾತನಾಡುತ್ತಿದ್ದರು. ಹಕ್ಕಿಯಂತೆ ಹಾರುವ ದೊಂಬನನ್ನು ನೋಡಲು ಎಲ್ಲರಿಗೂ ಆಸೆ. ಊರ ಮುಂದಿನ ಹೊಲಮಾಳದಲ್ಲಿ ಸುಮಾರಾಗಿ ಊರಿನವರಿಗೆಲ್ಲಾ ಅಷ್ಟೋ ಇಷ್ಟೋ ಜಮೀನಿತ್ತು. ಒಳ್ಳೇ ಫಲವತ್ತಾದ ಬಯಲು ಭೂಮಿ. ರಾಗಿ, ಆರಕ, ಸಾಮೆ, ಜೋಳ, ಅವರೆ, ತೊಗರಿ, ಕಡ್ಡಿಕಾಳು ಮೋಪಾಗಿ ಬೆಳೆಯುತ್ತಿದ್ದ ಜಾಗ. ಊರಿನವರಿಗೆ ಈಗ ಉಭಯ ಸಂಕಟಕ್ಕಿಟ್ಟುಕೊಂಡಿತು. ಇತ್ತ ಹಕ್ಕಿಯಾಗಿ ಹಾರುವ ದೊಂಬನನ್ನು ನೋಡುವ ಆಸೆ. ಅತ್ತ ಭೂಮಿಯ ಮೇಲೂ ಆಸೆ. ಒಂದು ವೇಳೆ ದೊಂಬ ಹೇಳಿದಂತೆ ಹಾರಿದರೆ, ಒಳ್ಳೆಯ ಹೊಲಮಾಳವೆಲ್ಲಾ

ಅವನಿಗೆ ಸೇರುತ್ತದಲ್ಲಾ ಎಂಬ ಭಯ. ದೊಂಬ ಮೌನದಿಂದಲೇ ನಿಂತಿದ್ದ. ಪಟೇಲರು ಗುಂಪಿನ ಕಡೆಗೆ ನೋಡುತ್ತಿದ್ದರು. ನೆರೆದ ಮಂದಿ ಪಿಸುಗುಡುತ್ತಿತ್ತು.

"ಏನ್ರಲೇ, ಏನ್ ಹೇಳ್ತಾ ಇವನ್ಗೆ ?"

ಊರ ಜನದ ಮನಸ್ಸು ಅತ್ತ ಇತ್ತ ಉಯ್ಯಾಲೆಯಾಡುತ್ತಿತ್ತು. ಕೆಲವರು ಘಾಟಿಗಳು ಪಟೇಲನಿಗೆ ಮೆಲ್ಲಗೆ ಸಲಹೆ ಕೊಟ್ಟರು–

"ಇವನು ಹಾರಿದಾಗ ತಾನೇ ನಾವು ಕೊಡೋದು. ಅವನು ಮೊದಲು ಹಾರ್‍ಲಿ. ಆಮೇಲೆ ನೋಡ್ಮಾ ಕೋಡೂದು ಬುಡೂದ". "ಯಾವೋನ್ಲಾ ಅವನು... ಅಂಥಾ ಅಡಕಸ್ಬಿ ಮಾತು ಆಡ್ತಾ ಇರೋನು" ಎಂದು ಪಟೇಲರು ಅಬ್ಬರಿಸುತ್ತಿದ್ದಂತೆಯೇ ಜನರ ಮಾತು ಅರ್ಧಕ್ಕೆ ನಿಂತಿತು. ದೊಂಬನ ಸವಾಲನ್ನು ಸ್ವೀಕರಿಸದೇ ಇದ್ದರೆ, ಅದು ಊರಿಗೆ ಮತ್ತು ತನ್ನ ಪಟೇಲಿಕೆಗೆ ಅವಮಾನವೆಂದು ಭಾವಿಸಿದ್ದ. ಮತ್ತೆ ಜನರ ಕಡೆಗೆ ನೋಡ ತೊಡಗಿದ.

"ಒಪ್ಪುರ್ಲಾ, ಇದು ಒಂದು ಕಥೆಯೇ ಆಗ್ಹೋಗ್ಲಿ! ಕೊಟ್ಟೇ ಬುಡವಾ" ಎಂದು ಯಾರೋ ಒಬ್ಬ ಗುಂಪಿನಲ್ಲಿ ಕೂಗಿದ. "ಗುಂಪಿನಲ್ಲಿ ಗೋವಿಂದ" ಎನ್ನುವಂತೆ ಜನ ಸಮೂಹ "ಹೋ" ಎಂದು ಕೂಗುತ್ತಾ ಒಪ್ಪಿಗೆ ಕೊಟ್ಟಿತು. ಅವರೆಲ್ಲರ ಕಣ್ಮನಗಳು ಹಕ್ಕಿಯಂತೆ ಹಾರುವ ದೊಂಬನಿಗಾಗಿ ಅರಸುತ್ತಿದ್ದವು. ಒಂದೆರಡು ಹೆಜ್ಜೆ ಮುಂದೆ ಬಂದು ಪಟೇಲರು ದೊಂಬನ ಕೈಯನ್ನು ಎತ್ತಿ ಹಿಡಿದು–

"ಊರಿನ ಪರವಾಗಿ ನಾ ಭಾಷೆ ಕೊಟ್ಟಿವ್ನಿ. ನೀ ಹಾರಿದಷ್ಟು ಭೂಮಿ ನಿಂಗೆ."

ಚಪ್ಪಾಳೆಯ ನಾದ ಗಗನ ಮುಟ್ಟಿತು.

ದೊಂಬ ಮೂಡಲ ಕಡೆ ತಿರುಗಿ ಭಕ್ತಿ ಭಾವದಿಂದ ಕಣ್ಮುಚ್ಚಿ ಏನನ್ನೋ ಸ್ಮರಿಸುತ್ತಾ ತುಟಿಯಲುಗಿಸಿದ. ಅನಂತರ ಮುಳುಗಲು ಸಾಗುತ್ತಿದ್ದ ಸೂರ್ಯನ ಕಡೆಗೆ ತಿರುಗಿ ನಮಸ್ಕರಿಸಿದ. ದೊಂಬನ ಮುಖದಲ್ಲಿ ಅತ್ಯಂತ ಗಾಂಭೀರ್ಯ ಭಾವ ನೆಲೆಗೊಂಡಿತ್ತು. "ಮಹತ್ತಾದ ಕಾರ್ಯವನ್ನು ಮಾಡಬಲ್ಲೆನು" ಎಂಬ ದೃಢ ಮನಸ್ಸೇ ಆತನ ಮುಖದಲ್ಲೊಂದು ವಿಶಿಷ್ಟ ಬಗೆಯ ಕಾಂತಿ ಹೊರಹೊಮ್ಮುವಂತೆ ಮಾಡಿತ್ತು.

ಒಂದು ಬಾರಿ ಗುಂಪಿನ ಸುತ್ತ ಕೈ ಮುಗಿದು ಬಂದ. ಗುಂಪಿನ ಮಧ್ಯೆ ದಾರಿ ಮಾಡಿಕೊಂಡು ಆದಿಲಕ್ಷ್ಮಿ ಗುಡಿಯ ಎಡ ಮಗ್ಗುಲಲ್ಲಿದ್ದ ವಿಸ್ತಾರವಾದ ಹೊಲಮಾಳದ ಕಡೆಗೆ ಅಡಿಯಿಟ್ಟ. ಒಂದು ಬಿದಿರಿನ ಪುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು, ಯಾಂತ್ರಿಕವಾಗಿ ಡೋಲು ಬಾರಿಸುತ್ತಾ ಹಿಂದೆ ಸಾಗಿದ ಡೋಲಿನ ಬಾಲಕ. ಪಟೇಲರು

ಅವನನ್ನು ಅನುಸರಿಸಿದರು. ಊರಿಗೇ ಊರೇ ಪಟೇಲರ ಹಿಂದೆ ಸಾಗಿತು. ಅಲ್ಲಲ್ಲಿ ಒಂದೊಂದು ಮಾತು ಕೇಳಿ ಬರುತ್ತಿತ್ತು. ಎಲ್ಲರ ಎದೆಯಲ್ಲೂ ಕುತೂಹಲ ತಾಂಡವವಾಡುತ್ತಿತ್ತು. ಹೊಲಮಾಳಕ್ಕೆ ಪ್ರವೇಶಿಸುತ್ತಿದ್ದಂತೆಯೇ ಮೂಡಲ ತುದಿಯಲಿ ಒಂದು ಚಿಕ್ಕ ಹಾಸುಬಂಡೆಯಿದೆ. ಅದರ ಬಳಿಗೆ ದೊಂಬ ಬಂದು ನಿಂತ. ತಲೆಯ ಮೇಲಿದ್ದ ಬುಟ್ಟಿಯನ್ನು ದೊಂಬನ ಮುಂದೆ ಇಳಿಸಿ, ಪಕ್ಕಕ್ಕೆ ಸರಿದು ಡೋಲಿನ ಬಾಲಕ ಮಂದಗತಿಯಲ್ಲಿ ಡೋಲನ್ನು ನುಡಿಸುತ್ತಿದ್ದ. ಜನ ಸುತ್ತುಗಟ್ಟಿತ್ತು. ಪುಟ್ಟಿಗೆ ಕೈಹಾಕಿ ದೊಂಬ ಒಂದು ಮೊರವನ್ನು ಮತ್ತು ಒಂದು ಬರಲನ್ನು ಹೊರಕ್ಕೆ ತೆಗೆದ. ಅಚ್ಚರಿಯ ಸಾವಿರಾರು ಕಣ್ಣುಗಳು ದೊಂಬನ ಮೈಯನ್ನೇ ದಿಟ್ಟಿಸುತ್ತಿದ್ದವು. ಎಡಗೈಗೆ ತಾನೇ ಬರಲನ್ನು ಬಿಗಿದುಕೊಂಡ. ಬಲಗೈಗೆ ಪಟೇಲರ ಸಹಾಯದಿಂದ ಮೊರವನ್ನು ಕಟ್ಟಿಸಿಕೊಂಡ. ಪಟೇಲರಿಗೆ ಏನಾಯಿತೋ ಏನೋ ದೊಂಬನಿಗೆ ಕೈಮುಗಿದರು. ಜನರೆಲ್ಲಾ "ದೊಂಬನಿಗೆ ಉಘೇ ಉಘೇ...." ಎಂದು ಜಯಘೋಷ ಮಾಡಿದರು.

ದೊಂಬ ಏನನ್ನೋ ಸ್ಮರಿಸುತ್ತಾ, ಅತಿ ನಿಧಾನವಾಗಿ ಹಾಸುಬಂಡೆಯ ಮೇಲೆ ಹೋಗಿ ನಿಂತ. ಬರಲು ಮತ್ತು ಮೊರದಿಂದ ಕೂಡಿದ್ದ ಕೈಗಳನ್ನು ಮೇಲಕ್ಕೆ ಎತ್ತಿದ. ಜನರೆಲ್ಲರಿಗೂ ಉಸಿರು ಕಟ್ಟಿದಂತಾಯಿತು. ಡೋಲಿನ ಬಾಲಕ ಹುಚ್ಚನಂತೆ ಡೋಲನ್ನು ಬಡಿಯಲಾರಂಭಿಸಿದ. ಡೋಲಿನ ಶಬ್ದವನ್ನು ಬಿಟ್ಟು, ಉಳಿದಾವ ಶಬ್ದವೂ ಇರಲಿಲ್ಲ.

"ಜೈ ತಾಯೀ ೀ ೀ ೀ ೀ ೀ ೀ ...." ಎಂದು ಕೂಗಿದವನೇ, ಮೊರ ಮತ್ತು ಬರಲಿನಿಂದ ಕೂಡಿದ ಕೈಗಳನ್ನು ರೆಕ್ಕೆಯಂತೆ ಬಡಿಯುತ್ತಾ, ಬಾನ ಕಡೆಗೆ ಹಾರಿದ. ಮೇಲೆ ಮೇಲೆ ಹಾರುತ್ತಾ, ಮುಂದೆ ಮುಂದೆ ಸಾಗಿದಂತೆಲ್ಲಾ ಓಡುವ ಶಕ್ತಿಯಿದ್ದ ಜನರೆಲ್ಲಾ "ಉಘೇ ಉಘೇ ಉಘೇ" ಎನ್ನುತ್ತಾ ಹೊಲಮಾಳದಲ್ಲಿ ಓಡುತ್ತಿದ್ದರು.

ಆಕಾಶದಲ್ಲೇ ಸುಮಾರು ದೂರ ಉತ್ತರದ ಕಡೆಗೆ ಹಾರಿ, ಅಲ್ಲಿದ್ದ ಕೆರೆಯ ಕೋಡಿಯ ಬಳಿ ಇಳಿದ. ಜನ ಓಡಿ ಬಂದು ಮುತ್ತಿಕೊಳ್ಳುವಷ್ಟರಲ್ಲಿ ಮತ್ತೆ ಮೇಲೆ ಹಾರಿದ. ನೈರುತ್ಯ ದಿಕ್ಕಿನ ಕಡೆಗೆ ನೇರವಾಗಿ ಹಾರಿ ಬಂದ. ಅಲ್ಲಿದ್ದ ಇಪ್ಪೆ ತೋಪೊಂದರ ಬಳಿ ಇಳಿದ. ಓಡೋಡಿ ಸುಸ್ತಾಗಿದ್ದ ಜನಸಮೂಹ ಮಾಳದಲ್ಲೆಲ್ಲಾ ಚದುರಿ ಹೋಗಿತ್ತು. ಪಟೇಲರು ಮಾತ್ರ ಬಂಡೆಯ ಬಳಿ ಮೂಕರಾಗಿ ನಿಂತಿದ್ದರು. ಮುದುಕರು, ಮೋಟರು, ಹೆಂಗಸರು, ಕೈಲಾಗದವರು ಈ ಸೋಜಿಗವನ್ನು ನೋಡುತ್ತಾ ಪಟೇಲರ ಬಳಿ ನಿಂತಿದ್ದರು.

ಇಪ್ಪೆ ತೋಪಿನ ಬಳಿಗೆ ಜನ ಬರುವುದಕ್ಕೆ ಮುನ್ನವೇ ಅಲ್ಲಿಂದ ಮೇಲೆ ಹಾರಿದ. ದೊಂಬನು ಹಾಸು ಬಂಡೆಯ ಬಳಿಗೆ ಹಾರಿ ಬರುತ್ತಲಿದ್ದ. ಜನರು ಒಬ್ಬರ ಮೇಲೊಬ್ಬರು ಬಿದ್ದು ಬಂಡೆಯ ಬಳಿಗೆ ಓಡಿ ಬರಲಾರಂಭಿಸಿದರು. ದೊಂಬ ಬಂಡೆಯನ್ನು

ಸಮೀಪಿಸುತ್ತಿದ್ದಂತೆಯೇ, ಕೈಗೆ ಕಟ್ಟಿದ್ದ ಮೊರ ಇದ್ದಕ್ಕಿದ್ದಂತೆ ಕಳಚಿ ಬಿದ್ದಿತು. ದೊಂಬ ಆಯತಪ್ಪಿದಂತೆ ಮಗ್ಗುಲಾದ. ಬರಲನ್ನು ಕಟ್ಟಿಕೊಂಡಿದ್ದ ಕೈಯನ್ನು ಬಲವಾಗಿ ಗಾಳಿಮಾರ್ಗದಲ್ಲಿ ಬೀಸಿದ. ಬಂಡೆಯ ಮೇಲೆ ಹಕ್ಕಿಯಂತೆ ಬಂದು ಇಳಿಯಲಾಗದೆ ಧೊಪ್ಪೆಂದು ಬಾನಿನಿಂದ ಬಂಡೆಯ ಮೇಲೆ ಅಪ್ಪಳಿಸಲ್ಪಟ್ಟ. ದೇಹ ಮುದ್ದೆಯಾಯಿತು. ಬಂಡೆ ಕೆಂಪಾಯಿತು. ಮಿಲಮಿಲನೆ ಒದ್ದಾಡಿ ದೊಂಬ ಪ್ರಾಣಬಿಟ್ಟ.

"ಅಯ್ಯೋ... ಅಯ್ಯೋ... ಅಯ್ಯೋ ‍‌‍೯ ೯...." ಎಂಬ ಜನರ ಕೂಗು ಮುಗಿಲನ್ನು ಮುಟ್ಟಿತ್ತು. ಮೊರವನ್ನು ತನ್ನ ಕೈಯಾರೆ ಕಟ್ಟಿದ್ದ ಪಟೇಲರು ಬಾಯಿ ಬಡಿದುಕೊಳ್ಳುತ್ತಿದ್ದರು. ಡೋಲು ಬಾರಿಸುತ್ತಿದ್ದ ಹುಡುಗ ನೆಲದ ಮೇಲೆ ಉರುಳಿ ಬಿದ್ದುದ್ದನ್ನು ಯಾರೂ ಗಮನಿಸಲೇ ಇಲ್ಲ.

ಈ ಮೇಲ್ಕಂಡ ಘಟನೆಯು ಎಂದೋ ಒಂದು ಕಾಲದಲ್ಲಿ ಭೈರಾಪಟ್ಟಣ ಎಂಬ ಗ್ರಾಮದಲ್ಲಿ ನಡೆಯಿತಂತೆ. ಬೆಂಗಳೂರು ಮೈಸೂರಿನ ಹೆದ್ದಾರಿಯಲ್ಲಿ ಚನ್ನಪಟ್ಟಣದ ಬಳಿಯಲ್ಲಿ ಈ ಗ್ರಾಮವಿದೆ. ದೊಂಬ ಹಾರಿದ್ದಷ್ಟು ಭೂಮಿಯನ್ನು ಗ್ರಾಮಸ್ಥರು ತಾವು ಕೊಟ್ಟ ಭಾಷೆಯಂತೆ ಅವನ ಹೆಸರಿನಲ್ಲಿ ಕೊಡುಗೆಯಾಗಿ ಕೊಟ್ಟರಂತೆ. ಅಂದಿನಿಂದ ದೊಂಬ ಹಾರಿದ ಜಾಗಕ್ಕೆ "ದೊಂಬನ ಕೊಡುಗೆ" ಎಂಬ ಹೆಸರು ಬಂದಿದೆಯೆಂದು ಆ ಗ್ರಾಮದ ಜನ ಹೇಳುತ್ತಾರೆ.

ಆ ಗ್ರಾಮದ ಅತ್ಯಂತ ವೃದ್ಧರೂ ಕೂಡ "ಇದು ನಮ್ಮ ಪೂರ್ವಿಕರ ಕಾಲದಲ್ಲಿ ನಡೆದಿದ್ದು" ಎಂದು ಹೇಳುತ್ತಾರೆ. "ಭೈರಾಪಟ್ಟಣವನ್ನು ಭೈರೋಜಿ ಎಂಬ ದೊರೆ ಆಳುತ್ತಿದ್ದ. ಅಂದಿನಿಂದ ನಮ್ಮ ಗ್ರಾಮಕ್ಕೆ ಭೈರೋಜಿಪಟ್ಟಣ ಎಂಬ ಹೆಸರು ಬಂದಿತು. ಕಾಲಕ್ರಮೇಣ ಅದೇ ಭೈರಾಪಟ್ಟಣವಾಗಿದೆ. ಆ ದೊರೆಯ ಕಾಲದಲ್ಲಿ ಈ ಘಟನೆ ನಡೆದಿರಬಹುದು" ಎಂದು ಹಲವು ಮಂದಿ ಊಹಿಸುತ್ತಾರೆ. ಆದರೆ ಭೈರೋಜಿ ಆಳುತ್ತಿದ್ದ ಕಾಲ ಯಾವುದೆಂದು ಯಾರಿಗೂ ಗೊತ್ತಿಲ್ಲ. ಈ ಘಟನೆ ದಂತಕಥೆಯಾಗಿ ತಲೆಮಾರಿನಿಂದ ತಲೆಮಾರಿಗೆ ಬಂದಿದೆ. ದೊಂಬನು ಮೂರು ಮೂಲೆಯಾಗಿ (ತ್ರಿಕೋನಾಕಾರವಾಗಿ) ಹಾರಿದ್ದರಿಂದ, ಅವನು ಹಾರಿ ಸಾಗಿದ ಸ್ಥಳದಲ್ಲಿ ಯಾವ ಬೆಳೆಯು ಆಗುತ್ತಲೇ ಇರಲಿಲ್ಲವೆಂಬ ನಂಬಿಕೆ, ಆ ಗ್ರಾಮಸ್ಥರಲ್ಲಿತ್ತು. ಒಂದು ವೇಳೆ ಅಕ್ಕಪಕ್ಕದ ಹೊಲದವರು ಒತ್ತರಿಸಿಕೊಂಡು ಬೆಳೆಯೊಡ್ಡಿದರೆ, ಆ ಪೈರು ಮೊಳಕೆಯಲ್ಲಿ ಸೀದುಹೋಗುತ್ತಿತ್ತು ಮತ್ತು ಆ ರೀತಿ ಪ್ರಯತ್ನಿಸಿದವರ ಮನೆಯವರು ರಕ್ತ ಕಾರಿಕೊಂಡು ಸಾಯುತ್ತಿದ್ದರಂತೆ.

ಇಂತಹ ಅಚಲವಾದ ನಂಬಿಕೆಯಿಂದಿದ್ದ ಆ ಗ್ರಾಮಸ್ಥರು ಸುಮಾರು ನೂರ ಪತ್ತು ಎಕರೆಯಷ್ಟು ವಿಸ್ತಾರವಾದ 'ದೊಂಬನ ಕೊಡುಗೆ'ಯ ಪ್ರದೇಶವನ್ನು ತಲೆತಲಾಂತರಗಳಿಂದ ಉಳುಮೆ ಮಾಡದೆ ಬಿಟ್ಟುಬಿಟ್ಟಿದರು. ದನಗಳ ಹುಲ್ಲಿಗಾಗಿ, ಹೆಣಗಳನ್ನು ಹೂಳುವ ಜಾಗಕ್ಕಾಗಿ ಮತ್ತು ಮನೆಗಳನ್ನು ಕಟ್ಟುವ ಮಣ್ಣಿಗಾಗಿ ಆ ಪ್ರದೇಶವನ್ನು ಗ್ರಾಮದ ಬಡವ ಬಲ್ಲಿದರೆಲ್ಲರೂ ಉಪಯೋಗಿಸಿಕೊಳ್ಳುತ್ತಿದ್ದರು. ಭೂಮಿಯನ್ನು ತಾನು ಪಡೆದರೂ, ಊರಿನ ಎಲ್ಲರ ಉಪಯೋಗಕ್ಕಾಗಿ ಬಿಟ್ಟು ಹೋದ ಮಹಾಪುರುಷನೆಂದೇ ಗ್ರಾಮಸ್ಥರು ನಂಬಿದ್ದರು. ಈ ರೀತಿ ಆ ಗ್ರಾಮದ ಸುತ್ತಮುತ್ತಲ ಜನಮನದಲ್ಲಿ ದೊಂಬನು ಪವಾಡ ಪುರುಷನಾಗಿ ಬಹುಕಾಲದಿಂದಲೂ ಉಳಿದುಬಂದಿದ್ದ. 1968ನೆಯ ಇಸವಿಯವರೆಗೂ ದೊಂಬನ ಕೊಡುಗೆಯ ಪ್ರದೇಶ ಬಟ್ಟಬಯಲಾಗಿಯೇ ಉಳಿದಿತ್ತು.

1968ನೆಯ ಇಸವಿಯಲ್ಲಿ ತೋಟಗಾರಿಕೆ ಇಲಾಖೆಯವರು ನಲವತ್ತು ಎಕರೆ ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸಪೋಟ, ಸೀಬೆ, ಫರಂಗಿ ತೆಂಗು ಮುಂತಾದ ನಾನಾ ಬಗೆಯ ಸಸಿಗಳನ್ನು ನೆಟ್ಟು ದೊಂಬನ ಕೊಡುಗೆಯ ಪ್ರದೇಶದಲ್ಲಿ ಹಚ್ಚಹಸಿರಿನ ಸಿರಿಯು ಹೊರ ಹೊಮ್ಮುವಂತೆ ಮಾಡಿದ್ದಾರೆ. ಆ ಪ್ರದೇಶದ ಬಗೆಗೆ ಬಹುಕಾಲದಿಂದ ಬೇರೂರಿದ್ದ ಜನಮನದ ನಂಬಿಕೆ ಇಂದು ಸುಳ್ಳಾಗಿದೆ. ಇನ್ನುಳಿದ ಭೂಮಿಯಲ್ಲಿ ಹೆಚ್ಚಿನ ಭಾಗವನ್ನು 'ಬಡವರ ನಿವೇಶನ'ಗಳಿಗಾಗಿ ಸರ್ಕಾರ ಉಪಯೋಗಿಸಿಕೊಂಡಿದೆ. ದೊಂಬನ ಕೊಡುಗೆಯ ವಿಸ್ತಾರವಾದ ಪ್ರದೇಶ ಈಗಲೂ ಬಹು ಉಪಯೋಗಿಯಾಗಿ ತನ್ನನ್ನು ಸಾರ್ವಜನಿಕ ಕಾರ್ಯಕ್ಕಾಗಿ ಅರ್ಪಿಸಿಕೊಂಡಿದೆ.

ದೊಂಬನ ಸಾಹಸವನ್ನು ಚಿರಸ್ಥಾಯಿಗೊಳಿಸಲು ಬಹಳ ಹಿಂದೆಯೇ ಆತನಿಗೊಂದು ಸ್ಮಾರಕ ಮಂಟಪವನ್ನು ಕಟ್ಟಲಾಗಿದೆ. ಆತ ಬಿದ್ದು ಪ್ರಾಣ ಬಿಟ್ಟ ಚಿಕ್ಕ ಹಾಸುಬಂಡೆಯ ಮೇಲೆ ಮೂರು ಚಿಕ್ಕ ಗುಳಿಗಳಿವೆ. ದೊಂಬ ಬಿದ್ದ ರಭಸಕ್ಕೆ ಆದ ಆತನ ಎರಡು ಕೈಗಳ ಮತ್ತು ಒಂದು ಮಂಡಿಯ ಗುರುತೆಂದು ಅಲ್ಲಿನ ಜನ ನಂಬಿದ್ದಾರೆ. ಗೋರಿಯ ಮುಂದೆ ಒಂದು ಚಿಕ್ಕ ತುಳಸಿಕಟ್ಟೆಯಿದೆ. ದೊಂಬನ ಪ್ರದೇಶ ಇಂದು ಪವಾಡದ ಭೂಮಿಕೆಯಾಗಿಲ್ಲದಿದ್ದರೂ, ದೊಂಬನ ಗೋರಿಯ ಮೇಲೆ ಪ್ರತಿನಿತ್ಯ ಸಾಯಂಕಾಲ ಹಣತೆಯನ್ನು ಬೆಳಗಿಸುತ್ತಾ, ಗ್ರಾಮದ ಜನತೆ ಭಕ್ತಿ ಭಾವದಿಂದ ನಮಿಸುತ್ತಲೇ ಇದ್ದಾರೆ.

⌘

ಮಾತಿಲ್ಲ... ಕತೆಯಿಲ್ಲ



ಕಳೆದ ಹಲವಾರು ವರ್ಷಗಳಲ್ಲಿ ನಡೆದ ಮೂರು ಪ್ರಸಂಗಗಳನ್ನು ಇಲ್ಲಿ ಹೇಳುತ್ತಿದ್ದೇನೆ.

ಪ್ರಸಂಗ–1

ಒಂದು ದಿನ ಬೆಳ್ಳಂಬೆಳಗ್ಗೆ ಕಾಳಮುದ್ದನ ದೊಡ್ಡಿಯಿಂದ ಮಂಡ್ಯಕ್ಕೆ ಹೋಗಲೆಂದು ಬಸ್ಸುಗಳು ನಿಲ್ಲುವ ಜಾಗದ ರಸ್ತೆ ಬದಿಗೆ ಬಂದು ನಿಂತೆನು. ದೊಡ್ಡದಾಗಿದ್ದ ಆ ಜಾಗದಲ್ಲಿ ನಾಲ್ಕೈದು ಗೂಡೆಗಳನ್ನು ಇಟ್ಟುಕೊಂಡು ಒಬ್ಬ ರೈತ ಕುಳಿತಿದ್ದ. ಅವನ ಬಳಿಗೆ ಬಂದ ವ್ಯಾಪಾರಿಯೊಬ್ಬ ಅವನನ್ನು ಕುರಿತು– "ಯಾವೂರಯ್ಯ?" ಎಂದ.

"ಕಳ್ಳಿಮೆಳೆ ದೊಡ್ಡಿ ಕಣ್ ಬಾಪ್ಪ."

"ಟೆಂಬಟೆ ಇಲ್ಲೇ ಮಾರ್ತೀಯೋ.... ಇಲ್ಲ ಮಂಡ್ಯದ ಮಾರ್ಕೆಟ್ಟಿಗೋ?"

"ಸರಿಯಾದ ರೇಟ್ ಬಂದ್ರೆ ಇಲ್ಲೇ ಕೊಡ್ಡೀನಿ. ಇಲ್ದೇದ್ರೆ ಮಂಡ್ಯಕ್ಕೆ ಹೊಯ್ತಿನಿ."

"ಹಂಗಾದ್ರೆ ಅದೇನ್ ಒಂದ್ ರೇಟ್ ಹೇಳು ಮತ್ತೆ." ರೈತನು ತಾನು ಬೆಳೆದ ಟೊಮೊಟೊ ಹಣ್ಣನ್ನು ಮಾರಲೆಂದು ಹಳ್ಳಿಯಿಂದ ಬಂದಿದ್ದ. ಈಗ ತನ್ನ ಗೂಡೆಗಳ ಕಡೆಗೆ ಮತ್ತೊಮ್ಮೆ ನೋಡಿ–

"ಹಣ್ಣು ತುಂಬಾ ಚೆಂದಾಗವೆ. ಒಂದ್ಸತಿ ನೀನು ನೋಡು. ಆಮ್ಯಾಲೆ ರೇಟ್ ಹೇಳ್ತೀನಿ."

"ನೋಡೋದೇನ.... ಮ್ಯಾಲೆಯೇ ಕಾಣ್ತಾವಲ್ಲ."

"ನಿಂಗೆ ಎಷ್ಟು ಗೂಡೆ ಬೇಕು?"

"ಎಲ್ಲಾನು ಸೇರ್ಸೆ ರೇಟ್ ಹೇಳಯ್ಯ."

ಈಗ ರೈತ ಒಂದೆರಡು ಗಳಿಗೆ ಮನಸ್ಸಿನಲ್ಲಿಯೇ ಅಳೆದು ತೂಗಿ ಒಂದು ಮೊತ್ತವನ್ನು ಹೇಳಿದ. ಇದನ್ನು ಕೇಳಕೇಳುತ್ತಿದ್ದಂತೆಯೇ ವ್ಯಾಪಾರಿಯು–

"ಓಹೊಹೋ.... ಏನು ತೆಂಗಿನ ಮರದ ಮ್ಯಾಲೆ ಕುಂತಿದ್ದೀಯೆ?"

"ನಾನೆಲ್ಲಾದ್ರೂ ಕುಂತಿರ್ಲಿ.... ನೀನೊಂದು ರೇಟ್ ಕೇಳೋ ಮಾರಾಯ."

"ಏ...ನಿನ್ನ ಜೊತೇಲಿ ಯಾಪಾರ ಮಾಡೋಕಾಗೋದಿಲ್ಲ ಬುಡಪ್ಪ. ರೇಟ್ ಹೇಳಿ ಏನು ಪ್ರಯೋಜನ?"

"ಇಲ್ಲ ಕಣ್ ಕೇಳಯ್ಯ. ಕೇಳೂಕೇನು ಕಷ್ಟ ನಾನೇನು ನೀ ಕೇಳ್ದಷ್ಟಕ್ಕೆ ಕೊಟ್ಟುಬಿಟ್ಟನೆ?"

ಈಗ ವ್ಯಾಪಾರಿಯು ಹಣ್ಣಿನ ಗೂಡೆಗಳ ಹತ್ತಿರ ಬಂದು, ಒಂದೆರಡು ಹಣ್ಣನ್ನು ಮತ್ತೊಮ್ಮೆ ನೋಡಿ, ಒಂದು ಮೊತ್ತವನ್ನು ಹೇಳಿದ. ಕೂಡಲೇ ರೈತ–

"ನೀನು ಐನಾತಿ ಕುಳವೇ ಬುಡು."

"ಯಾಕಯ್ಯ?"

"ಇನ್ನೇನ್ ಮಂತೆ. ನೀನು ತೆಂಗಿನ ಬುಡುತ್ತಾವು ಕುಳಿತಿದ್ದೀಯಲ್ಲ!"

ಈಗ ಅವರಿಬ್ಬರ ಚೌಕಾಶಿ ವ್ಯಾಪಾರಕ್ಕೆ ತೆಂಗಿನ ಮರದ ಬುಡ ಮತ್ತು ತುದಿಗಳು ಎರಡು ನೆಲೆಗಳಾಗಿದ್ದವು. ಮಾತು ಹಾಗೆ ಮುಂದುವರಿದಂತೆಲ್ಲಾ

ನಡುನಡುವೆ ಅವರಿಬ್ಬರೂ ಒಂದೊಂದು ಮೊತ್ತವನ್ನು ಹೇಳುತ್ತಿದ್ದರು. ಮೊತ್ತವನ್ನು ಸೂಚಿಸುತ್ತಿದ್ದಂತೆಯೇ –

"ನೀನೊಸಿ ಮ್ಯಾಕ್ ಬಾ."

"ನೀನೊಸಿ ಇಳಿದು ಬಾ ಕೆಳಕ್ಕೆ."

"ಇನ್ನೆಷ್ಟು ಅಂತ ಇಳಿದೀಯೆ? ಇನ್ನೂ ಕಮ್ಮಿಯಾಗಿ ಕೊಟ್ರೆ ಏನ್ ಸಿಕ್ಕದು ನಂಗೆ? ನಮ್ಮ ರೈತರ ನೋವು ನಿಂಗೆ ಹೆಂಗಪ್ಪ ಗೊತ್ತಾದದು? ಈ ಬೇಸ್ಗೇಲಿ ಟೆಂಬಟೆ ಬೆಳೀಬೇಕಾದ್ರೆ ಎಷ್ಟು ಕಷ್ಟ ಗೊತ್ತೆ ? ಹಾಳಾದ್ ಕರೆಂಟ್ ಬ್ಯಾರೆ ಸರಿಯಾದ ಟೇಮಲ್ಲಿ ಕೈಕೊಡ್ತದೆ..... ಬರಬಾರದ್ದು ರೋಗ ಹಣ್ಣಿಗೆ ಬತ್ತದೆ. ಅಂಥಾದ್ದರಲ್ಲಿ ಇಷ್ಟು ಕಮ್ಮಿಯಾಗಿ ಕೇಳ್ತಾಯಿದ್ದೀಯಲ್ಲ ನ್ಯಾಯವೇನಯ್ಯ?"

"ನಾನೇನ್ ನಿನ್ನ ಹಣ್ ತಕೊಂಡ್ಬುಟ್ಟು ಕುಬೇರ ಆಗ್ಬುಟ್ಟನೆ! ನಾನು ತಳ್ಳುಗಾಡಿ ಮೇಲೆ ತರಕಾರಿ ಇಟ್ಕೊಂಡು ಬಿಸ್ಲು ಮಳೆ ಅನ್ನದೇ ಸಂಜೆ ತನಕ ಊರೆಲ್ಲಾ ತಿರುಗುದ್ರೆ ತಾನೆ ನಂಗೂ ಜೀವನ ಮಾಡೋಕೆ ಮೂರ್ಕಾಸು ಸಿಗೂದು."

"ಓ, ಏನೋ.... ಒಬ್ಬೊಬ್ಬರದು ಒಂದೊಂದು ಹೊಡ್ಬಾಳು ಬುಡಪ್ಪ." ಎಂದು ನಿಟ್ಟುಸಿರು ಬಿಡುತ್ತ ರೈತನು ಈಗ ಒಂದು ಮೊತ್ತವನ್ನು ಹೇಳಿದ. ಮತ್ತೆ ಒಂದೆರಡು ಬಾರಿ ಚೌಕಾಶಿ ನಡೆದು, ವ್ಯಾಪಾರಿಯು ರೈತನಿಂದ ಹಣ್ಣನ್ನು ಕೊಂಡುಕೊಂಡನು. ಹಣ್ಣಿನ ವ್ಯಾಪಾರ ಮುಗಿದು ಅವರಿಬ್ಬರು ಅಲ್ಲಿಂದ ಹೋದರೂ, ನಾನು ಮಾತ್ರ ಅಲ್ಲೇ ಬರಲಿರುವ ಬಸ್ಸಿಗಾಗಿ ಕಾಯುತ್ತ ನಿಂತಿದ್ದೆ.

ಪ್ರಸಂಗ–2

ಒಂದು ದಿನ ಸಂಜೆ ವೇಳೆ ನನ್ನ ಹೆಂಡತಿ ಗಾಯತ್ರಿ ಮತ್ತು ಮಗನೊಡನೆ ಕಾಳಮುದ್ದನ ದೊಡ್ಡಿಯ ಪೇಟೆ ಬೀದಿಗೆ ಹೋದೆನು. ಬೀದಿ ಬದಿಯಲ್ಲಿ ಅನೇಕ ಹೆಂಗಸರು ಹಣ್ಣು ತರಕಾರಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು. ಅಲ್ಲಿ ಒಂದು ಎಡೆಯಲ್ಲಿ ನಿಂತುಕೊಂಡು ನನ್ನ ಹೆಂಡತಿ ಒಂದು ಪರಂಗಿ ಹಣ್ಣನ್ನು ತೋರಿಸುತ್ತಾ, ಅದರ ರೇಟನ್ನು ಕೇಳಿದಳು.

"ಎರಡು ರೂಪಾಯಿ ಆಯ್ತದೆ ಕನವ್ವ."

"ಏನಮ್ಮ, ಅಷ್ಟು ಸಣ್ಣದ್ದಕ್ಕೆ ಎರಡು ರೂಪಾಯ!"


"ನಿಮಗೆ ನಾನು ಹೇಳಿರೂದು ಕಮ್ಮಿ. ಇಂತದ ಬೇರೆ ಕಡೆ ನಾಲ್ಕು ರೂಪಾಯಿಲ್ದೆ ಕೊಡೂದಿಲ್ಲ."

ನನ್ನ ಹೆಂಡತಿ ಮತ್ತು ತರಕಾರಿ ಅಮ್ಮನ ನಡುವೆ ಚೌಕಾಶಿ ವ್ಯಾಪಾರ ಮುಂದುವರಿಯುತ್ತಿದ್ದಾಗ ಅಯ್ದು ವರ್ಷದ ನನ್ನ ಮಗ ಅಲ್ಲಿ ಜೋಡಿಸಿಟ್ಟಿದ್ದ ಒಂದೆರಡು ಹಣ್ಣುಗಳನ್ನು ಕೈಯಿಂದ ಮುಟ್ಟಿ ಅಲ್ಲಾಡಿಸುತ್ತ ನೋಡತೊಡಗಿದ. ಇದನ್ನು ಕಂಡ ತರಕಾರಿ ಅಮ್ಮನು–

"ಹಂಗೆಲ್ಲಾ ಓಸುಕಬೇಡ. ಹಣ್ ಹಾಳಾಗೊಯ್ತವೆ" ಎಂದು ಗದರಿಸಿದಳು. ನನ್ನ ಹೆಂಡತಿ ಮಗನನ್ನು ಹಿಂದಕ್ಕೆ ಎಳೆದುಕೊಳ್ಳುತ್ತಾ–

"ಏ... ಹಂಗೆಲ್ಲಾ ಮುಟ್ಟಬಾರದು. ಇತ್ತಗೆ ಹಿಂದಕ್ಕೆ ಬಾರೊ ಚಿನ್ನ" ಎಂದಳು. ಕೂಡಲೇ ತರಕಾರಿ ಅಮ್ಮನು–

"ಗಂಡ ಹೆಂಡ್ತಿ ಇಬ್ಬರೂ ಕೈತುಂಬ ಸಂಬಳ ಎಣಿಸ್ಕೊತೀರಿ. ಮಕ್ಕಳಿಗೆ ಚಿನ್ನ ಅಂತ್ಲು ಹೆಸರಿಡ್ತೀರಿ. ಬೆಳ್ಳಿ ಅಂತನೂ ಕರಿತೀರಿ!" ಎಂದು ಉದ್ಗಾರವೆಳೆದಳು. ಆಗ ನಾನು ನಗುತ್ತಾ–



"ಇಬ್ಬರೂ ಕೆಲಸದಲ್ಲಿ ಇಲ್ಲ ಕಣಮ್ಮ. ನಂಗೊಬ್ಬನಿಗೆ ಸಂಬಳ ಬರೋದು. ನಮ್ಮ ಮಗನ ಹೆಸರು "ಚಿನ್ಮಯ" ಅಂತ ಕಣಮ್ಮ. ಚಿಕ್ಕದಾಗಿ "ಚಿನ್ನ" ಅಂತ ಕರಿತೀವಿ. ನಮ್ಮ ಹತ್ತಿರ ನೀವು ಹೇಳುವ ಹಾಗೆ ಯಾವ ಸಂಪತ್ತು ಇಲ್ಲ ಕಣಮ್ಮ."

ಈಗ ನನ್ನ ಹೆಂಡತಿ ಮತ್ತೆ ಕೇಳಿದಳು–

"ಎಷ್ಟಕ್ಕೆ ಕೊಡ್ತೀಯೆ ಹೇಳಮ್ಮ."

"ಎಂಟಾಣೆ ಕಮ್ಮಿ ಕೊಡವ್ವ. ಅದಕ್ಕಿಂತ ಕಮ್ಮಿ ಕೇಳ್ಬೇಡ. ನಾವೂ ಬೆಳಗ್ಗೆಯಿಂದ ರಾತ್ರಿ ತನಕ ತಲೆಮ್ಯಾಲೆ ಒಂದು ನೆಳ್ಳು ಇಲ್ದೇ ಯಾಪಾರ ಮಾಡ್ತೀವಿ ಕನವ್ವ. ನಮ್ಮ ಕಷ್ಟ ಕೇಳೋರು ಯಾರಿದ್ದರು?" ಎಂದು ತನ್ನ ಪಾಡನ್ನು ಹೇಳಿಕೊಂಡಳು. ಈಗ ನನ್ನ ಹೆಂಡತಿ ಮತ್ತೆ ಚೌಕಾಶಿಗೆ ಹೋಗದೆ ದುಡ್ಡನ್ನು ಕೊಟ್ಟಾಗ, ಹಣ್ಣನ್ನು ಕೈಗಿಡುತ್ತಾ ತರಕಾರಿ ಅಮ್ಮ ಕೇಳಿದಳು–

"ಮಕ್ಕಳು ಎಷ್ಟು ಜನ?"

"ಇಬ್ಬರು."

"ಇನ್ನೊಂದು ಗಂಡೋ ಹೆಣ್ಣೋ?"

ಅಷ್ಟರಲ್ಲಿ ಅವರಿಬ್ಬರ ಮಾತಿನ ನಡುವೆ ನಾನು ತಲೆಹಾಕಿ–

"ಹೆಣ್ಣು ಕಣಮ್ಮ. ಗೌತಮಿ ಅಂತ ಹೆಸರಿಟ್ಟಿದ್ದೀವಿ. ಚಿನ್ನ... ಬೆಳ್ಳಿ... ವಜ್ರ ಅಂತ ಇಟ್ಟಿಲ್ಲ" ಎಂದಾಗ, ಆಕೆಯು ನಮ್ಮೊಡನೆ ನಕ್ಕಳು.

ಪ್ರಸಂಗ–3

ಕಳೆದ ಆರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ಇಲ್ಲಿಗೆ ಬಂದ ಮೇಲೆ ದೊಡ್ಡ ದೊಡ್ಡ ಮಾಲ್‌ಗಳಿಗೆ ಹೋಗಿ ಬರುವುದು ರೂಢಿಯಾಗಿದೆ. ಏನಾದರೂ ತರಲೆಂದು ಅಲ್ಲಿಗೆ ಹೋದಾಗ, ಕಣ್ಣು ಕೋರೈಸುವಂತಹ ಅಲ್ಲಿನ ವಸ್ತುಗಳನ್ನು ನೋಡುತ್ತಾ, ಒಂದೆರಡು ಸುತ್ತು ಹೊಡೆದ ಮೇಲೆ, ಒಂದೆಡೆ ನಾನು ಕುಳಿತುಕೊಳ್ಳುತ್ತೇನೆ. ನನ್ನ ಹೆಂಡತಿ ಅಲ್ಲಿರುವ ವಸ್ತುಗಳ ಮೇಲೆ ಬರೆದಿರುವ ರೇಟುಗಳನ್ನು ಪರಿಶೀಲಿಸುತ್ತಾ, ಮನೆಗೆ ಬೇಕಾದ ಸಾಮಾನುಗಳನ್ನು ಎತ್ತಿಕೊಂಡು, ಕವರ್‌ಗಳಿಗೆ ಹಾಕಿಕೊಂಡು, ಬಿಲ್ ಹಾಕುವವರ ಬಳಿಗೆ ಬಂದು, ಹಣ ಕೊಟ್ಟು ಹೊರಬರುತ್ತಾಳೆ. ಎಲ್ಲಿಯೂ ಒಂದು ಮಾತಿಲ್ಲ... ನೋವು ನಲಿವಿನ ಮಾತುಕತೆಯಿಲ್ಲ... ಯಾವುದೇ ಜಗಳಜೋರ

ತಕರಾರುಗಳಿಲ್ಲ. ಜೀವಭಾವಗಳಿಲ್ಲದ ರೊಬಾಟ್‌ಗಳಂತೆ ಕೈಕಾಲು ಅಲ್ಲಾಡಿಸುತ್ತಾ, ವ್ಯಾಪಾರ ಮುಗಿಸಿಕೊಂಡು ಬರುವ ಯಂತ್ರಗಳಾಗಿದ್ದೇವೆ.

ಮೊನ್ನೆ ಹಾಗೆ ಒಂದು ಮಾಲ್‌ಗೆ ಹೋಗಿ ಬಂದಾಗ, ಮನೆಯಲ್ಲಿ ನನ್ನ ಹೆಂಡತಿ ತಂದ ಹಣ್ಣು ತರಕಾರಿಗಳ ಚೀಲದಲ್ಲಿದ್ದ ಒಂದು ಪರಂಗಿ ಹಣ್ಣನ್ನು ಕೈಗೆತ್ತಿಕೊಂಡು ನೋಡಿದೆ. ಸುಲಿದ ತೆಂಗಿನ ಕಾಯಿಗಿಂತ ಸ್ವಲ್ಪ ದಪ್ಪವಾಗಿದ್ದ ಆ ಹಣ್ಣಿನ ಮೇಲೆ ಅಂಟಿಸಿದ್ದ ರೇಟನ್ನು ಕಂಡು ಗಾಬರಿಯಾಗಿ–

"ಏನೇ... ಇದಕ್ಕೆ ಹದಿನೆಂಟು ರೂಪಾಯ?"

"ಹೂ... ಹದಿನೆಂಟು ರೂಪಾಯಿ."

"ಯಾಕೆ... ಹದಿನೆಂಟು?"

"ಅದರ ಮೇಲೆ ಬರೆದಿದೆ... ಅದಕ್ಕೆ."

⌘

ಬರಹಗಾರ

ಹೆಸರು: ಸಿ.ಪಿ.ನಾಗರಾಜ (1945)

ತಾಯಿ: ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ: ಪುಟ್ಟೇಗೌಡ, ಚಿಕ್ಕರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು: ಎಂ.ಎ., ಪಿಎಚ್.ಡಿ.,

ಕೆಲಸ: ಕನ್ನಡ ಅಧ್ಯಾಪಕ

1971–72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972–2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006–ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

ನಾಟಕ:
ಭಾಗೀರತಿ
ಅಂಬೆ
ಹಾವು
ಅಂಗಿಬಟ್ಟೆ
ಒಂದು ರೂಪಾಯಿ
ಕಳ್ಳರಿದ್ದಾರೆ ಎಚ್ಚರಿಕೆ
ಹೆಣದ ಹಣ.

ಗದ್ಯ:
ಕರಿಯನ ಪುರಾಣ
ಕನಕನ ಅವ್ವ
ಹಳ್ಳಿಗಾಡಿನ ರೂವಾರಿ
ಡಾ. ಬಂದೀಗೌಡ
ಆಣೆ ಪ್ರಮಾಣಗಳು
ಬಯ್ಗುಳ
ಸರ್ವಜ್ಞ ವಚನಗಳ ಓದು
ಅಲ್ಲಮ ವಚನಗಳ ಓದು
ಶಿವಶರಣಶರಣೆಯರ ವಚನಗಳ ಓದು
ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು
ಮುದ್ದೆ ಗಂಟು

ವಿಳಾಸ: ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್
ಆರ್.ವಿ. ಕಾಲೇಜು ಪೋಸ್ಟ್, ಬೆಂಗಳೂರು–560059.
ಮೊ: 9986347521.
ngy7777@gmail.com

❖❖❖



ನಮ್ಮ ಸುತ್ತ ಹಲವು ಘಟನೆಗಳು ನಡೆಯುತ್ತಿರುತ್ತವೆ. ಅವನ್ನು ನಾವು ನೋಡುತ್ತೇವೆ, ಮರೆಯುತ್ತೇವೆ, ಯಾವುದೂ ನಮ್ಮನ್ನು ಕಾಡುವುದಿಲ್ಲ. ನೋಡಿದ್ದನ್ನು ಮನನ ಮಾಡ ತೊಡಗಿದಾಗ ಮನಸ್ಸಿನ ಅಂತರಾಳಕ್ಕೆ ಇಳಿದು ಕಾಡುತ್ತವೆ. ದೊಡ್ಡವರ ಸಣ್ಣತನ ಬೆಚ್ಚಿ ಬೀಳಿಸುತ್ತವೆ. ಸಣ್ಣವರ ದೊಡ್ಡತನ ಚಕಿತಗೊಳಿಸುತ್ತವೆ. ಹೀಗೆ ಕಾಡುವ, ದಿಗ್ಭ್ರಮೆ ಮೂಡಿಸುವ, ಚಕಿತಗೊಳಿಸುವ ಹಲವು ಬರಹಗಳು ಈ ಸಂಕಲನದಲ್ಲಿವೆ. ಇಲ್ಲಿನ ಬಹುತೇಕ ಬರಹಗಳು ವಾಸ್ತವಿಕ ನೆಲೆಗಟ್ಟನ್ನು ಹೊಂದಿರುವಂತಹವು. ತಾವು ಕಂಡ, ಕೇಳಿದ ಸಂಗತಿಗಳಿಗೆ ಸ್ಪಂದಿಸಿದ ರೀತಿಯನ್ನು ಲೇಖಕರು ಬಿಡಿಸಿದ್ದಾರೆ. ಅವರನ್ನು ಬಹುವಾಗಿ ಕಾಡಿದ ಸಮಸ್ಯೆ ಯಾವುದು ? ಜಾತಿ, ಮತ, ಧರ್ಮ,ದೇವರು ಮತ್ತು ಅವುಗಳ ಉಪ ಉತ್ಪನ್ನವಾದ ಸಾಮಾಜಿಕ ಸಮಸ್ಯೆಗಳು ಅನ್ನಿಸುತ್ತದೆ.

ಎಚ್.ಎಲ್. ಕೇಶವಮೂರ್ತಿ

ಈ ಕೃತಿಯ ಲೇಖನಗಳು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸ್ಥಳೀಯ ಪತ್ರಿಕೆಯೊಂದಕ್ಕೆ ಬರೆದ ಅಂಕಣ ಬರಹಗಳೆಂದು ಲೇಖಕರು ಹೇಳಿಕೊಂಡಿದ್ದಾರೆ. ಇಲ್ಲಿ ನಿರೂಪಿತವಾಗಿರುವ ಘಟನೆ, ನೆನಪು, ಪ್ರಸಂಗ, ಸನ್ನಿವೇಶಗಳು ಆ ಕ್ಷಣಕ್ಕೆ ಕಾಲದ ದೃಷ್ಟಿಯಿಂದ ಹಳೆಯದಾದುದು ಎನ್ನಿಸುತ್ತದೆ. ಆದರೆ ಅವುಗಳ ಒಡಲಿನಲ್ಲಿ ಹುದುಗಿರುವ ಸೂಕ್ಷ್ಮ ವಾಗಿರುವ ನೋಟ ಮತ್ತು ಚಿಂತನೆಗಳು, ಇಂದಿನ ವರ್ತಮಾನಕ್ಕೂ ಸಲ್ಲುತ್ತವೆ. ಆದ್ದರಿಂದ ಅವು ನವನವೀನತೆಯಿಂದ ಹೊಳೆಯುತ್ತವೆ. ಯಾಕೆಂದರೆ ಈ ನೆನಪುಗಳಿಗೆ ಯಾವುದೋ ಕಾಲದಲ್ಲಿ ಗತಿಸಿಹೋದದ್ದು ಎಂಬ ಹಳಹಳಿಕೆ, ವಿಷಾದ ಅಥವಾ ಸಿನಿಕತೆಯ ನೆರಳು ಆವರಿಸಿಕೊಂಡಿಲ್ಲ. ಇಲ್ಲಿಯ ಬರಹಗಳ ನರನಾಡಿಗಳಲ್ಲಿ ಪ್ರಗತಿಶೀಲ ಮನಸ್ಸೊಂದರ ಸಮಾನತೆಯ ತುಡಿತಗಳು ಹಾಸುಹೊಕ್ಕಾಗಿವೆ.

ಸುಭಾಷ್ ರಾಜಮಾನೆ

ರೂ. 200/-

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.